ಕರ್ನಾಟಕ ವಿಧಾನ ಸಭೆ

ಸೋಮವಾರ, 16ನೇ ಜುಲೈ 1990, ಆಷಾಢ 25, 1912 ಶಕ.
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-40 ಗಂಟೆಗೆ ಸಮಾವೇಶಗೊಂಡಿತು.

(ಅಧ್ಯಕ್ಷರು (ಶ್ರೀ.ಎಸ್.ಎಂ.ಕೃಷ್ಣ) ಪೀಠವನ್ನು ಅಲಂಕರಿಸಿದರು.)

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿಗೆ ಸಂಬಂಧಿಸಿದ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ

(ಪಶುಸಂಗೋಪನಾ ಮತ್ತು ಅರಣ್ಯ ಇಲಾಖೆ)

† ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನಾ ಮತ್ತು ಅರಣ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷತೆ ಶ್ರೀಮಾನ್ ಸಿಂಧ್ಯ ಅವರು ನಮ್ಮ ಬೇಡಿಕೆಯ ಮೇಲೆ ಮಾತನಾಡುತ್ತಾ ನಮ್ಮ ಸರ್ಕಾರವನ್ನು ಬಹಳ ರೀತಿಯಲ್ಲಿ ಟೀಕೆ ಮಾಡಿ ಇದೇನು ಸರ್ಕಾರ ಇದೆಯೋ ಇಲ್ಲವೋ ಸತ್ತಿದೆಯೋ ಎನ್ನತಕ್ಕಂಥ ಭಾಷೆಯಲ್ಲಿ ಮಾತನಾಡಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್‌ನ ಮುಖಪುಟದಲ್ಲಿ "Chautala men feel Congress was better." ಎಂದು ಹೇಳಿರುವುದು ಬಂದಿದೆ. ಕೇವಲ ಆರು ತಿಂಗಳಿಗೆ ಅವರಿಗೆ ಈ ವಿವೇಚನೆ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಧ್ಯಕ್ಷರೆ ನನಗೆ ಒಂದು ಅನುಮಾನ ಬರುತ್ತಿದೆ ಏನೆಂದರೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಇವರು ಉತ್ತರ ಕೊಡುತ್ತಾರೋ ಅಥವಾ ಫಾರೆಸ್ಟ್ ಇಲಾಖೆಯ ಮೇಲೆ ಇವರು ಉತ್ತರ ಕೊಡುತ್ತಿದ್ದಾರೋ?

ಶ್ರೀ ಬಿ. ಬಸವಲಿಂಗಪ್ಪ:- ನಾವೆಲ್ಲಾ ಒಂದೇ, ನೀವು ಹೇಳಿದ್ದಕ್ಕೆ ನಾನು ಈ ಮಾತು ಹೇಳಿದೆ ಈ ಹಿಂದೆ ತೀನ್ ಬತ್ತಿ ಚಾರ್ ರಾಸ್ತಾ ಎಂದು ಸಿನಿಮಾ ಬಂದಿತ್ತು. ಇದನ್ನು ಓದಿದ ತಕ್ಷಣ ಆ ಸಿನಿಮಾ ಜ್ಞಾಪಕಕ್ಕೆ ಬಂತು. ಈಗ ಎಲ್ಲರೂ ಒಟ್ಟಿಗೆ ಸೇರಿಕೊಂಡು ಸಂತೆಗೆ ಹೋದ ಹಾಗೆ. ಸಂತೆ ಮುಗಿದ ಮೇಲೆ ಎಲ್ಲರೂ ಅವರವರ ರಸ್ತೆ ಹಿಡಿದು ಕೊಂಡು ಹೋದರಂತೆ. ಹಾಗೆ ಇದು ಪ್ರಾರಂಭವಾಗಿದೆ. ಸುಮ್ಮನೆ ತಮ್ಮ ಗಮನಕ್ಕೆ ತಂದೆ.

ಅಧ್ಯಕ್ಷರು:- ದೋ ಆಂಖೆ. ಭಾರಾ ಹಾತ್.

ಶ್ರೀ ಪಿ. ಜಿ.ಆರ್. ಸಿಂಧ್ಯ:- ಇದು ಯಾವ ರೀತಿ ಸಂಬಂಧ ಎಂದು ನನಗೆ ಅರ್ಥವಾಗಲಿಲ್ಲ.

ಶ್ರೀ ಬಿ.ಬಸವಲಿಂಗಪ್ಪ:- ಅಧ್ಯಕ್ಷರೆ ಈಗ ಹಲವಾರು ಪಕ್ಷಗಳು ಒಟ್ಟಿಗೆ ಸೇರಿಕೊಂಡು.

ಶ್ರೀ ವಾಟಾಳ್ ನಾಗರಾಜ್:- ಆಲಿ ಬಾಬಾ ಮತ್ತು ೪೦ ಮಂದಿ ಕಳ್ಳರು ಎಂಬ ಸಿನಿಮಾ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಅರಣ್ಯಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಹೇಳುವುದನ್ನು ಕೇಳಬೇಕೋ ಅಥವಾ ಡೆಲ್ಲಿಯಲ್ಲಿ ಆಗತಕ್ಕ ರಾಜಕೀಯ ವಿಶ್ಲೇಷಣೆ ನಾವು ಕೇಳಬೇಕೋ ನಾವು ಏನಾದರೂ ದಾರಿ ತಪ್ಪಿ ಮಾತಾನಾಡಿದಾಗ ಸರಿಯಾದ ದಾರಿಗೆ ಬನ್ನಿ ಎಂದು ತಾವು ಹೇಳುತೀರಿ ಅದೇ ರೀತಿ ಮಂತ್ರಿಗಳು ದಾರಿ ತಪ್ಪಿದಾಗ ಅವರಿಗೂ ತಾವು ಹೇಳಬೇಕು. ನಾನು ಹೇಳಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಈಗ ಮಂತ್ರಿಗಳು ದಾರಿ ತಪ್ಪಿದ್ದಾರೆ. ಅವರನ್ನು ಹಳ್ಳಿಗೆ ಬರಲು ಹೇಳಿ

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದಕ್ಕೆ ನನ್ನದು ಪೂರಕ. ಹೆಚ್ಚು ಮುಂದೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅರಣ್ಯದಲ್ಲಿ ದಾರಿ ಗಿರಿ ಇರುವುದಿಲ್ಲ. ಇದೆಲ್ಲಾ ಅರಣ್ಯ ಮಂತ್ರಿಗಳಿಗೆ ಗೊತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಪಶುಸಂಗೋಪನಾ ಇಲಾಖೆ ಬಗ್ಗೆ ಉತ್ತರಿಸಿ ಆ ಮೇಲೆ ಅರಣ್ಯ ಇಲಾಖೆ ಬಗ್ಗೆ ಮಾತಾನಾಡುತ್ತೇನೆ. ಈ ಸಭೆಯ ಮಾನ್ಯ ಸದಸ್ಯರಿಗೆ ಚರ್ಚೆ ಮಾಡಲು ಸಾಕಷ್ಟು ಸಮಯ ಸಿಗಲಿಲ್ಲ ಇದು ಒಂದು ದೊಡ್ಡ ಇಲಾಖೆ ಹಲವಾರು ಸಮಸ್ಯೆಗಳಿವೆ ಎಂದು ಕೂಡ ನನಗೆ ಗೊತ್ತಿದೆ. ಪಶುಸಂಗೋಪನಾ ಇಲಾಖೆ ಬಗ್ಗೆ ಹೆಚ್ಚಿನ ಸದಸ್ಯರು ಗಮನ ಕೊಟ್ಟಿಲ್ಲ. ೪-೫ ಜನರು ಮಾತ್ರ ಮಾತಾನಾಡಿದ್ದಾರೆ. ಅವರಿಗೆ ಉತ್ತರಿಸಿ ಆ ಮೇಲೆ ಬೇಡಿಕೆ ಮೇಲೆ ಉತ್ತರ ನೀಡುತ್ತೇನೆ. ಮಾನ್ಯ ಚಿಕ್ಕೇಗೌಡರು ಬಂಡೂರು-ತಳಿ ಬಗ್ಗೆ ಮಾತನಾಡಿದ್ದಾರೆ ಮತ್ತು ಅಮೃತಮಹಲ್ ಕಾವಲ್ ಜಮೀನನ್ನು ಕಾಪಾಡಬೇಕೆಂದು ಹೇಳಿದ್ದಾರೆ. ಏಕೆಂದರೆ ಬಲಿಷ್ಠ ಜನಗಳು ಈ ಜಮೀನನ್ನು ಆಕ್ರಮಿಸಿಕೊಂಡಿದ್ದಾರೆಂದು ಮಾನ್ಯ ಸಿಂಧ್ಯರವರು ಸಹ ಹೇಳಿದ್ದಾರೆ. ಆ ಮೇಲೆ ಕಾಲು ಬಾಯಿಜ್ವರ ಜಾಸ್ತಿಯಾಗಿದೆ. ಅದನ್ನು ತಡೆಗಟ್ಟುವುದಕ್ಕೆ ಏನು ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಹಾಗೂ ಅವರ ಸಲಹೆಯನ್ನು ಕೂಡ ಕೊಟ್ಟಿದ್ದಾರೆ. ಮೊನ್ನೆ ವಿಧಾನ ಪರಿಷತ್ತಿನಲ್ಲಿ ಒಂದು ಪ್ರಶ್ನೆಗೆ ಉತ್ತರಿಸುತ್ತಾ ಬಂಡೂರು ತಳಿಗಳು ಏನಿವೆ. ಇವು ಉತ್ತಮವಾದ ತಳಿಗಳು ಇವುಗಳು ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಇದನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸುತ್ತೇನೆ ಮತ್ತು ಇವುಗಳ ಅಭಿವೃದ್ಧಿಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ನಾನು ಅಂದು ಹೇಳಿದ್ದೆ ಅದನ್ನೇ ಇಂದು ಸಹಾ ಸ್ಪಷ್ಟೀಕರಿಸುತ್ತೇನೆ. ಈಗ ಅಮೃತಮಹಲ್ ಕಾವಲುಗಳನ್ನು ಬಹಳ ವರ್ಷಗಳಿಂದ ಕಾಪಾಡಿಕೊಂಡು ಬಂದಿದ್ದಾರೆ. ನಮ್ಮ ಇಲಾಖೆಯವರು ಇದರ ಬಗ್ಗೆ ಹೆಚ್ಚು ಲಕ್ಷ್ಯ ಕೊಟ್ಟು ಕೆಲಸ ಮಾಡುತ್ತಿಲ್ಲ. ಇದರಿಂದ ಅಲ್ಲಿ ಏನಾಗಿದೆ ಎಂದರೆ ಬಲಿಷ್ಟರು ಅದನ್ನು ಕಬಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಇದರ ತಡೆಯನ್ನೂ ಕೂಡ ಅಲ್ಲಿ ಮಾಡುತ್ತಿಲ್ಲ. ಸುಮಾರು ೪-೫ ವರ್ಷಗಳಿಂದ ಇದನ್ನು ಕಬಳಿಸತಕ್ಕಂತಹ ಪ್ರಯತ್ನ ಮಾಡಿದ್ದಾರೆ. ಅಂತಹವರನ್ನು ಅಲ್ಲಿಂದ ಕಿತ್ತು ಹಾಕುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಮತ್ತೆ ಈ ಜಾನುವಾರುಗಳಿಗೆ ಬರುವ ರೋಗವನ್ನು ತಡೆಗಟ್ಟಲು ಕೇಂದ್ರ ಸರಕಾರದವರು ಒಂದು ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಅದನ್ನು ತಡೆಗಟ್ಟುವುದಕ್ಕೆ ನಮ್ಮ ಸರಕಾರ ಪ್ರಯತ್ನ ಮಾಡುತ್ತದೆ. ಶ್ರೀ ನಾಡಗೌಡರು ಮತ್ತು ಶ್ರೀ ಮನವಳ್ಳಿಯವರು ೫ ಸಾವಿರ ದನಗಳಿಗೆ ಒಂದು ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದರು. ಮತ್ತು ಪ್ರತಿ ಮಂಡಲದಲ್ಲಿ ಒಂದೊಂದು ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂದು ಸದಸ್ಯರ ಒತ್ತಾಯ ಇದೆ. ನಮ್ಮ ರಾಜ್ಯದಲ್ಲಿ ೨೫೪೨ ಮಂಡಲಗಳಿವೆ. ಪ್ರತಿಯೊಂದು ಮಂಡಲದಲ್ಲಿ ಒಂದೊಂದು ಆಸ್ಪತ್ರೆಯನ್ನು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಈಗ ಇರತಕ್ಕಂಥದ್ದು ೧೩೮೬ ಆಸ್ಪತ್ರೆಗಳಿವೆ. ಏಕಾಏಕಿ ಇನ್ನೂ ಒಂದು ಸಾವಿರ ೨ ಸಾವಿರ ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಹಂತಹಂತವಾಗಿ ಈ ಗುರಿಯನ್ನು ಮುಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ವರ್ಷ ೧೮೬ ಆಸ್ಪತ್ರೆಗಳನ್ನು ತೆರೆಯುವುದಕ್ಕೆ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದಕ್ಕೆ ಮಂಜೂರಾತಿಯನ್ನು ಕೂಡ ನೀಡಿದ್ದೇವೆ. ಇದಾದ ನಂತರ ಮುಂದೆ ಏನಾದರೂ ಬೇಡಿಕೆಗಳು ಬಂದರೆ ಇದನ್ನು ವಿಸ್ತರಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಮುದ್ದೇಬಿಹಾಳನ ಮಾನ್ಯ ಶಾಸಕರೂ ಕೂಡ ಇದೇ ರೀತಿ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ನಾನು ಉತ್ತರ ಹೇಳಿದ್ದೇನೆ. ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ದನಗಳನ್ನು ಬೇರೆ ರಾಜ್ಯಕ್ಕೆ ಸಾಗಿಸುವುದನ್ನು ತಡೆಗಟ್ಟಬೇಕೆಂದು ಹೇಳಿದ್ದಾರೆ. ಇದಕ್ಕೂ ಕೂಡ ನಾನು ಮೊನ್ನೆ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಹೇಳಿದ್ದೇನೆ. ಕಾಲು ನಡಿಗೆಯಲ್ಲಿ ದನಗಳನ್ನು ತೆಗೆದುಕೊಂಡು ಹೋಗಬಾರದು ಕೌಸ್ ಸ್ಲಾಟರ್ ಆಕ್ಟ್ ಪ್ರಕಾರ ಮತ್ತು ಫಾರೆಸ್ಟ್ ವೈಲ್ಡ್ ಲೈಫ್ ಆಕ್ಟ್ ಪ್ರಕಾರ ಇದನ್ನು ತಡೆಗಟ್ಟುತ್ತೇವೆ. ಸಂಬಂಧಪಟ್ಟವರಿಂದ ಸರ್ಟಿಫಿಕೇಟನ್ನು ತೆಗೆದುಕೊಂಡ ನಂತರವೇ ಲಾರಿಗಳಲ್ಲಿ ಈ ದನಗಳನ್ನು

ತೆಗೆದುಕೊಂಡು ಹೋಗಲಿಕ್ಕೆ ನಾವು ಅನುಮತಿಯನ್ನು ಕೊಡುತ್ತೇವೆ. ಇಲ್ಲದಿದ್ದರೆ ಅನುಮತಿಯನ್ನೇ ಕೊಡುವುದಿಲ್ಲ ಎನ್ನತಕ್ಕ ಮಾತನ್ನೂ ಕೂಡ ನಾವು ಹೇಳಿದ್ದೇವೆ. ಈ ದಿಸೆಯಲ್ಲಿ ನಾವು ಈಗಾಗಲೇ ಒಂದು ಕಾರ್ಯಕ್ರಮವನ್ನೂ ಕೂಡ ಹಾಕಿಕೊಂಡಿದ್ದೇವೆ. ಇನ್ನು ಮಾನ್ಯ ಸದಸ್ಯರಾದ ಏಕಾಂತಯ್ಯನವರು ಮಾತನಾಡುವಾಗ ಪಶುವೈದ್ಯ ಶಾಲೆಗಳಲ್ಲಿರುವ ಮೊಬೈಲ್ ವ್ಯಾನುಗಳು ಕೆಟ್ಟುಹೋಗಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ತೀವ್ರ ಗಮನಕೊಟ್ಟು ತಕ್ಷಣ ರಿಪೇರಿ ಮಾಡಿಸಲು ಕ್ರಮ ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ. ಇನ್ನು ಔಷಧಿಗಳು ಸರಿಯಾಗಿ ಸರಬರಾಜು ಆಗುತ್ತಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಕೂಡ ನಾವು ಗಮನಕೊಟ್ಟು ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇಷ್ಟು ಜನ ಮಾನ್ಯ ಸದಸ್ಯರು ಮಾತ್ರ ಈ ಚರ್ಚೆಯಲ್ಲಿ ಭಾಗಿಗಳಾಗಿದ್ದಾರೆ. ಈಗ ಇದರ ಬಗ್ಗೆ ನಾನು ಸವಿಸ್ತಾರವಾದ ಉತ್ತರವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಸುಮಾರು ೧೧೮೬ ಪಶುಸಂಗೋಪನಾ ಆಸ್ಪತ್ರೆಗಳಿವೆ. ಇವುಗಳಲ್ಲಿ ೫ ರೀತಿಯ ಆಸ್ಪತ್ರೆಗಳಿವೆ. ಅವು ಎಂದರೆ ವಿವಿಧೋದ್ದೇಶ ಪಶುವೈದ್ಯ ಆಸ್ಪತ್ರೆಗಳು ಪಶುವೈದ್ಯ ಆಸ್ಪತ್ರೆಗಳು ಪಶುವೈದ್ಯಶಾಲೆ ಗ್ರಾಮೀಣ ಪಶುವೈದ್ಯ ಶಾಲೆ ಆ ಮೇಲೆ ಪಶುಚಿಕಿತ್ಸಾ ಕೇಂದ್ರ ಎಂದು 5 ರೀತಿ ಇವೆ. ಇದರ ಬದಲು ನಾವು ರೀ ಆರ್ಗನೈಸ್ ಮಾಡಿ ಪ್ರತಿಯೊಂದು ತಾಲೂಕು ಮತ್ತು ಹಳ್ಳಿಗಳಲ್ಲಿ ಹೆಚ್ಚಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಮತ್ತು ಎಲ್ಲ ರೀತಿಯ ಅನುಕೂಲಗಳನ್ನು ಆ ಆಸ್ಪತ್ರೆಗಳಲ್ಲಿ ದೊರಕಿಸಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಈ ೫ ರೀತಿಯ ಆಸ್ಪತ್ರೆಗಳ ಬದಲಾಗಿ ೩ ರೀತಿಯ ಪಶುವೈದ್ಯ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ. ಇದುವರೆಗೆ ತಾಲೂಕು ಮಟ್ಟದಲ್ಲಿ ಎರಡೇ ಇರುತ್ತಿದ್ದುವು. ನಮ್ಮಲ್ಲಿರುವ ೧೭೫ ತಾಲೂಕುಗಳಲ್ಲೂ ಒಂದೊಂದು ಆಸ್ಪತ್ರೆಗಳನ್ನು ಕೊಟ್ಟು ಎಲ್ಲಾ ಹೆಚ್ಚಿನ ದನಗಳು ಇವೆ ಅಂಥ ಕಡೆ ಇನ್ನೂ ಹೆಚ್ಚಿನ ಸೌಲಭ್ಯವನ್ನು ಕೊಡಬೇಕೆಂದು ೧೮೭ ವೆಟರ್ನರಿ ಆಸ್ಪತ್ರೆಗಳನ್ನು ತೆರೆಯಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಇನ್ನು ವೆಟರ್ನರಿ ಡಿಸ್ಪೆನ್ಸರೀಸ್ ಎಂದು ಎರಡನೇ ಕೆಟಗರಿಯನ್ನು ಮಾಡಿದ್ದೇವೆ. ಇವು ೪೯೧ ಆಸ್ಪತ್ರೆಗಳಿದ್ದು ಇವುಗಳನ್ನು ಹೋಬಳಿ ಕೇಂದ್ರದಲ್ಲಿ ಹೆಚ್ಚಿನ ದನಗಳು ಇರತಕ್ಕ ಪ್ರದೇಶದಲ್ಲಿ ತೆರೆಯಬೇಕೆಂದು ಮಾಡಿದ್ದೇವೆ. ಇನ್ನು ಮೂರನೆಯದು ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳೆಂದು ಮಾಡಿದ್ದೇವೆ. ಇದರಲ್ಲಿ ದನಗಳಿಗೆ ಬೇಕಾದ ಎಲ್ಲ ಔಷಧಿಗಳೂ ಇರಬೇಕು. ಆರ್ಟಿಫಿಸಿಯಲ್ ಇನ್‌ಸಮಿನೇಷನ್ ಎಲ್ಲಾ ಆಸ್ಪತ್ರೆಗಳಲ್ಲಿಯೂ ಇರಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಏಕೆಂದರೆ ಹಾಲಿನ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೋಸ್ಕರ ಕೆ.ಎಂ.ಎಫ್ ಎಂಬ ಒಂದು ದೊಡ್ಡ ಸಂಸ್ಥೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಇದಕ್ಕೆ ಒಳ್ಳೆಯ ತಳಿ ಹಸು ಎಮ್ಮೆ ಇರಬೇಕಾಗುತ್ತದೆ. ಒಳ್ಳೆಯ ತಳಿ ಇಲ್ಲದ್ದಿದರೆ ಹೆಚ್ಚು ಹಾಲು ಉತ್ಪಾದನೆ ಆಗುವುದಿಲ್ಲ ಎಂಬುದನ್ನು ಮನಗಂಡ ಉತ್ತಮ ತಳಿಗಳನ್ನು ಸಾಕಿ ಹಾಲಿನ ಉತ್ಪಾದನೆ ಹೆಚ್ಚು ಮಾಡಲಿಕ್ಕೆ ಅವಶ್ಯಕವಾದ ಇಂಥ ಕೇಂದ್ರಗಳು ಅವಶ್ಯಕವೆಂದು ಭಾವಿಸಿ ಈ ರೀತಿ ೩ ರೀತಿಯ ಆಸ್ಪತ್ರೆಗಳನ್ನು ತೆರೆಯುವುದು ಅಗತ್ಯವೆಂದು ಮಾಡಿ ಅಲ್ಲಿ ಎಲ್ಲ ಸೌಲಭ್ಯಗಳನ್ನೂ ಒದಗಿಸಲು ತೀರ್ಮಾನ ಮಾಡಿದ್ದೇವೆ. ಇದಕ್ಕಾಗಿ ಹೆಚ್ಚು ಹಣ ಏನೂ ಖರ್ಚಾಗುವುದಿಲ್ಲ. ಈಗ ಏನು ಆಸ್ಪತ್ರೆಗಳಿವೆ ಇದನ್ನೇ ಪುನರ್‌ವಿಂಗಡಣೆ ಮಾಡಿ ೩ ರೀತಿಯ ಆಸ್ಪತ್ರೆಗಳನ್ನಾಗಿ ಮಾಡುತ್ತಿದ್ದೇವೆ ಇದಕ್ಕೆ ೪೯ ಲಕ್ಷ ರೂ. ಮಾತ್ರ ಹೆಚ್ಚು ಖರ್ಚು ಬರುತ್ತದೆ. ಆದ್ದರಿಂದ ಇದನ್ನು ಮಾಡಲು ಒಪ್ಪಿದ್ದೇವೆ. ಇನ್ನು ಈ ಇಲಾಖೆಯನ್ನು ೮ ಭಾಗಗಳನ್ನಾಗಿ ವಿಂಗಡಿಸಬಹುದು. Cattle and Buffalo Development Programme; Red Dane Project; Indo-Danish Farm Progeny and Testing; Model Farm Sub-station, Munirabad; Koodige project in Coorg, in Dharwar also there is one project; Cross-Breed Hyper Project. In Animal Husbandry Department-Key village scheme; Artificial Insemination Centres; Centre Cattle Breeding Stations; Amruth Mahal Sections; Composite Livestock

Farm Research Stations; Centralised Semen Collection Centres; Artificial Insemination Centres; Evaluation Cell; Intensive Cross-breeding of cattle with imported frozen semen; Cattle Show and Milk Yield competitions and intensive cattle development.

ಇನ್ನು ಪೌಲ್ಟರಿ ಡೆವಲಪ್‌ಮೆಂಟ್‌ನಲ್ಲಿ ಪೌಲ್ಟರಿ ಫಾರಮ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇನೆ. ಹೆಸರುಘಟ್ಟದಲ್ಲಿ ರೀಜನಲ್ ಪೌಲ್ಟರಿ ಫಾರಮ್ ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಮ್ ಕ್ವಾಲಿಟಿ ಕಂಟ್ರೋಲ್ ಫೀಡ್ ಇನ್‌ಟೆನ್‌ಸೀವ್ ಪೌಲ್ಟರಿ ಡೆವಲಪ್‌ಮೆಂಟ್ ರಾಕ್ಸ್ ಅನಂತರ ಷೀಪ್ ಅಂಡ್ ವೂಲ್ ಡೆವಲಪ್‌ಮೆಂಟ್ ಸ್ಕಿಮ್‌ಗೆ ಲಾರ್ಜ್ ಸ್ಕೇಲ್ ಷೀಪ್ ಬ್ರೀಡಿಂಗ್ ಫಾರಂ ಅನ್ನು ಚಳ್ಳಕೆರೆಯಲ್ಲಿ ಮಾಡಿದ್ದೇವೆ. ಪಿಗರಿ ಡೆವಲಪ್‌ಮೆಂಟ್, ಪಿಗ್‌ಬ್ರೀಡಿಂಗ್ ಸೆಂಟರನ್ನು ಹೆಸರುಘಟ್ಟದಲ್ಲಿ ಮಾಡಿದ್ದೇವೆ. ಕೊಡಿಗೆಯಲ್ಲಿ ಸಹ ಮಾಡಿದ್ದೇವೆ. ಅನಂತರ ಫಾಡರ್ ಅಂಡ್ ಸೀಡ್ ಫಾರಮ್ ಮತ್ತು ಫಾಡರ್ ಬ್ಯಾಂಕ್ ಅನಂತರ ಅಡ್ಮಿನಿಸ್ಟ್ರೇಷನ್ ಇನ್‌ವೆಸ್ಟಿಗೇಷನ್ ಸ್ಟಾಟಿಸ್ಟಿಕ್ಸ್ ಅನಿಮಲ್ ಹಸ್ಬೆಂಡರಿ ಸ್ಟ್ಯಾಟಿಸ್ಟಿಕ್ ಅಂಡ್ ಲೈವ್‌ಸ್ಟಾಕ್ ಸೆನ್‌ಸಸ್ ಇನ್‌ವೆಸ್ಟಿಗೇಷನ್ ಸ್ಟಾಟಿಸ್ಟಿಕ್ಸ್. ಇಷ್ಟು ರೀತಿಯ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ ಮತ್ತು ಈ ಒಂದು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಈಗ ದೊಡ್ಡ ರೋಗ ಹಸುಗಳಿಗೆ ಬರತಕ್ಕಂಥದ್ದನ್ನು ನಿವಾರಣೆ ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದವರು ೬೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದನ್ನು ೬ ವರ್ಷಗಳಲ್ಲಿ ಹಂತಹಂತವಾಗಿ ಎಲ್ಲ ಕಡೆಗೆ ಜಾರಿಗೆ ಕೊಟ್ಟು ಅಲ್ಲಿ ಬರತಕ್ಕಂಥ ರೋಗಗಳನ್ನು ತಡೆಯಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇನ್ನು ಕೋಳಿ ನಿಗಮದ ಬಗ್ಗೆ ಹೇಳಬೇಕಾಗಿದೆ. ಕೋಳಿಗಳನ್ನೇನೋ ಜಾಸ್ತಿ ಪ್ರಮಾಣದಲ್ಲಿ ಉತ್ಪತ್ತಿ ಮಾಡುತ್ತಿದ್ದಾರೆ. ಅದೇ ರೀತಿ. ಮೊಟ್ಟೆಗಳನ್ನು ಉತ್ಪತ್ತಿ ಮಾಡುತ್ತಿದ್ದಾರೆ. ಆದರೆ ಮಾರಾಟ ಮಾಡಲಿಕ್ಕೆ ಮಾರ್ಕೆಟ್ ಇಲ್ಲ. ಆದಕ್ಕೋಸ್ಕರ ಆಂಧ್ರದಲ್ಲಿ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ಮಾನ್ಯ ಸಿಂಧ್ಯಾರವರು ಏತಕ್ಕೆ ನಗುತ್ತಿದ್ದಾರೋ ಗೊತ್ತಾಗಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ವಾಟಾಳ್‌ನಾಗರಾಜ್‌ರವರು ಗಿರಿರಾಜ ಎಷ್ಟು ಮೊಟ್ಟೆ ಇಡುತ್ತದೆಂದು ನನ್ನ ಕೇಳಿದರು. ಆದಕ್ಕೆ ನಗು ಬಂದಿತ್ತು. ಅದರ ವಿವರ ಕೊಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನನಗೆ ಇದರ ಬಗ್ಗೆ ಏನೂ ಗೊತ್ತಿಲ್ಲವೆಂದು ಹೇಳಿಬಿಟ್ಟರು. ಅದಕ್ಕೆ ನಾನು ಮೌನವಾಗಿ ಕುಳಿತಿದ್ದೇನೆ. ಅಧ್ಯಕ್ಷರು ಅಪ್ಪಣೆ ಕೊಡುವವರೆಗೆ ನಾನು ಸುಮ್ಮನೆ ಕುಳಿತಿರಬೇಕು. ಈ ಮಧ್ಯೆ ನಾನು ಪ್ರವೇಶ ಮಾಡಿದರೆ. ಸರಿ ಹೋಗುವುದಿಲ್ಲ. ಅದಕ್ಕೆ ಸುಮ್ಮನೆ ಕುಳಿತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಸಿಂಧ್ಯರವರೇ ನೀವು ಮಾನ್ಯ ವಾಟಾಳ್ ನಾಗರಾಜ್‌ರವರ ಕಡೆಗೆ ಕೈ ತೋರಿಸಬೇಡಿ. ಇದರ ಬಗ್ಗೆ ಆಂಧ್ರದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡು ಕಾರ್ಪೊರೇಷನ್ ಮಾಡಿ ಅದರ ಮೂಲಕ ರೈತರಿಗೆ ಹೆಚ್ಚಿನ ಸೌಲಭ್ಯ ಸಿಕ್ಕ ಬೇಕು. ಅದರ ಪ್ರತಿಫಲ ಸಿಗಬೇಕು ಎಂದು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅಲ್ಲಿ ಯಾರು ಮುಖ್ಯಸ್ಥರಿದ್ದರು. ಡಾ॥ ರಾವ್ ಎಂದು ಹೇಳಿ ಅವರು ನನ್ನ ಜೊತೆ ಮಾತನಾಡಿದ್ದಾರೆ. ಅವರ ಒಂದು ಕಾರ್ಯಕ್ರಮವನ್ನು ನನಗೆ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅದನ್ನು ವ್ಯಾಪಕವಾಗಿ ಕಾರ್ಯಗತ ಮಾಡಬೇಕೆಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಯಾವ ಯಾವ ತರದ ಕೋಳಿಗಳೆಂಬ ಬಗ್ಗೆ ವಿವರಣೆ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ:- ನೀವು ತಿನ್ನುವುದಿಲ್ಲ. ನಿಮಗೆ ಹೇಳಿ ಏನು ಪ್ರಯೋಜನ? ಎಲ್ಲತರಹದ ಕೋಳಿಗಳನ್ನು ಮಾಡುತ್ತೇವೆ. ತಾವು ತಿನ್ನುವಂಥ ಗಿರಿರಾಜವನ್ನು ಉತ್ಪಾದನೆ ಮಾಡುತ್ತೇವೆ. ಇದರ ಉದ್ದೇಶ ಇಷ್ಟು. ನಾನು ಒಂದು ಪ್ರಾಜೆಕ್ಟ್‌ನ್ನು ತಯಾರು ಮಾಡಿದ್ದೆ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದಾಗ ಎಕನಾಮಿಕ್ ಪ್ರೋಗ್ರಾಮ್ ಫಾರ್ ರೂರಲ್ ಮದರ್ಸ್ ಎಂದು ಯಾರು ಬಿಲೋ ಪಾವರ್ಟಿಲೈನ್‌ನಲ್ಲಿ ಮದರ್ಸ್ ಇರುತ್ತಾರೆ ಅವರ ಆರ್ಥಿಕ ವ್ಯವಸ್ಥೆ ಸರಿಹೋಗದ ಹೊರತು. ಈ ದೇಶ ಉದ್ಧಾರವಾಗುವುದಿಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಯಾರಾದಾರೂ ಸಿರಿವಂತರು ಉದ್ಧಾರವಾಗುವುದು ಮುಖ್ಯವಲ್ಲ. ಬಡವರು ಆರ್ಥಿಕ ವ್ಯವಸ್ಥೆಯಲ್ಲಿ ಹಿಂದಿರುವವರು ಪ್ರತಿ ದಿವಸ ೧೦-೧೫ ರೂಪಾಯಿ ವರಮಾನ ಇಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ತಾಯಂದಿರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಮಕ್ಕಳ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಗಂಡ ದುಡಿದು ಕೊಡುತ್ತಾನೆಂದು ಹೇಳುವುದು ವಾಡಿಕೆ. ಆದರೆ ಇವತ್ತಿನ ದಿವಸ ಗಂಡಸಿನ ಮೇಲೆ ಭರವಸೆ ಇಟ್ಟುಕೊಂಡು ಬಾಳತಕ್ಕ ಪರಿಸ್ಥಿತಿ ಇಲ್ಲ. ಆದ್ದರಿಂದ ಗಂಡಸಿನ ಮೇಲೆ ಭರವಸೆ ಹಾಕದೆ ಹೆಂಗಸಿಗೆ ಹಣಕಾಸಿನ ವ್ಯವಸ್ಥೆಗೆ ಅನುಕೂಲವಾಗತಕ್ಕ ನಿಗಮವನ್ನು ಮಾಡಬೇಕೆಂದು ನಾವು ತೀರ್ಮಾನ ಕೈಗೊಂಡಿದ್ದೇವೆ. ಅದರ ಪ್ರಕಾರ ಎಲ್ಲಾ ತಾಯಂದಿರಿಗೂ ಇಂಥ ಒಂದು ವ್ಯವಸ್ಥೆ ಆಗಬೇಕೆಂದು ಅದರ ಬಗ್ಗೆ ನಾನು ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರಿಸಿದ್ದೇನೆ. ಅದನ್ನು ಎಲ್ಲಾ ಸದಸ್ಯರಿಗೂ ಹಂಚಬೇಕೆಂದು ಮನಸ್ಸು ಮಾಡಿದ್ದೇನೆ ಇನ್ನು ಕುರಿ ಸಾಕಣೆ ಬಗ್ಗೆ ಬಹಳ ದಿವಸಗಳಿಂದ ಯೋಜನೆ ನಡೆದಿದೆ.ಆದಕ್ಕೆ ವ್ಯವಸ್ಥಿತ ರೂಪದಲ್ಲಿ ಕಾರ್ಯಕ್ರಮ ಹಾಕಿಕೊಂಡು ನಾವು ಮಾಡುತ್ತಿಲ್ಲ. ಆದಕ್ಕಾಗಿ ಒಂದು ಬೋರ್ಡ್ ಮಾಡಿದರು. ಷೀಪ್ ಅಂಡ್ ವುಲ್ ಡೆವಲಪ್‌ಮೆಂಟ್ ಬೋರ್ಡ್. ಎಂದು ಇದೆ. ಅದರ ಸಿಬ್ಬಂದಿಗೆ ೩೪ ಲಕ್ಷ ರೂಪಾಯಿ ಸಂಬಳ ರೂಪದಲ್ಲಿ ಕೊಡುತ್ತಿದ್ದೇವೆಯೇ ಹೊರತು ಕೆಲಸ ಮಾತ್ರ ಮಾಡುತ್ತಿಲ್ಲ. ಆಸ್ಟ್ರೇಲಿಯಾದಲ್ಲಿ ಯಾವ ರೀತಿ ಇದನ್ನು ಅಭಿವೃದ್ಧಿಗೊಳಿಸಿದ್ದಾರೆಂಬುದು ತಮಗೆ ಗೊತ್ತಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕ ಸಂಪಾದನೆಗೋಸ್ಕರ ಕುರಿಗಳನ್ನು ಸಾಕುತ್ತಾರೆ ಆದಕ್ಕೋಸ್ಕರ ಷೀಪ್ ಅಂಡ್ ವುಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಬೇಕಾಗತಕ್ಕ ಹಣಕ್ಕೋಸ್ಕರ ವರ್ಲ್ಡ್ ಬ್ಯಾಂಕಿನಿಂದ ಸಾಲ ಕೇಳಿದ್ದೇವೆ ಮತ್ತು ಬೇರೆ ರಾಷ್ಟ್ರಗಳು ಸಹ ಸಾಲ ಕೊಡುತ್ತಿವೆ. ಕುರಿ ಬಗ್ಗೆ ಹಾಲಿನ ಬಗ್ಗೆ ಮತ್ತು ಕೋಳಿ ಬಗ್ಗೆ ಏತಕ್ಕೆ ಗಮನ ಕೊಡುತ್ತಿದ್ದೇನೆಂದರೆ ಇದು ನೇರವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿರತಕ್ಕ ತಾಯಂದಿರು ಏನಿದ್ದಾರೆ ಆ ಬಡ ತಾಯಂದಿರಿಗೆ ಆಸ್ತಿ ಇರುವುದಿಲ್ಲ ಅಂಥವರಿಗೆ ವ್ಯವಸ್ಥೆ ಈ ರೀತಿ ಆಗಬೇಕು. ತಾಯಂದಿರ ಉದ್ದಾರವಾಗಬೇಕಾದರೆ, ನಮ್ಮ ಮುಂದುವರಿದ ಸಮಾಜ ಜೊತೆಗೆ ಅವರು ಕೂಡ ನಡೆದು ಬಂದು ಸುಖವಾಗಿರಬೇಕಾದರೆ ಈ ವ್ಯವಸ್ಥೆ ಅವಶ್ಯ ಎಂದು ನಾನು ಮನವರಿಕೆ ಮಾಡಿದ್ದೇನೆ. ಪಶು ಸಂಗೋಪನೆ ಮತ್ತು ಅರಣ್ಯ ಇಲಾಖೆಯ ಕಾರ್ಯಕ್ರಮಗಳ ಜೊತೆಗೆ ನಮ್ಮ ಘೋರ್ಷಣೆಯವರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಏನಿವೆ ಅವನ್ನು ಅಳವಡಿಸಿಕೊಂಡು ಬಡತನ ರೇಖೆಯ ಕೆಳಗೆ ಏನಿದ್ದಾರೆ ಆ ತಾಯಂದಿರಿಗೆ ಈ ವ್ಯವಸ್ಥೆ ಮಾಡಬೇಕೆಂಬ ದೃಢ ಸಂಕಲ್ಪ ಮಾಡಿದ್ದೇನೆ. ಈ ಕಾರ್ಯಕ್ರಮ ಯಶಸ್ವಿಯಾಗುತ್ತದೆಂದು ನನಗೆ ನಂಬಿಕೆ ಇದೆ. ಇದಕ್ಕೆ ಶ್ರೀಮತಿ ನಾಗಮ್ಮ ಕೇಶವ ಮೂರ್ತಿ ಅವರ ಸಹಕಾರ ಇದೆ ಎಂದು ತಿಳಿದಿದ್ದೇನೆ. ನಮ್ಮ ಇಲಾಖೆಯಲ್ಲಿ ಖಾಲಿ ಹುದ್ದೆಗಳು ಬಹಳ ಇದ್ದವು. ೧೩೮೫ ಆಸ್ಪತ್ರೆಗಳನ್ನು ಏನು ಹೊಸದಾಗಿ ತೆರೆದಿದ್ದೇವೆ ಮತ್ತು ಹಾಲಿ ಇರತಕ್ಕ ಆಸ್ಪತ್ರೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ. ಅವನ್ನೆಲ್ಲ ಭರ್ತಿ ಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ನಾವು ಪ್ರತಿವರ್ಷ ಪಶು ಔಷಧಿ ಮಿಶ್ರಣ ಅಧಿಕಾರಿಗಳನ್ನು ನಾವು ತರಬೇತಿ ಮಾಡುತ್ತಿದ್ದೇವೆ. ಮತ್ತು ಪಶು ಪರೀಕ್ಷಕರ ತರಬೇತಿ ಮಾಡುತ್ತಿದ್ದೇವೆ. ಬಹಳ ಜನ ತರಬೇತಿ ಹೊಂದಿ ತರಬೇತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಬಂದು ನನ್ನನ್ನು ನೋಡಿದರು. ನಾವು ಇಷ್ಟೆಲ್ಲ ತರಬೇತಿ ಹೊಂದಿದ್ದೇವೆ. ಇಷ್ಟು ಹುದ್ದೆಗಳು ಖಾಲಿ ಇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರತಕ್ಕ ಹುದ್ದೆಗಳಲ್ಲಿ ನಮ್ಮನ್ನು ನೇಮಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡರು. ಅವರ ಬೇಡಿಕೆ ಸರಿ ಅನ್ನಿಸುತ್ತದೆ. ಆದುದರಿಂದ ಈ ತರಬೇತಿ ಹೊಂದಿರತಕ್ಕ ವಿದ್ಯಾರ್ಥಿಗಳನ್ನು ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ನೇಮಕ ಮಾಡಿಕೊಳ್ಳಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಈ ವರ್ಷ ೩೪ ಪಶುವೈದ್ಯರನ್ನು ನಾವು ಭರ್ತಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ೧೮೪ ಪಶುಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಮತ್ತು ೧೭೮ ಔಷಧಿ ಮಿಶ್ರಣ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಯಾರು ಯಾರು ಪರೀಕ್ಷೆ ಪಾಸು ಮಾಡಿ ಹುದ್ದೆ ಇಲ್ಲದೆ ಜೀವನ ಮಾಡುತ್ತಿದ್ದಾರೆ ಅಂತಹವರಿಗೆ ಒಂದು

ಅವಕಾಶ ಕಲ್ಪಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತೆ ೧೫ ಜಿಲ್ಲೆಗಳಲ್ಲಿ ಒಳ್ಳೆಯ ಜಾನುವಾರು ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಒಂದು ಯೋಜನೆ ಹಾಕಿದ್ದೇವೆ. ೧೫ ಜಿಲ್ಲೆಗಳಲ್ಲಿ ಈ ಬಗ್ಗೆ ವ್ಯಾಪಕ ಕಾರ್ಯಕ್ರಮ ಇಟ್ಟುಕೊಂಡು ಅದಕ್ಕಾಗಿ ೧೫೭.೬೨ ಲಕ್ಷ ಖರ್ಚು ಮಾಡಬೇಕೆಂದು ನಾವು ಯೋಜನೆ ಮಾಡಿದ್ದೇವೆ. ನಮ್ಮ ಪಶುಸಂಗೋಪನಾ ಇಲಾಖೆ ವತಿಯಿಂದ ಏನೇನು ಪ್ರಯೋಜನ ರೈತರಿಗೆ ಆಗುತ್ತದೆ ಅದನ್ನು ರೈತರು ಯಾವ ರೀತಿ ಉಪಯೋಗಪಡಿಸಿಕೊಳ್ಳಬೇಕೆಂದು ತಿಳಿವಳಿಕೆ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿ ಅವರಿಗೆ ನಮ್ಮ ಇಲಾಖೆಯಿಂದ ಏನೇನು ಸೌಕರ್ಯ ಒದಗಿಸುತ್ತೇವೆ ಯಾರು ಯಾರು ಎಲ್ಲೆಲ್ಲಿ ಹೋಗಿ ಸೌಕರ್ಯ ಪಡೆಯಬಹುದೆನ್ನುವುದರ ಬಗ್ಗೆ ಒಂದು ಕೈಪಿಡಿ ತಯಾರು ಮಾಡಿ ಪ್ರತಿ ರೈತರ ಕೈಗೆ ಕೊಡಬೇಕೆಂದು ನನ್ನ ಒಂದು ಆಸೆ. ಈ ಬಗ್ಗೆ ಸರ್ಕಾರ ತೀರ್ಮಾನ ಮಾಡಿದೆ. ಕೈಪಿಡಿ ಕೊಟ್ಟು ಅವರಿಗೆ ತಿಳುವಳಿಕೆ ಬರುವ ರೀತಿಯಲ್ಲಿ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಜಾನುವಾರು ಗಣತಿಯನ್ನು ೧೯೮೩ರಲ್ಲಿ ನಾವು ಮಾಡಿದ್ದೇವೆ. ಈಗ ಪುನಃ ೧೯೯೦ರ ಅಕ್ಟೋಬರ್ ತಿಂಗಳ ಒಳಗೆ ಗಣತಿ ಮಾಡಿ ಅದರ ವಿವರವನ್ನೂ ಕೂಡಾ ಕೈಪಿಡಿಯಲ್ಲಿ ಸೇರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತೆ ಈ ಇಲಾಖೆಯ ಬಗ್ಗೆ ಮಾನ್ಯ ಲಕ್ಕಪ್ಪನವರು ಒಂದು ಮಾತನ್ನು ಹೇಳಿದರು. ೧೯೫೬ರಿಂದ ವೃಂದ ಮತ್ತು ನೇಮಕಾತಿ ನಿಯಮ ಆಗಿಲ್ಲ ಇದುವರೆವಿಗೂ ಆಗಿಲ್ಲ ಎಂದು ಹೇಳಿದರು. ಅದನ್ನು ಮಾಡಿ ಪೂರೈಸುತ್ತೀರಾ ಎಂದು ಕೇಳಿದ್ದಾರೆ. ನೇಮಕಾತಿ ಬಗ್ಗೆ ಸಿ ಅಂಡ್ ಆರ್ ರೂಲ್ಸ್ ಮಾಡಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಹಾಗೇ ಇದೆ. ಅಲ್ಲಿ ಯಾರು ಯಾರು ಅಧಿಕಾರಿಗಳು ಕೆಲಸದಲ್ಲಿ ಇದ್ದಾರೆ ಅವರು ಉನ್ನತ ಹುದ್ದೆಗಳಲ್ಲಿ ಅವರೇ ಆಕ್ಟಿಂಗ್ ಇನ್-ಚಾರ್ಜ್ ಎಂದು ಮಾಡಿಕೊಂಡು ಅದೇ ಹುದ್ದೆಗಳಲ್ಲಿ ಮುಂದುವರಿಸಿ ಕೊಂಡು ಬರುತ್ತಿದ್ದೇವೆ. ಇದನ್ನೆಲ್ಲಾ ಸರಿ ಮಾಡಬೇಕಾಗುತ್ತದೆ. ಪಶು ಸಂಗೋಪನೆ ಬಗ್ಗೆ ನಾನು

(ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಇಷ್ಟು ಮಾತ್ರ ಹೇಳಿ ಕೆಎಂಎಫ್ ಬಗ್ಗೆ ನಾನು ಮಾತನಾಡಬೇಕಾಗುತ್ತದೆ. ಇದು ಸ್ವಲ್ಪ ವಿವಾದಕ್ಕೆ ಎಡೆ ಕೊಟ್ಟಿದೆ. ಮಾನ್ಯ ಸಿಂಧ್ಯಾ ಅವರು ಹಾಗೂ ಚಂದ್ರೇಗೌಡರು ಬಹಳ ರೀತಿಯಲ್ಲಿ ಟೀಕೆ ಮಾಡಿದರು. ಇದರ ಬಗ್ಗೆ ಕೆಲವು ವಿಷಯಗಳನ್ನು ಸದನಕ್ಕೆ ತಿಳಿಸಬೇಕಾಗುತ್ತದೆ. ಕೆಎಂಎಫ್‌ಗೆ ಗೌರ್ನಮೆಂಟ್ ಈಕ್ವಿಟಿ ರೂಪದಲ್ಲಿ ನಾವು 8 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಮತ್ತೆ 63 ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳುವುದಕ್ಕೆ ನಾವು ಗ್ಯಾರಂಟಿ ಕೊಟ್ಟಿದ್ದೇವೆ. ಹಾಗೇ ಕೇಂದ್ರ ಸರ್ಕಾರದವರು 2 ಕೋಟಿ 99 ಲಕ್ಷ ರೂಪಾಯಿಗೆ ಅವರು ಈಕ್ವಿಟಿ ರೂಪದಲ್ಲಿ ಹಣವನ್ನು ಒದಗಿಸಿದ್ದಾರೆ. ಹೀಗೆ ಒಟ್ಟು 74 ಕೋಟಿ 19 ಲಕ್ಷ ರೂಪಾಯಿಗಳು ಸರ್ಕಾರದಿಂದ ಕೊಟ್ಟಿರತಕ್ಕ ಹಣ ಅಲ್ಲಿದೆ. ಮತ್ತೆ ಈಗ ಮಿಲ್ಕ್ ಯೂನಿಯನ್ಸ್ 13 ಇವೆ. ಅವುಗಳಿಂದ ಇವತ್ತು ಶೇರ್ ಕ್ಯಾಪಿಟಲ್ ಕೆಎಂಎಫ್‌ಗೆ ಬಂದಿರತಕ್ಕದ್ದು ಎಷ್ಟು ಎಂದು ತಾವು ತಿಳಿದುಕೊಳ್ಳಬೇಕು. ಅದು ಕೇವಲ 33 ಲಕ್ಷ ರೂಪಾಯಿಗಳು ಮಾತ್ರ. ಮತ್ತೆ ನಮ್ಮ ರಾಜ್ಯದಲ್ಲಿ 5487 ಮಿಲ್ಕ್ ಸೊಸೈಟಿಗಳು ಕೇವಲ 151 ತಾಲ್ಲೂಕುಗಳಲ್ಲಿ ಮಾತ್ರ ಪಸರಿಸಿಕೊಂಡಿವೆ. ಇವನ್ನು ಇನ್ನೂ ಬೇರೆ ಬೇರೆ ಜಿಲ್ಲೆಗಳ ಮತ್ತು ತಾಲ್ಲೂಕು ಮಟ್ಟಕ್ಕೆ ವಿಸ್ತರಿಸಬೇಕೆಂದು ವ್ಯಾಪಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ.

೧೦.೧೦. ಎ.ಎಂ.

ಮತ್ತು ಇದರಲ್ಲಿ ಹೆಣ್ಣುಮಕ್ಕಳನ್ನು ಪ್ರಧಾನವಾಗಿ ಸದಸ್ಯರನ್ನಾಗಿ ಮಾಡಬೇಕು. ಏಕೆಂದರೆ ಹೆಣ್ಣುಮಕ್ಕಳೇ ಕೆಲಸ ಮಾಡತಕ್ಕಂತಹವರು. ಹೆಣ್ಣುಮಕ್ಕಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೊಟ್ಟರೆ ಅವರಿಗೆ ಸಂಪಾದನೆ ಮಾಡುವುದಕ್ಕೆ ಅವಕಾಶಕೊಟ್ಟು ನೇರವಾಗಿ ಅವರ ಕೈಗೆ ದಿನವೂ 5-10 ರೂ.ಗಳು ಬಂದರೆ ಅದರಿಂದ ಅವರು ಸಂಸಾರ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಜೊತೆಗೆ ಆ ಮನೆ ಸಹ ಉದ್ಧಾರ ಆಗುತ್ತದೆಂದು ಆ ಕಡೆಗೆ ನಾನು ಗಮನಕೊಟ್ಟಿದ್ದೇನೆ. ಈ ಸೊಸೈಟಿ ಆಕ್ಟ್ ಪ್ರಕಾರ ಯಾವ ಚುನಾವಣೆ ಮೂಲಕ ಆರಿಸಿ ಬಂದು ಸೊಸೈಟಿಯನ್ನು ನಡೆಸುವುದಕ್ಕೆ ಅಧಿಕಾರ ಪಡೆದಿದ್ದರೋ ಆ ಒಂದು ಅವಧಿ ಮುಗಿದು ಹೋಗಿದೆ. ಆದರೆ ಸೊಸೈಟಿ ಚುನಾವಣೆಗಳನ್ನು ಮುಂದೆ ಹಾಕುತ್ತಾ

ಬಂದಿದ್ದರಿಂದ ಅವರೂ ಸಹ ಹಾಗೆಯೇ ಮುಂದುವರಿದುಕೊಂಡು ಬಂದಿದ್ದಾರೆ. ನಾವು ಅವರನ್ನು ತೆಗೆದು ಹಾಕುವುದಕ್ಕೆ ಹೋದರೂ ಕೂಡ ಮುಂದೆ ಚುನಾವಣೆಯಾಗುವವರೆಗೂ ನಾವೇ ಇರುತ್ತೇವೆಂದು ಹೇಳುತ್ತಿದ್ದಾರೆ. ಇವತ್ತೂ ಕೆಲವು ಕಾರಣಗಳಿಂದ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆ. ಆದರೆ ಅವರು ಹೀಗೆಯೇ ಅಧಿಕಾರದಲ್ಲಿ ಇರಬೇಕೆಂಬ ಪ್ರವೃತ್ತಿ ಏನಿದೆ ಇದು ಸರಿಯಲ್ಲವೆಂದು ನನ್ನ ಭಾವನೆ. ಅವರಾಗಿಯೇ ರಾಜೀನಾಮೆ ಕೊಡಬೇಕಾಗಿತ್ತು. ಆದರೆ ಇದುವರೆವಿಗೂ ಕೊಟ್ಟಿಲ್ಲ. ಈ ಯೂನಿಯನ್‌ನ ಸದಸ್ಯರನ್ನಾಗಿ ಮತ್ತು ಯೂನಿಯನ್ನಿನ ಪ್ರೆಸಿಡೆಂಟ್ ಆಗಿ ಯಾರನ್ನು ನಾಮಕರಣ ಮಾಡಿದ್ದೇವೆ ಅವರ ಅವಧಿ ಮುಗಿದು ಹೋಗಿದ್ದರೂ ಕೂಡ ನಾವೇ ಅಧಿಕಾರದಲ್ಲಿರಲೇಬೇಕೆಂದು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾರೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಚುನಾವಣೆ ಮಾಡಿ. ಹೊಸದಾಗಿ ಜನರ ಪ್ರತಿನಿಧಿಗಳು ಆರಿಸಿ ಬರುತ್ತಾರೆ. ಅದನ್ನು ಬಿಟ್ಟು ಇರುವಂತಹ ಜನರ ಪ್ರತಿನಿಧಿಗಳನ್ನು ತೆಗೆದು ಅಧಿಕಾರಿಗಳ ಕೈಗೆ ಆಡಳಿತವನ್ನು ಕೊಡಬೇಡಿ.

ಶ್ರೀ ಬಿ. ಬಸವಲಿಂಗಪ್ಪ:- ನಿಮ್ಮ ಸಲಹೆ ಬಹಳ ಒಳ್ಳೆಯದು. During the pleasure of the Govt. ನಾಮಿನೇಷನ್ ಬಗ್ಗೆ ಸಹಕಾರಿ ಸೊಸೈಟಿಯ ಆಕ್ಟ್‌ನಲ್ಲಿ ಇದೆ. ಅದೇ ರೂಲ್ಸ್‌ನಲ್ಲಿ ಏನು ಇದೆ ಅಂದರೆ ಹೊಸಬಾಡಿ ಆರಿಸಿ ಬರುವವರೆಗೆ ಈಗಿರುವವರೇ ಮುಂದುವರೆಯಬಹುದೆಂದು ಹೇಳಿದೆ. ಇದು ಆಕ್ಟ್‌ಗೆ ತದ್ವಿರುದ್ಧವಾಗಿದೆ. ಅಲ್ಲಿ ನ್ಯಾಯವಾಗಿ ಸಮಯಕ್ಕೆ ಸರಿಯಾಗಿ ಚುನಾವಣೆ ನಡೆದು ಚುನಾವಣೆಯಲ್ಲಿ ಯಾರು ಆರಿಸಿ ಬರುತ್ತಾರೋ ಅಲ್ಲಿಯವರೆಗೆ ಇವರು ಅಧಿಕಾರ ದಲ್ಲಿರಬೇಕೆಂದು ಇದೆ. ಆದರೆ ಇವರು ಏನು ಇಂಟರ್‌ಪ್ರಿಟ್ ಮಾಡುತ್ತಿದ್ದಾರೆಂದರೆ 10 ವರ್ಷವಾಗಲಿ 15 ವರ್ಷವಾಗಲಿ ನಾವೇ ಅಧಿಕಾರದಲ್ಲಿ ಇರಬೇಕು ಅಂತ ಇದ್ದಾರೆ. ಏನೋ ಕಾರಣದಿಂದ ಹಿಂದಿನ ಸರ್ಕಾರದವರೂ ಚುನಾವಣೆಗಳನ್ನು ಮುಂದಕ್ಕೆ ಹಾಕುತ್ತಾ ಬಂದರು. ನಾವೂ ಸಹ ಏನೋ ಕಾರಣದಿಂದ ಮುಂದಕ್ಕೆ ಹಾಕಿದ್ದೇವೆ. ಇದರಿಂದ ನಾವೇ ಅಧಿಕಾರದಲ್ಲಿ ಇರಬೇಕು ಎಂದು ಹೇಳತಕ್ಕಂತಹ ಪ್ರವೃತ್ತಿ ಏನು ಇದೆ ನನ್ನ ದೃಷ್ಟಿಯಲ್ಲಿ ಅದು ಹೋಗಬೇಕು.

ಶ್ರೀ ಬಿ.ಎಚ್. ಬನ್ನಿಕೋಡ್:- ಚುನಾವಣೆ ಮಾಡಿದರೆ ಜನರ ಪ್ರತಿನಿಧಿಗಳು ಯಾರು ಆರಿಸಿ ಬರುತ್ತಾರೋ ಅವರ ಕೈಗೆ ನೇರವಾಗಿ ಅಧಿಕಾರವನ್ನು ಕೊಡುವುದು ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಈ ರೂಲ್ಸ್ ಮಾಡಿರುವುದು ಆಕ್ಟ್‌ಗೆ ತದ್ವಿರುದ್ಧವಾಗಿದೆ ಅಂತ ಹೇಳಿದ್ದಾರೆ. ಇದರ ಅರ್ಥ ಏನು ಅಂದರೆ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಆಕ್ಟ್‌ಗೆ ವಿರುದ್ಧವಾಗಿ ರೂಲ್ಸ್ ಮಾಡಿದ್ದಾರೆಂಬ ಅರ್ಥ ಬರುತ್ತದೆ. ನಾನಂತು ಅಂದುಕೊಂಡಿರುವುದಿಷ್ಟೆ. ಈ ಹಿಂದೆ ಅಧಿಕಾರದಲ್ಲಿದ್ದಂತಹವರು ತಮಗೆ ಬೇಕಾದ ಜನರನ್ನು ನಾಮಕರಣ ಮಾಡುತ್ತಾರೆ ಮತ್ತು ತಾವೇ ಅಧಿಕಾರದಲ್ಲಿ ಮುಂದುವರಿಯಬೇಕು ಅಂತ ಈ ಆಕ್ಟ್‌ಗೆ ವಿರುದ್ಧವಾಗಿ ರೂಲ್ಸ್ ಮಾಡಿಕೊಂಡು ತಮ್ಮವರಿಗೆ ಅನುಕೂಲವನ್ನು ಮಾಡಿಕೊಡುವುದು ಸತತವಾಗಿ ನಡೆದುಕೊಂಡು ಬಂದಿದೆ. ಆದ್ದರಿಂದ ಇದನ್ನು ಬದಲಾಯಿಸಿ ಈ ಕಾನೂನಿಗೆ ತಿದ್ದುಪಡಿಯನ್ನು ತರುತ್ತೀರಾ ಇಲ್ಲದಿದ್ದರೆ ಅನಾವಶ್ಯಕವಾಗಿ ಅಧಿಕಾರಿಗಳು ತಪ್ಪಿಗೆ ಗುರಿ ಆಗುತ್ತಾರೆ. ರಾಜಕಾರಣಿಗಳು ಅಧಿಕಾರದಲ್ಲಿರಲು ಈಗಿನ ಆಕ್ಟ್‌ಗೆ ವಿರುದ್ಧವಾಗಿ ರೂಲ್ಸ್‌ನ್ನು ಮಾಡಿರಬಹುದು ಯಾವಾಗಲೂ ತಾವೇ ಅಧಿಕಾರದಲ್ಲಿ ಮುಂದುವರಿಯಬೇಕೆಂದು ಏನು ಈ ರೀತಿ ಮಾಡಿದ್ದಾರೆ ಅದನ್ನು ಕಿತ್ತುಹಾಕಿ ಸರ್ಕಾರದ ವತಿಯಿಂದ ಇನ್ನು ಮುಂದೆ ನಾಮಕರಣ ಮಾಡುವುದಿಲ್ಲ ಅಂತ ಹೇಳಿ. ಈಗಲಾದರೂ ಧೈರ್ಯ ಮಾಡಿ ಸರ್ಕಾರದ ವತಿಯಿಂದ ನಾಮಿನೇಷನ್ ಮಾಡುವುದಿಲ್ಲವೆಂದು ಹೇಳುತ್ತೀರಾ?

ಶ್ರೀ ಗೋಪಿನಾಥ್ ಆರ್. ಸಾಂದ್ರ:- ನಾಮಕರಣ ಮಾಡುವಂತಹದ್ದು ಕೆಲವೊಂದು ಅವಧಿಯವರೆಗೆ ಮಾತ್ರ. ಆ ಅವಧಿ ಮುಗಿದ ಮೇಲೂ ಅಧಿಕಾರದಲ್ಲಿ ಮುಂದುವರಿಯಲು ಅವರಿಗೆ ಹಕ್ಕಿಲ್ಲ. ಆದರೂ ಕೆಲವರು ಹೈಕೋರ್ಟಿಗೆ ಹೋಗಿದ್ದಾರೆ ಸ್ಟೇ ತೆಗೆದುಕೊಂಡಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಅವರು ಹೈಕೋರ್ಟಿನಲ್ಲಿ ಯಾವ ರೀತಿ ಸ್ಟೇ ತೆಗೆದುಕೊಂಡಿ

ದ್ದಾರೆಂಬುದು ನಮಗೆ ತಿಳಿಯುವುದಿಲ್ಲ. ನಮ್ಮ ಹೈಕೋರ್ಟ್‌ನಲ್ಲಿರುವ ಅಡ್ವೋಕೇಟ್ ಜನರಲ್‌ರವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ ಆಕಸ್ಮಾತಾಗಿ ಕಾಯ್ದೆಯಲ್ಲಿ ಅಥವಾ ರೂಲ್ಸ್‌ನಲ್ಲಿ ಏನಾದರೂ ದೋಷ ಇದ್ದರೆ ಅದನ್ನು ತಿದ್ದುವುದಕ್ಕೆ ಆರ್ಡಿನೆನ್ಸ್ ಮಾಡಿ ಇಂತಹವರು ಏನು ಅವ್ಯಾಹತವಾಗಿ ಕಾಯಿದೆಗೆ ವಿರುದ್ಧವಾಗಿ ಮುಂದುವರಿಯುತ್ತಿದ್ದಾರೋ ಅದನ್ನು ಮೊಟಕು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ.ಬಿ. ಜಕನೂರ್:- ಮಾನ್ಯ ಮಂತ್ರಿಗಳು It is contrary ಎಂದು ಹೇಳಿದರು. ಆದರೆ In my opinion. that rule is against the elected members and not the nominated members.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಬಸವಲಿಂಗಪ್ಪನವರು ಮಾತನಾಡಿದರೆ ಏನಾದರೂ ಒಂದು ವಿವಾದ ಹುಟ್ಟೇ ಹುಟ್ಟುತ್ತದೆ. ಈಗ ಮಾನ್ಯ ಮಂತ್ರಿಗಳಿಗೆ ಕೇಳುವುದು ಇಷ್ಟೇ. ಇವತ್ತು ಸಹಕಾರಿ ಸಂಘಗಳಿಗೆ ಏನು ನಾಮಕರಣ ಮಾಡಲಾಗುತ್ತದೆ ಅದರಲ್ಲಿ ಎರಡು ವಿಧ ಇದೆ. ಇವತ್ತು ಎರಡು ವಿಧದಲ್ಲಿ ನಾಮಕರಣ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಒಂದನೆಯದಾಗಿ ಸಹಕಾರಿ ಸಂಘಗಳ ಬೈಲಾ ಏನಿದೆ ಅದರ ಪ್ರಕಾರ ಆಡಳಿತ ಮಂಡಲಿಗೆ ಏನು ಒಂದು ಅವಧಿಗೆ ಚುನಾವಣೆ ಮಾಡಲಾಗುತ್ತದೆ ಅದು it is co-terminus ಇಂತಹವರನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ. ಆದರೆ ಅದಕ್ಕೆ ಹೊರತಾಗಿ ಸಹಕಾರ ಸಂಘದಲ್ಲಿ ಏನಾದರೂ ತಾವು ಸಹಾಯಧನ ಕೊಟ್ಟು ಅದಕ್ಕೋಸ್ಕರ ಸಹಕಾರಿ ಸಂಘಗಳ ಕೆಲವು ವಿಧಿಗಳ ಪ್ರಕಾರ ತಾವು ಮೂರು ಜನ ಅಥವಾ ಒನ್ ಥರ್ಡ್ ಏನು ನೇಮಕ ಮಾಡುತ್ತೀರಿ ಅಂತಹವರನ್ನು ತಾವು ಯಾವಾಗ ಬೇಕಾದರೂ ತೆಗೆದುಹಾಕುವುದಕ್ಕೆ ಅಧಿಕಾರ ಇದೆ. ಅನೇಕ ಸಂದರ್ಭದಲ್ಲಿ ಇಂತಹವರನ್ನು ತೆಗೆದುಹಾಕಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ:- ಈ ಸಲಹೆ ನಿಜರೂಪದಲ್ಲಿರತಕ್ಕದ್ದು ಆಗಿದೆ. ಅಂದರೆ ಆಕ್ಟ್‌ನಲ್ಲಿ ಇರತಕ್ಕದ್ದು. ಶಿವಮೊಗ್ಗ ಒಂದು ಜಿಲ್ಲೆ. ಅಲ್ಲಿ ಒಂದು ಯೂನಿಯನ್ ಇದೆ. ಅಲ್ಲಿ ನಾಮಕರಣ ಹೊಂದಿರುವ ಒಬ್ಬರು ಸದಸ್ಯರು ಇದ್ದು ಅವರು ಅಧ್ಯಕ್ಷರೂ ಆಗಿದ್ದಾರೆ. during the pleasure of the Government ಎಂದು ಅವರನ್ನು ಕಿತ್ತು ಹಾಕಿದಾಗ ಅವರು ಹೈಕೋರ್ಟಿಗೆ ಹೋಗಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:- ತಾವು ಯಾರನ್ನೋ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದೀರಿ ಆದರೆ ಅವರನ್ನು during the pleasure of the Govt. ಎಂದು ಕಿತ್ತು ಹಾಕಿಲ್ಲ. It is co-terminus with the term of the members of the elected body. That is the point and that is why they have given the stay.

ಶ್ರೀ ಬಿ. ಬಸವಲಿಂಗಪ್ಪ:- ನಾನು ಈ ವಾದವನ್ನು ಒಪ್ಪುವುದಿಲ್ಲ. All nominations are during the pleasure of the Government.

SRI. H. EKANTHAIAH:- I differ with it. ತಾವು ದಯವಿಟ್ಟು ಇನ್ನೊಂದು ಸಾರಿ ನೋಡಿ.

SRI B. BASAVALINGAPPA:- I have differed from you and you are entitled to differ with me.

ಶ್ರೀ ಬಿ.ಹೆಚ್. ಬನ್ನಿಕೋಡ್:- ಈ ವಿಷಯ ಕೋರ್ಟ್‌ನಲ್ಲಿ ಇರುವುದರಿಂದ ನಾವು ಆ ಬಗ್ಗೆ ಮಾತನಾಡುವುದು ಸರಿಯಲ್ಲ.

ಶ್ರೀ ಬಿ. ಬಸವಲಿಂಗಪ್ಪ:- ಇದು ಒಂದು ಚಿಕ್ಕ ವಿಚಾರ. ಕೋರ್ಟಿಗೆ ಹೋಗಿ ಕೆಲವರು ಆರ್ಡರ್ ತೆಗೆದುಕೊಂಡು ಬಂದಿದ್ದಾರೆ. ಹೈಕೋರ್ಟ್ ಏನಿದೆ ಇದರ ಬಗ್ಗೆ ಒಂದೆರಡು ವಿಷಯ ಹೇಳುತ್ತೇನೆ. ಏಕಾಂತಯ್ಯನವರು ಯಾವುದೋ ಒಂದು ವಿವಾದ ಎಂದು ಹೇಳಿದರು. ವಿವಾದ ಎಂದರೆ ಏನು ನಾನು ನಿಜ ಹೇಳಿದರೆ ನಿಜವನ್ನು ನಡೆಸಿಕೊಳ್ಳದಿರತಕ್ಕ ವ್ಯಕ್ತಿಗಳಿಗೆ ಅದು ವಿವಾದ

ಆಯಿತು. ಇವತ್ತು ನಿಜ ಹೇಳಲೇಬಾರದು. ಸುಳ್ಳು ಹೇಳಿದರೆ ಇದರಲ್ಲಿ ವಿವಾದವೇ ಇರುವುದಿಲ್ಲ. ಏನಾದರೂ ನಿಲುವು ತೆಗೆದುಕೊಂಡರೆ ಅದು ಸಮಾಜದ ವಿರುದ್ಧವಾದರೆ ಒಂದು ನೀತಿಯ ಪರವಾಗಿ ನಿಲುವು ತೆಗೆದುಕೊಂಡರೆ ಅದು ವಿವಾದವಾಗುತ್ತದೆ. ಬಹಳ ಜನರಿಗೆ ವಿವಾದವಾಗುತ್ತದೆ. ಪತ್ರಿಕೆ ಯವರೂ ಸಹ ಬರೆಯುತ್ತಾರೆ. ನಿನ್ನೆ ಮಧ್ಯಾಹ್ನ ಮಂತ್ರಿಗಳ ಕೊಠಡಿಯಲ್ಲಿ ಬಹಳ ಜನರಿದ್ದರು. ಆದ್ದರಿಂದ ನಾನು ಹೆಣ್ಣುಮಕ್ಕಳ ಕೊಠಡಿಗೆ ಹೋಗಿ ಊಟ ಮಾಡಿದೆ. ಅಲ್ಲಿ ನಾಗರತ್ನಮ್ಮನವರು ಇದ್ದರು ಎಂದು ಊಟಕ್ಕೆ ಹೋದೆ. ಊಟ ಮಾಡಿ ಬಂದೆ. ಅದನ್ನೂ ಪೇಪರ್‌ನಲ್ಲಿ ಬರೆಯೋದೇ?

ಶ್ರೀ ಹೆಚ್. ಏಕಾಂತಯ್ಯ:- ಇವರು ಯಾವಾಗಲೂ ವಿವಾದಾಸ್ಪದ ವ್ಯಕ್ತಿಗಳು ಅಧ್ಯಕ್ಷರೇ. ಇವರು ಏನು ಮಾಡಿದರೂ ಅದು ವಿವಾದ ಆಗುತ್ತದೆ. ಅದಕ್ಕೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಬಿ. ಬಸವಲಿಂಗಪ್ಪ:- ನಾನು ಏನು ಮಾಡಿದರೂ ವಿವಾದ ಆಗುತ್ತದೆ. ಇದು ಏತಕ್ಕೆ ಸ್ವಾಮಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕಾಡು ದನ ಹಾಲು ಹಸು ಕರು ಕುರಿ ಕೋಳಿ ಇವೆಲ್ಲಾ ಈ ಇಲಾಖೆಗೆ ಸೇರಿದವು. ಇವರು ಇನ್ನೂ ಮನುಷ್ಯತ್ವಕ್ಕೆ ಇನ್ನೂ ಬರುತ್ತಿಲ್ಲ. ನಾನು ಈ ಸಭೆಯ ಶಾಸಕನಾಗಿ ಬಂದ ತಕ್ಷಣ ಮಾನ್ಯ ಬಸವಲಿಂಗಪ್ಪನವರನ್ನು ಒಂದು ರೀತಿಯ ಗೊಂದಲದ ಚಕ್ರವರ್ತಿ ಎಂದು ನಾನು ಹೇಳಿದೆ. ಅದು ಎಲ್ಲಾ ಪತ್ರಿಕೆಯಲ್ಲಿ ಕೂಡ ಬಂದಿತ್ತು. ನಾನು ಅದನ್ನು ಅತ್ಯಂತ ಪ್ರೀತಿಯಿಂದ ಹೇಳಿದ ಮಾತು. ನಾನೂ ಮತ್ತು ಸಿಂಧ್ಯರವರು ಮಾತನಾಡಿಕೊಂಡೆವು ಮಾನ್ಯ ಮಂತ್ರಿಗಳು ಎದ್ದು ನಿಂತು ಮಾತನಾಡುತ್ತಿದ್ದಾಗ ತಮ್ಮ ವಿಚಾರ ಸರಣಿ ಬೇರೆ ಕಡೆ ಹೋಗುತ್ತಿದೆ ಎಂದು ವಿಚಾರ ಮಾಡಿದೆವು. ಮಾನ್ಯ ಮಂತ್ರಿಗಳು ಕಾಡು ಬಿಡುತ್ತಿದ್ದಾರೆ ಹಸು ಕರು ಬಿಡುತ್ತಿದ್ದಾರೆ. ಸ್ವಲ್ಪ ಸ್ವಲ್ಪ ಹಾಲೂ ಬಿಡುತ್ತಿದ್ದಾರೆ. ಇನ್ನು ಜನಗಳು ಮತ್ತು ದನಗಳು ಇರುವಕಡೆ ಪಶು ಆಸ್ಪತ್ರೆ ತರುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ದಾರಿ ತಪ್ಪಿ ಹೋಗುತ್ತಿದ್ದಾರೆ. ಇದು ಎಲ್ಲೋ ಗದ್ದಲಕ್ಕೆ ಕಾರಣವಾಗಿರಬಹುದೆಂದು ನನಗನ್ನಿಸುತ್ತದೆ. ಆದ್ದರಿಂದ ಅದನ್ನು ಬಿಟ್ಟು ತಮ್ಮ ಇಲಾಖೆಗೆ ಸಂಬಂಧಪಟ್ಟ ವಿಚಾರಧಾರೆಗೆ ಬಂದರೆ ನಮಗೂ ಸಂತೋಷ. ಬೇರೆ ಗದ್ದಲಕ್ಕೆ – ಎಂದು ಹೇಳಿದರೆ ನಾವೂ ಕೂಡ ಅದಕ್ಕೆ ತಯಾರಾಗಿದ್ದೇವೆ. ಇದರಿಂದ ಒಂದು ಸಂಘರ್ಷ ಶುರುವಾಗಿ ಆ ಸಂಘರ್ಷದಿಂದ ಈ ರಾಜ್ಯಕ್ಕೆ ಅನುಕೂಲವಾಗುವುದಾದರೆ ಅನುಕೂಲವಾಗಲಿ

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ವಾಟಾಳ್‌ನಾಗರಾಜ್‌ರವರ ಸಲಹೆಯನ್ನು ಒಪ್ಪುತ್ತೇನೆ. ಆದರೆ ಈ ದನಕರುಗಳನ್ನು ಸಾಕುವವರು ಮನುಷ್ಯರೇ ಇವುಗಳನ್ನು ಮನುಷ್ಯರಿಗೋಸ್ಕರ ಸಾಕುತ್ತಾ–ಇರತಕ್ಕಂಥಾದ್ದು. ಏಕಾಂತಯ್ಯನವರು ಹೇಳಿದಂತೆ ನನ್ನದು ಒಂದು ರೀತಿಯ ವಿವಾದವೇ ಆಗಿದೆ. ನಾನು ಊಟ ಮಾಡಿದರೂ ಕೂಡ ಅದು ವಿವಾದವಾಗುತ್ತದೆ. ಅದು ಇವತ್ತಿನ ಪತ್ರಿಕೆಯಲ್ಲಿ ಕೂಡ ಬಂದಿದೆ. ನಾನು ಮಂತ್ರಿಯಾಗಿ 15-16 ವರ್ಷವಾಯಿತು. ಅಲ್ಲಿಂದ ಕೆಲಸ ಮಾಡುತ್ತಾ ಬಂದಿದ್ದೇನೆ. ಈಗ ನಾನು ಯಾವ ರೀತಿಯಾಗಿ ಕೆಲಸ ಮಾಡಿದರೆ ಯಾವ ರೀತಿ ಹುಕುಂ–ಮಾಡಿದರೆ ಅದು ಕಾನೂನು ಬದ್ಧವಾಗುತ್ತದೆ, ಯಾವ ರೀತಿಯಾಗಿ ಮಾಡದೇ ಹೋದರೆ ಕಾನೂನು ಬದ್ಧವಾಗುವುದಿಲ್ಲ ಎಂಬುದರ ಬಗ್ಗೆ ಒಂದು ಜಿಜ್ಞಾಸೆ ಬಂದಿದೆ. ನಾನು ಯಾರಾದರೂ ಅಧಿಕಾರಿಗಳನ್ನು ವರ್ಗಾವಣೆ ಮಾಡಲೇ ಬೇಕಾಗುತ್ತದೆ ಅದನ್ನೂ ಕೂಡ ಇವರು ಹೀಗೇ ಮಾಡಿದ್ದಾರೆ ಹಾಗೆ ಮಾಡಿದ್ದಾರೆ ಈ ವರ್ಗಾವಣೆ ಸರಿಯಾಗಿಲ್ಲ ಸ್ಟೇ ಆರ್ಡರ್ ಕೊಡಿ ಎಂದು ಯಾರಾದರೂ ಕೇಳಿದರೆ ಅದಕ್ಕೆ ಸ್ಟೇ ಆರ್ಡರ್ ಕೊಡುತ್ತಾರೆ. ಈಗ ಕೋ–ಆಪರೇಟೀವ್ ಸೊಸೈಟಿ ಆಕ್ಟ್ ಸೆಕ್ಷನ್ 54ರ ಪ್ರಕಾರ ಒಂದು ಆರ್ಡರ್ ಮಾಡಿದೆ. ಯಾರ್‍ಯಾರು ಬಹಳ ವರ್ಷಗಳಿಂದ ಹಾಲಿನ ಒಕ್ಕೂಟಗಳಲ್ಲಿದ್ದಾರೆ ಆ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಮಾಡಿದೆವು. ಅದಕ್ಕೆ ಹೋದರೆ ಸ್ಟೇ ಆರ್ಡರ್ ಕೊಡುತ್ತಾರೆ. ಈ ರೇಂಜ್ ಬಗ್ಗೆ ಯಾವುದೋ ಒಂದು ಚೀಟಿ ಕೊಟ್ಟಿರುತ್ತಾರೆ. ಆ ಚೀಟಿಯನ್ನು ರೇಂಜ್ ಆಫೀಸರ್ ಕೊಟ್ಟಿರುತ್ತಾರೆ. ಅದನ್ನು ತೆಗೆದುಕೊಂಡು ಹೋಗಿ ಹೈಕೋರ್ಟಿಗೆ

ತೆಗೆದುಕೊಂಡು ಹೋದರೆ ಅದಕ್ಕೂ ಸ್ಟೇ ಆರ್ಡರ್ ಕೊಡುತ್ತಾರೆ. ಒಂದು ಸರಕಾರ ಮಾಡತಕ್ಕಂತಹ ಕಾರ್ಯಕಾರಿ ಕೆಲಸಕಾರ್ಯಗಳು ಏನು ಇದೆ ಅದಕ್ಕೆ ಮಧ್ಯ ಪ್ರವೇಶ ಮಾಡಿ ಸ್ಟೇ ಆರ್ಡರ್‌ಗಳನ್ನು ಕೊಟ್ಟರೆ ಸರಕಾರವನ್ನು ಯಾವ ರೂಪದಲ್ಲಿ ನಡೆಸಬೇಕು ಎಂದು ತಾವೇ ಹೇಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸರಕಾರ ಯಾವಾಗ ಕಾನೂನು ಬಾಹಿರವಾದ ಕೆಲಸ ಮಾಡುತ್ತದೆ ಆಗ ಜನರು ನ್ಯಾಯಾಲಯಕ್ಕೆ ಹೋಗುತ್ತಾರೆ. ಜನರ ಹಕ್ಕನ್ನು ಕಾಪಾಡುವುದು ನ್ಯಾಯಾಂಗದ ಮುಖ್ಯ ಕರ್ತವ್ಯವಾಗಿದೆ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಒಂದು ಪಾಯಿಂಟ್ ಅನ್ನು ಏನು ಉದ್ದೇಶ ಪೂರ್ವಕವಾಗಿ ಹೇಳುತ್ತಿದ್ದೇನೆ. ಅದನ್ನು ಪೂರೈಸುವ ತನಕ ಸ್ವಲ್ಪ ಇರಿ. ತಾವೂ ಕೂಡ ಲಾಯರ್ ಇದ್ದೀರಿ. ನಾನು ಮಂತ್ರಿಯಾಗಿ ಯಾವ ರೀತಿ ಕೆಲಸ ಮಾಡಬೇಕೆಂದು ಶಂಕೆ ಬಂದಿದೆ. ಹೈಕೋರ್ಟಿನ ಎಲ್ಲ ಜಡ್ಜ್‌ಗಳು ವಾರಕ್ಕೊಂದು ಸಲ ಮಂತ್ರಿಗಳಿಗೆ ಟ್ಯೂಷನ್ ಹೇಳುವುದಕ್ಕೆ ಪ್ರಾರಂಭ ಮಾಡಿದರೆ ನನಗಂತೂ ಬಹಳ ಸಂತೋಷವಾಗುತ್ತದೆ. ಕಾರಣ ಏನೆಂದರೆ.......

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇದಕ್ಕೆಲ್ಲಾ ತಾವು ಅವಕಾಶ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಈಗ ನೀವು ಗುರುತರವಾದ ಆಪಾದನೆಯನ್ನು ಹೈಕೋರ್ಟಿನ ಜಡ್ಜ್‌ಗಳ ಬಗ್ಗೆ ಮಾಡಿದ್ದೀರಿ. ಏಕೆ ನಿಮಗೆ ಈ ಚಟ ಈ ಅಭ್ಯಾಸವಿದೆಯೋ ನನಗೆ ಅರ್ಥವಾಗುತ್ತಿಲ್ಲ. ಹೈಕೋರ್ಟಿನ ಜಡ್ಜ್‌ಗಳು ವಾರಕ್ಕೊಂದು ಸಲ ಪಾಠ ಹೇಳಬೇಕೆಂದು ಹೇಳಿದರೆ ಅರ್ಥ ಏನು You stand by this?

ನೀವು ಇದನ್ನು ಲೈಟರ್‌ವೇನಲ್ಲಿ ಹೇಳಿದ್ದೀರಾ ಅಥವಾ You stand by it? ಹೇಳಿ Let it go on the record. ನನಗೆ ಏನೂ ಇಲ್ಲ.

(ಗೊಂದಲ)

ಉಪಾಧ್ಯಕ್ಷರು:- ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಬಸವಲಿಂಗಪ್ಪನವರು ಈ ರೀತಿ ಹೇಳಿದ್ದು ನ್ಯಾಯಾಂಗದ ಮೇಲೆ ಒಂದು ಸವಾರಿ ಮಾಡಿದ ಹಾಗೆ ಆಗುತ್ತದೆ. ಮಾನ್ಯ ಬಸವಲಿಂಗಪ್ಪನವರು ಏನಾದರೂ ಮಾಡಿ ಈ ರಾಜ್ಯದಲ್ಲಿ ಒಂದು ರೀತಿಯ ಗೊಂದಲ ಉಂಟು ಮಾಡಬೇಕೆಂದು ಹೊರಟಿದ್ದಾರೆ. ಅವರ ಮಾತಿನಲ್ಲೇ ಒಂದು ರೀತಿಯ ಗೊಂದಲ ಶುರುವಾಗುತ್ತದೆ. ಆದರೆ ಈ ಗೊಂದಲಕ್ಕೂ ಒಂದು ಮಿತಿ ಇದೆ; ನ್ಯಾಯಾಧೀಶರುಗಳಿಗೆ ಅವರದೇ ಆದಂತಹ ಸರ್ವೋಚ್ಚ ವಿಚಾರಧಾರೆ ಇರುತ್ತದೆ. ಈಗ ಇವರು ಹೈಕೋರ್ಟ್‌ನವರಿಗೆ ತಿಳುವಳಿಕೆ ಹೇಳಲು ಹೊರಟಿದ್ದಾರೆ; ಇದು ಸರಿಯಾದ ಕ್ರಮವಲ್ಲವೆಂದು ನನಗನ್ನಿಸುತ್ತದೆ. ಅವರು ಹೇಳಿದ್ದೇ ಸರಿ ಅನ್ನುವುದಾದರೆ ಅದು ಅವರಿಗೇ ಬಿಟ್ಟಿದ್ದು.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಪೂರ್ತಿ ಹೇಳುವ ತನಕ ಕೇಳಿದರೆ ಬಹಳ ಒಳ್ಳೆಯದು. ನನಗೆ ವ್ಯಾಪ್ತಿ ಗೊತ್ತು. ನಾನು ಲಾಯರ್ ಆಗಿದ್ದೇನೆ. ಹೈಕೋರ್ಟ್ ಅಂದರೆ ಏನು ಹೈಕೋರ್ಟಿನ ವ್ಯಾಪ್ತಿ ಅಂದರೆ ಏನು What is judiciary, What is legislature, What is executive, that we know, in the frame-work in a democracy.

(ಗೊಂದಲ)

ಶ್ರೀ ಬಿ.ಬಸವಲಿಂಗಪ್ಪ:- ನಾನು ಮಾತನಾಡಲು ತಾವು ಏತಕ್ಕೆ ಈ ರೀತಿ ಆತಂಕ ಮಾಡುತ್ತಿದ್ದೀರಿ ನಿಮಗೆ ಏನು ಬಂತು ನಿಮಗೆ ಜ್ಯೂಡಿಷಿಯರಿ ಎಂದರೆ ಏನು ಗೊತ್ತಿದೆಯೋ ನಾವು ಅವರಿಗೆ ದುಡ್ಡು ಕೊಡುತ್ತಾ ಇಲ್ಲವೇ ಅವರಿಗೆ ಸಂಬಳ ಕೊಡುತ್ತಾ ಇಲ್ಲವೇ? ಈ ಲೆಜಿಸ್ಲೇಚರ್ ಅವರಿಗೆ ಹಣ ಕೊಡುತ್ತಾ ಇಲ್ಲವೇ?

SRI P.G.R. SINDHYA:- You cannot take protection of the House and speak whatever you want. ನೀವು ಏನು ಹೇಳುತ್ತಿರುವುದು ಹೈಕೋರ್ಟ್‌ನಲ್ಲಿ ಕುಳಿತಿರತಕ್ಕ

ಜಡ್ಜ್‌ಗಳು ವಾರಕ್ಕೆ ಒಂದು ಸಲ ಮಂತ್ರಿಗಳಿಗೆ ಪಾಠ ಹೇಳಬೇಕು ಎಂದರೆ ಏನು ಅರ್ಥ What you are talking, that should not be allowed to go into the Proceedings. It is impertinent to speak, like that. ಅವರು ಹೇಳಿದ್ದು ಪ್ರೊಸಿಡಿಂಗ್ಸ್‌ನಲ್ಲಿ ಹೋಗಿದೆ.

ಶ್ರೀ ವಾಟಾಳ್ ನಾಗರಾಜ್:- ಇದು ಹೈಕೋರ್ಟಿನ ಮೇಲೆ ಅಂದರೆ ನ್ಯಾಯಾಂಗದ ಮೇಲೆ ನಡೆಯುತಕ್ಕ ಅಪಚಾರ ಹಾಗೂ ಅತ್ಯಾಚಾರವಾಗಿದೆ.

P.G.R. SINDHYA:- This should not be allowed. It is a joint responsibility.

MADAM DEPUTY SPEAKER:- Please allow him to finish.

(INTERRUPTION)

ಶ್ರೀ ವಾಟಾಳ್ ನಾಗರಾಜ್:- ಈ ಸಭೆ ಅವರಿಗೆ ಸಂಬಳ ಕೊಡತಕ್ಕದ್ದು ಈ ಸಭೆ ಅವರಿಗೆ ವ್ಯವಸ್ಥೆ ಮಾಡತಕ್ಕದ್ದು ಅಂದರೆ ಏನು ಅರ್ಥ ಇದು ತೀರಾ ಹೆಚ್ಚಾಯಿತು. ಈ ರೀತಿ ಹೇಳುವುದು ಸರಿಯಲ್ಲ. ಇದು ಬಹಳ ಶೋಚನೀಯವಾದ ಪರಿಸ್ಥಿತಿ. ಈ ಪರಿಸ್ಥಿತಿ ಬರಬಾರದು. ಇದು ಒಳ್ಳೆಯದಲ್ಲ. ಈ ರೀತಿ ನ್ಯಾಯಾಂಗದ ಮೇಲೆ ಸವಾರಿ ನಡೆಯಬಾರದು.

SRI S.H. KOUJALGI:- He is giving threat to the judiciary.

ಹೈಕೋರ್ಟಿನ ಜಡ್ಜ್‌ಗಳು ವಾರಕ್ಕೊಮ್ಮೆ ಮಂತ್ರಿಗಳಿಗೆ ಟ್ಯೂಷನ್ ಕೊಡಬೇಕು ಅಂದರೆ ಏನರ್ಥ ನಾವು ರೊಕ್ಕ ಕೊಡುತ್ತೇವೆಂದುಕೊಂಡು ಅವರ ಬಗ್ಗೆ ಏನು ಬೇಕಾದರೂ ಮಾತನಾಡಬಹುದೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಶ್ರೀಮಾನ್ ಬಸವಲಿಂಗಪ್ಪನವರ ಮೇಲೆ ವೈಯಕ್ತಿಕವಾಗಿ ನಮಗೆ ಅಪಾರವಾದ ಗೌರವವಿದೆ. ಆದರೆ ಅವರು ತಮ್ಮ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಉತ್ತರವನ್ನು ಸಮಂಜಸವಾಗಿ ಕೊಡಬೇಕು. ನಮಗೆ ಅದು ಸಮಂಜಸವಾಗಿ ಹಿಡಿಸಲಿ ಅಥವಾ ಬಿಡಲಿ ಆದರೆ ಅವರು ದಾರಿ ಬಿಟ್ಟು ನ್ಯಾಯಾಧೀಶರುಗಳ ಮೇಲೆ ಒಂದು ದೊಡ್ಡ ಆರೋಪಣೆಯನ್ನು ಮಾಡುವುದು ಅಪಚಾರವನ್ನು ಮಾಡತಕ್ಕದ್ದು ಸರಿಯಲ್ಲ; ಇದನ್ನು ಕಡತದಿಂದ ತೆಗೆಸಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಹಿರಿಯ ಸಚಿವರಾದ ಶ್ರೀಮಾನ್ ಬಸವಲಿಂಗಪ್ಪನವರು ಈ ರೀತಿ ಮಾತನಾಡುವುದಾದರೆ ನಮ್ಮದೇನೂ ವಿರೋಧವಿಲ್ಲ. ಸಾಕಾದಷ್ಟು ಅನುಭವವಿರತಕ್ಕ ಹಿರಿಯ ಸಚಿವರು ನ್ಯಾಯಾಧೀಶರ ಬಗ್ಗೆ ಇಷ್ಟು ಹಗುರವಾಗಿ ಮಾತನಾಡಲು ಪ್ರಾರಂಭ ಮಾಡಿದರೆ ಹೊಸದಾಗಿ ಬಂದಿರತಕ್ಕ ಸದಸ್ಯರುಗಳು ಸಹ ಇದೇ ಒಂದು ಪರಿಪಾಠ ಅನುಸರಿಸಬಹುದು. ಇದರಿಂದ ನ್ಯಾಯಾಲಯದ ಬಗ್ಗೆ ನ್ಯಾಯಾಧೀಶರುಗಳ ಗೌರವಕ್ಕೆ ಅಪಕೀರ್ತಿ ತಂದ ಹಾಗೆ ಆಗುತ್ತದೆ. ಈ ರೀತಿ ನ್ಯಾಯಾಧೀಶರು ಬಂದು ಪಾಠ ಹೇಳಿಕೊಡಬೇಕು ಎಂಬ ಮಾತುಗಳನ್ನು ತಮ್ಮಿಂದ ನಾವು ನಿರೀಕ್ಷೆ ಮಾಡಿರಲಿಲ್ಲ. ಅದು ರೆಕಾರ್ಡಿಗೆ ಹೋದರೆ ತೊಂದರೆ ಏನೂ ಇಲ್ಲ. ಅದನ್ನು ಸಾಧಿಸುವಂತಹ ಜಯಿಸುವಂತಹ ಶಕ್ತಿ ನಿಮಗೆ ಇದೆ. ಆದರೆ ಈ ರೀತಿ ಹೇಳುವುದು ತಮ್ಮಂತಹ ಹಿರಿಯ ಸಚಿವರಿಗೆ ಸೂಕ್ತ. ಮತ್ತು ಇದರಿಂದ ರಾಜ್ಯದ ಜನತೆ ಏನು ತಿಳಿದು ಕೊಳ್ಳುತ್ತಾರೆ ನ್ಯಾಯಾಲಯದಲ್ಲಿ ಕೆಲಸ ಮಾಡುವ ನ್ಯಾಯಾಧೀಶರುಗಳಿಗೆ ಈ ರೀತಿ ಅಪಮಾನ ಮಾಡುವುದು ಸರಿಯೆ?

ಶ್ರೀ ಹೆಚ್.ಎಸ್. ಕೌಜಲಗಿ:- ತಿಳುವಳಿಕೆ ಇರತಕ್ಕ ಮಂತ್ರಿಗಳು ನೀವು. ನೀವು ಏಕೆ ಹೀಗೆ ಹೇಳುತ್ತಿದ್ದೀರಿ?

(ಗೊಂದಲ)

SRI B. BASAVALINGAPPA:- You are a lawyer. Why don't you listen to me? ನಿಮ್ಮ ತಿಳುವಳಿಕೆ ಏನಿದೆ ಅದಕ್ಕಿಂತ ನಾನು ಮೇಲೆ ಹೋಗಿದ್ದೇನೆ. ದಯಮಾಡಿ ತಿಳಿದುಕೊಳ್ಳಿ.

ಉಪಾಧ್ಯಕ್ಷರು:- ಈಗ ದಯವಿಟ್ಟು ತಾವು ಮುಂದುವರಿಸಿ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಉಪಾಧ್ಯಕ್ಷರೇ ಇಲ್ಲಿ ಮಾನ್ಯ ಸದಸ್ಯರ ಕಳವಳ ನನಗೆ ಅರ್ಥವಾಗಿಲ್ಲ. ಈಗ ಬೊಂಬಾಯಿಯಲ್ಲಿ ಜಡ್ಜ್‌ಗಳ ಮೇಲೆ ಚಳುವಳಿ ಶುರುವಾಗಿದೆ. ಕೇರಳದಲ್ಲಿ ಶುರುವಾಗಿದೆ. ಈಗ ಜಡ್ಜ್‌ಗಳ ಬಗ್ಗೆ ನಾವು ಯಾವ ವ್ಯಾಪ್ತಿಯಲ್ಲಿ ಏನು ಹೇಳಬೇಕೆಂದು ಮಾತ್ರ ನಾನು ಹೇಳುತ್ತಿದ್ದೇನೆ. ಅವರು ಏನು ಜಡ್ಜ್‌ಮೆಂಟ್ ಬರೆಯುವುದಕ್ಕೆ ಮುಂಚಿತವಾಗಿ ನಾವು ಹೇಳತಕ್ಕದ್ದು ಸರಿಯಲ್ಲ. ಅದನ್ನು ನಾನು ಹೇಳುವುದಿಲ್ಲ. ಅವರು ಜಡ್ಜ್‌ಮೆಂಟ್ ಬರೆದು ಅನೌನ್ಸ್ ಆದಮೇಲೆ ಕಾಮೆಂಟ್ ಮಾಡುವುದಕ್ಕೆ ನನಗೆ ಹಕ್ಕಿದೆ. ನಾನು ಮಾಡುತ್ತೇನೆ. ಈಗ ನಾನು ಮಂತ್ರಿಯಾಗಿ ನನಗೆ ಏನೊಂದು ಆತಂಕವಾಗಿದೆ ಅಡಚಣೆ ಆಗಿದೆ ಎನ್ನುವುದರ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ನೀವು ಏಕೆ ಹೈಕೋರ್ಟ್ ಎಂದಾಕ್ಷಣ ಏನು ಅದು ಶ್ರೇಷ್ಠವಾಗಿರತಕ್ಕಂಥಾದ್ದು ಅವರು ಟೀಕೆಗೆ ಒಳಗಾಗದೇ ಇರತಕ್ಕಂಥ ಸಂಸ್ಥೆ ಆಗಿದೆಯೋ ಪ್ರಜಾಪ್ರಭುತ್ವದಲ್ಲಿ ಏನೇನೋ ಆಗುತ್ತಿದೆ. ಬದಲಾವಣೆ ಆಗುತ್ತಿದೆ. ನೀವು ಏಕೆ ಇಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಕು ನಾನು ಲಾಯರ್ ಇದ್ದೇನೆ. ಬಹಳ ವರ್ಷಗಳಿಂದ ಲಾಯರ್ ಆಗಿ ಹೆಸರು ತೆಗೆದುಕೊಂಡಿದ್ದೇನೆ. ಮತ್ತೆ ನಾನು ಲಾಯರ್ ಆದ ಅನುಭವದ ಹಿನ್ನಲೆಯಲ್ಲಿ ಒಂದೆರಡು ಮಾತನಾಡುತ್ತೇನೆ. ಇದರಿಂದ ತಮಗೂ ಅನುಕೂಲ ವಾಗುತ್ತದೆ. ಇದರಿಂದ ಈ ರಾಜ್ಯಕ್ಕೂ ಅನುಕೂಲವಾದರೆ ಒಳ್ಳೆಯದು. ಅನುಕೂಲ ಆಗದೇ ಹೋದರೆ ನಾನು ವಾಪಾಸ್ಸು ತೆಗೆದುಕೊಳ್ಳುತ್ತೇನೆ. ಇನ್ನೇನಂತೆ ಇದೇನೂ ದೊಡ್ಡ ಕೆಲಸ ಅಲ್ಲ. ಮಾನ್ಯ ಉಪಾಧ್ಯಕ್ಷರೇ ಕಾರ್ಯಾಂಗದ್ದು ದಿನಚರಿ ಕಾರ್ಯಕ್ರಮ ಏನಿದೆ....

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಮ್ಮನ್ನು ನೋಡಿದರೆ ಅಯ್ಯೋ ಅನ್ನಿಸುತ್ತದೆ.

ಶ್ರೀ ಬಿ. ಬಸವಲಿಂಗಪ್ಪ:- ನಿಮ್ಮನ್ನು ನೋಡಿದರೆ ನನಗೆ 'ಅಪ್ಪಾ' ಅನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈ 'ಅಯ್ಯಯಪ್ಪೋ' ಯಾರಿಗೂ ಬೇಡಿ. ತಾವು ಇರಬೇಕು...

(ಗೊಂದಲ)

ಉಪಾಧ್ಯಕ್ಷರು:- ಅವರಿಗೆ ಇಂಟರ್‌ವೀನ್ ಮಾಡಬೇಡಿ. ನೀವು ಮುಂದುವರಿಸಿ.

ಶ್ರೀ ಬಿ. ಬಸವಲಿಂಗಪ್ಪ:- ನಿಮಗೆ ತಿಳುವಳಿಕೆ ಬಂದಷ್ಟು ನೀವು ಇಷ್ಟು ಹೊತ್ತು ಮಾತನಾಡಿದ್ದೀರಿ. ನನಗೆ ತಿಳುವಳಿಕೆ ಬಂದ ಹಾಗೆ ನಾನು ಮಾತನಾಡುತ್ತೇನೆ. ತಾವು ಕೇಳಿ. ಈಗ ನಾವು ಕಾರ್ಯಾಂಗದ ಒಂದು ಅಧಿಕಾರವನ್ನು ಕೈಯಲ್ಲಿಟ್ಟುಕೊಂಡು ಯಾವ ರೀತಿ ಕೆಲಸ ಮಾಡಬೇಕು ಯಾವುದು ಆರ್ಡರ್ ಮಾಡಬೇಕು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ನಮಗೆ ಸಂಶಯ ಬಂದಿದೆ. ಕಾನೂನುಗಳು ಇವೆ ರೂಲ್ಸ್ ಇವೆ. ಇದರ ಹಿನ್ನೆಲೆಯಲ್ಲಿ ಆರ್ಡರ್ ಹುಕುಮ್‌ಗಳನ್ನು ಮಾಡಬೇಕಾಗುತ್ತದೆ. ಇವುಗಳನ್ನು ಮಾಡುವಾಗ ಅದಕ್ಕೆ ವಿರೋಧ ಆಗಿದ್ದರೆ ನನ್ನ ಅಭ್ಯಂತರ ಇಲ್ಲ. ಯಾರು ಬೇಕಾದರೂ ಮಾಡಲಿ; ಆದರೆ ಅದು ಪರವಾಗಿದ್ದರೆ ನೀವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಬೇಕಾದರೆ ಪರೀಕ್ಷೆ ಮಾಡಲಿ. ಯಾರಾದರೂ ತೆಗೆದುಕೊಂಡು ಹೋಗಿ ಅದು ಸರಿಯೋ ತಪ್ಪೋ ಅಂತ ಮಾಡಲಿ. ಆದರೆ ಕಾರ್ಯಾಂಗದ ವ್ಯಾಪ್ತಿಯಲ್ಲಿ ಮಾಮೂಲಿಯಾಗಿ ದಿನಚರಿಯ ಕೆಲಸಕಾರ್ಯಗಳು ಇವೆ; ಅದಕ್ಕೆ ಎಲ್ಲಾ ಸ್ಟೇಆರ್ಡರ್ ಕೊಡುತ್ತಾ ಇದ್ದರೆ ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕಾಗಿದೆ ಎಂಬ ಪ್ರಶ್ನೆಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಈ ರಾಜ್ಯದ ಮುಂದೆ ಇಟ್ಟಿದ್ದೇನೆ. ಈಗ ನಮಗೆ ಕಷ್ಟವಾಗಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ ಯಾವ್ಯಾವುದು ಈ ಕಾರ್ಯಾಂಗದ ವ್ಯಾಪ್ತಿಗೆ ಬರುತ್ತದೆ... "You have power to review the judicial acts; you have no powers to review the Executive acts." ಅಂತ ನನ್ನ ನಿಲುವು ಅಷ್ಟೆ. ದಯಮಾಡಿ ಹೆಚ್ಚಿನ ರೀತಿಯಲ್ಲಿ ತಾವು ಅದಕ್ಕೆ ಕೈಹಾಕದೇ ಹೋದರೆ ನಮಗೆ ಸುಲಲಿತವಾಗಿ ದೇಶದ ಜನರನ್ನು ರಕ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆಯೆಂದು ನಾನು ಇಷ್ಟು

ಹೇಳುವುದಕ್ಕೆ ಎದ್ದು ನಿಂತಿದ್ದೇನೆ ಹೊರತಾಗಿ ಬೇರೆ ಟೀಕೆ ಮಾಡಬೇಕು ಹಾಗಂತ ನನ್ನ ಮನಸ್ಸಿನಲ್ಲಿ ಏನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೇ ನಾನಾದರೂ ಹೇಳತಕ್ಕದ್ದು ಇಷ್ಟೇನೆ. ಮಾನ್ಯ ಮಂತ್ರಿಗಳು ಜ್ಯುಡಿಶಿಯಲ್ ಆಕ್ಟ್‌ನ್ನು ರಿವ್ಯು ಮಾಡುವುದಕ್ಕೆ ಹೌಸ್ ಅಥವಾ ನಮಗೆ ಪವರ್ಸ್ ಇದೆ ಎಂಬ ಮಾತನ್ನು ಹೇಳಿದ್ದಾರೆ; ಅದನ್ನು ಒಪ್ಪೋಣ. ಆದರೆ ನೀವು ಹೇಳಿರತಕ್ಕದ್ದು ಏನು ಹೈಕೋರ್ಟಿನಲ್ಲಿರತಕ್ಕಂಥ ಎಲ್ಲಾ ನ್ಯಾಯಾಧೀಶರುಗಳು ವಾರಕ್ಕೊಮ್ಮೆ ಕುಳಿತುಕೊಂಡು ಎಲ್ಲ ಮಂತ್ರಿಗಳಿಗೆ ಪಾಠ ಹೇಳಿಕೊಡಲಿ ಎನ್ನತಕ್ಕಂಥ ಮಾತನ್ನು ನೀವು ಹೇಳಿದ್ದೀರಿ. What does it mean? What does it reflect? It is not dis-respect to the judiciary? Is it your stand on behalf of the Government?

SRI B. BASAVALINGAPPA:- What has Government to do here? It is my view.

(INTERRUPTION)

SRI S.H. KOUJALAGI:- You are part of the Government.

(INTERRUPTION)

SRI B.S. YEDIYURAPPA:- You are not an individual. You are a Minister.

(INTERRUPTION)

ಉಪಾಧ್ಯಕ್ಷರು:- ಈಗ ಅವರು ಮುಗಿಸಲಿ. ಆ ಮೇಲೆ ನೀವು ಬೇಕಾದರೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ:- ಅವರು ಬಂದು ಪಾಠ ಕಲಿಸಬೇಕೆಂದು ಏಕೆ ಹೇಳಿದ್ದು ಎಂದರೆ.....

(ಗೊಂದಲ)

ಶ್ರೀ ಎಸ್.ಎಚ್. ಕೌಜಲಗಿ:- ಹೈಕೋರ್ಟ್ ಟೀಕೆ ಮಾಡುವುದನ್ನು ನಾವು ಇಲ್ಲಿ ಕುಳಿತುಕೊಂಡು ಕೇಳಬೇಕಾ?

ಶ್ರೀ ಬಿ. ಬಸವಲಿಂಗಪ್ಪ:- ಕೇಳದಿದ್ದರೆ ಹೊರಗೆ ಹೋಗಿ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ತರಹ ಮಾತನಾಡುವುದು ಸರಿಯಲ್ಲ. ಇದು ಅತಿರೇಕದ ಪರಮಾವಧಿ....

(ಅನೇಕ ಸದಸ್ಯರು ಏಕಕಾಲದಲ್ಲಿ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು)

(ಗೊಂದಲ)

SRI P.G.R. SINDHYA:- We will not allow this. It cannot be tolerated.

ಹೊರಗಡೆ ಹೋಗಿ ಎಂದು ಹೇಳುವುದಕ್ಕೆ ನೀವು ಯಾರು ಅವರೂ ಒಬ್ಬ ಗೌರವಾನ್ವಿತ ಸದಸ್ಯರಿದ್ದಾರೆ. ನೀವು ಹೀಗೆಯೇ ಮಾತನಾಡಿದರೆ ನಾವು ಧರಣಿ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮಂತ್ರಿಗಳು ಜವಾಬ್ದಾರಿಯಿಂದ ಮಾತನಾಡುತ್ತಿಲ್ಲ. ಬಹಳ ಬೇಜವಾಬ್ದಾರಿಯಿಂದ ಮಾತನಾಡುವುದಕ್ಕೆ ಹೊರಟಿದ್ದಾರೆ. ಇದು ಸರಿಯಲ್ಲ. ಅವರು ಎದ್ದು ಹೋಗಿ ಎಂದು ಹೇಳುವುದು ಸರಿಯೇ ಏನು ಇದರ ಉದ್ದೇಶ. ದಯಮಾಡಿ ತಾವು ಅವರಿಗೆ ಹೇಳಿ ಇದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು...

MADAM DEPUTY SPEAKER:- He does not mean it.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇದನ್ನು ವಾಪಸ್ ತೆಗೆದುಕೊಳ್ಳಬೇಕು ಇಲ್ಲದೇ ಹೋದರೆ ನಾವು ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಎದ್ದು ಹೋಗಿ ಎಂದು ಹೇಳಿದರೆ ಏನು...

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ ಹೈಕೋರ್ಟ್ ನ್ಯಾಯಾಧೀಶರು ವಾರಕ್ಕೊಮ್ಮೆ ಕುಳಿತುಕೊಂಡು ಎಲ್ಲಾ ಮಂತ್ರಿಗಳಿಗೂ ಪಾಠ ಹೇಳಿಕೊಡಬೇಕೆಂದು ಹೇಳಿದ್ದಾರೆ. ಅಂದರೆ ನಮ್ಮ ರಾಜ್ಯದ ನ್ಯಾಯಾಲಯದ ನ್ಯಾಯಾಧೀಶರು ಈ ಸರ್ಕಾರ ಕೆಲಸ ಮಾಡುವುದಕ್ಕೆ ಇಂಟರ್‌ಫೀಯರ್ ಆಗಿದ್ದಾರೆ ಎನ್ನತಕ್ಕ ಅರ್ಥ ಬರುತ್ತದೆ. ಇದನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದರೆ ಈ ಜುಡಿಷಿಯಲ್ ಮೇಲೆ ಆಗತಕ್ಕ ಒಂದು ವಧೆಯನ್ನು ಈ ಸದನವನ್ನು ದುರುಪಯೋಗ ಮಾಡಿಕೊಂಡು ನೀವು ಮಾಡುತ್ತಾ ಇದ್ದೀರಿ ಎಂದು ಹೇಳಿದರೆ ಇವರು ಉದ್ಧಟತನವನ್ನು ತೋರಿಸುತ್ತಿದ್ದಾರೆ. ಪದೇ ಪದೇ ಸದಸ್ಯರನ್ನು ಆಚೆ ಹೋಗಿ ಎಂದು ಹೇಳುತ್ತಿದ್ದಾರೆ. ನಾವು ಆಚೆ ಹೋಗುವುದಕ್ಕಲ್ಲ ಬಂದಿರುವುದು ತಾವು ಈ ರೀತಿ ಮಾತನಾಡಿದರೆ ನಿಮ್ಮನ್ನೇ ಆಚೆ ಕಳುಹಿಸುತ್ತೇವೆ. We do not tolerate this. He has to withdraw it.

ಶ್ರೀ ವಾಟಾಳ್ ನಾಗರಾಜ್:- ನಾವು ತಾಳ್ಮೆಯಿಂದ ಕೇಳುತ್ತಿದ್ದೇವೆ. ಮಧ್ಯೆ ಮಧ್ಯೆ ಎದ್ದು ಅವರು ಹೇಳತಕ್ಕ ಉತ್ತರಕ್ಕೆ ತೊಂದರೆ ಮಾಡುತ್ತಿಲ್ಲ. ಏಕೆಂದರೆ ಇಲ್ಲಿ ಅವರು ಹೇಳುವುದೆಲ್ಲಾ ಕಡತಕ್ಕೆ ಹೋಗುತ್ತದೆ. ಮುಂದೆ ಅವರ ಭವಿಷ್ಯ ಏನಾಗುತ್ತದೆ ಎಂಬುದನ್ನು ನೋಡೋಣ. ಈಗ ತಾವು ನಮಗೆ ರಕ್ಷಣೆ ಕೊಡಬೇಕು. ಏಕೆಂದರೆ ಅವರು ಉತ್ತರ ಕೊಟ್ಟ ಮೇಲೆ ಕ್ಲಾರಿಫಿಕೇಷನ್ ಕೇಳಿ ಎಂದು ತಾವು ಹೇಳಿದಿರಿ. ಅದರಂತೆ ಅವರು ಎರಡು ಮೂರು ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿದೆ.

ಒಂದನೇ ಪ್ರಶ್ನೆ ಅಂದರೆ ಹೈಕೋರ್ಟ್ ನ್ಯಾಯಾಧೀಶರು ಮಂತ್ರಿಗಳನ್ನು ಕರೆಸಿ ಪಾಠ ಹೇಳುವುದು; ಎರಡನೆಯದು: "ಸ್ಟೇ" ಕೊಡುವುದು ಅಂದರೆ ತಡೆಯಾಜ್ಞೆಯನ್ನು ಯಾವಾಗ ಬೇಕಾದರೂ ಅವರು ಕೊಡುತ್ತಾರೆ ಎಂಬ ಅರ್ಥದಲ್ಲಿ ಏನು ಮಾತನಾಡುತ್ತಿದ್ದಾರೆ ಇದನ್ನು ತಾವೊಬ್ಬರೇ ಹೇಳುತ್ತಿದ್ದಿರಾ ಅಥವಾ ಇದಕ್ಕೆ ಇಡೀ ಸರ್ಕಾರವೇ ಹೊಣೆಯೇ ಎಂದು ಕೇಳುತ್ತಿರುವುದು. ಈ ರೀತಿ ಆದರೆ ನಾವೂ ಸಹ ನಿಮಗೆ ಹೊರಗಡೆ ಹೋಗಿ ಎಂದು ಹೇಳಬೇಕಾಗುತ್ತದೆ. ಈ ರೀತಿ ಹೇಳುವುದು ಸರಿಯಲ್ಲ. ಇದನ್ನು ಹಿಂತೆಗೆದುಕೊಳ್ಳಬೇಕು. ಅವರು ವಾಪಸ್ ತೆಗೆದುಕೊಳ್ಳಲಿಲ್ಲ ಎಂದರೆ ನಾವು ಇಲ್ಲಿ ಧರಣಿ ಮಾಡಬೇಕಾಗುತ್ತದೆ. ಅವರ ಬಗ್ಗೆ ನಮಗೆ ಗೌರವ ಇದೆ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲಿ ಪ್ರಶ್ನೆ ಇರುವುದು ಅನೇಕ ಸಾರಿ ಮಾನ್ಯ ಬಸವಲಿಂಗಪ್ಪನವರು ಮಾತನಾಡುವಾಗ....

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ಮೊದಲು ಕೇಳೋಣ...

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಕೌಜಲಗಿಯವರಿಗೆ ನಾನು ವೈಯಕ್ತಿಕವಾಗಿ ಹೇಳಿದ್ದೇನೆ. ಅವರು ನನ್ನ ಮಾತು ಕೇಳುವುದಿಲ್ಲವೆಂದು ಹೇಳಿದರು. ಅದಕ್ಕಾಗಿ ಅವರಿಗೆ ವೈಯಕ್ತಿಕವಾಗಿ ಹೇಳಿದ್ದೇನೆ ನೀವು ಹೊರಗೆ ಹೋಗಿ ಎಂದು....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಈ ಸಭೆಯ ಸದಸ್ಯರ ಬಗ್ಗೆ ತಮಗೂ ಗೌರವ ಇದೆ. ತಾವೂ ಕೂಡ ನಮಗೆ ಹೊರಗೆ ಹೋಗಿ ಎಂದು ಹೇಳುವುದಿಲ್ಲ. ಆದರೆ ಮಾನ್ಯ ಮಂತ್ರಿಗಳು ಸದಸ್ಯರೊಬ್ಬರಿಗೆ ಇವತ್ತು ಹೊರಗೆ ಹೋಗಿ ಎನ್ನುವ ಪರಿಸ್ಥಿತಿ ಉದ್ಭವವಾಗಿರಬೇಕಾದರೆ

ವಿಶೇಷವಾದ ಘಟನೆ ನಡೆದಿರಬೇಕು. ನಮಗೆ ಅವರು ಹಿರಿಯ ಸಚಿವರು. ಅವರ ಕೆಲವು ವಿಚಾರಗಳ ಬಗ್ಗೆ ನಂಬಿಕೆ ಇದೆ. ವೈಯಕ್ತಿಕವಾಗಿ ಅವರ ಬಗ್ಗೆ ಏನೂ ಇಲ್ಲ. ಆದರೆ ಈಗ ಅವರು ದಾರಿ ತಪ್ಪಿ ಹೋಗುತ್ತಿದ್ದಾರೆ....

ಉಪಾಧ್ಯಕ್ಷರು:- ಈ ಮಾತನ್ನು ಹೇಳಬೇಕಾದರೆ ಯಾವ ಹಿನ್ನೆಲೆಯಲ್ಲಿ ಹೇಳಿದ್ದಾರೆ ಎಂಬುದನ್ನು ಹೇಳುತ್ತಿದ್ದಾರೆ; ಅದನ್ನು ಕೇಳೋಣ.

ಶ್ರೀ ಬಿ. ಬಸವಲಿಂಗಪ್ಪ:- ಒಂದು ನಿಮಿಷ ನಾನು ಅವರೊಬ್ಬರಿಗೆ ಹೇಳಿದ್ದು. ಎಲ್ಲರಿಗೂ ಅನ್ವಯ ಆಗುತ್ತದೆಂದು ಹೇಳುವ ಹಾಗಿದ್ದರೆ ಅದನ್ನು ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ಚಿಂತೆ ಇಲ್ಲ. ನನ್ನ ಮಾತನ್ನು ಕೇಳುವುದಿಲ್ಲ, ಕೇಳುವುದಿಲ್ಲ ಎಂದು ಹೇಳಿದರು. ಅದಕ್ಕೋಸ್ಕರ ಆ ರೀತಿ ಹೇಳಿದೆ. ಆ ಮೇಲೆ....

(ಗೊಂದಲ)

ಉಪಾಧ್ಯಕ್ಷರು:- ತಾವು ಮುಂದುವರಿಸಿ...

ಶ್ರೀ ಬಿ. ಬಸವಲಿಂಗಪ್ಪ:- ಆ ಮೇಲೆ ಅವರು ನಮಗೆ ಪಾಠ ಹೇಳಬೇಕೆಂದು ಏತಕ್ಕೆ ಹೇಳುತ್ತಿದ್ದೇನೆಂದರೆ ದಿನಚರಿ ನಾವು ಏನು ಕೆಲಸ ಮಾಡುತ್ತಿದ್ದೇವೆ ಆ ಸಣ್ಣ ಸಣ್ಣ ಕೆಲಸಕ್ಕೆಲ್ಲಾ ಆತಂಕ ಬರುತ್ತಿದೆ. ಯಾವುದೋ ಒಂದು ಸಣ್ಣದು ಒಬ್ಬ ಪ್ಯೂನ್ ಇರುತ್ತಾನೆ ಅವನು ನಮ್ಮ ಮಾತು ಕೇಳುವುದಿಲ್ಲ. ಅವನನ್ನು ನಾವು ಸಸ್ಪೆಂಡ್ ಮಾಡುತ್ತೇವೆ ಇಲ್ಲವೇ ಏನೋ ಮಾಡುತ್ತೇವೆ. ಅದರ ಮೇಲೆ 'ಸ್ಟೇ' ಆರ್ಡರ್ ಕೊಡುತ್ತಾರೆ. ಇದರಿಂದ ತೊಂದರೆಯಾಗಿದೆ ಎಂದು ಹೇಳಿದೆ. ಇಲ್ಲಿ ಎಕ್ಸಿಕ್ಯುಟಿವ್ ಆಕ್ಟ್ ಯಾವುದು ಲೀಗಲ್ ಆಕ್ಟ್ ಯಾವುದು ಜುಡಿಷಿಯಲ್ ರಿವ್ಯೂಗೆ ಸಂಬಂಧ ಪಟ್ಟಿದ್ದು ಯಾವುದು ಎಂದು....

SRI D.B. CHANDRE GOWDA:- Can you question the conduct of the Judge?

ಈಗ ನೀವು ಹೇಳಿದ ಮಾತು ಆರ್ಟಿಕಲ್ 211.... it bars you.

ಶ್ರೀ ಬಿ. ಬಸವಲಿಂಗಪ್ಪ:- ನೀವು ಸ್ವಲ್ಪ ತಡವಾಗಿ ಬಂದಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ:- ನಾನು ಸ್ಪೀಕರ್ ಚೆಂಬರಿನಲ್ಲಿ ಕುಳಿತು ಕೇಳಿದ್ದೆ; ಬೇರೆ ಎಲ್ಲೂ ಹೋಗಿರಲಿಲ್ಲ.

As per the Article 211 of the Constitution, no discussion shall take place in the Legislature of a State with respect to the conduct of a Judge of the Supreme Court or High Court in the discharge of his duties. ಆದ್ದರಿಂದ He cannot take the advantage of the privilege of this House and go on imputing motives. ಹೌದು ಪ್ಯೂನ್ ಟ್ರಾನ್ಸ್‌ಫರ್ ಆದರೂ ಇಂಟರ್‌ಫೀಯರ್ ಆಗುತ್ತಾರೆಂದು ತಾವು ಹೇಳಿದ್ದೀರಿ. He has questioned the conduct of the Judge.

ಶ್ರೀ ಬಿ. ಬಸವಲಿಂಗಪ್ಪ:- ಅದು ಮುಂದಿನ ಸಬ್ಜೆಕ್ಟ್?

ಶ್ರೀ ಡಿ.ಬಿ. ಚಂದ್ರೇಗೌಡ:- ಏಕೆ ಮುಂದಿನ ಸಬ್ಜೆಕ್ಟ್ ಇದನ್ನು ನೀವು ಹೇಳಿದರೆ ನಡೆದು ಬಿಡಬಹುದಾ ನೀವು ಹೇಳಿದರೆ ನಡೆಯುಬಹುದು ತಾನೆ ನೀವು ಸರ್ಕಾರದ ಮಂತ್ರಿಯಾಗಿ ಹೇಳಿದರೆ ನಡೆಯುಬಹುದು. ಹಾಗಾದರೆ ಅದೇ ಪರಿಪಾಠವನ್ನು ನಾವು ಮಾಡಬಹುದು ತಾನೇ ಹಾಗಂತ ಬುದ್ಧಿವಾದ ನಮಗೆ ಹೇಳುತ್ತಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ:- ನ್ಯಾಯವಾಗಿದ್ದರೆ ಮಾಡಿ.

SRI D.B. CHANDREGOWDA:- Madam Deputy Seaker, I would like to known, one thing. ಈ ರೀತಿಯಾದಂಥ ಒಂದು ಮೋಟೀವನ್ನು ಕಾಂಡಕ್ಟ್ ಆಫ್ ದಿ ಜಡ್ಜ್

ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅದು ಕಡತದಲ್ಲಿ ಉಳಿಯಬಹುದೋ ಅಥವಾ ಬೇಡವೋ ಎಂಬ ಬಗ್ಗೆ ತಮ್ಮಿಂದ ರೂಲಿಂಗ್‌ನ್ನು ನಿರೀಕ್ಷೆ ಮಾಡುತ್ತೇವೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಶ್ರೀ ಬಿ. ಬಸವಲಿಂಗಪ್ಪ:- ಇನ್ನು ಈ ಕೆ.ಎಂ.ಎಫ್. ಸಂಸ್ಥೆ ಏನಿದೆ ಇದನ್ನು ವ್ಯಾಪಕವಾಗಿ,

SRI D.B. CHANDREGOWDA:- I have raised a point of order ಏನೆಂದರೆ ಮಾನ್ಯ ಮಂತ್ರಿಗಳು ಹೈಕೋರ್ಟಿನ ಬಗ್ಗೆ ಪ್ರಸ್ತಾಪ ಮಾಡಿ ಯಾವುದೇ ಅಪಾಯಿಂಟ್‌ಮೆಂಟ್ ಇರಲಿ ಒಬ್ಬ ಜವಾನನನ್ನು ವರ್ಗಾವಣೆ ಮಾಡಿದರೂ ನಮಗೆ ಎಕ್ಸಿಕ್ಯುಟಿವ್‌ಗೆ ಏನು ಅಥಾರಿಟಿ ಇದೆ ಎನ್ನುವುದನ್ನು ಪ್ರಸ್ತಾಪ ಮಾಡುತ್ತಾ ಎಲ್ಲದಕ್ಕೂ ಸ್ಟೇ ಕೊಡುತ್ತಾರೆ. ಇದರಿಂದ ಇಂಟರ್‌ಫೀಯರೆನ್ಸ್ ಆಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಆರ್ಟಿಕಲ್ 211ರಲ್ಲಿ conduct of the judges should not be discussed here ಎಂದು ಹೇಳಿದೆ. ಆದರೂ ಅವರು ಇದನ್ನು ಪ್ರಸ್ತಾಪ ಮಾಡಿದ್ದಾರೆ. He has questioned the conduct of the judge. Should it remain a part of the proceedings here on the floor of the House? If not, will you kindly pull the Minister to withdraw the remarks or would you expunge the relevant portion?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಮ್ಮ ನಾಯಕರು ಏನು ಹೇಳಿದ್ದಾರೆ ಅದಕ್ಕೆ ಪೂರಕವಾಗಿ ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನು ತಾವು ಬಹುಶಃ ತಮ್ಮ ಕೊಠಡಿಯಲ್ಲಿ ಈ ಮಾತುಗಳನ್ನು ಕೇಳಿರಬಹುದು. ಹೈಕೋರ್ಟಿನ ಮಾನ್ಯ ನ್ಯಾಯಾಧೀಶರುಗಳು ವಾರಕ್ಕೆ ಒಂದು ಸಾರಿ ನಮ್ಮ ಮಂತ್ರಿಗಳನ್ನೆಲ್ಲಾ ಕೂರಿಸಿಕೊಂಡು ಪಾಠ ಹೇಳಬೇಕೆಂದು ಹೇಳಿದ್ದಾರೆ. ತಾವು ಬೇಕಾದರೆ ಕಡತವನ್ನು ತೆಗೆಸಿ ನೋಡಿ. ದಿನವೂ ಸ್ಟೇ ಕೊಡಲಿಕ್ಕೆ ಹೊರಟಿದ್ದಾರೆ ಅನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಈ ಸ್ಟೇಟ್‌ಮೆಂಟ್‌ಗೆ ನಿಲ್ಲುವುದಾದಲ್ಲಿ ನಿಲ್ಲಲಿ. ಅವರು ಹೇಳಿರುವುದನ್ನು ಪ್ರೊಸೀಡಿಂಗ್ಸ್‌ನಿಂದ ತೆಗೆದುಹಾಕಬೇಕೆಂದು ನಾನು ಹೇಳುವುದಿಲ್ಲ. ಪ್ರೊಸಿಡಿಂಗ್ಸ್‌ನಲ್ಲಿ ಅದು ಇರಲಿ. ಆದರೆ ಅವರು ಈ ಸ್ಟೇಟ್‌ಮೆಂಟಿಗೆ ನಿಲ್ಲುತ್ತೀರಾ ಏನು ಇದರ ಅರ್ಥ ಈ ಸರ್ಕಾರಕ್ಕೆ ನ್ಯಾಯಾಂಗದ ಬಗ್ಗೆ ಏನೂ ಗೌರವ ಇಲ್ಲವೆ ಅಥವಾ ಈ ಸದನದಲ್ಲಿ ತಾವಿರುವುದನ್ನು ದುರುಪಯೋಗ ಮಾಡಿಕೊಳ್ಳುತ್ತಿಲ್ಲವೇ ಎಂಬುದನ್ನು ತಾವು ದಯವಿಟ್ಟು ಹೇಳಿ. ಇದನ್ನು ಕೇಳಿದರೆ ಮಾನ್ಯ ಅಧ್ಯಕ್ಷರೇ ಸದಸ್ಯರುಗಳಿಗೆ ನೀವು ಕೇಳದೆ ಹೋದರೆ ಆಚೆಗೆ ಹೋಗ್ರಿ ಅನ್ನತಕ್ಕಂಥ ದುರಹಂಕಾರದ ಮಾತನ್ನು ಅವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಒಂದು ನಿಮಿಷ....

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೇ ಮಾತಿಗೆ ಏನು ಅಡೆತಡೆ ಇಲ್ಲವಾ ಏನು ಬೇಕಾದರೂ ಮಾತನಾಡಬಹುದು ನಿಮಗೆ ದುರಹಂಕಾರ ಎಂದು ಹೇಳಿದರೆ ಏನಾಗುತ್ತದೆ ನನಗೆ ದುರಹಂಕಾರ ಇದೆಯೋ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಎಲ್ಲಿ ಹೇಳಿದೆ?

ಶ್ರೀ ಬಿ. ಬಸವಲಿಂಗಪ್ಪ:- ಈಗ ಹೇಳಲಿಲ್ಲವಾ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಏನು ಹೇಳಿದೆ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಒಂದು ನಿಮಿಷ ಮಾನ್ಯ ಮಂತ್ರಿಯವರು ತಮ್ಮ ಇಲಾಖೆಯ ಬಗ್ಗೆ ತಿಳಿಯ ವಾತಾವರಣದಲ್ಲಿ ಉತ್ತರ ಕೊಡುತ್ತಿದ್ದರು. ಆ ಮೇಲೆ ಅವರು ಅದರ ವ್ಯಾಪ್ತಿಯನ್ನು ಬಿಟ್ಟು ಬೇರೆ ಕಡೆ ತಮ್ಮ ಗಮನವನ್ನು ಹರಿಸಿದರು. ಅವರ ಉದ್ದೇಶ ಉತ್ತರಕ್ಕಿಂತ ಹೆಚ್ಚಾಗಿ ಈ ರಾಜ್ಯದ ಒಂದು ಗೊಂದಲ ಸೃಷ್ಟಿ ಆಗಬೇಕೆನ್ನುವ ಮನಸ್ಸು ಅವರಿಗೆ ಇರಬಹುದು. ಅದರ ಬಗ್ಗೆ ನನ್ನ ತಕರಾರಿಲ್ಲ. ಏಕೆಂದರೆ ಅವರು ಗೊಂದಲ ಮಾಡುವುದಾದರೆ ಮಾಡಲಿ ನನ್ನ ಅಭ್ಯಂತರವೇನೂ ಇಲ್ಲ. ಇಲ್ಲಿ ಮೂರು ಪ್ರಶ್ನೆಗಳು ಗುರುತರವಾಗಿ ಉದ್ಭವವಾಗಿವೆ.

ಒಂದು ಈಗಾಗಲೇ ತಮ್ಮ ಗಮನಕ್ಕೆ ತಂದ ರೀತಿಯಲ್ಲಿ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರು ಗಳು ಸರ್ಕಾರದ ಮಂತ್ರಿಗಳಿಗೆ ಪಾಠವನ್ನು ಹೇಳಬೇಕು ಅನ್ನತಕ್ಕಂತಾದ್ದು; ಎರಡನೆಯದು ಯಾವಾಗ ಬೇಕಾದರೂ ಯಾರಿಗೆ ಬೇಕಾದರೂ ತಡೆ ಆಜ್ಞೆಗಳನ್ನು ನ್ಯಾಯಾಲಯಗಳು ಕೊಡುತ್ತವೆ ಎನ್ನುವುದು; ಮೂರನೆಯದು ಈ ಸಭೆಯಲ್ಲಿ ಸದಸ್ಯರು ಆ ಬಗ್ಗೆ ಕೇಳಿದಾಗ ಅವರನ್ನು ಹೊರಗಡೆ ಹೋಗಿ ಎಂದರು. ನನಗೆ ಒಂದು ಪ್ರಶ್ನೆ ಮುಖ್ಯ. ಇದು ಕಡತದಲ್ಲಿ ಉಳಿದಿದೆ. ಅದು ಉಳಿಯಬೇಕು. ತೆಗೆಯಿರಿ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಸಚಿವರಾದಂಥ ಬಸವಲಿಂಗಪ್ಪನವರು ವೈಯಕ್ತಿಕವಾಗಿ ಹೇಳುತ್ತಿದ್ದಾರೋ ಅಥವಾ ಮಂತ್ರಿಯಾಗಿ ಹೇಳುತ್ತಿದ್ದಾರೋ ಗೊತ್ತಾಗಬೇಕು. ಮಂತ್ರಿಗಳೆಂದ ಮೇಲೆ ಅವರಿಗೆ ಜಂಟಿ ಜವಾಬ್ದಾರಿ ಇರುತ್ತದೆ. ಅಂದ ಮೇಲೆ ಇಡೀ ಸರ್ಕಾರ ಹೇಳಿದಂತೆ ತಾವು ಹೇಳತಕ್ಕಂಥ ಮಾತು ಇಡೀ ಸರ್ಕಾರ ಹೇಳಿದ ಹಾಗೆ. ಅಂದ ಮೇಲೆ ಈ ಸರ್ಕಾರ ನ್ಯಾಯಾಂಗದ ಮೇಲೆ ಗಧಪ್ರಹಾರ ಮಾಡುವುದಕ್ಕೆ ಈ ಸದನವನ್ನು ಬಳಸಬಹುದೇ ಈ ಬಗ್ಗೆ ನಮಗೆ ತಮ್ಮಿಂದ ರೂಲಿಂಗ್ ಬೇಕು.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ ಯಾವ ಒಂದು ಹಿನ್ನೆಲೆಯಲ್ಲಿ ಬಹುಶಃ ಅವರು ಮಾತನಾಡಿದ್ದಾರೆ ಎಂದರೆ ಶ್ರೇಷ್ಠ ನ್ಯಾಯಾಲಯ ಪ್ರತಿಯೊಂದು ಸರ್ಕಾರಿ ಆಜ್ಞೆಗಳ ಮೇಲೂ ಸ್ಟೇ ಆರ್ಡರ್ ಕೊಡುತ್ತದೆ. ಕಾರ್ಯಾಂಗದಲ್ಲಿ ಹಸ್ತಕ್ಷೇಪ ಮಾಡುತ್ತದೆ ನಮಗೆ ಕೆಲಸ ಮಾಡುವುದಕ್ಕೆ ಇದರಿಂದ ತೊಂದರೆಯಾಗುತ್ತದೆ ಎನ್ನತಕ್ಕಂಥ ಮಾತಿನ ಹಿನ್ನೆಲೆಯಲ್ಲಿ ಇದನ್ನು ಹೇಳಿದ್ದಾರೆ. ಅದಕ್ಕಾಗಿ ವಾರಕ್ಕೆ ಒಂದು ಸಾರಿ ಹೈಕೋರ್ಟ್ ಜಡ್ಜ್‌ಗಳು ನಮಗೆ ಪಾಠ ಹೇಳಲಿ ಎಂದು ಈ ಒಂದು ಹಿನ್ನೆಲೆಯಲ್ಲಿ ಅವರು ಹೇಳಿದ್ದಾರೆ. ಇದರಲ್ಲಿ ಉದ್ದೇಶ ಏನು ಇದೆ ಅವರ ಉದ್ದೇಶ ನ್ಯಾಯಾಂಗದ ಬಗ್ಗೆ ಸದುದ್ದೇಶ ಇದೆಯೋ ಅಥವಾ ನ್ಯಾಯಾಂಗ ಸ್ಟೇ ಆರ್ಡರ್ ಕೊಡುವುದರಿಂದ ಅವರಿಗೆ ಬುದ್ಧಿ ಕಲಿಸಬೇಕೆಂದು ಐರಾನಿಕಲಿ ಅಥವಾ ನ್ಯಾಯಾಂಗ ನಿಂದನೆ ಮಾಡಬೇಕೆನ್ನುವ ಉದ್ದೇಶದಿಂದ ಈ ಮಾತನ್ನು ಹೇಳಿದ್ದಾರೆಯೋ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಇಷ್ಟೇ. ಸನ್ಮಾನ್ಯ ಹಿರಿಯ ಸಚಿವರಾದ ಶ್ರೀ ಬಸವಲಿಂಗಪ್ಪನವರು ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರುಗಳನ್ನು ಈ ರೀತಿಯಾಗಿ ಸದನದಲ್ಲಿ ಮಾತನಾಡಿ ಅವರಿಗೆ ನಿಂದನೆ ಮಾಡಲು ಪ್ರಯತ್ನ ಮಾಡಿದರೆ ಇದರ ಮೂಲಕ ಕೋರ್ಟ್ ನಿಂದನೆ ಮಾಡಿದರೆ ಶ್ರೀಸಾಮಾನ್ಯರು ಹಾಗೂ ಹೊಸದಾಗಿ ಆರಿಸಿ ಬಂದಿರ ತಕ್ಕಂಥ ಶಾಸಕರು ಈ ಸದನದ ಒಳಗಡೆ ಈ ರೀತಿಯಲ್ಲಿ ನ್ಯಾಯಾಂಗದ ಬಗ್ಗೆ ಮಾತನಾಡುವ ಹಕ್ಕು ಇದೆ ಎನ್ನತಕ್ಕಂಥ ಒಂದು ತೀರ್ಮಾನಕ್ಕೆ ಅವರು ಬರಬೇಕಾಗುತ್ತದೆ. ನ್ಯಾಯಾಂಗದ ಬಗ್ಗೆ ಇರತಕ್ಕಂಥ ಗೌರವವನ್ನು ಅಳಿಸಿ ಹಾಕುವಂತಹ ಪ್ರಯತ್ನ ಮಾನ್ಯ ಹಿರಿಯ ಸಚಿವರು ಮಾಡಿದಂತೆ ಆಗುತ್ತದೆ. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ತಾವು ಒಂದು ತಿದ್ದುಪಡಿಯನ್ನು ತನ್ನಿ. ಈ ತರಹ ನ್ಯಾಯಾಧೀಶರುಗಳು ವಾರಕ್ಕೆ ಒಂದು ಸಾರಿ ಯಾರ್‍ಯಾರೋ ಮಂತ್ರಿಗಳು ಆಗಿರುವಂತಹ ಈ ಸಂದರ್ಭದಲ್ಲಿ ತಿಳುವಳಿಕೆ ಇಲ್ಲದಿರುವಂತಹ ಈ ಸಂದರ್ಭದಲ್ಲಿ ನಮಗೆ ಪಾಠ ಹೇಳತಕ್ಕಂಥ ವ್ಯವಸ್ಥೆ ಆಗಬೇಕು ಎಂಬ ಬಗ್ಗೆ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಕೇಂದ್ರಕ್ಕೆ ಬರೆದು ತಿಳಿಸಿ. ಆ ತರಹದ ವಿಚಾರ ಏನಾದರೂ ಇದ್ದರೆ ಹೇಳಿ. ಅದನ್ನು ಬಿಟ್ಟು ಈ ರೀತಿಯಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಮಂತ್ರಿಗಳು ಹೇಳಬಾರದು. ಮಾನ್ಯ ಮಂತ್ರಿಗಳು ಅನೇಕ ವಿಷಯಗಳಲ್ಲಿ ತಮ್ಮ ಸ್ವಂತ ಅಭಿಪ್ರಾಯವನ್ನು ಹೇಳಿದ್ದಾರೆ. ಆ ಬಗ್ಗೆ ಚರ್ಚೆಗಳಾಗಿವೆ. ಅದು ಬೇರೆ ವಿಷಯ. ಆದರೆ ನ್ಯಾಯಾಂಗದ ಬಗ್ಗೆ ತಾವು ಕೈಹಾಕಿ ಏನಾದರೂ ಹೇಳುತ್ತಿದ್ದರೆ ನಾವು ಇಲ್ಲಿ ಸುಮ್ಮನೆ ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ತಾವು ಈ ಬಗ್ಗೆ ಒಂದು ರೂಲಿಂಗ್ ಕೊಡಬೇಕು. ಇದು ಪುನಃ ರಿಪೀಟ್ ಆಗಬಾರದು. ಬಹುಶಃ ಇದು ನಮಗ್ಯಾರಿಗೂ ಗೌರವ ತರುವಂತಹ ಸಂಗತಿ ಅಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಬನ್ನಿಕೋಡ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ, ಆ ಒಂದು ಹಿನ್ನೆಲೆಯಲ್ಲಿಯೇ ನಾನು ಹೇಳಿದ್ದೇನೆ. ಆರ್ಟಿಕಲ್ 211ರ

ಪ್ರಕಾರ ಇವರು ವಾದಗಳನ್ನು ಪ್ರಾರಂಭ ಮಾಡಿದರೆ ಅದಕ್ಕೆ ಕೊನೆ ಯಾವುದು ಮೊದಲು ಯಾವುದು ಅದರಲ್ಲಿ ವೈಯಕ್ತಿಕವಾಗಿ ಜಡ್ಜ್‌ಗಳನ್ನು ಟೀಕೆ ಮಾಡಬಾರದು ಎಂದು ಇದೆ. ಹೈಕೋರ್ಟ್ ಬಗ್ಗೆ ನಾವು ಯಾವ ರೀತಿಯಲ್ಲೂ ಆ ಪದವನ್ನು ಎತ್ತಲೇ ಬಾರದು ಎಂದು ಎಲ್ಲಿದೆ ನಾನು ಹೇಳುತ್ತೇನೆ ಶ್ರೀಮಾನ್ ಬನ್ನಿಕೋಡ್‌ರವರು ಏನು ಈ ಸದನದ ಮುಂದೆ ಒಂದು ವಾದ ಇಟ್ಟಿದ್ದಾರೆ ಆ ಒಂದು ಹಿನ್ನೆಲೆಯಲ್ಲಿ ನಾನು ಮಾತನಾಡಿದ್ದೇನೆ. ಬೇರೆ ಏನೂ ಉದ್ದೇಶ ಇಲ್ಲ. ಅದನ್ನು ಸ್ವೇಚ್ಛೆಯಾಗಿ ಬೇರೆ ಬೇರೆ ಅರ್ಥಗಳು ಬರುವ ಹಾಗೆ ಕಲ್ಪನೆ ಮಾಡಿಕೊಂಡು ಮಾತನಾಡುವುದಕ್ಕೆ ಇಲ್ಲಿ ಅವಕಾಶ ಇಲ್ಲ. ನನ್ನ ಉದ್ದೇಶ ಕೂಡ ಆ ರೀತಿ ಇಲ್ಲ. ನನಗೇನು ಟೀಕೆ ಮಾಡುವ ಉದ್ದೇಶ ಇದೆಯೇ? ಈ ರೀತಿ ಆದರೆ ಮಂತ್ರಿಯಾಗಿ ಕೆಲಸ ಮಾಡಲು ಬಹಳ ಆತಂಕ ಆಗುತ್ತದೆ. ಸಣ್ಣ ಸಣ್ಣ ಒಂದು ಎಕ್ಸಿಕ್ಯುಟಿವ್ ಆಕ್ಟ್‌ಗೂ ಸ್ಟೇ ಆರ್ಡರ್ ಕೊಟ್ಟ ಮೇಲೆ ತಕ್ಷಣ ಅದನ್ನು ತೀರ್ಮಾನ ಮಾಡದೆ ವರ್ಷಾನುಗಟ್ಟಲೆ ತೀರ್ಮಾನ ಮಾಡದಿದ್ದರೆ ಹೇಗೆ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಬಡವರಿಗೆ ಅನ್ಯಾಯವಾದಾಗ ಅದೇ ಅವರಿಗೆ ದೊಡ್ಡದು. ನಿಮ್ಮ ದೃಷ್ಟಿಯಲ್ಲಿ ಅದು ಸಣ್ಣದು ಇರಬಹುದು. ಯಾರಿಗೆ ತೊಂದರೆಯಾಗುತ್ತದೆಯೋ ಅವರು ಕೋರ್ಟಿಗೆ ಹೋಗಬೇಕು. ಸರ್ಕಾರ ಉದ್ದೇಶಪೂರ್ವಕವಾಗಿ ಅನ್ಯಾಯ ಮಾಡಿದಾಗ ನ್ಯಾಯಕ್ಕಾಗಿ ಕೋರ್ಟಿಗೆ ಹೋಗದೆ ಬೇರೆ ದಾರಿ ಯಾವುದು ಇದೆ? ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಶಃ ನ್ಯಾಯಾಲಯ ಇಲ್ಲದಿದ್ದರೆ ಬಹಳ ಸ್ವೇಚ್ಛಾಸಾರವಾಗಿ ಅಧಿಕಾರ ನಡೆಸುವುದಕ್ಕೆ ಅವಕಾಶ ಆಗುತ್ತಿತ್ತು. ಈಗಲೂ ಅದೇ ನಡೆಯುತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ:- ಕೋರ್ಟಿನ ಬಗ್ಗೆ ನಿಮಗೆಷ್ಟು ಗೌರವವಿದೆಯೋ ನನಗೂ ಅಷ್ಟೇ ಗೌರವವಿದೆ. ನಾನು ಹೇಳಿದೆ ಇಂತಹ ಎಕ್ಸಿಕ್ಯುಟಿವ್ ಆಕ್ಟ್‌ಗೆ ಸ್ಟೇ ಆರ್ಡರ್ ಕೊಟ್ಟ ಮೇಲೆ ಎರಡು ದಿವಸದಲ್ಲಿ ಮೂರು ದಿವಸದಲ್ಲಿ ಅಥವಾ ಎಂಟು ದಿವಸಗಳಲ್ಲಿ ತೀರ್ಮಾನ ಮಾಡಲಿ. ವರ್ಷಾನುಗಟ್ಟಲೆ ಇಟ್ಟುಕೊಂಡರೆ ಯಾವ ಮನುಷ್ಯನಿಗೆ ಹಕ್ಕು ಇರುವುದಿಲ್ಲ. ಅಂತಹ ಮನುಷ್ಯ ಅಧಿಕಾರದಲ್ಲಿ ಇರುವುದಕ್ಕೆ ಒಂದು ಅವಕಾಶ ಆಗುತ್ತದೆ. ಮತ್ತೆ ನಾವು ಯಾವ ಉದ್ದೇಶದಿಂದ ಒಂದು ಕಟ್ಟುನಿಟ್ಟಿನಿಂದ ಶಿಸ್ತಿನಿಂದ ಈ ಸರ್ಕಾರ ನಡೆಸಬೇಕೆಂದು ಏನು ಉದ್ದೇಶ ಇರುತ್ತದೆ ಆ ಉದ್ದೇಶ ಸಾಧನೆಯಾಗುವುದಿಲ್ಲವೆಂದು ಹೇಳುವುದಕ್ಕೆ ನಾನು ಅಷ್ಟು ಹೇಳಿದ್ದೇನೆ. ಅದನ್ನು ತಾವು ಅಪಾರ್ಥ ಮಾಡಿಕೊಂಡು ಯಾವ ಯಾವ ಭಾಷೆಯನ್ನು ಮಾನ್ಯ ಸದಸ್ಯರಾದ ಸಿಂಧ್ಯಾರವರು ಉಪಯೋಗಿಸುವುದು ಉದ್ವೇಗದಲ್ಲಿ ಏನು ಹೇಳುತ್ತೀರಿ ಎಂಬುದು ನಿಮಗೇ ಗೊತ್ತಾಗುವುದಿಲ್ಲ. ದಯಮಾಡಿ ತಾವು ನಿಧಾನವಾಗಿ ಮಾತನಾಡಿ: ನಾನು ತಮಗೆ ಕೈ ಮುಗಿಯುತ್ತೇನೆ...

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ಈ ಬಗ್ಗೆ ನಾವು ರೂಲಿಂಗ್ ಕೇಳಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ:- ಯಾವ ಸಬ್ಜೆಕ್ಟ್ ಮೇಲೆ?

(ಸಭೆಯಲ್ಲಿ ನಗು)

ಶ್ರೀ ಡಿ.ಬಿ. ಚಂದ್ರೇಗೌಡ:-, ನಿಮ್ಮ ಸಬ್ಜೆಕ್ಟ್ ಮೇಲೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಬೆಂಕಿ ಹಚ್ಚಿಬಿಟ್ಟು ಬೆಂಕಿ ಎಲ್ಲಿದೆ ನೀರು ಎಲ್ಲಿದೆ ಬೆಂಕಿಯೇ ಕಾಣುತ್ತಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ತಮ್ಮದೇ ರೂಲಿಂಗ್ ಕೋಟ್ ಮಾಡಿ ಹೇಳುತ್ತೇನೆ. ಮೊನ್ನೆ ಈ ರೂಲಿಂಗ್ ಕೊಟ್ಟಿದ್ದೀರಿ. I may be permitted to quote from your Ruling:

"Now the question is to delimit the parameters of the discussion of the issue. The Members have to bear in mind the provisions of Article 211 of the Constitution cf India which provides that no discussion shall take place in the Legislature of a State with respect to the conduct of the Judge of the Supreme Court and High Court in discharge of his duties."

ಈಗ ನೀವು ಕೊಡತಕ್ಕಂಥ ಈ ತೀರ್ಪು ವಿರೋಧ ಪಕ್ಷಕ್ಕೆ ಮಾತ್ರ ಸೀಮಿತವೇ ಅಥವಾ ಇಡೀ ಸದನಕ್ಕೂ ಅನ್ವಯವಾಗುತ್ತದೆಯೇ ಎಂದು ತಿಳಿ ಹೇಳಿದರೆ ಸ್ವಲ್ಪ ಅನುಕೂಲವಾಗುತ್ತದೆ. ಏಕೆಂದರೆ ಮಂತ್ರಿಗಳಾದರೆ ಏನು ಬೇಕಾದರೂ ಹೇಳಬಹುದು ಪ್ರತಿಪಕ್ಷದವರಾದರೆ ಹೇಳಬಾರದು ಎಂದು ಏನಾದರೂ ಇದೆಯೇ. ಆದ್ದರಿಂದ ತಮ್ಮ ತೀರ್ಪು ಅವರಿಗೂ ಅನ್ವಯವಾಗುತ್ತದೆಯೇ ಎಂದು ನಾನು ತಿಳಿಯಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಂತ್ರಿಗಳಿಗೆ ವಾರಕ್ಕೆ ಒಂದು ಸಾರಿಯಾದರೂ ತಾವು ಕಾನೂನಿನ್ಲಿ ಅವಕಾಶವಿದ್ದರೆ ಪಾಠ ಹೇಳಿಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲಿ ಏನು ಹೇಳಬೇಕು ಏನು ಹೇಳಬಾರದು ಎಂಬ ಬಗ್ಗೆ ಅವರಿಗೆ ಪಾಠ ಹೇಳಿಕೊಡುವ ವ್ಯವಸ್ಥೆ ಆಗಬೇಕು.

MR. SPEAKER: As regards Article 211, there is no ambiguity. It is very clear, precise and unequivocal.

"If any Member of this House makes any reference either to a Judge of the High Court or Supreme Court about his conduct in the discharge of his duties..."

From what the Minister has said that in the High Courts there are delays, stay orders are beings issued on small matters, that amounts to a comment about a Judge in the discharge of his duties. So, Article 211 totally bars any such reference. I will not allow that to go into the records of the House. It is very simple and clear. Minister himself is a lawyer by profession and he has highest resepct for the institution of the courts, as much as I expect the Courts to have the greatest regard to the Houses of the Legislature.

SRI B. BASAVALINGAPPA:- They must also have.

MR. SPEAKER:- It is reciprocal.

ಶ್ರೀ ಬಿ. ಬಸವಲಿಂಗಪ್ಪ:- ತಾವು ಆರ್ಟಿಕಲ್ 211ರ ಪ್ರಕಾರ ರೂಲಿಂಗ್ ಕೊಟ್ಟಿದ್ದೀರಿ. ಒಬ್ಬ ಜಡ್ಜ್ ಅವರ ಕಾಂಡಕ್ಟ್ ಬಗ್ಗೆ ನಾನು ಟೀಕೆ ಮಾಡಲಿಲ್ಲ.

ಅಧ್ಯಕ್ಷರು:- ತಾವು ಇಲಾಖಾ ಬೇಡಿಕೆಗಳ ಮೇಲಿನ ಉತ್ತರವನ್ನು ಮುಂದುವರೆಸಿ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಹೈಕೋರ್ಟ್ ಎಂದು ಹೇಳಿದ್ದೇ ಹೊರತು ಕಾಂಡಕ್ಟ್ ಆಫ್ ದಿ ಜಡ್ಜ್ ಬಗ್ಗೆ ನಾನು ಹೇಳಲಿಲ್ಲ. ಇರಲಿ ಇನು ಕೆ.ಎಂ.ಎಫ್. ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಈ ಒಂದು ಸಂಸ್ಥೆ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಇದು ರಾಜ್ಯದ ಎಲ್ಲಾ ಗ್ರಾಮಗಳಲ್ಲೂ ಇದು ವ್ಯಾಪಕವಾಗಿ ಬೆಳೆಯಬೇಕು. ಈ ಸಂಸ್ಥೆ ಇಡೀ ಇಂಡಿಯಾ ದೇಶದಲ್ಲೇ ಬಹಳ ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿದೆ. ಯಾವ ರಾಜ್ಯದಲ್ಲೂ ಇಷ್ಟು ಉತ್ತಮ ರೀತಿಯಲ್ಲಿ ವ್ಯವಹಾರ ನಡೆಯುತ್ತಿಲ್ಲ. ಆಮೇಲೆ ಶೀಪ್ ರೇರಿಂಗ್ ಬಗ್ಗೆ ಪೂಲ್ ರೇರಿಂಗ್ ಬಗ್ಗೆ ಹಾಗೂ ಕೋಳಿ ಸಾಕಾಣಿಕೆ ಬಗ್ಗೆ ಸಹ ಇದೇ ರೀತಿ ಮಾಡಲಾಗುವುದೆಂದು ಈಗಾಗಲೇ ಹೇಳಿದ್ದೇನೆ. ಈಗ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಬಗ್ಗೆ ಸ್ವಲ್ಪ ಹೇಳುತ್ತೇನೆ. ಈ ಅರಣ್ಯ ಇಲಾಖೆ ಬಗ್ಗೆ 8 ಜನ ಸದಸ್ಯರುಗಳು ಮಾತ್ರ ಮಾತನಾಡಿದ್ದಾರೆ. ನನಗನ್ನಿಸುತ್ತದೆ ಇದರ ಬಗ್ಗೆ ಮಾತನಾಡಲು ಬಹಳ ಜನ ಮಾನ್ಯ ಸದಸ್ಯರುಗಳಿಗೆ ಪ್ರತ್ಯೇಕವಾಗಿ ಅವಕಾಶ ಸಿಕ್ಕಿದ್ದಿದ್ದರೆ ಒಳ್ಳೆಯದಿತ್ತು. ಏಕೆಂದರೆ ನನಗೆ ಒಳ್ಳೆಯ ಸಲಹೆಗಳು ಸಿಗುತ್ತಿತ್ತು. ನಾನು ಈ ಇಲಾಖೆಯನ್ನು ಹೊಸದಾಗಿ ವಹಿಸಿಕೊಂಡಿದ್ದೇನೆ. ಈ ಇಲಾಖೆ ಬಗ್ಗೆ ನಾನು ಅಭ್ಯಾಸ ಮಾಡಿದ್ದೇನೆ. ಅದರ ಜೊತೆಗೆ ಹೆಚ್ಚಿನ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದರೆ ಆ ಸಲಹೆಗಳಿಂದ ನಮಗೆ ಹೆಚ್ಚಿನ ಸಹಾಯವಾಗುತ್ತಿತ್ತು ಎಂದು ನಾನು ಭಾವಿಸಿದ್ದೇನೆ. ಮಾನ್ಯ ಶ್ರೀ ಸಿಂಧ್ಯಾರವರು ಮಾತನಾಡಿ ಅರಣ್ಯ ಪ್ರಾಣಿಗಳಿಂದ ಏನು ರೈತರುಗಳ ಬೆಳೆ ಹಾನಿಯಾಗುತ್ತದೆ ಅದಕ್ಕೆ ಕೊಡುವ ಪರಿಹಾರಧನವನ್ನು ಜಾಸ್ತಿ ಮಾಡಬೇಕೆಂದು ಸಲಹೆ

ಮಾಡಿದ್ದಾರೆ. ಅದೇ ರೀತಿಯಲ್ಲಿ ಕನಕಪುರ ವಿಭಾಗದಲ್ಲಿ ವ್ಯಾಪಕವಾಗಿ ಗ್ರ್ಯಾನೈಟ್ ಕಲ್ಲು ಹೊರ ತೆಗೆಯುವುದು ಜಾಸ್ತಿಯಾಗಿದೆ. ಲೈಸೆನ್ಸ್ ಇಲ್ಲದೇ ಕಾನೂನು ಬಾಹಿರವಾಗಿ ಅವರುಗಳು ನಡೆದುಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಗಮನಕ್ಕೆ ತಂದ ಪ್ರಕಾರ ವನ್ಯಪ್ರಾಣಿಗಳಿಂದಾಗಿ ನಷ್ಟವಾಗುತ್ತಿರುವ ಬೆಳೆಗಳ ಹಾನಿಗೆ ಕೊಡುವ ಪರಿಹಾರದ ಬಗ್ಗೆ ಎಷ್ಟು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈಗ ನಾವು ವರ್ಷಂಪ್ರತಿ 5,72,297-00 ರೂ.ಗಳನ್ನು ಕೊಡುತ್ತಾ ಇದ್ದೇವೆ. ಇನ್ನು ಜಾಸ್ತಿಯಾಗಿ ಎಷ್ಟು ಕೊಡಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ. ಹಾಗೆಯೇ ಆನೆಗಳ ಬಗ್ಗೆಯೂ ಹೇಳಿದ್ದಾರೆ. ಕಬ್ಬು ಭತ್ತ ಮುಂತಾಗಿ ಬೆಳೆಗಳ ಹಾನಿ ಮಾಡುತ್ತಿರುವ ಬಗ್ಗೆ ವಿವರವಾಗಿ ಹಲವಾರು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಮಾನ್ಯ ಮಹದೇವ್‌ರವರು ತಮ್ಮ ಪ್ರದೇಶದಲ್ಲಿ ಆಗುತ್ತಿರುವ ಹಾನಿಯ ಬಗ್ಗೆ ಹೇಳಿಕೊಂಡಿದ್ದಾರೆ. ಬೆಳೆಗಳ ರಕ್ಷಣೆಗಾಗಿ ಆನೆಗಳು ಬರುವ ಮಾರ್ಗಕ್ಕೆ ವಿದ್ಯುತ್ ತಂತಿಬೇಲಿಯನ್ನು ಹಾಕಿಸುವಂತೆ ಕೇಳಿಕೊಂಡಿದ್ದಾರೆ. ಅಲ್ಲಿ ಈಗಾಗಲೇ 37 ಕಿ.ಮಿ. ಉದ್ದದಷ್ಟು ಬೇಲಿಯನ್ನು ಈಗಾಗಲೇ ಹಾಕಲಾಗಿದೆ. ಪುನಃ ಅದನ್ನು ವಿಸ್ತರಿಸಬೇಕೆ? ಬೇಡವೆ? ಎಂಬ ಬಗ್ಗೆ ವಿಚಾರ ಮಾಡುತ್ತಾ ಇದ್ದೇವೆ. ಮಾನ್ಯ ವಿನಯಕುಮಾರ್ ಸೊರಕೆಯವರು ಕೂಡ ಅವರ ಭಾಗಗಳಲ್ಲಿ ಕಾಡು ನಾಶ ಮಾಡುತ್ತಿರುವವರ ಬಗ್ಗೆ ಗಮನಕ್ಕೆ ತಂದಿದ್ದಾರೆ. ಬಿಸ್ಲೆ ಶಿರಾಡಿ ಮುಂತಾದ ಘಾಟ್ ವಿಭಾಗಗಳಲ್ಲಿ ಅರಣ್ಯನಾಶವು ನಡೆಯುತ್ತಿದ್ದು ಮಾಫಿ ಪಾಸ್‌ಗಳನ್ನು ಹೊಂದಿದವರು ತಮ್ಮ ಸ್ವಂತಕ್ಕೆ ಅದನ್ನು ಉಪಯೋಗ ಮಾಡಿಕೊಂಡು ಕಾಡು ಹಾಳು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಕೊಟ್ಟ ಸಲಹೆಯ ಪ್ರಕಾರ ಕಾಡು ಹಾಳಾಗುವುದನ್ನು ತಡೆಯಲು ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಆಮೇಲೆ ಶಿವರಾಮ ಕಾರಂತ ಅವರ ಬಾಲ ಭವನ ಪುತ್ತೂರಿನಲ್ಲಿ ಏನಿದೆ ಅಲ್ಲಿ ಮಿನಿ ಜೂ ಮಾಡಬೇಕೆಂಬ ಆಲೋಚನೆ ಸರಕಾರದಲ್ಲಿದೆ. ಮಾನ್ಯ ಮಹದೇವ್‌ರವರು ಹೇಳಿದ ಹಾಗೆ ದೇಶದ ಉದ್ದಗಲಕ್ಕೂ ಬೇಲಿ ಕಟ್ಟುವ ಕೆಲಸ ಕಷ್ಟವಾಗುತ್ತದೆ. ಅಲ್ಲಿ 37 ಕಿ.ಮಿ. ಬೇಲಿ ಕಟ್ಟಿದ್ದೇವೆ. ಇನ್ನೂ ಹೆಚ್ಚಿನ ಭಾಗದಲ್ಲಿ ಟ್ರೆಂಚ್ ಹೊಡೆಯಬೇಕು ಮತ್ತು ಬೇಲಿಕಟ್ಟಬೇಕೆಂದು ವಿಚಾರ ಮಾಡುತ್ತಾ ಇದ್ದೇವೆ. ನಂಜನಗೂಡು ಪ್ರದೇಶದಲ್ಲಿ ಆನೆಗಳ ಕಾಟ ಜಾಸ್ತಿಯಾಗಿದ್ದು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದರಂತೆ ಫಾರೆಸ್ಟ್ ಸೀಡ್ಲಿಂಗ್ಸ್‌ನ್ನು ರೈತರುಗಳಿಗೆ ಹಂಚಬೇಕೆಂದು ಹೇಳಿದ್ದಾರೆ. ಅದನ್ನು ನಾವು ಸಾಕಷ್ಟು ಪ್ರಮಾಣದಲ್ಲಿ ಹಂಚುತ್ತಾ ಇದ್ದೇವೆ. ಯಾವ ರೈತರು ಸೀಡ್ಲಿಂಗ್ಸ್ ಕೇಳಿದರೂ ಇಲ್ಲ ಎಂದು ಹೇಳುವುದಿಲ್ಲ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರಾದ ನಾಡಗೌಡರು ಸುಪ್ರೀಂಕೋರ್ಟಿನ ಆದೇಶದ ವಿರುದ್ಧವಾಗಿ ಒಬ್ಬ ಫಾರೆಸ್ಟ್ ಅಧಿಕಾರಿ ಸುಮಾರು 27 ಸಾವಿರ ಎಕರೆ ಅರಣ್ಯ ಜಮೀನನ್ನು ಕೆ.ಪಿ.ಎಲ್.ನವರಿಗೆ ವರ್ಗಾವಣೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ಬನ್ನಿಕೋಡ್‌ರವರೂ ಅದೇ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಈ ಸದನದ ಮಾನ್ಯ ಸದಸ್ಯರುಗಳು ಈ ರೀತಿಯಾಗಿ ಮಾಡಿದ್ದು ಸರಿಯಲ್ಲ. ಇದನ್ನು ಸರಿಪಡಿಸಬೇಕು ಎಂದು ಅರ್ಜಿಯನ್ನು ಕೂಡ ಕೊಟ್ಟಿದ್ದಾರೆ. ಅದನ್ನು ಸರಕಾರ ಪರಿಶೀಲನೆ ಮಾಡುತ್ತಾ ಇದೆ. ಮತ್ತೆ ಅವರು ಸುಪ್ರೀಂಕೋರ್ಟ್ ಆಜ್ಞೆ ವಿರುದ್ಧವಾಗಿ ಸ್ಟೇ ಆರ್ಡರ್ ಇದ್ದರೂ ಇಷ್ಟು ಜಮೀನನ್ನು ವರ್ಗಾವಣೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ವಿಚಾರದ ಬಗ್ಗೆ ಸರಕಾರವು ತೀವ್ರವಾಗಿ ಪರಿಶೀಲನೆ ಮಾಡುತ್ತಾ ಇದೆ. ಯೂಕಲಿಪ್ಟಸ್ ಗಿಡಗಳನ್ನು ಬೆಳೆಯುವುದಕ್ಕೋಸ್ಕರವಾಗಿ ಈ ದಟ್ಟವಾದ ಕಾಡು ಪ್ರದೇಶದಲ್ಲಿ ಇನ್ನು ಮುಂದೆ ಜಮೀನು ಕೊಡುವುದಿಲ್ಲ ಎಂದು ಹೇಳುತ್ತೇನೆ. ಈಗ ಏನು ಆಗಿದೆ ಆಗಿ ಹೋಗಿದೆ ಇನ್ನು ಮುಂದೆ ಅಂಥ ದಟ್ಟವಾದ ಪ್ರದೇಶದಲ್ಲಿ ನೀಲಗಿರಿ ಬೆಳೆಯಬಾರದು ಎಂದು ನಿರ್ದೇಶನ ಕೊಟ್ಟಿದ್ದೇವೆ. ಅಂತೆಯೇ ಈ ವರ್ಷದಿಂದ ಸರ್ಕಾರದವರು ನೀಲಗಿರಿ ಬೆಳೆಯತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಮತ್ತೆ ತಾವು ಕೊಟ್ಟಿರುವ ಅರ್ಜಿಗೆ ಸಂಬಂಧಪಟ್ಟ ಜಮೀನಿನಲ್ಲಿಯೂ ಸಹ ಇಂತಹ ನೀಲಗಿರಿ ಗಿಡ ಬೆಳೆಯುವುದಕ್ಕೆ ಬಿಡುವುದಿಲ್ಲ. ಅದಕ್ಕೆ ತಕ್ಕ ಹಾಗೆ ನಾವು ಆದೇಶ ಕೊಡುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಇದರಲ್ಲಿ 75 ಸಾವಿರ ಎಕರೆ ಭೂಮಿಯನ್ನು ಸರ್ಕಾರ ಕೆ.ಪಿ.ಎಲ್.ಗೆ ಒಪ್ಪಂದದ ಮೂಲಕ ಕೊಡುತ್ತಿರುವುದು ಕೇಂದ್ರದ ಅರಣ್ಯ ಕಾಯಿದೆಗೆ

ವಿರೋಧವಾಗಿದೆ ಎಂದು ಹೇಳಿದ್ದೇನೆ. ಇದು ಸರಿಯೇ ತಮ್ಮ ಅಗ್ರಿಮೆಂಟ್ ಸರಿಯೋ ತಪ್ಪೋ ಎಂದು ಹೇಳಬೇಕು. ಸುಪ್ರೀಂಕೋರ್ಟ್ ತಡೆಯಾಜ್ಞೆ ವಿರುದ್ಧ 14500 ಎಕರೆ ಭೂಮಿಯನ್ನು ಕೆ.ಪಿ.ಎಲ್.ಗೆ ಕೊಡಲು ಕಾರಣರಾದ ಅಧಿಕಾರಿ ವಿರುದ್ಧ ಯಾವ ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಇನ್ನು ಮುಂದೆ ಹೀಗಾಗದಂತೆ ಏನು ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ:- ತಾವು ಅಪ್ಪಣೆ ಕೊಡಿಸಿದಂತೆ ಕಾನೂನು ಕಾನೂನು ಕ್ರಮವನ್ನು ತೆಗೆದುಕೊಳ್ಳುತ್ತದೆ. ಯಾರಾದರೂ ಸುಪ್ರೀಂಕೋರ್ಟಿನ ತಡೆಯಾಜ್ಞೆ ವಿರುದ್ಧ ಕ್ರಮ ತೆಗೆದುಕೊಂಡಿದ್ದರೆ ಅವರ ಬಗ್ಗೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ನೀವು ನನಗೆ ಲಿಖಿತ ಉತ್ತರದ ಮೂಲಕ ಇದನ್ನು ಹೇಳಿದ್ದೀರಿ. ಈ ಸಭೆಯು ಎಲ್ಲರಿಗೂ ಗೊತ್ತಾಗಬೇಕಾಗಿದೆ. 75 ಸಾವಿರ ಎಕರೆಯನ್ನು ಕೇಂದ್ರದ ಅರಣ್ಯ ಕಾಯಿದೆ ವಿರುದ್ಧವಾಗಿ ಬಂಡವಾಳಶಾಹಿಗಳು ಒಳಗೊಂಡ ಕೆ.ಪಿ.ಎಲ್.ಗೆ ಕೊಟ್ಟಿರುವುದು ನಿಜವೋ ಸುಳ್ಳೋ ಎಂದು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ:- ಅರಣ್ಯ ಕಾಯಿದೆಗೆ ವಿರುದ್ಧವಾಗಿ ಎಂದು ಅಲ್ಲ ಸರ್ಕಾರದ ಅನುಮತಿ ಇಲ್ಲದೆ ಮಾಡಿದ್ದು ಎಂದು ನಾನು ಹೇಳಿದ್ದು. ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಹಾಗಿದ್ದರೆ ಆ ಅಗ್ರಿಮೆಂಟನ್ನು ರದ್ದು ಮಾಡಿ ಬಡವರಿಗೆ ಆ ಜಮೀನು ಕೊಡುವಿರಾ? ಈ ಬಗ್ಗೆ ನನಗೆ ನಿರ್ದಿಷ್ಟವಾದ ಉತ್ತರ ಬೇಕು.

ಶ್ರೀ ಬಿ. ಬಸವಲಿಂಗಪ್ಪ: ಆಗಿನಿಂದ ನಾನು ಇನ್ನೇನು ಹೇಳಿದ್ದು.

ಅಧ್ಯಕ್ಷರು:- ನಿಮ್ಮ ಪ್ರಶ್ನೆಗೆ ಅವರು ನಿರ್ದಿಷ್ಟವಾದ ಉತ್ತರ ಕೊಟ್ಟಿದ್ದಾರೆ. ತಾವು ಮುಂದು ವರಿಸಿ.

ಶ್ರೀ ಬಿ. ಬಸವಲಿಂಗಪ್ಪ:- ನಾವಂತೂ ನಿರ್ಭೀತಿಯಿಂದ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. ಯಾರಾದರೂ ಸುಪ್ರೀಂಕೋರ್ಟ್‌ನ ವಿರುದ್ಧವಾಗಿ ನಡೆದುಕೊಂಡಿದ್ದರೆ ಅದೂ ಕ್ರಮ ತೆಗೆದುಕೊಳ್ಳುತ್ತದೆ. ಮತ್ತು ನಾವೂ ಕ್ರಮ ತೆಗೆದುಕೊಳ್ಳುತ್ತೇವೆ. ಆಮೇಲೆ ಶ್ರೀಮಾನ್ ವೆಂಕಟೇಶ್‌ರವರು ಕೆಲವರು ಮಾಫಿ ಪಾಸ್ ತೆಗೆದುಕೊಂಡು ಹೆಗ್ಗಡದೇವನಕೋಟೆ ಕಾಡಿನಿಂದ ಮರಗಳನ್ನು ಯಥೇಚ್ಛವಾಗಿ ಕಡಿದು ಸಾಗಿಸುತ್ತಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಮೊನ್ನೆ ಉತ್ತರಿಸುತ್ತಾ ಹೇಳಿದೆ. ಈ ಮಾಫಿ ಪಾಸ್‌ಗಳ ಬಗ್ಗೆ ನಾವು ಪುನರ್ನೋಟ ಕೊಟ್ಟು ಈಗಿನ ಒಂದು ನೀತಿಯನ್ನು ಬದಲಾವಣೆ ಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಇಲ್ಲಿ ಜಮೀನಿನ ಮಾಲೀಕತ್ವದ ಬಗ್ಗೆ ಸರಿಯಾದ ರೆಕಾರ್ಡ್‌ಗಳು ಇಲ್ಲದೆ ಯಾವುದೋ ಕಾಲದ ಪತ್ರಗಳನ್ನು ಹಿಡಿದುಕೊಂಡು ಬಂದು ಅದನ್ನು ಜೆರಾಕ್ಸ್ ಮಾಡಿಸಿಕೊಂಡು ಬಂದರೆ ಅದರ ಆಧಾರದ ಮೇಲೆ ಜನರಲ್ ಪವರ್ ಆಫ್ ಅಟಾರ್ನಿ ಕೊಡತಕ್ಕಂಥ ಪದ್ಧತಿ ಈಗ ಜಾರಿಯಲ್ಲಿದೆ. ಯಾರು ನಿಜವಾದ ಮಾಲೀಕರು ಇರುತ್ತಾರೆ ಅವರು ತೆಗೆದುಕೊಳ್ಳತಕ್ಕಂಥ ಕ್ರಮದ ಬದಲಾಗಿ ಕೇರಳದಿಂದ ಬಂದಂಥ ಜನರು ಈ ಮಾಲೀಕರಿಗೆ ಅಷ್ಟಿಷ್ಟು ಹಣ ಕೊಟ್ಟು ಅವರ ಪರವಾಗಿ ಜನರಲ್ ಪವರ್ ಆಫ್ ಅಟಾರ್ನಿ ಪಡೆದುಕೊಂಡು ಮಾಫಿ ಪಾಸ್ ಪಡೆದು ಯಥೇಚ್ಛವಾಗಿ ಕಾಡಿನಲ್ಲಿರುವ ಮರಗಳನ್ನು ಲೂಟಿ ಮಾಡಿದ್ದಾರೆ. ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ಇದನ್ನು ಈ ಸದನದಲ್ಲಿ ಒಪ್ಪುತ್ತಿದ್ದೇನೆ. ಈ ಲೂಟಿ ಮಾಡುವುದರ ಜೊತೆಗೆ ಏನು ಮಾಡುತ್ತಿದ್ದಾರೆಂದರೆ ಈ ಟ್ರೀ ಪ್ರೊಟೆಕ್ಷನ್ ಆಕ್ಟ್ ಪ್ರಕಾರ ನಮ್ಮ ಅಧಿಕಾರಿಗಳು ಯಾರೂ ನೋಡುವುದಿಲ್ಲ. ಅಲ್ಲಿ ಏನಾಗಿದೆ ಎಂದರೆ ಯಾವ ಮರಗಳನ್ನು ಕಡಿಯಲಿಕ್ಕೆ ಅವಕಾಶ ಇಲ್ಲ. ಕೆಲವು ಉದ್ದೇಶಗಳಿಗೋಸ್ಕರ ನಾವು ಮರಗಳನ್ನೂ ಕಡಿಯುವುದಕ್ಕೆ ಪರವಾನಿಗೆಯನ್ನು ಕೊಡಬಹುದೇ ಹೊರತಾಗಿ ಮಾಫಿ ಪಾಸ್‌ಗಳನ್ನು ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರ ಇದನ್ನು ತೀವ್ರವಾಗಿ ಪುನಃ ಪರಿಶೀಲನೆ ಮಾಡಿ ಹೊಸದಾಗಿ ಹುಕುಂನ್ನು ಮಾಡಿದ್ದೇನೆ. ಕಾನೂನು ಪ್ರಕಾರವೇ ಇಂಥ ಒಂದು ಆಜ್ಞೆಗಳನ್ನು ಮಾಡಬೇಕು. ಮಾಫಿ ಪಾಸುಗಳನ್ನು ಕೊಡಬೇಕು ಎಂದು ಹೇಳಿ ಒಂದು ಸೂಚನೆಯನ್ನು ಹೊರಡಿ ಸಿದ್ದೇನೆ. ಇನ್ನು ಮೇಲೆ ಸ್ವೇಚ್ಛೆಯಾಗಿ ಮರಗಳನ್ನು ಕಡಿಯತಕ್ಕಂಥದ್ದು ಮತ್ತು ಅದನ್ನು

ಸಾಗಿಸತಕ್ಕಂಥದ್ದಕ್ಕೆ ನಾವು ಆತಂಕ ಮಾಡುತ್ತೇವೆ ಎಂದು ಹೇಳಿದ್ದೇನೆ. ನಮ್ಮಲ್ಲಿ 25 ಸಾವಿರ ಎಕರೆ ಭೂಮಿಯನ್ನು ಹೆಗ್ಗಡದೇವನಕೋಟೆಯಲ್ಲಿ ಒತ್ತುವರಿ ಮಾಡಿದ್ದಾರೆ. ಅದನ್ನು ಸಕ್ರಮ ಮಾಡಬೇಕು ಎಂದು ಹೇಳಿದ್ದಾರೆ. ಯಾವ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ ಯಾವ ಭೂಮಿಯನ್ನು ಅಲ್ಲಿ ಸಕ್ರಮ ಮಾಡಬೇಕು ಎನ್ನುವ ಬಗ್ಗೆ ಯೋಚನೆಯನ್ನು ಮಾಡಿ ಇಷ್ಟರಲ್ಲಿಯೇ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಕಾರಣ ಏನೆಂದರೆ ಬಡವರು ಹೊಟ್ಟೆಗೋಸ್ಕರ ಜೀವನ ಮಾಡುವುದಕ್ಕೋಸ್ಕರ ಏನಾದರೂ ಅತಿಕ್ರಮ ಪ್ರವೇಶ ಮಾಡಿ ವ್ಯವಸಾಯವನ್ನು ಮಾಡಿದ್ದರೆ ಅಂಥವರ ಬಗ್ಗೆ ಕನಿಕರ ರೂಪದಲ್ಲಿ ಸರ್ಕಾರ ನೋಡಲೇಬೇಕಾಗುತ್ತದೆ. ಆದರೆ ಯಾರು ಹಣವಂತರು ಮತ್ತು ಬಲಿಷ್ಠರು ಇದ್ದಾರೆ 200 ಎಕರೆ 250 ಎಕರೆವರೆಗೆ ಅಕ್ರಮ ಪ್ರವೇಶ ಮಾಡಿ ಅವರು ಏನು ಸ್ವತ್ತನ್ನು ಇಟ್ಟುಕೊಂಡಿದ್ದಾರೆ ಅಂಥವರನ್ನು ಹಾಗೆ ಬಿಟ್ಟಿದ್ದೇವೆ ಹಿಂದಿನ ಸರ್ಕಾರದವರು ಕೂಡಾ ಬಿಟ್ಟಿದ್ದಾರೆ. ಇದರಿಂದ ಅವರು ಸ್ವೇಚ್ಛೆಯಾಗಿ ಇಂಥ ಒಂದು ಅತಿಕ್ರಮ ಪ್ರವೇಶ ಮಾಡಿ ಬಹಳ ವಿಶಾಲವಾಗಿರತಕ್ಕಂಥ ಜಮೀನುಗಳನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. ಇಂಥವರನ್ನು ಕಟ್ಟುನಿಟ್ಟಾಗಿ ಯಾರ ಮುಖವನ್ನೂ ನೋಡದೇ ಯಾರ ದಾಕ್ಷಿಣ್ಯಕ್ಕೆ ಒಳಗಾಗದೇ ಕಾಡಿನಿಂದ ಹೊರಕ್ಕೆ ಹಾಕುತ್ತೇವೆ ಎಂದು ತಮಗೆ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಶ್ರೀಮಾನ್ ವೆಂಕಟೇಶರವರು ಮಾಫಿ ಪಾಸ್ ಬಗ್ಗೆ ಬಹಳ ರೀತಿಯಾಗಿ ಹೇಳಿದ್ದಾರೆ.ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಒಂದು ವಿಚಾರವನ್ನು ಹೇಳಬೇಕು ಎಂದರೆ ಶ್ರೀಮಾನ್ ವೆಂಕಟೇಶ್‌ರವರು ಮಾಫಿ ಹೋಲ್ಡರ್ಸ್ 85-86ನೇ ಇಸವಿಯಿಂದ ಕೊಟ್ಟಿರುವ ಪಾಸ್ ನಂಬರ್‌ಗಳು ನಮ್ಮಲ್ಲಿವೆ. ಎಷ್ಟೆಷ್ಟು ಮಾಫಿ ಪಾಸುಗಳನ್ನು ಪಡೆದುಕೊಂಡು ವ್ಯವಹಾರ ಮಾಡಿದ್ದರು ಎನ್ನುವ ಬಗ್ಗೆ ಎಷ್ಟೆಷ್ಟು ಮರಗಳನ್ನು ಕಿತ್ತರು ಎಷ್ಟೆಷ್ಟು ರೂಪಾಯಿಗಳ ಮರಗಳನ್ನು ಸಾಗಿಸಿದರೆಂಬ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ವೆಂಕಟೇಶ್‌ರವರು ಈಗ ಸಭೆಯಲ್ಲಿ ಇಲ್ಲ. ಅವರು ಇದ್ದಾಗ ಪ್ರಸ್ತಾಪ ಮಾಡಿ.

ಶ್ರೀ ಬಿ. ಬಸಲಿಂಗಪ್ಪ:- ಅದಕ್ಕೆ ನಾನು ಏನು ಮಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅವರು ಮಾಫಿ ಪಾಸ್ ಹೋಲ್ಡರು; ಅದರ ಆಧಾರದ ಮೇಲೆ ಅವರು ವ್ಯವಹಾರವನ್ನು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆದರೆ ಅವರು ಈಗ ಇಲ್ಲಿ ಇಲ್ಲ. ಇದು ಅವ್ಯವಹಾರವೋ ದುರ್ವ್ಯವಹಾರವೋ ಕಾನೂನು ಚೌಕಟ್ಟಿನಲ್ಲಿ ಅದು ಇದೆಯೋ ಇಲ್ಲವೋ ಅದು ಗೊತ್ತಿಲ್ಲ. ಆದುದರಿಂದ ದಯವಿಟ್ಟು ಅವರು ಇರತಕ್ಕಂಥ ಸಂದರ್ಭದಲ್ಲಿ ಅದನ್ನು ಪ್ರಸ್ತಾಪ ಮಾಡಿದರೆ ಅವರು ಕೂಡಾ ಉತ್ತರ ಕೊಡಬಹುದು.

ಅಧ್ಯಕ್ಷರು:- ಮಾನ್ಯ ಸದಸ್ಯರು ಯಾವಾಗ ಒಂದು ಚರ್ಚೆಯಲ್ಲಿ ಭಾಗವಹಿಸುತ್ತಾರೋ ಚರ್ಚೆಯಲ್ಲಿ ಏನಾದರೂ ವಿಚಾರಗಳನ್ನು ಬೆಳಕಿಗೆ ತಂದಾಗ ಉತ್ತರಗಳನ್ನು ನಿರೀಕ್ಷಿಸುವುದಕ್ಕೆ ಅವರು ಸದನಕ್ಕೆ ಹಾಜರಾಗಬೇಕಾಗುದುದು ಅವರ ಕರ್ತವ್ಯ ಆಗಿತ್ತು. ಒಂದು ಪಕ್ಷ ಅನಿವಾರ್ಯ ಕಾರಣಗಳಿಗೋಸ್ಕರ ಅವರು ಹಾಜರಾತಿ ಸಾಧ್ಯವಾಗದೇ ಇದ್ದರೆ ಚೀಟಿಯನ್ನು ಬರೆದು ನನಗೆ ಕಳುಹಿಸಬಹುದಾಗಿತ್ತು. ನಾನು ಬರುವುದಕ್ಕೆ ಆಗುವುದಿಲ್ಲ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಅವರು ಹೆಗ್ಗಡದೇವನಕೋಟೆಯಿಂದ ಬಸ್‌ನಲ್ಲಿ ಬರಬೇಕಾಗಿರುತ್ತದೆ. ಬರುವಾಗ ಏನೇನು ಆಗಿದೆಯೋ ಗೊತ್ತಿಲ್ಲ. ಆ ವಿಚಾರಗಳು ಬೇರೆ. ಅವರು ಇಲ್ಲದೇ ಇರುವಾಗ ಆರೋಪಣೆ ಮಾಡುವುದಕ್ಕೆ ಬದಲು ಅವರು ಬಂದಾಗ ಮಾಡಲಿ. ಆಗ ಅವರು ಉತ್ತರವನ್ನು ಕೊಡುವುದಕ್ಕೆ ಒಂದು ಅವಕಾಶವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇಲ್ಲದೆ ಇದ್ದರೆ ನಾವು ಇಡೀ ರಾಜ್ಯದಲ್ಲಿ ಇಂತಹ ಎಷ್ಟು ಜನ ಮಾಫಿ ಹೋಲ್ಡರ್ ಇದ್ದಾರೆ ಯಾರ್‍ಯಾರು ಇದ್ದಾರೆಂದು ಕೇಳಬೇಕಾಗುತ್ತದೆ.

ಅಧ್ಯಕ್ಷರು:- ತಾವು ಪ್ರಶ್ನೆಯನ್ನು ಕೇಳಿದರೆ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅವರು ಬಂದಾಗ ಹೇಳಲಿ ಎಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:- ಒಂದು ಸಮಯದಲ್ಲಿ ವೆಂಕಟೇಶ್‌ರವರು ನನ್ನ ಮೇಲೆ ದೂರನ್ನು ಹಾಕಿದ್ದರು. ಅದಕ್ಕೋಸ್ಕರ ಉತ್ತರವನ್ನು ಕೊಡಲೇಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅವರು ಇಲ್ಲವಲ್ಲ ಸ್ವಾಮಿ.

ಶ್ರೀ ಬಿ. ಬಸವಲಿಂಗಪ್ಪ:- 85-86ನೇ ಇಸವಿಯಿಂದ 86-87ನೇ ಇಸವಿಯವರೆಗೆ ಅವರು ಮಾಫಿ ಪಾಸ್‌ಗಳನ್ನು ಪಡೆದುಕೊಂಡು ಈ ವ್ಯವಹಾರ ಮಾಡುತ್ತಲೇ ಬಂದಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾಫಿ ಪಾಸ್ ಎನ್ನುವುದು ಅಪರಾಧವೇ ಇದರ ಬಗ್ಗೆ ಸ್ಪಷ್ಟ ಬೆಳಕನ್ನು ಚೆಲ್ಲಿದರೆ ಒಳ್ಳೆಯದು. ಮಾಫಿ ಪಾಸ್ ಎನ್ನುವುದು ಅಪರಾಧವೇ ಅವರು ಹೇಳಬೇಕು.

(ಗೊಂದಲ)

ಅಧ್ಯಕ್ಷರು:- ಅದು ಅಪರಾಧ ಅಲ್ಲ. ಲೆಜಿಟಿಮೇಟ್ ಆ್ಯಕ್ಟಿವಿಟಿ. ಮಾಫಿ ಪಾಸ್ ಇಲ್ಲದೇ ಮಾಡುತ್ತಾರಲ್ಲ ಅದು ಅವ್ಯವಹಾರ. ಇದು ವ್ಯವಹಾರ. ತಾವು ಮುಂದುವರಿಸಿ.

ಶ್ರೀ ಬಿ. ಬಸವಲಿಂಗಪ್ಪ:- ಈ ಬಗ್ಗೆ ಮಾಹಿತಿ ನನ್ನಲ್ಲಿ ಉಂಟು ಎಂದು ಹೇಳಿದೆ. ಅವರು ನನಗೆ ವರ್ಗಾವಣೆ ಬಗ್ಗೆ ಪತ್ರ ಬರೆದಿದ್ದಾರೆ. ನಾಲ್ಕು ಜನ ರೇಂಜ್ ಆಫೀಸರ್ಸ್ ಬಗ್ಗೆ ಕಾಗದ ಬರೆದಿದ್ದಾರೆ. ಅವರು ಎಂ.ಎನ್. ಅಶ್ವತ್ಥನಾರಾಯಣಗೌಡ ಪಿ.ಜಿ. ಗೋಪಾಲಸ್ವಾಮಿ ಜಿ.ಆರ್. ಚೆನ್ನಸ್ವಾಮಿ ನಾಗಯ್ಯ ಎಂದು ಬರೆದಿದ್ದಾರೆ. ನಾನು ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡೆ. ಮೈಸೂರಿನಲ್ಲಿ ಕಳ್ಳ ಸಾಗಾಣಿಕೆ ನಡೆಯುತ್ತಿದೆ. ಆದ್ದರಿಂದ ಅಲ್ಲಿರತಕ್ಕಂಥ ಪ್ರತಿಯೊಬ್ಬ ರೇಂಜ್ ಆಫೀಸರ್ಸ್‌ಅನ್ನೂ ವರ್ಗಾವಣೆ ಮಾಡಬೇಕು ಎಂದು ಒಂದು ತೀರ್ಮಾನಕ್ಕೆ ಬಂದೆ. ಅಲ್ಲಿ ಸತ್ಯವಂತರು ಯಾರು ಇದ್ದಾರೆ ಅಸತ್ಯವಂತರು ಯಾರು ಇದ್ದಾರೋ ಅದು ಬೇರೆ ವಿಚಾರ. ಅವರು ಹೇಳಿರತಕ್ಕ ನಾಲ್ಕು ಜನ ರೇಂಜ್ ಆಫೀಸರ್ಸ್ ಏನು ಇದ್ದಾರೆ ಇವರು ಹೇಳಿದ ಹಾಗೆ ವರ್ಗಾವಣೆ ಮಾಡಲಿಲ್ಲ. ಅದಕ್ಕೋಸ್ಕರವಾಗಿ ಈ ಸದನದಲ್ಲಿ ಬಂದು ಬಿಟ್ಟಿದ್ದು. ಈ ವರ್ಗಾವರ್ಗಿಯಲ್ಲಿ ಲಂಚ ರುಷುವತ್ತುಗಳು ಅವ್ಯಾಹತವಾಗಿ ನಡೆದಿದೆ ವಹಿವಾಟು ನಡೆದಿದೆ ಎನ್ನತಕ್ಕ ಒಂದು ದೂರು ಮಾಡಿದ್ದರು. ಇದು ಸರಿಯಲ್ಲ. ಅದು ದುರುದ್ದೇಶದಿಂದ ಮಾಡಿದ್ದು ಎಂದು ಹೇಳಲಿಕ್ಕೆ ಈ ಎರಡು ಮಾತನ್ನು ನಾನು ಹೇಳುತ್ತಿದ್ದೇನೆ. ಅವರ ಕೆಲಸ ಆಗಲಿಲ್ಲ; ಅದಕ್ಕೋಸ್ಕರವಾಗಿ ಅವರು ಈ ರೀತಿ ಮಾಡುತ್ತಿದ್ದಾರೆ....

ಶ್ರೀ ವಾಟಾಳ್ ನಾಗರಾಜ್:- ವರ್ಗಾವರ್ಗಿಯ ಬಗ್ಗೆ ಎಲ್ಲಾ ಶಾಸಕರೂ ಕೇಳಿದ್ದಾರೆ. ಅದು ಒಬ್ಬರು ಕೇಳಿದ್ದಾರೆ ಎಂದು ಅಲ್ಲ. ಎರಡೂ ಸದನದ ಸದಸ್ಯರು ಕೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಹೇಳಿದಿರಿ. ಮಾಫಿ ಪಾಸನ್ನು....

ಶ್ರೀಮತಿ ಚಂದ್ರಪ್ರಭಾ ಅರಸ್:- ಮಾನ್ಯ ಅಧ್ಯಕ್ಷರೇ ನನ್ನದು ಒಂದು ವಿನಂತಿ. ಇದರ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ನಮ್ಮ ರಕ್ಷಣೆಗೆ ಬರಬೇಕು. ಈಗ ಮಾಫಿ ಪಾಸ್ ಇಟ್ಟುಕೊಂಡು ಮರಗಳನ್ನು ಸಾಗಿಸತಕ್ಕದ್ದು ಯಾವುದೇ ರೀತಿಯ ಕಾನೂನು ವಿರುದ್ಧವಾದ ಕೆಲಸ ಅಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದಾದ ಮೇಲೆ ಮಾನ್ಯ ವೆಂಕಟೇಶ್ ಅವರು ವರ್ಗಾವಣೆ ಬಗ್ಗೆ ಮಾನ್ಯಮಂತ್ರಿಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಿರತಕ್ಕದ್ದು ನಿಜ. ಆದರೆ ಎಲ್ಲ ಶಾಸಕರುಗಳು ಆ ವರ್ಗಾವಣೆ ಮಾಡಿ ಈ ವರ್ಗಾವಣೆ ಮಾಡಿ ಎಂದು ಬರೆದುಕೊಟ್ಟಿರುತ್ತಾರೆ. ಆದರೆ ಇವರು ಇದೇ ಒಂದು ದುರುದ್ದೇಶವನ್ನು ಇಟ್ಟುಕೊಂಡು ನಾನು ಕೊಟ್ಟಿರತಕ್ಕಂಥ ಅಧಿಕಾರಿಗಳನ್ನು ವರ್ಗಾವಣೆ ಮಾಡಲಿಲ್ಲ ಎಂದು ಹೇಳಿ ನನ್ನ ಮೇಲೆ ಒಂದು ಸುಳ್ಳು ಆಪಾದನೆ ಮಾಡಿದರು ತಪ್ಪು ಆಪಾದನೆ ಮಾಡಿದರು. ಮತ್ತು ಸತ್ಯಕ್ಕೆ ದೂರವಾದ ಆಪಾದನೆ ಮಾಡಿದರು ಎಂಬ ಅರ್ಥದಲ್ಲಿ ಅವರು ಹೇಳುತ್ತಿದ್ದಾರೆ. ಹಾಗಿದ್ದರೆ ತಾವೇ ಯೋಚನೆ ಮಾಡಿ. ಇದು ದುರುದ್ದೇಶದಿಂದ ಮಾಡಿದ್ದೇ ಹೇಗೆ ಎಂದು. ಹಾಗಾದರೆ ನಾವು ಸರ್ಕಾರ ಅಥವಾ ಮಂತ್ರಿಗಳು ಮಾಡತಕ್ಕ ಕೆಲಸಗಳ ಬಗ್ಗೆ ಈ ಕಡೆ ಕುಳಿತುಕೊಂಡು ಮಾತನಾಡುವುದೂ ಕಷ್ಟ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ತಾವೂ ನೋಡಿದ್ದೀರಿ. ಈ ಸದನದಲ್ಲಿ ನಡೆದಿದೆ. ಎಲ್ಲರೂ ವರ್ಗಾವಣೆ ಬಗ್ಗೆ ಕೇಳತಕ್ಕದ್ದು ನಡೆದಿದೆ. ಎಲ್ಲ ಕ್ಷೇತ್ರದ ಶಾಸಕರು ಕೂಡ ಕೇಳಿದ್ದಾರೆ. ಕೆಲವು ಅನುಕೂಲ ಮಾಡಿಕೊಡಬೇಕು ಕೆಲವರಿಗೆ ಮತ್ತೊಂದು ಕಡೆಗೆ ವರ್ಗ ಮಾಡಿಕೊಡಬೇಕೆಂದು ಕೇಳುವುದು ದೊಡ್ಡ ಅಪರಾಧ ಎನ್ನತಕ್ಕ ಪ್ರಶ್ನೆಗೆ ಬರತಕ್ಕದ್ದು ಸರಿಯೇ? ತಾವು ಹೇಳಿ. ಏಕೆಂದರೆ ವರ್ಗಾವಣೆ ಎಲ್ಲರೂ ಕೇಳಿದ್ದಾರೆ. ಇವರು ವರ್ಗಾವಣೆ ಬಗ್ಗೆ ಕೇಳಿದರು. ಅದಕ್ಕೋಸ್ಕರ ನನ್ನ ಮೇಲೆ ಆಪಾದನೆ ಮಾಡಿದ್ದಾರೆ; ನಿಜ. ಇವರು ಆಪಾದನೆ ಮಾಡಿದ್ದಾರೆ. ಅದು ಬೇರೆ ವಿಚಾರ. ಆದರೆ ವರ್ಗಕ್ಕೋಸ್ಕರ ಆಪಾದನೆ ಮಾಡಿದರು ಎಂದು ಇವರ ಮೇಲೆ ವೈಯಕ್ತಿಕವಾಗಿ ಆರೋಪ ಮಾಡುವುದು ಸರಿಯಲ್ಲ.

ಶ್ರೀಮತಿ ಚಂದ್ರಪ್ರಭಾ ಅರಸ್:- ಇದೇ ತಾನೇ ಮಾನ್ಯ ಸಚಿವರು ಅರಣ್ಯಕ್ಕೆ ಸಂಬಂಧಪಟ್ಟ ಹಾಗೆ ಹೇಳಿದರು. ಅತಿಕ್ರಮಣ ಪ್ರವೇಶ ಮಾಡಿರತಕ್ಕವರಿಗೆ ಕಾಡಿನ ಸಂಪತ್ತನ್ನು ಲೂಟಿ ಮಾಡತಕ್ಕವರಿಗೆ ಅವರು ಯಾರೇ ಆಗಿರಲಿ ಅಂತಹವರ ಬಗ್ಗೆ ಕಾನೂನು ರೀತ್ಯ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು. ಮತ್ತು ಹಾಗೆಯೇ ಯಾರಾದರೂ ಅತಿಕ್ರಮಣ ಮಾಡಿದ್ದರೆ ಅಂತಹವರ ಬಗ್ಗೆಯೂ ನಾವು ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತು ಹೇಳಿದರು. ಇಲ್ಲಿ ಹೆಗ್ಗಡದೇವನಕೋಟೆ ಹಾಗೂ ನನ್ನ ಕ್ಷೇತ್ರ ಒಂದೇ ಬಾರ್ಡರ್ ಆಗಿರುವುದರಿಂದ 1988-89 ಹಾಗೂ 1990ರವರೆಗೆ ಇಲ್ಲಿ ಇದ್ದಂತಹ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಕಾಡಿನ ಲೂಟಿ ನಡೆಯಿತು. ಸಾಕಷ್ಟು ಲೂಟಿ ಆಗಿರುವ ಬಗ್ಗೆ ರೈತರಿಂದ ಅಲ್ಲಿನ ಸಾರ್ವಜನಿಕರಿಂದ ನಾಗರೀಕರಿಂದ ನಾವು ಹೋದಾಗಲೆಲ್ಲಾ ದೂರುಗಳು ಬಂದಿವೆ. ಮತ್ತು ಮಾನ್ಯ ಗವರ್ನರ್ ಆಡಳಿತ ಕಾಲದಲ್ಲಿ ಕೂಡ ಸಾಕಷ್ಟು ದೂರುಗಳು ಅವರಿಗೆ ಹೋಗಿವೆ. ಮರಗಳನ್ನು ಕಳ್ಳ ಸಾಗಾಣಿಕೆ ಮಾಡತಕ್ಕವರಿಗೆ ಇವರೇ ಕುಮ್ಮಕ್ಕು ಕೊಟ್ಟಿದ್ದಾರೆ. ಮರಗಳನ್ನು ಅವರು ಕಳಿಸುವುದು ಒಂದು ಆದರೆ ಲೆಕ್ಕ ಬರೆಯುವುದು ಬೇರೆ. ಈ ರೀತಿ ಆಗಿದೆ. ನಮ್ಮ ಹುಣಸೂರು ತಾಲ್ಲೂಕಿನ ಡಿಪ್ಪೋಗಳಿಗೆ ಬರುವ ಮರಗಳನ್ನು ಹಿಡಿದು ಇಟ್ಟಿದ್ದಾರೆ. 3-4 ಲಾರಿಗಳನ್ನು ಹಿಡಿದು ಇಟ್ಟಿದ್ದಾರೆ. ಕೋರ್ಟಿನಲ್ಲಿ ಐದಾರು ತಿಂಗಳಾದ ನಂತರ ಬಿಡುಗಡೆ ಮಾಡಿಕೊಂಡಿದ್ದಾರೆ. ಈ ಅಧಿಕಾರಿಗಳು ಸಸ್ಪೆಂಡ್ ಕೇವಲ ಆಗಿ 8-10 ದಿವಸ ಆಗಿಲ್ಲ. ರೀಇನ್‌ಸ್ಟೇಟ್ ಆಗಿದ್ದಾರೆ. ಇವೊತ್ತಿನ ಕಾಲಾವಧಿಯಲ್ಲಿ ,ಅವರನ್ನು ಭಾಗಮಂಡಲಕ್ಕೆ ವರ್ಗ ಮಾಡಿದ್ದಾರೆ. ಇದು ಪ್ರಮೋಷನ್ ಕೊಟ್ಟ ಹಾಗೆ. ಎನ್‌ಕ್ವೈರಿ ಪೂರ್ಣ ಆಗಿಲ್ಲ. ಸಾಕಷ್ಟು ದುರುಪಯೋಗ ಆಗಿದೆ. 3-4 ಲೋಡ್ ಮರಗಳನ್ನು ಪೆಟ್ರೋಲ್ ಹಾಕಿ ಸುಟ್ಟಿರತಕ್ಕದ್ದು ನಡೆದಿದೆ. ಕಳ್ಳ ಸಾಗಾಣಿಕೆಗೆ ಕೊಟ್ಟಂತಹ ಮರವನ್ನು ಅಲ್ಲೇ ಪೆಟ್ರೋಲ್ ಹಾಕಿ ಸುಟ್ಟಿದ್ದಾರೆ. ಇವರ ಮೇಲೆ ಎನ್‌ಕ್ವೈರಿ ಆಗಬೇಕು. ಸಸ್ಪೆಂಡ್ ಆಗಿದೆ. ಗವರ್ನರ್ ಪಿರಿಯಡ್‌ನಲ್ಲಿ ಸಾಕಷ್ಟು ಜನರು ದೂರು ಕೊಟ್ಟ ಮೇಲೆ ಅವರು ಸಸ್ಪೆಂಡ್ ಆದರು. ಆದರೆ ಕೇವಲ 8-10 ದಿವಸಗಳಲ್ಲಿ ಯಾರ ಪ್ರಭಾವವೋ ಏನೋ ಗೊತ್ತಿಲ್ಲ ಅವರು ರೀಇನ್‌ಸ್ಟೇಟ್ ಆದರು. ಅವರಿಗೆ ಭಾಗಮಂಡಲಕ್ಕೆ ವರ್ಗ ಮಾಡಿ ಆಗಿದೆ. ಆದ್ದರಿಂದ 1988-89 ಹಾಗೂ 90ರವರೆಗೆ ಇದ್ದಂತಹ ಅಧಿಕಾರಿಗಳ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಸ್ಪಷ್ಟೀಕರಣ ನೀಡಿ ಏನು ನಡೆದಿದೆ ಎನ್ನುವುದನ್ನು ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:- ಏನು ಸ್ವಾಮಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ನಿರರ್ಗಳವಾಗಿ ತಮಗೆ ಏನು ತೋಚುತ್ತೆ ಅದನ್ನು ಹೇಳುವುದಕ್ಕೆ ನಿಂತಿದ್ದೀರಿ. ಸದಸ್ಯರುಗಳು ಸರ್ಕಾರ ತಪ್ಪು ಮಾಡಿದೆ ಎಂದು ಹೇಳಿದಾಗ ಅವರು ಹೇಳಿದ್ದವರನ್ನು ಟ್ರಾನ್ಸ್‌ಫರ್ ಮಾಡಲಿಲ್ಲ ಅದಕ್ಕೋಸ್ಕರ ತಮ್ಮ ಮೇಲೆ ಆಪಾದನೆ ಮಾಡಿದ್ದಾರೆಂದು ಹೇಳುವುದು ಯಾವ ನ್ಯಾಯ. ತಾವೇ ಹೇಳಿ. ಅದು ಕೂಡಾ ಮಾನ್ಯ ಸದಸ್ಯರು ಸದನದಲ್ಲಿ ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಹೇಳುವುದಕ್ಕೆ ಬದಲು ಅವರು ಇದ್ದಾಗ ಹೇಳಿ. ಅವರು ಉತ್ತರ ಕೊಡಬಹುದು.

ಶ್ರೀ ಎಲ್.ಆರ್. ಶಿವರಾಮೇಗೌಡ:- ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ಈ ಸದನದಲ್ಲಿ ವರ್ಗಾವರ್ಗಿ ವಿಚಾರದಲ್ಲಿ ಆರೋಪ ಮಾಡಿದ್ದಾರೆ. ಶಾಸಕರಾದ ನಾವುಗಳು ಸಹ ವರ್ಗಾವರ್ಗಿ

ವಿಚಾರದಲ್ಲಿ ಮಂತ್ರಿಗಳಿಗೆ ಕಾಗದ ಕೊಟ್ಟಿದ್ದೇವೆ. ಕೆಲವು ಆಗಿದೆ ಕೆಲವು ಆಗಿಲ್ಲ. ಆಗಿಲ್ಲ ಎಂದಾಕ್ಷಣ ನೇರವಾಗಿ ಅವ್ಯವಹಾರ ನಡೆದಿದೆ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿದರೆ ಹೇಗೆ ಆ ಆಪಾದನೆಗೆ ಈ ರೀತಿ ಉತ್ತರ ಕೊಡುವುದೇ ಸರಿಯೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅದು ಶಿವರಾಮೇಗೌಡರ ವಾದ. ಇವರ ವಾದವನ್ನು ಒಪ್ಪುವುದಾದರೆ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ವರ್ಗಕ್ಕೆ ಹೋಗಲೇಬಾರದು; ವರ್ಗ ಕೇಳಲೇಬಾರದು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ವರ್ಗವನ್ನು ಮಾಡಿ ಎಂದು ಹೇಳುವವರೂ ನೀವೆ. ವರ್ಗ ಮಾಡಿದರೆ ಬೇಡ ಎಂದು ಹೇಳುವವರೂ ನೀವೆ. ಈ ಅರಣ್ಯ ಇಲಾಖೆಯಲ್ಲಿ ಮರಿ ವೀರಪ್ಪನ್‌ಗಳು ಇದ್ದಾರೆ; ಅವರನ್ನು ಬಲಿ ಹಾಕುವುದಕ್ಕೆ ದಿಟ್ಟ ಕ್ರಮವನ್ನು ಬಸವಲಿಂಗಪ್ಪನವರು ತೆಗೆದುಕೊಂಡಿದ್ದಾರೆ. ಅದನ್ನು ತಾವೂ ಸಹ ಸ್ವಾಗತ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಸ್ವಾಗತ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ವೀರಪ್ಪನನ್ನ ಹಿಡಿಯಿರಿ ಎಂದು ನಾವು ಒಂದೇ ಸಮನೆ ಕೂಗುತ್ತಿದ್ದೇವೆ. ಅಲ್ಲಿ ಮರಿ ವೀರಪ್ಪನ್ ಇಲ್ಲ; ಕಿರು ವೀರಪ್ಪನ್ ಇಲ್ಲ. ವೀರಪ್ಪನ್ ಇರುವುದು ಒಬ್ಬನೇ. ಅವನನ್ನು ಹಿಡಿಯುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಇನ್ನು ಮರಿ ವೀರಪ್ಪನ್‌ಗಳನ್ನು ಹಿಡಿಯುತ್ತೀರಾ ಬಿಡಿ.

ಶ್ರೀ ಬಿ. ಬಸವಲಿಂಗಪ್ಪ:- ಕಾಡಿನಲ್ಲಿ ಅತಿಕ್ರಮ ಪ್ರವೇಶ ಮಾಡಿರತಕ್ಕ ಜಮೀನಿನ ಬಗ್ಗೆ ಹೇಳುವುದಾದರೆ ನನ್ನ ಕೈನಲ್ಲಿರತಕ್ಕ ಪಟ್ಟಿ ಪ್ರಕಾರ 37,422.19 ಎಕರೆಗಳು. ಇದರ ಬಗ್ಗೆ ಸರ್ಕಾರ ಸೂಕ್ತವಾಗಿ ಯೋಚನೆ ಮಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೇವೆಂಬುದನ್ನು ನಾನು ತಮಗೆ ತಿಳಿಸುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್:- ಅತಿಕ್ರಮ ಪ್ರವೇಶದ ಜೊತೆಗೆ ಅಧಿಕಾರಿಗಳು ದುರುಪಯೋಗ ಮಾಡಿದ್ದಾರೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ:- ನನಗೆ ಜ್ಞಾಪಕ ಇದೆ. ಯಾವ ಅಧಿಕಾರಿಗಳು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರೂರವಾದಂಥ ಕ್ರಮ ತೆಗೆದುಕೊಳ್ಳಲು ನಾನು ಬದ್ಧನಾಗಿದ್ದೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್:- ಅವರು ಇಲ್ಲಿಂದ ಚೇತರಿಸಿಕೊಂಡು ಹೋಗಿ ಭಾಗಮಂಡಲ ದಲ್ಲಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ:- ಅದರ ಬಗ್ಗೆ ನೋಡುತ್ತೇನೆ. ಇನ್ನು ಕೇಂದ್ರದ ಪುರಸ್ಕೃತ ಜಿಲ್ಲಾ ಪರಿಷತ್ ಯೋಜನೆಗಳು. ಜಿಲ್ಲಾ ಪರಿಷತ್‌ನ ಕಾನೂನಿನಲ್ಲಿ ಸೆಕ್ಷನ್ 182 ಎಂದು ಇದೆ.

ಶ್ರೀ ವಾಟಾಳ್ ನಾಗರಾಜ್:- ಜಿಲ್ಲಾ ಪರಿಷತ್ ಅವರದ್ದು; ನಿಮ್ಮದು ಬರೀ ಕಾಡು ದನ ಹಾಲು ಕರು ಕುರಿ ಮಾತ್ರ.

ಶ್ರೀ ಬಿ. ಬಸವಲಿಂಗಪ್ಪ:- ನಾಗರಾಜ್‌ರವರೇ ತಾವು ಆಮೇಲೆ ಮಾತನಾಡಿ. ಜಿಲ್ಲಾ ಪರಿಷತ್‌ಗೆ ಸಾಮಾಜಿಕ ಅರಣ್ಯ ಯೋಜನೆಯನ್ನು ವಹಿಸಿದ್ದಾರೆ. ಆದರೆ ಕಲಂ 182ರಲ್ಲಿ ಫಾರೆಸ್ಟ್ ಎನ್ನತಕ್ಕ ಸಬ್ಜೆಕ್ಟೇ ಇಲ್ಲ. ಸರ್ಕಾರದಲ್ಲಿ ಕೆಲವು ಅಧಿಕಾರಿಗಳು ಸೇರಿಕೊಂಡು ಒಂದು ಹುಕುಂ ಮಾಡಿದ್ದಾರೆ. ಆ ಹುಕುಂ ಪ್ರಕಾರ ಕಳೆದ ಎರಡು ವರ್ಷದಿಂದ ಸಾಮಾಜಿಕ ಅರಣ್ಯ ಯೋಜನೆ ಇದೆ. ಅದನ್ನು ಅವರಿಗೆ ಅಸೈನ್ ಮಾಡಿದ್ದಾರೆ. ಇದುವರೆಗೆ ಸುಮಾರು 71 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿದ್ದಾರೆ. ಇನ್ನೂ ನಮ್ಮ ಹತ್ತಿರ 12 ಕೋಟಿ ರೂಪಾಯಿ ಹಣ ಇದೆ. ಆದ್ದರಿಂದ ಇದನ್ನು 90-91ನೇ ಸಾಲಿನವರೆಗೆ ಮುಂದುವರಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ:- ಇದು ವಿಶ್ವಬ್ಯಾಂಕ್ ಸ್ಕೀಮ್?

ಶ್ರೀ ಬಿ. ಬಸವಲಿಂಗಪ್ಪ:- ಹೌದು ಇದನ್ನು ಮುಂದೆ ಕೂಡ ಮುಂದುವರಿಸಿಕೊಂಡು ಹೋಗಬೇಕೆ ಅಥವಾ ಬೇಡವೇ ಎಂಬ ಬಗ್ಗೆ ನಂತರ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ಇಲ್ಲಿ ಸಾಮಾಜಿಕ ಅರಣ್ಯ ಯೋಜನೆ ಏನಿದೆ ಇದರಲ್ಲಿ ಚೆನ್ನಾಗಿ ಕೆಲಸ ಮಾಡಲಾಗಿದೆಯೇ ಮಾಡಿಲ್ಲವೇ ಎನ್ನುವುದರ ಬಗ್ಗೆ ಹಲವಾರು ಸದಸ್ಯರುಗಳು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸದಸ್ಯರುಗಳು ಪ್ರಶ್ನೆಗಳನ್ನು ಕೂಡ ಹಾಕಿದ್ದಾರೆ. ಇಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹಣ ದುರುಪಯೋಗವಾಗಿದೆ ಎಂದು ಸಿಂಧ್ಯರವರು ಕೂಡ ಹೇಳಿದ್ದಾರೆ. ಬ್ಲಾಕ್ ಗ್ರ್ಯಾಂಟ್ಸ್ ಎಂದು ಡಿಮ್ಯಾಂಡ್ 24ರಲ್ಲಿ ಜಿಲ್ಲಾ ಪರಿಷತ್‌ಗೆ ವಹಿಸಿದ್ದೇವೆ. ಈಗ ಜಿಲ್ಲಾ ಪರಿಷತ್ ಆದೇಶದ ಮೇರೆಗೆ ನಮ್ಮ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಅವರು ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಫಾರೆಸ್ಟ್ ಇಲಾಖೆಯ ಅಧಿಕಾರಿಗಳಾದರೂ ಸಹ ಸ್ವೇಚ್ಛೆಯಾಗಿ ಜಿಲ್ಲಾ ಪರಿಷತ್ ಹೇಳಿದ ಹಾಗೆ ಕೆಲಸ ಮಾಡುತ್ತಿದ್ದಾರೆ. ಹಣ ದುರುಪಯೋಗವಾಗಿದ್ದರೆ ದುರುಪಯೋಗವಾಗಿದೆ. ಯಾರಿಂದ ದುರುಪಯೋಗ ಆಗಿದೆ ಜಿಲ್ಲಾ ಪರಿಷತ್‌ನವರು....

ಶ್ರೀ ಗೋಪಿನಾಥ ಆರ್. ಸಾಂದ್ರ:- ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಜಿಲ್ಲಾ ಪರಿಷತ್‌ಗೆ ಯಾವುದೇ ಅಧಿಕಾರ ಕೊಟ್ಟಿಲ್ಲ. ಆದರೆ ಕೆಲವು ಅಧಿಕಾರಿಗಳು ಅದನ್ನು ಬಳಸಿಕೊಂಡು ಹಣ ಖರ್ಚು ಮಾಡಿದ್ದಾರೇದು ತಾವು ಈಗ ಹೇಳಿದಿರಿ. ನೀವು ಅವರಿಗೆ ಅಧಿಕಾರ ಕೊಡದೇ ಹಣ ಏತಕ್ಕೆ ಮಂಜೂರು ಮಾಡಿದಿರಿ? ಹಣ ಏತಕ್ಕೆ ಕೊಟ್ಟಿರಿ ಈ ಪ್ರಶ್ನೆಗೆ ಉತ್ತರ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ:- ಇದು ಕಳೆದ 2-3 ವರ್ಷಗಳಿಂದ ವ್ಯಾಪಕವಾಗಿ ನಡೆದುಕೊಂಡು ಬಂದಿದೆ.

ಶ್ರೀ ಗೋಪಿನಾಥ್ ಆರ್. ಸಾಂದ್ರ:- ಅವರು ತಪ್ಪು ಮಾಡಿದರೆ ನೀವೂ ತಪ್ಪು ಮಾಡುತ್ತೀರೇನು?

ಶ್ರೀ ಬಿ. ಬಸವಲಿಂಗಪ್ಪ:- ಇದು ಅಷ್ಟು ಸುಲಭವಲ್ಲ. ಪದ್ಧತಿ ಇದೆ. ಏನು ಮಾಡಬೇಕೆಂಬ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಸಾಮಾಜಿಕ ಅರಣ್ಯ ಯೋಜನೆ ಇರಬೇಕೆ? ಬೇಡವೆ? ಎನ್ನುವುದರ ಬಗ್ಗೆ ಯೋಚನೆ ಮಾಡಿ ಸಮಯಕ್ಕೆ ಅನುಸಾರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಿನಾಥ್ ಆರ್. ಸಾಂದ್ರ:- ನೀವು ಅವರಿಗೆ ಅಧಿಕಾರ ಕೊಟ್ಟಿಲ್ಲ. ಆದರೂ ಹಣ ಒದಗಿಸಿದ್ದೀರಿ. ಇದು ಏತಕ್ಕೆ. ತಾವು ಹಿರಿಯ ಮಂತ್ರಿಗಳಿದ್ದೀರಿ. ಕಳೆದು ಎರಡು ವರ್ಷಗಳಿಂದ ಕಾಯಿದೆ ಕಾನೂನಿಗೆ ವಿರುದ್ಧವಾಗಿ ನಡೆದಿರತಕ್ಕ ಕೆಲಸಗಳನ್ನು ತಾವು ರದ್ದು ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೆ ಈ ಕಡೆಯವರೂ ಹಿರಿಯ ಮಂತ್ರಿ ಅನ್ನುತ್ತಾರೆ. ಆ ಕಡೆ ವಿರೋಧ ಪಕ್ಷದವರೂ ಹಿರಿಯ ಮಂತ್ರಿ ಅನ್ನುತ್ತಾರೆ. ಬರೀ ಮಂತ್ರಿ ಅಂದರೆ ಸಾಕು. ಹಿರಿಯ ಮಂತ್ರಿ ಎಂದು ಏತಕ್ಕೆ ಹೇಳಬೇಕು?

ಶ್ರೀ ಬಿ.ಹೆಚ್. ಬನ್ನಿಕೋಡ್:- ತಮ್ಮ ತಲೆ ಕೂದಲೆಲ್ಲಾ ಬೆಳ್ಳಗಾಗಿವೆ. ಅದಕ್ಕೆ ಆ ರೀತಿ ಹೇಳುವುದು.

ಡಾ. ಎನ್.ಬಿ. ನಂಜಪ್ಪ:- ಸಾಮಾಜಿಕ ಅರಣ್ಯ ಯೋಜನೆಯಲ್ಲಿ ತಪ್ಪು ಮಾಡಿದವರ ಬಗ್ಗೆ ತಾವು ಸರಿಯಾದ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು:- ತಾವು ಯಾರಿಗೂ ಈಲ್ಡಾಗಬೇಡಿ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಈಲ್ಡಾಗುವುದಿಲ್ಲ. ಸಾಮಾಜಿಕ ಅರಣ್ಯದ ಬಗ್ಗೆ ಎಷ್ಟು ಆಗಿದೆ ಎಷ್ಟು ಸದ್ವಿನಿಯೋಗ ಆಗಿದೆ ಎಷ್ಟು ಅಪವ್ಯಯವಾಗಿದೆ ಎಂಬ ಬಗ್ಗೆ ವಿಚಾರಣೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಅದರ ಪ್ರಕಾರ ಮಾಡುತ್ತೇನೆ. ಬುಡಕಟ್ಟಿನ ಉಪಯೋಜನೆ ಬಗ್ಗೆ ಒಂದು ವಿಚಾರ ಹೇಳಲೇಬೇಕಾಗಿದೆ. ಬುಡಕಟ್ಟಿನ ಜನ ಮೈಸೂರು ಜಿಲ್ಲೆ ಮತ್ತು ಕೂರ್ಗ್ ಜಿಲ್ಲೆಯಲ್ಲಿದ್ದಾರೆ. ಟ್ರೈಬಲ್ಸ್; ಇವರು ಕಾಡಿನ ಒಳಗೆ ಇದ್ದಾರೆ. ಸಾವಿರಾರು ವರ್ಷಗಳಿಂದ ಅಲ್ಲಿಯೇ ಇದ್ದಾರೆ. 100-200-300 ವರ್ಷಗಳಿಂದ ಅಲ್ಲ

ನಮ್ಮ ಅಧಿಕಾರಿಗಳ ಮನಸ್ಸಿನಲ್ಲಿ ಈ ಟ್ರೈಬಲ್ಸ್ ಯಾರಿದ್ದಾರೆ ಕಾಡಿನಲ್ಲಿರತಕ್ಕ ಜನ ಯಾರಿದ್ದಾರೆ ಇಂಥವರು ಅತಿಕ್ರಮ ಪ್ರವೇಶ ಮಾಡಿದ್ದಾರೆ ಎನ್ನುವ ಒಂದು ವಾದ ಇದೆ. ಕೆಲವರು ಒಂದು ವಿಚಾರವನ್ನು ಈ ಸಭೆಯಲ್ಲಿ ಹೇಳಿದರು. They said 'Sir, they have all trespassed into the forest area and we have to evict them.' I told them 'Who is the owner and who is the trespasser? I and you are the trespassers, not they; they are owners of the forest.' ಈ ಬುಡಕಟ್ಟು ಉಪಯೋಜನೆ ಬಗ್ಗೆ ನಾನೇ ಒಂದು ಸಮಗ್ರವಾದ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿದ್ದೇನೆ. ನನ್ನ ಹತ್ತಿರ ಇದೆ. ಇದನ್ನು ನಮ್ಮ ನಾಯಕರಾದ ರಾಜೀವ್ ಗಾಂಧಿಯವರಿಗೂ ಒಪ್ಪಿಸಿದ್ದೇನೆ. ಅದೇ ರೀತಿ ಎಕನಾಮಿಕ್ ಪ್ರೋಗ್ರಾಂ ರೂರಲ್ ವುಮೆನ್ ಬಗ್ಗೆ ಕೂಡ ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿದ್ದೇನೆ. ಇವರದನ್ನೂ ನಮ್ಮ ನಾಯಕರಿಗೆ ಒಪ್ಪಿಸಿದ್ದೇನೆ. ಈ ಎರಡೂ ಪ್ರೋಗ್ರಾಂಗಳ ಕಾರ್ಯಕ್ರಮ ಇಡೀ ದೇಶದ ವ್ಯಾಪ್ತಿಯಲ್ಲಿ ಜಾರಿಗೆ ಬರಬೇಕು. It should become a national programme. ಈ ರೀತಿಯಾಗಿ ಮಾಡಬೇಕೆಂದು ನನ್ನ ಉದ್ದೇಶ ಇದೆ. ನಮ್ಮ ಮಾನ್ಯ ನಾಯಕರ ಸಂದರ್ಶನವನ್ನು ಮಾಡಿ ಈ ಎರಡೂ ರಿಪೋರ್ಟನ್ನು ಕೊಟ್ಟಿದ್ದೇನೆ. ನನ್ನ ಹತ್ತಿರ ರಿಪೋರ್ಟ್ ಇದೆ ಅದನ್ನು ಮಾನ್ಯ ಸದಸ್ಯರಿಗೂ ಕೊಡುತ್ತೇನೆ. ಈ ಒಂದು ಟ್ರೈಬಲ್ ಸಬ್‌ಪ್ಲಾನ್ ಪ್ರಕಾರ ಕಾಡಿನಲ್ಲಿರತಕ್ಕಂಥವರು ಅಲ್ಲಿ ಸ್ಮಗಲ್ ಮಾಡತಕ್ಕ ಯಾವ ಜನಗಳು ಇದ್ದರು ಅಂತಹವರ ಬಗ್ಗೆ ಹಿಂದೆ ಇನ್‌ಫರ್‌ಮೇಷನ್ ಕೊಡುತ್ತಿದ್ದರು ಹಿಂದೆ ಇಷ್ಟುದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರಲಿಲ್ಲ. ಈಗ ವ್ಯಾಪಕವಾಗಿ ಸ್ಮಗ್ಲಿಂಗ್ ನಡೆಯುತ್ತಿದೆ. ಈಗ ಅವರು ಏನಾಗಿದ್ದಾರೆ, ಅಂದರೆ, ಅವರಿಗೂ ನಾಗರೀಕತೆ ಬಂದಿದೆ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಅವರದ್ದು ಸುಮಾರು ೧೬ ಸಾವಿರ ಸಂಸಾರಗಳು ಈ ಎರಡು ಜಿಲ್ಲೆಗಳಲ್ಲಿವೆ. ಈ ೧೬ ಸಾವಿರ ಸಂಸಾರಗಳನ್ನು ಯಾವ ರೂಪದಲ್ಲಿಯಾದರೂ ಒಂದು ವ್ಯವಸ್ಥಿತ ರೂಪದಲ್ಲಿ ಅವರಿಗೆ ನೆಲೆ ಮಾಡಿಕೊಡಬೇಕು ಎಂದು ಯೋಚನೆ ಮಾಡಿ ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿದ್ದೇನೆ. ತಮಗೂ ನಾನು ಕಳುಹಿಸಿಕೊಡುತ್ತೇನೆ. ಸನ್ಮಾನ್ಯ ಸದಸ್ಯರಿಗೂ ನಾನು ಕಳುಹಿಸಿಕೊಡುತ್ತೇನೆ. ಇದರ ಪ್ರಕಾರ ಕಾಡಿನಲ್ಲಿಯೇ ಇದ್ದುಬಿಟ್ಟು ಎಲ್ಲಿ ಕೆಸರಿನ ಅಟ್ಲು ಇರುತ್ತದೆ ಎಲ್ಲೆಲ್ಲಿ ನೀರು ನಿಲ್ಲುತ್ತದೆ ಎಲ್ಲೆಲ್ಲಿ ಬೆಳೆಬೆಳೆಯಬಹುದು ಅಲ್ಲಿ ವಾಸವಾಗಿದ್ದು ತಮ್ಮ ಉಪಜೀವನವನ್ನು ಮಾಡುತ್ತಿದ್ದಾರೆ. ಅಂತವರಿಗೆ ಕರೆದುಕೊಂಡು ಬಂದು ಮೂರು ನಾಲ್ಕು ವರ್ಷ ಸರ್ಕಾರವೇ ಅವರ ಜೀವನಕ್ಕೆ ವ್ಯವಸ್ಥೆ ಮಾಡಬೇಕೆಂಬ ಯೋಚನೆ ಇದೆ. ಈ ಟ್ರೈಬಲ ಸಬ್‌ಪ್ಲಾನ್ ಈ ಟ್ರೈಬಲ್ ವೆಲ್‌ಫೇರ್ is directly under the President of India and it is chargeable to the consolidated fund of the Government of India. ಅದಕ್ಕಾಗಿ ನಾವು ಏನು ಮಾಡಿದ್ದೇವೆ ಅಂದರೆ ೧೯೫೦ನೇ ಇಸವಿಯಲ್ಲಿ ಏನು ಒಂದು ಟ್ರೈಬಲ್ ಹುಕುಂ ಆಯಿತು ಕಾನ್‌ಸ್ಟಿಟ್ಯೂಷನ್‌ನಲ್ಲಿ ಈ ಒಂದು ಷೆಡ್ಯೂಲ್ ಟ್ರೈಬ್ಸ್ ಎಂದು ಆರ್ಡರ್ ಆಯಿತು. ಅಲ್ಲಿಂದ ಇಲ್ಲಿಯವರೆಗೆ ನಮ್ಮ ಸರ್ಕಾರದವರು ಕನ್‌ಸಾಲಿಡೇಟೆಡ್‌ಗೆ ಫಂಡ್ ಎಂದು ಇವರಿಗೋಸ್ಕರ ಇವರ ಉದ್ಧಾರಕ್ಕೋಸ್ಕರ ಏನು ಇಟ್ಟಿದ್ದಾರೆ ಅದರಲ್ಲಿ ಇವರಿಗೆ ಪ್ಲಾನ್ ತಯಾರು ಮಾಡಿಬಿಟ್ಟು ಇದುವರೆಗೂ ನಮ್ಮ ಸರ್ಕಾರ ಕಳುಹಿಸಿಲ್ಲ ಸಣ್ಣಸಣ್ಣದಾಗಿ ಕಳುಹಿಸಿದ್ದಾರೆ ಆದರೆ ವ್ಯಾಪಕವಾಗಿ ಇಲ್ಲ. ಇವೆಲ್ಲಾ ಅನುಕೂಲಗಳು ಅವರಿಗೆ ಸಿಕ್ಕಬೇಕು. ಇವರು ಶಾಶ್ವತವಾಗಿ ನೆಲೆಸಬೇಕು ಎನ್ನುವ ಉದ್ದೇಶ ಯಾರಿಗೂ ಬಂದಹಾಗೆ ನನಗೆ ಕಾಣಲಿಲ್ಲ. ಈಗ ನನಗೆ ಬಂದಿದೆ ಎಂದು ಗರ್ವದಿಂದ ಹೇಳುತ್ತಿಲ್ಲ. ಆದರೆ ಇವೊತ್ತಾದರೂ ಇಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಇಂತಹ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಏಕೆಂದರೆ ಏನು ಈ ಅನಾಥ ಜನರಿದ್ದಾರೆ ಅವರ ಜೀವನ ನೋಡಿದರೆ ನನಗೆ ಹೊಟ್ಟೆಯಲ್ಲಿ ಸಂಕಟವಾಗುತ್ತದೆ. ಹುಣಸೂರು ಕಾಡಿನಲ್ಲಿ ನಾನು ಈ ಟ್ರೈಬಲ್ ಜನರನ್ನು ನೋಡಿದೆ. ಹೆಣ್ಣು ಮಕ್ಕಳು ಬರೀ ಬೆತ್ತಲೆಯಲ್ಲಿರುತ್ತಾರೆ. ಈಗ ಅವರು ಸೀರೆಯನ್ನುಟ್ಟು ಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಏಕೆಂದರೆ ಹತ್ತು ವರ್ಷಗಳ ಹಿಂದೆ ಅವರನ್ನು ನೋಡಿದ್ದೆ. ನಾನು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕು ಎಂದು ಹೋದಾಗ ಅವರ ಕ್ಷೇಮವನ್ನು ಕವರ್ ಮಾಡಿಕೊಳ್ಳಲಿಕ್ಕೆ ಅವರು ಹಡೆದ ಮಕ್ಕಳನ್ನು ಮುಂದಿಟ್ಟುಕೊಂಡು ಕುಳಿತಿದ್ದ ದೃಶ್ಯವನ್ನು ನಾನು

ನೋಡಿದ್ದೇನೆ. ಅಂದರೆ ಎಷ್ಟು ಬಡತನ ಅವರದ್ದು ಸರ್ಕಾರದಿಂದ ಇಷ್ಟು ತಿರಸ್ಕಾರ ಮಾಡಿದ್ದೇವೆ ಅವರು ಯಾರೋ ಎಂದು ತಿಳಿದುಕೊಂಡಿದ್ದೇವೆ. ಅವರೇ ಅತಿಕ್ರಮಣ ಪ್ರವೇಶ ಮಾಡಿ ಜೀವನ ಮಾಡುತ್ತಿದ್ದಾರೆ ಎನ್ನತಕ್ಕ ಭಾವನೆ ನಮ್ಮಲ್ಲಿದೆ. ಅವರ ಬಗ್ಗೆ ನಮಗೆ ಅನುಕಂಪ ಇಲ್ಲದೇ ಹೋದರೆ ಮಾನವೀಯತೆಯ ಅನುಕಂಪ ಇಲ್ಲದೇ ಹೋದರೆ ಹೇಗೆ ಎಷ್ಟು ದಿವಸ ಎಂದು ಇಂತಹ ಜನರನ್ನು ಈ ಕಾಡಿನಲ್ಲಿ ಜೀವನ ಮಾಡಲಿಕ್ಕೆ ಬಿಡಬೇಕಾಗುತ್ತದೆ ಇವೊತ್ತು ಸರ್ಕಾರ ಇದೆ ಕೋಟ್ಯಾಧೀಶರು ಇದ್ದಾರೆ ಜಮಿನ್ದಾರರುಗಳು ಇಧ್ದಾರೆ ಸಂಪತ್ತನ್ನು ಲೂಟಿ ಮಾಡಿ ಜೀವನ ಮಾಡತಕ್ಕವರು ಇದ್ದಾರೆ ಸ್ಮಗಲ್ ಮಾಡಿ ಜೀವನ ಮಾಡತಕ್ಕವರು ಇದ್ದಾರೆ. ನಾವು ಸರ್ಕಾರದವರು ಇಂತಹ ಜನಗಳ ಕಡೆಗೆ ಗಮನಕೊಡದಿದ್ದರೆ ಅವರು ನೆಲೆ ಮಾಡಲಿಕ್ಕೆ ಕಾರ್ಯಕ್ರಮ ಹಾಕಿಕೊಳ್ಳದೇ ಇದ್ದರೆ ಹೇಗೆ. ನಾನು ಈ ಸದನದಲ್ಲಿ ಎಲ್ಲರಿಗೂ ವಿನಯಪೂರ್ವಕವಾಗಿ ಹೇಳುತ್ತೇನೆ. ಇವರ ಬಗ್ಗೆ ಸಬ್ ಪ್ಲಾನ್ ಏನು ತಯಾರು ಮಾಡಿದ್ದೇನೆ ಅದನ್ನು ಮುಖ್ಯ ಮಂತ್ರಿಗಳು ಒಪ್ಪುವ ಹಾಗೆ ಮಾಡಿ ಇಂತಹ ಒಂದು ಕಾಡಿನಲ್ಲಿ ಜೀವನ ಮಾಡತಕ್ಕ ಜನರಿಗೆ ಸೂಕ್ತ ವ್ಯವಸ್ಥೆ ಮಾಡಬೇಕು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಮತ್ತು ಕೇಂದ್ರ ಸರ್ಕಾರ ಕೂಡ ಈ ಒಂದು ಪ್ರಾಜೆಕ್ಟ್ ತಯಾರು ಮಾಡಿದ್ದೇನೆ. ಅದಕ್ಕೆ ಅವರಿಂದ ಹಣ ತೆಗೆದುಕೊಂಡು ಬಂದು ವ್ಯವಸ್ಥಿತ ರೀತಿಯಲ್ಲಿ ಮೂರು ನಾಲ್ಕು ವರ್ಷದವರೆಗೆ ಸರ್ಕಾರವೇ ಅವರು ನೆಲೆಯೂರುವವರೆಗೆ ನಾವು ಅವರನ್ನು ನೋಡಲೇಬೇಕಾಗುತ್ತದೆ, ಎಲ್ಲಾ ವ್ಯವಸ್ಥೆ ನಾವೇ ಮಾಡಬೇಕಾಗುತ್ತದೆ. ಈ ಕಾಡಿನಿಂದ ಹೊರಗೆ ತಂದು ಕಾಡಿನ ಅಂಚಿನ ಪ್ರದೇಶದಲ್ಲಿ ಅವರಿಗೆ ನೆಲೆ ಮಾಡಿ ಒಂದೆರೆಡು ಮೂರು ಎಕರೆ ಜಮೀನು ಕೊಡುವುದರ ಮೂಲಕ ಇನ್‌ಫ್ರಾಸ್ಟ್ರಕ್ಚರಲ್‌ನ ಒಂದು ಅನುಕೂಲಗಳು ಏನೇನು ಮಾಡಿ ಕೊಡಬೇಕು ಸರ್ಕಾರದಿಂದ ಅದೆಲ್ಲವನ್ನೂ ಅಂದರೆ ಇಂಡಸ್ಟ್ರಿಯಲೈಸೇಷನ್ ಅಥವಾ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಕಾಟೇಜ್ ಇಂಡಸ್ಟ್ರಿ ಏನೇನಿದೆ ಈ ಹೈನುಗಾರಿಕೆ ಏನಿದೆ ಮುಂತಾದ ಏನೆಲ್ಲಾ ಕಾರ್ಯಕ್ರಮಗಳು ಇವೆ ಎಲ್ಲವನ್ನು ಅವರಿಗೆ ಕೊಡುವ ಹಾಗೆ ಮಾಡಿ ಅವರನ್ನು ಉದ್ಧಾರ ಮಾಡಲಿಕ್ಕೆ ಕಾರ್ಯಕ್ರಮ ಹಾಕಿ ಕೊಳ್ಳಬೇಕೆಂದು ವಿಚಾರ ಮಾಡುತ್ತಿದ್ದೇವೆ. ಮತ್ತೆ ಪಶ್ಚಿಮ ಘಟ್ಟಗಳನ್ನು ಉಳಿಸಬೇಕು ಮತ್ತು ಅದನ್ನು ಅಭಿವೃದ್ಧಿ ಮಾಡಬೇಕೆನ್ನುವುದರ ಬಗ್ಗೆ ವಿಶೇಷವಾಗಿರತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಪಶ್ಚಿಮಘಟ್ಟ ಹಾಳಾಗಿ ಹೋದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಳೆ ಬರತಕ್ಕಂಥಾದ್ದು ನಿಲ್ಲುತ್ತದೆ. ಈಗ ಅನಿರ್ಧಿಷ್ಟವಾಗಿ ಮಳೆ ಬರುತ್ತಿದೆ ವ್ಯಾಪಕವಾದ ಮಳೆಯಾಗುತ್ತಿಲ್ಲ. ಈಗ ಮರಗಳನ್ನು ಕಡಿದು ಹಾಳು ಮಾಡಿ ಲೂಟಿ ಮಾಡತಕ್ಕಂತಹ ಜನರು ಯಾರು ಇದ್ದಾರೆ ಇವರ ಬಗ್ಗೆ ನಿಗಾವಹಿಸಿ ಕಾಡನ್ನು ಅಭಿವೃದ್ಧಿ ಮಾಡ ಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈಗ ಓವರ್ ಸೀಸ್ ಡೆವಲಪಮೆಂಟ್ ಅಥಾರಿಟಿಯವರು ೧೨೦ ಕೋಟಿ ರೂಪಾಯಿ ಹಣವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ, ಅದರಲ್ಲಿ ೭೦ ಪರ್ಸೆಂಟ್ ಹಾಗೇ ಪುಕ್ಕಟೆಯಾಗಿ ಕೊಡುತ್ತಿದ್ದಾರೆ. ೩೦ ಪರ್ಸೆಂಟ್ ಮಾತ್ರ ಸಾಲದ ರೂಪದಲ್ಲಿ ಕೊಡಬೇಕೆಂದು ಅವರು ಮುಂದೆ ಬಂದಿದ್ದಾರೆ. ಆ ಹಣವನ್ನು ಉಪಯೋಗಿಸಿಕೊಂಡು ಈ ಪಶ್ಚಿಮ ಘಟ್ಟಗಳ ಕಾಡನ್ನು ಅಭಿವೃದ್ಧಿ ಮಾಡಬೇಕು ಎಂಬ ವ್ಯಾಪಕವಾದ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇನ್ನು ಶಾಲಾ ವನಗಳ ಬಗ್ಗೆ ಹೇಳುವುದಾದರೆ, ಪ್ರತಿಯೊಂದು ಸರಕಾರೀ ಶಾಲೆಗಳು ಏನಿವೆ, ಅಲ್ಲಿ ಮಕ್ಕಳಿಂದಲೇ ಗಿಡಗಳನ್ನು ನೆಡಸತಕ್ಕಂಥಾದ್ದು ಮತ್ತು ಅದನ್ನು ಕಾಪಾಡಿಕೊಂಡು ಬರತಕ್ಕಂಥಾದ್ದರ ಬಗ್ಗೆ ಅವರಿಗೆ ತಿಳುವಳಿಕೆ ಹೇಳಿ ಎಲ್ಲಾ ಶಾಲೆಗಳಲ್ಲೂ ಇದನ್ನು ಜಾರಿಗೆ ತರಬೇಕೆಂದಿದ್ದೇವೆ. ಮತ್ತು ಎಲ್ಲ ಕಡೆ ಮರಗಳನ್ನು ನೆಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಇನ್ನು ಬೆಂಗಳೂರು ನಗರ ಸಾಕಷ್ಟು ಬೆಳೆಯುತ್ತಿದೆ. ಬೆಂಗಳೂರು ನಗರದಲ್ಲಿ ಸಾಕಷ್ಟು ಗಿಡಗಳನ್ನು ನೆಟ್ಟಿದ್ದೇವೆ. ಆದರೆ ಯಾರು ಹೊಸದಾಗಿ ಮನೆ ಕಟ್ಟುತ್ತಾರೆ ಅವರು ೨ ಮರ ಹಾಕಬೇಕು ಇಲ್ಲವಾದರೆ ನಗರಸಭೆಯವರು ಲೈಸನ್ಸ್ ಕೊಡಲೇ ಬಾರದು ಒಂದು ನಿಬಂಧನೆಯನ್ನು ಅನುಸರಿಸಿದರೆ ಈ ಕಾರ್ಪೊರೇಷನ್ ಏರಿಯಾದಲ್ಲಿ ಮರಗಳು.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಮರ ನೆಡುವುದಕ್ಕೆ ಕಷ್ಟವಾಗುತ್ತದೆ ಗಿಡಗಳನ್ನು ನೆಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ. ಬಿ. ಬಸವಲಿಂಗಪ್ಪ:- ಮಾನ್ಯ ಯಡಿಯೂರಪ್ಪನವರು ನಾನು ಏನು ಮಾತನಾಡಿದರೂ ಕೂಡ ಸಂಶಯ ಪಟ್ಟರೆ ಹೇಗೆ? ದೊಡ್ಡ ದೊಡ್ಡ ಮರಗಳನ್ನು ಬೆಳೆಸುತ್ತೇವೆ. ಸಣ್ಣ ಸಣ್ಣ ಮರ ಗಿಡಗಳನ್ನು ಬೆಳೆಸುತ್ತೇವೆ. ಜಾಗ್ರತೆ ಅದು ಬೆಳೆಯಬೇಕಲ್ಲವೇ

ಅಧ್ಯಕ್ಷರು:- ಬೆಂಗಳೂರು ನಗರಕ್ಕೆ ಮಾತ್ರ ಏಕೆ ಸೀಮಿತ ಮಾಡುತ್ತೀರಿ ಇಡೀ ರಾಜ್ಯದಲ್ಲಿ ಇದನ್ನು ಅನ್ವಯಿಸಬಹುದಲ್ಲವೇ ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಬೆಳಗಾಂ, ಮಂಡ್ಯ ಎಲ್ಲಾ ಕಡೆ ಇದನ್ನು ಮಾಡಬಹುದಲ್ಲವೇ

ಶ್ರೀ ಬಿ. ಬಸವಲಿಂಗಪ್ಪ:- ತಮ್ಮ ಸಲಹೆಯನ್ನು ನಾನು ಒಪ್ಪಿದ್ದೇನೆ. ಎಲ್ಲಾ ಟೌನ್ ಸಿಟಿ ತಾಲ್ಲೂಕು ದೊಡ್ಡ ನಗರಗಳಲ್ಲಿ ಮರಗಳನ್ನು ಮತ್ತು ಸಸಿಗಳನ್ನು ನೆಡುವುದಕ್ಕೆ......

ಶ್ರೀ ಬಿ.ಹೆಚ್. ಬನ್ನಿಕೋಡ್:- ಪ್ರತಿ ಎಕರೆಗೆ ೪ ಗಿಡ ಹಾಕಿ ಎಂದು ಏಕೆ ರೈತರಿಗೆ ಹೇಳ ಬಾರದು.

ಅಧ್ಯಕ್ಷರು :- ಆಗಬಹುದು.

ಶ್ರೀ ಬಿ. ಬಸವಲಿಂಗಪ್ಪ:- ಅದಕ್ಕೆ ನಾನು ಬರುತ್ತೇನೆ. ಈಗ ಸಾಮಾಜಿಕ ಅರಣ್ಯ ಯೋಜನೆ ಏನಿದೆ ಈ ಯೋಜನೆಯಲ್ಲಿ ಇಷ್ಟೆಲ್ಲಾ ಗಿಡಗಳನ್ನು ನೆಟ್ಟಿದ್ದೇವೆ. ಅದರಲ್ಲಿ ಎಷ್ಟು ಬದುಕಿದೆ ಎಷ್ಟು ಹಾಳಾಗಿದೆ ಎಂಬುದರ ಬಗ್ಗೆ ಅಂಕಿ ಅಂಶವನ್ನು ನೋಡಿದರೆ ಶೇಕಡಾ ೮೦ ರಷ್ಟು ಬದುಕಿವೆ ಶೇಕಡಾ ೨೦ರಷ್ಟು ಸತ್ತಿವೆಯೆಂದು ಹೇಳುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ:- ಈಗ ೩೦ ರಷ್ಟು ಮಾತ್ರ ಬದುಕಿವೆ.

ಶ್ರೀ ಬಿ. ಬಸವಲಿಂಗಪ್ಪ:- ಹಳ್ಳಿಗಳಲ್ಲಿ ಯಾರು ಬಡವರಿದ್ದಾರೆ ರೈತರಿದ್ದಾರೆ ಅಂತವರು ಗಿಡಗಳನ್ನು ಬೆಳಸಬೇಕು ಅವರಿಗೆ ಟ್ರೀ ಪಟ್ಟಾಸ್ ಅನ್ನು ಕೊಡಬೇಕೆಂದು ಇದ್ದೇವೆ. ಅವರೇ ಗಿಡ ಹಾಕಿ ಅವರೇ ಬೆಳೆಸಬೇಕು ಒಂದೊಂದು ಗಿಡದ ಮೇಲೆ ಎಷ್ಟು ಹಣ ನಾವು ಈಗ ಖರ್ಚು ಮಾಡುತ್ತಿದ್ದೇವೆ. ಆ ಖರ್ಚಿನ ಹಣವನ್ನು ಅವರಿಗೆ ಕೊಡಬೇಕು. ಎಲ್ಲಾ ಗ್ರಾಮಗಳಲ್ಲಿ ಅವರವರೇ ಗಿಡ ತೆಗೆದುಕೊಂಡು ನೆಟ್ಟು ಬೆಳೆಸಬೇಕು ಮುಂದೆ ಕೆಲವು ನಿಬಂಧನೆ ಹಾಕಿ ಅದನ್ನು ಕಡಿಯಲಿಕ್ಕೆ ಇಲ್ಲವೇ ಆದರ ಫಲವನ್ನು ಉಪಯೋಗಿಸಲಿಕ್ಕೆ ಹುಕುಂ ಮಾಡಬೇಕೆಂಬ ಯೋಚನೆ ಮಾಡುತ್ತಿದ್ದೇವೆ. ಇನ್ನು ವನ್ಯ ಜೀವಿ ಸಂರಕ್ಷಣೆ ಬಗ್ಗೆ ಕೆಲವು ಮಾತನ್ನು ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೫ ನ್ಯಾಷನಲ್ ಪಾರ್ಕ್‌ಗಳಿವೆ. ಪಕ್ಷಧಾಮಗಳು ೮ ಇವೆ. ೪೨ ಸಾವಿರ ಕಿಲೋಮಿಟರ್ ಅರಣ್ಯ ಪ್ರದೇಶದಲ್ಲಿ ಇಂತಹ ವ್ಯವಸ್ಥೆ ನಡೆದಿದೆ. ಇಲ್ಲಿ ಇದರ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ಏನೆಂದರೆ ತಾವುಗಳೆಲ್ಲರೂ ಹುಲಿಗಳನ್ನು ನೋಡಿದ್ದೀರಿ. ಅವು ಎಷ್ಟು ಸುಂದರ ಪ್ರಾಣಿಗಳು ಎಂಬುದು ಗೊತ್ತಿದೆ. ಅವು ಕೂರಪ್ರಾಣಿಗಳು ಇರಬಹುದು, ಆದರೆ ಸುಂದರ ಪ್ರಾಣಿಗಳಂತೂ ನಿಜ. ಪ್ರಕೃತಿ ವ್ಯವಸ್ಥೆಯ ಪ್ರಕಾರ ಕಾಡಿನಲ್ಲಿ ಕ್ರೂರ ಪ್ರಾಣಿಗಳೂ ಇರುತ್ತವೆ. ಸಾಧು ಪ್ರಾಣಿಗಳೂ ಇರುತ್ತವೆ. ಎರಡೂ ರೀತಿಯ ಪ್ರಾಣಿಗಳಿರುವುದು ಎಲ್ಲರಿಗೂ ಗೊತ್ತಿರತಕ್ಕದ್ದು. ಅವುಗಳು ಸ್ವೇಚ್ಛೆ ಯಾಗಿ ಜೀವನ ನಡೆಸುವ ಸನ್ನಿವೇಶ ಇರಬೇಕು. ಆದಕ್ಕೆ ನಾವು ಪ್ರೋತ್ಸಾಹವನ್ನು ಕೊಡದೆ ಅವುಗಳನ್ನು ಹಿಡಿದು ಅವುಗಳ ಕತ್ತಿಗೆ ಪಟ್ಟಿಯನ್ನು ಹಾಕತಕ್ಕದ್ದು ಮಿಣಿಮಿಣಿ ಎನ್ನತಕ್ಕ ಕಾಲರನ್ನು ಜೋಡಿಸಿ ಎಲೆಕ್ಟ್ರಿಕ್ ಬಲ್ಬುಗಳನ್ನು ಹಾಕತಕ್ಕದ್ದು ಇತ್ಯಾದಿ ಕ್ರೂರವಾದ ಕೆಲಸವನ್ನು ರೀಸರ್ಚ್ ಮಾಡತಕ್ಕ ಹೆಸರಿನಲ್ಲಿ ಮಾಡುವುದು ಖಂಡಿತವಾಗಿಯೂ ನನಗೆ ಸರಿ ಎನಿಸಲಿಲ್ಲ. ಹುಲಿಯನ್ನು ಕೆಡವಿಕೊಂಡು ಇಂಜಕ್ಷನ್ ಮಾಡುವುದು ಪಟ್ಟಿ ಕಟ್ಟುವುದು ಇನ್ನೂ ಏನೇನೋ ಮಾಡುವುದನ್ನು ನೋಡಿ ನನಗೆ ಎಷ್ಟು ಸಿಟ್ಟು ಬಂತು ಎಂದರೆ ನಾನೇ ಒಂದು ಬಂದೂಕನ್ನು ತೆಗೆದುಕೊಂಡು ರೀಸರ್ಚ್ ಮಾಡುವವರನ್ನು ಸೂಟ್ ಮಾಡಿಬಿಡಬೇಕೆಂದು ಅನಿಸಿತು. ಆದರೆ ನಾನು ಆ ಕೆಲಸವನ್ನು ಮಾಡಲಿಕ್ಕೆ ಹೋಗಲಿಲ್ಲ. ಕಾಡಿನಲ್ಲಿ ಕ್ರೂರ ಪ್ರಾಣಿಗಳು ಏನಿವೆ ಅವು ಸ್ವೇಚ್ಛೆಯಾಗಿರಬೇಕು ಇಲ್ಲದಿದ್ದರೆ ಅವು ಸರ್ಕಸ್ ಪ್ರಾಣಿಗಳಾಗುತ್ತವೆ. ಅವುಗಳನ್ನು ಹಿಡಿದು ಪಟ್ಟಿ ಹಾಕಿದರೆ ಅವು ಸರ್ಕಸ್ ಪ್ರಾಣಿಗಳಾಗುತ್ತವೆ. ಅವು ಕ್ರೂರ ಪ್ರಾಣಿಗಳಾಗಿಯೇ ಇರಬೇಕು. ಅವುಗಳ ಸೌಂದರ್ಯ ಅವುಗಳು ಇರತಕ್ಕ ಬೀಡು ಇತ್ಯಾದಿಗಳನ್ನು ನಾವೆಲ್ಲರೂ ನೋಡಿ ಸಂತೋಷ ಪಡಬೇಕು. ಆನಂದ ಪಡಬೇಕು.

ಈ ದೃಷ್ಟಿಯಿಂದಲೇ ಇನ್ನು ಮೇಲೆ ಪ್ರಾಣಿಗಳ ಪ್ರಾಣದ ಮೇಲೆ ಏನೇನು ಪ್ರಯೋಗಗಳನ್ನು ಮಾಡಲಿಕ್ಕೆ ನಮ್ಮ ಇಂಡಿಯಾ ದೇಶದಲ್ಲಿ ಬಹಳಷ್ಟು ಪ್ರಚಾರ ನಡೆಯುತ್ತಿದೆ ಅದಕ್ಕೆ ನಾನು ಮಣಿಯುವುದಿಲ್ಲ. ನಮ್ಮ ಸರ್ಕಾರ ಮಣಿಯುವುದಿಲ್ಲ. ಕಾಡು ಪ್ರದೇಶದಲ್ಲಿ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಿ ಅವಕ್ಕೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಸುಮಾರು ೨೪ ಕೋಟಿ ರೂಪಾಯಿಗಳನ್ನು ನಾವು ಈ ಬಾಬಿಗೋಸ್ಕರ ಖರ್ಚು ಮಾಡುತ್ತಿದ್ದೇವೆ. ಆದರೆ ಈ ಹಣ ಎಲ್ಲಿ ಹೋಗುತ್ತದೆಂದು ಗೊತ್ತಾಗುತ್ತಿಲ್ಲ. ಇದನ್ನು ಯಾರು ತಿನ್ನುತ್ತಾರೋ ಗೊತ್ತಿಲ್ಲ. ಆದರೆ ಎಲ್ಲೋ ಹೋಗುತ್ತದೆಂದು ನಾನು ಸುಮ್ಮನೆ ಬಿಡುವುದಿಲ್ಲ ಇದು ಎಲ್ಲಿ ಹೋಗುತ್ತದೆಂದು ವಿಚಾರ ಮಾಡುತ್ತೇನೆ. ನಮ್ಮ ಅಧಿಕಾರಿಗಳೇ ತಿನ್ನುತ್ತಾರೆಂದು ನಿರ್ಧಾರಕ್ಕೆ ನಾನು ಬರುವುದಿಲ್ಲ. ನಾವು ಹಣವನ್ನು ಹೆಚ್ಚು ಹೆಚ್ಚು ಖರ್ಚು ಮಾಡಿ ಇಂಥ ಪ್ರಾಣಿಗಳನ್ನು ಹೆಚ್ಚು ಹೆಚ್ಚು ವೃದ್ಧಿಪಡಿಸಿ ನಮ್ಮ ಕಣ್ಣಿಗೆ ಸಂತೋಷವಾಗುವಂಥ ಮನೋಹರವಾದ ದೃಶ್ಯ ನಮಗೆ ಸಿಕ್ಕುವಂಥ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಪ್ರಾಣಿ ಸಂಗ್ರಹಾಲಯ (ಜೂ) ವನ್ನು ಮಾಡಬೇಕಾಗಿದೆ. ಮಾನ್ಯ ಸಚಿವರಾದ ಕೆ.ಹೆಚ್. ಪಾಟೀಲರು ಹಿಂದೆ ಅರಣ್ಯ ಖಾತೆಯ ಮಂತ್ರಿಗಳಾಗಿದ್ದಾಗ ಈ ಒಂದು ವ್ಯವಸ್ಥೆಯನ್ನು ಮಾಡಿದ್ದರು. ವನ್ಯ ಪ್ರಾಣಿಗಳನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತಿಯೊಂದು ತಾಲೂಕಿನಲ್ಲೂ ಇಟ್ಟು ಸಾಕುವಂತಹ ವ್ಯವಸ್ಥೆಯನ್ನು ಮಾಡಿದ್ದರು. ಅವರು ಏನು ಮಾಡಿದ್ದಾರೆ ಅದನ್ನೇ ನಾನೂ ಕೂಡ ಮುಂದುವರಿಸಿಕೊಂಡು ಹೋಗುತ್ತೇನೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಮಾಡಿದ್ದನ್ನು ಮುಂದುವರಿಸಿಕೊಂಡು ಹೋಗುತ್ತೇನೆಂದು ಮಾನ್ಯ ಬಸವಲಿಂಗಪ್ಪನವರು ಇದೊಂದನ್ನೇ ಹೇಳುತ್ತಿರುವುದು ಎಂದು ಮಾನ್ಯ ಕೆ.ಹೆಚ್. ಪಾಟೀಲರು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಮಾನ್ಯ ಪಾಟೀಲರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಕಾರಣ ಯಾವುದೇ ಒಂದು ತಾಲೂಕಿನಲ್ಲಾಗಲಿ ಜಿಲ್ಲೆಯಲ್ಲಾಗಲಿ ಶಾಲೆಗಳಿಗೆ ಹೋಗಿ ಹುಲಿ ಎಂದರೇನು ಎಂದು ಕೇಳಿದರೆ ಅವು ಚಿತ್ರವನ್ನು ನೋಡುತ್ತವೆ. ನಿಜವಾಗಿ ಹೇಳುವುದಾದರೆ ಹುಲಿ ಮುಂತಾದ ಪ್ರಾಣಿಗಳನ್ನು ಕಣ್ಣಾರೆ ನೋಡುವುದಕ್ಕೆ ಆ ಮಕ್ಕಳಿಗೆ ಅವಕಾಶವೇ ಇರುವುದಿಲ್ಲ. ಆದ್ದರಿಂದ ನಾವು ಇಂಥ ಒಂದು ವ್ಯವಸ್ಥೆಯನ್ನು ಮಾಡತಕ್ಕದ್ದು ಒಳ್ಳೆಯದೆಂದು ತೀರ್ಮಾನ ಮಾಡಿದ್ದೇವೆ. ಅರಣ್ಯ ಪ್ರದೇಶಗಳಲ್ಲಿ ಸುಮಾರು ೭೪೨ ವಾಹನಗಳು ಅಂದರೆ ಲಾರಿಗಳು ಕಾರುಗಳು ಜೀಪು ಬಸ್ಸುಗಳು ಆಟೋರಿಕ್ಷಾಗಳನ್ನು ಹಿಡಿದಿದ್ದೇವೆ. ಈಗ ಇವು ನಮ್ಮ ವಶದಲ್ಲಿವೆ. ಇವೆಲ್ಲವೂ ಕೂಡ ಸ್ಮಗ್ಲಿಂಗ್ ಮಾಡುವಾಗ ವಶಪಡಿಸಿಕೊಂಡವುಗಳು ಇವೆಲ್ಲಾ ಹಾಗೆಯೇ ಬಿದ್ದಿವೆ. ಇವುಗಳನ್ನು ಹರಾಜುಮಾಡಿ ಆದಷ್ಟು ಬೇಗ ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಅರಣ್ಯ ಪ್ರದೇಶದಲ್ಲಿ ಅಪರಾಧಗಳು ಬಹಳಷ್ಟಿವೆ. ಅಂದರೆ ಸುಮಾರು ೧೪,೫೦೦ ಅಪರಾಧಗಳಾಗಿವೆ. ಅರಣ್ಯ ಪ್ರದೇಶದಲ್ಲಿ ಇಂಥ ಅಪರಾಧಗಳನ್ನು ತಡೆಯಬೇಕೆಂದು ಬಹಳಷ್ಟು ಕ್ರಮ ಕೈಗೊಂಡಿದ್ದೇವೆ. ಆದರೂ ಕೂಡ ಅಲ್ಲೊಂದು ಇಲ್ಲೊಂದು ನಡೆಯುತ್ತಲೇ ಇರುತ್ತವೆ. ಈಗ ಅರಣ್ಯದಲ್ಲಿ ಫಾರೆಸ್ಟ್ ಆಫೀಸರ್ ರೇಂಜ್ ಆಫೀಸರ್ ಡಿಸ್ಟ್ರಿಕ್ಟ್‌ನಲ್ಲಿ ಡಿವಿಜನಲ್ ಫಾರೆಸ್ಟ್ ಆಫೀಸರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಹುದ್ದೆಗಳನ್ನೆಲ್ಲಾ ರೀ ಆರ್ಗನೈಸ್ ಮಾಡಿ ಇವರಿಗೇ ಅಕೌಂಟಬಿಲಿಟಿ ಮತ್ತು ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡದಿದ್ದರೆ ಸ್ಮಗ್ಲಿಂಗ್ ಆಕ್ಟಿವಿಟೀಸನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಇಂಥ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ನಮ್ಮಲ್ಲಿ ನಾಲ್ಕು ಕಾರ್ಪೊರೇಷನ್‌ಗಳು ಇವೆ. ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕ್ಯಾಶಿಯೋ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗಳ ಬಗ್ಗೆ ನಾನು ಹೇಳುವುದಕ್ಕೆ ಹೋದರೆ ಬಹಳ ಹೆಚ್ಚು ಸಮಯ ತೆಗೆದುಕೊಳ್ಳಬೇಕಾಗುತ್ತದೆ. ಆದಕ್ಕಾಗಿ ಒಂದೆರಡು ವಿಚಾರಗಳನ್ನು ಅನೌನ್ಸ್ ಮಾಡಿಬಿಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ. ಈ ರಾಜ್ಯದಲ್ಲಿ ೨-೩ ವರ್ಷಗಳವರೆಗೆ ಮರ ಕಡಿಯುವುದಕ್ಕೆ ಅನುಮತಿ ಕೊಡಬಾರದೆಂದು ಹಿಂದಿನ ಸರ್ಕಾರದವರು ತೀರ್ಮಾನ ಮಾಡಿದ್ದರು. ಅದನ್ನು ಹೆಚ್ಚಿನ ರೀತಿಯಲ್ಲಿ ನಾವು ಪರಿಣಾಮಕಾರಿಯಾಗಿ ನಿರ್ಬಂಧ

ಮಾಡುತ್ತೇವೆಂದು ಹೇಳುತ್ತೇನೆ. ಮತ್ತೆ ಮೈನಿಂಗ್ ಆಪರೇಷನ್ ಬಗ್ಗೆಯೂ ಹೇಳಬೇಕಾಗಿದೆ. ಫಾರೆಸ್ಟ್ ಕನಸರ್ವೇಷನ್ ಆಕ್ಟ್ ಪ್ರಕಾರ ಕೇಂದ್ರ ಸರ್ಕಾರದವರು ಅವರಿಗೆ ಪರವಾನಿಗೆಯನ್ನು ಕೊಡದ ಹೊರತು ಅವರಿಗೆ ಆಪರೇಷನ್ ಮಾಡುವುದಕ್ಕೆ ನಾವು ಬಿಡುವುದಕ್ಕಾಗುವುದಿಲ್ಲ. ಆದ್ದರಿಂದ ಯಾರು ಮೈನಿಂಗ್ ಮಾಡುತ್ತಾರೆ ಅವರು ಯಾರಿಗೆ ಅರ್ಜಿಯನ್ನು ಕೊಡಬೇಕೆನ್ನುವ ಪ್ರಶ್ನೆ ಬರುತ್ತದೆ. ಅದರ ಪ್ರಕಾರ ಪ್ರೈಯರ್ ರೆಕಮೆಂಡೇಷನ್ ಅಂದರೆ, ಅಲ್ಲಿಯೇ ಅರ್ಜಿಯನ್ನು ಕೊಟ್ಟುಬಿಟ್ಟು ನಮ್ಮ ಶಿಫಾರಸ್ಸಿಗೋಸ್ಕರ ಕಳುಹಿಸಿದರೆ ಸರಿಹೋಗುತ್ತದೆಂದು ಕಾಣಿಸುತ್ತದೆ. ಇದನ್ನು ನಿರ್ಬಂಧ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ. ಈಗ ನ್ಯಾಚುರಲ್ ಪ್ಲಾಂಟೇಷನ್ ಅನ್ನು ಬುಲ್‌ಡೋಜರ್ ಮೂಲಕ ನಾಶ ಮಾಡಿ ಆ ಜಾಗದಲ್ಲಿ ಬೇರೆ ಮರಗಳನ್ನು ಬೆಳಸುತ್ತೇವೆಂದು ಹೇಳುವುದು ಸರಿಯಲ್ಲ ಎಂದು ನನ್ನ ಭಾವನೆ ಏಕೆಂದರೆ...

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಮಲೆನಾಡಿನ ಪ್ರದೇಶಗಳಲ್ಲಿ ಕೆಲವು ಕಾರ್ಖಾನೆಗಳಿವೆ. ಮರಗಳನ್ನು ಸಂಪೂರ್ಣವಾಗಿ ಕಡಿಯುವುದನ್ನು ನಿಲ್ಲಿಸಿದರೆ ಈ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಜನರು ಬೀದಿಪಾಲಾಗುತ್ತಾರೆ. ಅವರ ಉದ್ಯೋಗದೃಷ್ಟಿಯಿಂದ ಸ್ವಲ್ಪಪ್ರಮಾಣದ ಮರಗಳನ್ನು ಕೊಟ್ಟು ಆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಜನರ ಉದ್ಯೋಗವನ್ನು ಉಳಿಸಿಕೊಳ್ಳುವುದಕ್ಕೆ ಮಾನ್ಯ ಸಚಿವರು ಆಲೋಚನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:- ಅದಕ್ಕೆ ಯೋಚನೆ ಮಾಡುತ್ತೇವೆ. ಯಾವ ರೀತಿ ಅವರಿಗೆ ಪರವಾನಿಗೆಯನ್ನು ಕೊಡಬೇಕು ಎನ್ನುವ ಬಗ್ಗೆ ಟ್ರಿ ಪ್ರೊಟೆಕ್ಷನ್ ಆಕ್ಟ್ ಇದೆಯಲ್ಲ ಆ ಆಕ್ಟ್ ಪ್ರಕಾರ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ೫೦೦ ಜನರು ಕೆಲಸ ಮಾಡತಕ್ಕಂಥ ಪ್ಲೈವುಡ್ ಫ್ಯಾಕ್ಟರಿಗಳಿಗೆ ಏನಾದರೂ ಪರಿಹಾರ ಬೇಡವೇ ಸಂಪೂರ್ಣವಾಗಿ ಮರ ಕಡಿಯುವುದನ್ನು ಹಿಂದೆಯೇ ನಿಲ್ಲಿಸಿದ್ದಾರೆ. ಇದರಿಂದ ಅಲ್ಲಿರತಕ್ಕಂಥ ಜನರ ಪರಿಸ್ಥಿತಿ ಏನಾಗಬೇಕು ಹೇಳಿ. ಇಲ್ಲವೇ ಈ ಎಲ್ಲ ಕಾರ್ಖಾನೆಗಳನ್ನು ಮುಚ್ಚಿ ಬಿಟ್ಟು ಅವರನ್ನು ಬೇರೆ ಕಡೆಗೆ ಕಳುಹಿಸುತ್ತೇವೆಂದು ತೀರ್ಮಾನ ಮಾಡಿ. ಇಲ್ಲವೇ ಕೆಲವು ಭಾಗದ ಮರಗಳನ್ನು ಕೊಟ್ಟು ಆ ಉದ್ಯೋಗವನ್ನು ಉಳಿಸಿಕೊಂಡು ಹೋಗತಕ್ಕಂಥದ್ದರ ಬಗ್ಗೆ ತೀರ್ಮಾನ ಮಾಡಿರಿ. ಏನು ಮಾಡದೆ ಹಾಗೆ ಉಳಿಸಿಕೊಂಡು ಹೋದರೆ ಅವರು ಬೀದಿಯಲ್ಲಿ ಹೋಗಿ ಏನು ಊಟ ಮಾಡಬೇಕು. ೨೫-೩೦ ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ ಅವರನ್ನು ಬೀದಿ ಪಾಲಾಗಿ ಮಾಡುತ್ತೀರಾ ೩೫-೪೦ ವರ್ಷದಿಂದ ಅವರು ಕಾರ್ಖಾನೆಯನ್ನು ನಡೆಸುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಸರ್ಕಾರ ಯಾವುದಾದರೂ ಒಂದು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ. ಬಿ.ಎಸ್. ಯಡಿಯೂರಪ್ಪ:- ಮಂಗಳೂರು ಜಿಲ್ಲೆಯಲ್ಲಿ ಸಹ 3 ಸಾವಿರ ಪ್ಲೈವುಡ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಬೀದಿಪಾಲಾಗುವುದನ್ನು ತಪ್ಪಿಸಲು ಈ ಕಾರ್ಖಾನೆಗಳಿಗೆ ರಿಯಾಯಿತಿ ತೋರಿಸಿದರೆ ಅಲ್ಲಿನ ಕಾರ್ಮಿಕರಿಗೆ ಅನುಕೂಲ ಆಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಸದಸ್ಯರು ಹೇಳಿದಹಾಗೆ ಪ್ಲೈವುಡ್ ಕಾರ್ಖಾನೆಯನ್ನು ಮುಂದುವರಿಸುವ ಬಗ್ಗೆ ಯೋಚನೆ ಮಾಡುತ್ತೇನೆ. ನಾವು ನೀವು ಕುಳಿತು ಈ ಬಗ್ಗೆ ಮಾತ ನಾಡೋಣ. ಈ ಪ್ಲೈವುಡ್ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಯಥೇಚ್ಛವಾಗಿ ಕಾಡಿದ್ದ ಕಾಲದಲ್ಲಿ ಪ್ರಾರಂಭವಾದವು. ಈಗ ಕಾಡೆಲ್ಲ ಬಯಲಾಗಿರುವ ಪರಿಸ್ಥಿಯಲ್ಲಿ ಪ್ಲೈವುಡ್ ಫ್ಯಾಕ್ಟರಿಗೆ ಮರಗಳನ್ನು ಕೊಡಬೇಕೇ ಬಿಡಬೇಕೇ ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಈ ವುಡ್ ಬೇಸ್ಡ್ ಇಂಡಸ್ಟ್ರೀಸ್‌ಗಳನ್ನು ಇಟ್ಟುಕೊಳ್ಳಬೇಕೇ ಬೇಡವೆ ಎನ್ನುವ ಪ್ರಶ್ನೆಯೂ ಸಹ ಬರುತ್ತದೆ. ಅದಕ್ಕೋಸ್ಕರವಾಗಿ ಕಾಡನ್ನು ಹಾಳುಮಾಡಿ ಯಾವ ಫ್ಯಾಕ್ಟರಿಯನ್ನು ಉದ್ಧಾರ ಮಾಡುವುದಕ್ಕೆ ನಾವು ಹೋಗುವುದಿಲ್ಲ,

ಶ್ರೀ ಕಾಗೋಡು ತಿಮ್ಮಪ್ಪ:- ಈಗ ನಮ್ಮಲ್ಲಿ ತೊಂದರೆ ಇದೆ. ೪೦೦ - ೫೦೦ ಜನರು ಕೆಲಸ ಮಾಡುತ್ತಿದ್ದಾರೆ. ಒಂದು ವರ್ಷದಿಂದ ಲಾಕೌಟ್ ಆಗಿ ವ್ಯಾಜ್ಯ ನಡೆಯುತ್ತಿದೆ. ಅವರು ಕಾರ್ಖಾನೆ ಮುಚ್ಚಲು ಅನುಮತಿ ಕೇಳುತ್ತಿದ್ದಾರೆ. ಅದಕ್ಕಾದರೂ ಒಪ್ಪಿಗೆ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೇ ಅವರ ಸಲಹೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.ಇದನ್ನು ಈ ಸದನಕ್ಕೆ ಏಕೆ ಪ್ರಶ್ನೆ ಹಾಕುತ್ತಿದ್ದೇನೆಂದರೆ ಇದು ಯಥೇಚ್ಛವಾಗಿ ಕಾಡು ಕಡಿದಾಗ ತೀರ್ಮಾನ ತೆಗೆದುಕೊಂಡದ್ದು. ಈಗ ಕಾಡೆಲ್ಲಾ ಬಯಲಾದಾಗ ಕಾರ್ಖಾನೆಗಳನ್ನು ಮುಂದುವರಿಸಿಕೊಂಡು ಹೋಗಬೇಕೇ ಬಿಡಬೇಕೇ ಎಂದು ಕೇಳುತ್ತೇನೆ. ಮಾನ್ಯ ಬನ್ನಿಕೋಡು ಬಸಪ್ಪನವರು ಇದಕ್ಕೋಸ್ಕರ ಸತ್ಯಾಗ್ರಹ ಮಾಡುತ್ತಿದ್ದಾರೆ. ಆದ್ದರಿಂದ ಎಲ್ಲವನ್ನೂ ಗಮನಿಸಬೇಕಾಗುತ್ತದೆ. ನಾನು ಈಗ ಬಹಳ ಹೊತ್ತು ಸಮಯ ತೆಗೆದುಕೊಂಡಿದ್ದೇನೆ. ಇದಕ್ಕೆ ಕಾರಣ ಸಿಂಧ್ಯರವರು ಮತ್ತು ವಾಟಾಳ್ ನಾಗರಾಜ ಅವರು ಮಧ್ಯೆ ಪ್ರವೇಶ ಮಾಡಿ ಜಾಸ್ತಿ ಮಾತನಾಡುವ ಹಾಗೆ ಮಾಡಿದ್ದಾರೆ. ನನ್ನ ಉತ್ತರ ಮಾನ್ಯ ಸದಸ್ಯರಿಗೆ ಮನವರಿಕೆ ಆಗಿರಬೇಕೆಂದು ಹೇಳಿ ಹೆಚ್ಚು ಹೆಚ್ಚು ಸಲಹೆಗಳನ್ನು ನೇರವಾಗಿ ಬಂದು ಕೊಡಿ ಅಥವಾ ಕಾಗದ ಬರೆಯಿರಿ. ಅದರ ಪ್ರಕಾರ ಕಾಡನ್ನು ಉದ್ಧಾರ ಮಾಡುವುದಕ್ಕೆ ಏನೇನು ಬೇಕೋ ಅದೆಲ್ಲ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಡಾ. ಎನ್.ಬಿ. ನಂಜಪ್ಪ:- ನನ್ನ ಕ್ಷೇತ್ರದಲ್ಲಿ ಎಲ್ಲೆಲ್ಲಿ ಸೋಷಿಯಲ್ ಫಾರೆಸ್ಟ್ರಿ ಮಾಡಿದ್ದೇವೆಂದು ಹೇಳಿದ್ದಾರೆ ಆ ಜಾಗಗಳಿಗೆ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ನೋಡಿದ ಸಂದರ್ಭದಲ್ಲಿ ಅಲ್ಲಿ ಹಣ ಖರ್ಚು ಮಾಡಿದ್ದಾರೆಯೇ ಹೊರತು ಸೋಷಿಯಲ್ ಫಾರೆಸ್ಟ್ರಿಯನ್ನು ಮಾಡಿಲ್ಲ. ಅಲ್ಲಿ ಜಿಲ್ಲಾ ಪರಿಷತ್ತಿನ ವತಿಯಿಂದ ವ್ಯಾಪಕವಾಗಿ ಮೋಸ ನಡೆದಿರುವುದರಿಂದ ಮಂತ್ರಿಗಳು ತಕ್ಷಣ ಸೋಷಿಯಲ್ ಫಾರೆಸ್ಟ್ರಿ ಕೆಲಸವನ್ನು ಅರಣ್ಯ ಇಲಾಖೆಗೆ ವಾಪಸ್ ತೆಗೆದುಕೊಂಡು ನಿಜವಾಗಿ ಎಷ್ಟು ಕೆಲಸ ನಡೆಯುತ್ತಿದೆ ನಿಜವಾಗಿ ಎಷ್ಟು ಹಣ ವಿನಿಯೋಗವಾಗುತ್ತಿದೆ ಎಂಬುದರ ಕಡೆ ಗಮನ ಹರಿಸಬೇಕೆಂದು ಹೇಳುತ್ತೇನೆ. ಹಿಂದೆ ಹಳೇ ಮೈಸೂರು ವಿಭಾಗದಲ್ಲಿ ಸೊಪ್ಪಿನಮಡಿ ಮತ್ತು ಗುಂಡುತೋಪು ಎಂದು ಪ್ರತಿ ಊರಿನಲ್ಲಿ ಇತ್ತು ಇದೆಲ್ಲಾ ಈಗಲೂ ಸರ್ಕಾರದ ವತಿಯಲ್ಲಿ ಅದನ್ನು ಜನರು ಸಾಕಷ್ಟು ಒತ್ತುವರಿ ಮಾಡಿದ್ದಾರೆ. ಅಲ್ಲಿರತಕ್ಕ ಮರಗಳನ್ನು ಕಡಿದು ಮಂಡಲ ಪಂಚಾಯ್ತಿಯವರು ಮತ್ತು ಜಿಲ್ಲಾಪರಿಷತ್ತಿನವರು ಹರಾಜು ಮಾಡಿ ದುರುಪಯೋಗ ಮಾಡಿಕೊಳ್ಳುತ್ತಿರತಕ್ಕದ್ದು ಕಂಡು ಬಂದಿದೆ. ಆದ್ದರಿಂದ ದಯವಿಟ್ಟು ಗುಂಡುತೋಪು ಇರುವ ಕಡೆ ಅಲ್ಲಿ ಹುಣಸೆ ಮರ ಮತ್ತು ಮಾವಿನ ಮರಗಳನ್ನು ನೆಡಿಸಿ ಹಿಂದೆ ಇದ್ದ ಹಾಗೆ ವ್ಯಾಪಕವಾಗಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಬೆಳೆಸಿದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ. ಈ ಸೊಪ್ಪಿನಮಡಿ ಮತ್ತು ಗುಂಡುತೋಪಿನ ಬಗ್ಗೆ ಹಿಂದೆ ಕೂಡ ಹೇಳಿದ್ದೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಗೋಪಿನಾಥ್ ಆರ್. ಸಾಂದ್ರಾ:- ಮಾನ್ಯ ಅಧ್ಯಕ್ಷರೇ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ ಕೋಳಿ ಫಾರಂ ಷೀಪ್ ಬ್ರೀಡಿಂಗ್ ಮಾಡಲು ಬಹಳ ಅನುಕೂಲವಾದ ವಾತಾವರಣ ಇದೆ ಒಳ್ಳೆಯ ಪರಿಸರ ಇದೆ. ಆದರೂ ಈ ದಿಸೆಯಲ್ಲಿ ಅದರ ಪ್ರಗತಿ ಸಾಕಷ್ಟು ಆಗಿಲ್ಲ. ಅದರ ಪ್ರಗತಿ ಮಾಡಬೇಕು. ಅಲ್ಲಿರತಕ್ಕ ಜನರಿಗೆ ಬಡರೈತರು ಹೆಣ್ಣು ಮಕ್ಕಳು ಎಂದು ಏನು ಹೇಳಿದರು ಅವರಿಗೆ ಅನುಕೂಲ ಮಾಡಿಕೊಡತಕ್ಕ ಯೋಜನೆಯನ್ನು ಈ ವರ್ಷ ಜಾರಿಗೆ ತರುತ್ತೀರಾ ಆ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಾದರೆ ಧಾರವಾಡ ಜಿಲ್ಲೆಯ ಎಲ್ಲಾ ಕಡೆ ಈ ಪ್ರಚಾರ ಕಾರ್ಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಜಿಲ್ಲಾ ಪರಿಷತ್ತಿಗೆ ಸೋಷಿಯಲ್ ಫಾರೆಸ್ಟ್ರಿಯನ್ ಕೊಟ್ಟಿದ್ದಾರೆ ಅದನ್ನು ಕಾಯಿದೆ ಪ್ರಕಾರ ಅವರಿಗೆ ಕೊಡುವುದಕ್ಕೆ ಬರುವುದಿಲ್ಲ ಅನ್ನುವುದು ಮನವರಿಕೆಯಾಗಿದ್ದರೂ ಮಂತ್ರಿಗಳು ಅದನ್ನು ಮುಂದುವರಿಸುತ್ತಿದ್ದಾರೆ. ಅದು ದುರುಪಯೋಗವಾಗುತ್ತಿದೆ. ಆದುದರಿಂದ ಸರ್ಕಾರದವರೇ ಆ ಕೆಲಸ ಮಾಡಬೇಕೆಂದು ನನ್ನ ವಿನಂತಿ. ಇನ್ನು ಮಿಲ್ಕ್ ಡೈರಿಗಳನ್ನು ಕೋ ಆಪರೇಟಿವ್ ಸೊಸೈಟಿಗಳಿಗೆ ಕೊಡಬೇಕು. ಅವರ ಮೂಲಕ ಹಾಲು ತೆಗೆದುಕೊಳ್ಳತಕ್ಕ ವ್ಯವಸ್ಥೆ ಆಗಬೇಕೆಂಬ ಧೋರಣೆಯನ್ನು ಮಾನ್ಯ ಮಂತ್ರಿಗಳು ಇಟ್ಟುಕೊಂಡಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಕೆಲವರು ಸೇರಿ ಸಂಘಗಳನ್ನು ಮಾಡಿಕೊಂಡರೆ ಅವುಗಳನ್ನು ಸರ್ಕಾರ ರೆಕಗ್ನೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಬಸವಲಿಂಗಪ್ಪನವರು ಉತ್ತರವನ್ನು ಕೊಡುವಾಗ ದೀರ್ಘವಾದ ಉತ್ತರವನ್ನು ಕೊಡಲಿಕ್ಕೆ ನಾನು ಮತ್ತು ಮಾನ್ಯ ವಾಟಾಳ್ ನಾಗರಾಜ್

ಅವರು ಕಾರಣ ಎಂದು ಹೇಳಿದ್ದಾರೆ. ಅವರು ಬದುಕಿರತಕ್ಕದ್ದೇ ಕಾಂಟ್ರವರ್ಸಿಯಲ್ಲಿ. He takes pleasure in making controversies. ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ ಒಂದು ವಾರದ ಹಿಂದೆ ಇವರು ಮಾತನಾಡತಕ್ಕ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಗಂಧದ ಸಾಗಾಣಿಕೆ ಮಾಡತಕ್ಕ ಕೆಲವು ಕುಟುಂಬದ ವ್ಯಕ್ತಿಗಳಿದ್ದಾರೆ; 9 ಕುಟುಂಬಗಳಿವೆ ಅವರ ಹೆಸರುಗಳನ್ನು ಉತ್ತರ ಕೊಡುವ ಸಮಯದಲ್ಲಿ ಹೇಳುತ್ತೇನೆ ಎಂದು ಹೇಳಿದ್ದರು. ಆದರೆ ಈಗ ಉತ್ತರದಲ್ಲಿ ಹೇಳಲಿಲ್ಲ. He himself said it. ಆದ್ದರಿಂದ ಆ 9 ಕುಟುಂಬಗಳ ಹೆಸರುಗಳನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈ ವರ್ಷ 186 ಪಶುಸಂಗೋಪನಾ ಆಸ್ಪತ್ರೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಆದಕ್ಕೆ ಈ ವರ್ಷದ ಬಜೆಟ್‌ನಲ್ಲಿ ಹಣ ಇದೆಯೋ ಅಥವಾ ಮುಂದಿನ ವರ್ಷ ಪ್ರಾರಂಭಮಾಡುವುದನ್ನು ಈಗಲೇ ಅವರು ಹೇಳಿದ್ದಾರಾ ಈ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿದಮೇಲೆ ಆದಕ್ಕೆ ಬೇಕಾಗಿರತಕ್ಕ ಸ್ಟಾಫ್ ತಮ್ಮ ಹತ್ತಿರ ಇದೆಯೋ ಎಂಬುದನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ ಮೂರು ಪ್ರಮುಖವಾದ ಪ್ರಶ್ನೆಗಳನ್ನು ನಾನು ಕೇಳುತ್ತೇನೆ. ಮೊದಲನೆಯದು ಈ ಪಶುಸಂಗೋಪನಾ ಇಲಾಖೆಯಲ್ಲಿ ಈ ಹಿಂದೆ ಅನೇಕ ಹುದ್ದೆಗಳು ಖಾಲಿ ಇದ್ದವು. ಉದಾಹರಣೆಗೆ ಪಶು ಪರೀಕ್ಷಕರ ಹುದ್ದೆಗಳು ಖಾಲಿ ಇದ್ದವು. ಅದಕ್ಕೆ ಸಂದರ್ಶನ ನಡೆದು ಆಯ್ಕೆ ಪಟ್ಟಿಯನ್ನೂ ಅನೌನ್ಸ್ ಮಾಡಿ ಅನೇಕ ತಿಂಗಳುಗಳಾದವು. ಈಗ ಆ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಈಗಾಗಲೇ ಆಯ್ಕೆಯಾಗಿರುವ ಯುವಕರನ್ನು ಹೊಸದಾಗಿ ನೇಮಕಾತಿ ಮಾಡುವ ಸಂದರ್ಭದಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡುತ್ತೀರಾ ಎರಡನೆಯದು ಶ್ರೀಗಂಧ ಕಳ್ಳಸಾಗಾಣಿಕೆಯನ್ನು ಒಂದು ತಿಂಗಳೊಳಗೆ ತಡೆಯುವಂಥ ಎಲ್ಲ ಕಾರ್ಯಕ್ರಮಗಳನ್ನೂ ರೂಪಿಸುತ್ತೇವೆಂದು ಹೇಳಿದ್ದೀರಿ. ಅದು "ಒಂದು ವಾರದಲ್ಲಿ ವೀರಪ್ಪನ್‌ನನ್ನು ಹಿಡಿದಂತೆ" ಆಗಬಾರದು. ಅದಕ್ಕಾಗಿ ಅಧಿಕಾರಿಗಳಿಗೆ ಹೊಸದಾಗಿ ಸ್ಪಷ್ಟವಾದ ಮಾರ್ಗದರ್ಶನವನ್ನು ಕೊಟ್ಟಿದ್ದೀರಾ ಮಾರ್ಗದರ್ಶನವನ್ನು ಏನು ರೂಪಿಸಿದ್ದೀರಿ ಮೂರನೆಯದು ತಮಗೆಲ್ಲಾ ಗೊತ್ತಿರುವ ಹಾಗೆ ವಿಶೇಷವಾಗಿ ಗ್ರಾಮೀಣ ರೈತರಿಗೆ ನಗರ ಪ್ರದೇಶಗಳಲ್ಲಿ ವಾಸ ಮಾಡುವ ಜನರಿಗೆ ಉರುವಲುಕಟ್ಟಿಗೆ ಸರ್ಕಾರಿ ಡಿಪೋಗಳಲ್ಲಿ ಸರಿಯಾಗಿ ಸಿಗುತ್ತಿಲ್ಲ. ಆದಕ್ಕೆ ಏನು ಸೂಕ್ತವಾದ ವ್ಯವಸ್ಥೆ ಮಾಡಿದ್ದೀರಿ ಸತ್ತವರನ್ನು ಸುಡುವುದಕ್ಕೂ ಕೂಡ ಸಹ ಕಟ್ಟಿಗೆ ಸಿಗದಂಥ ವಿಚಿತ್ರವಾದ ವಾತಾವರಣ ಇದೆ.ಆದ್ದರಿಂದ ಹೆಚ್ಚು ಉರುವಲುಕಟ್ಟಿಗೆಗಳನ್ನು ಬೆಳೆಸಿ ಬಡವರು ಯಾರು ಅಡಿಗೆಗೆ ಉಪಯೋಗಿಸುತ್ತಿದ್ದಾರೆ. ಅವರಿಗೆ ಉರುವಲುಕಟ್ಟಿಗೆ ಒದಗಿಸುವ ಬಗ್ಗೆ ಏನು ಕಾರ್ಯಕ್ರಮ ರೂಪಿಸಿದ್ದೀರಿ ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜಿ. ರಾಜುಗೌಡ:- ಅಧ್ಯಕ್ಷರೇ....

ಶ್ರೀ ಬಿ. ಬಸವಲಿಂಗಪ್ಪ:- ಜಾಸ್ತಿಯಾಯಿತು. ನಾನು ಉತ್ತರ ಕೊಟ್ಟುಬಿಡುತ್ತೇನೆ.

ಅಧ್ಯಕ್ಷರು:- ಬಸವಲಿಂಗಪ್ಪನವರೇ ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆಗಳಿಗೆ ಒಂದಕ್ಕೊಂದು ಸಾಮ್ಯತೆ ಇರುವುದರಿಂದ ಕನ್‌ಸಾಲಿಡೇಟಾಗಿ ರಿಪ್ಲೈ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಜಿ. ರಾಜುಗೌಡ:- ಮಾನ್ಯ ಅಧ್ಯಕ್ಷರೆ ಗಿರಿಜನರ ಉಪಯೋಜನೆಯಲ್ಲಿ ನನ್ನ ತಾಲ್ಲೂಕಿನಲ್ಲಿ ಲಿಂಗಗುತ್ತರಹಳ್ಳ ಎಂಬಲ್ಲಿ ಒಂದು ಯೋಜನೆ ಮಂಜೂರಾಗಿದೆ. ಆದರೆ ಅದನ್ನು ಮಾಡುವುದಕ್ಕೆ ಅವಕಾಶವಾಗದಂತೆ ಅರಣ್ಯ ಅಧಿಕಾರಿಗಳು ನಿಲ್ಲಿಸಿದ್ದಾರೆ. ದಯವಿಟ್ಟು ಅದನ್ನು ಮಾಡುವುದಕ್ಕೆ ಅವಕಾಶ ಕೊಡಬೇಕು. ತಾವು ಗಿರಿಜನರಿಗೆ ಮರದ ಪಟ್ಟಾವನ್ನು ಕೊಡುತ್ತೇವೆಂದು ಹೇಳಿದ್ದೀರಿ; ಅದನ್ನು ಕೊಟ್ಟರೆ ಉಪಯೋಗವಾಗುವುದಿಲ್ಲ. 40 ವರ್ಷಗಳಿಂದ ಕೆಲವರು ಜಮೀನುಗಳನ್ನು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ. ಆದ್ದರಿಂದ ಅದಕ್ಕೂ ಪಟ್ಟಾ ಕೊಡಬೇಕು. 1978ಕ್ಕಿಂತ ಮುಂಚೆ ಯಾರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೋ ಅವರೆಲ್ಲರಿಗೂ ಸಕ್ರಮಗೊಳಿಸಬೇಕೆಂಬ ನೀತಿ ಸರ್ಕಾರದಲ್ಲಿ ಇರುವುದರಿಂದ ದಯಮಾಡಿ ಸರ್ಕಾರದ ನೀತಿಗನುಗುಣವಾಗಿ ಅವರಿಗೆ ಸಕ್ರಮಗೊಳಿಸಬೇಕು. ಇಂಗ್ಲೇಂಡಿನಲ್ಲಿ ರಾಣಿ ಎಲಿಜಬತ್ ಅವರು ಯಾವುದೋ ಉಪಕರಣ

ಇಟ್ಟುಕೊಂಡು ಅದರಲ್ಲಿ ನೋಡಿ ಆಫ್ರಿಕಾದ ದೂರದ ಕಾಡಿನಲ್ಲಿ ಆನೆಗಳ ಚಲನವಲನಗಳನ್ನು ಪತ್ತೆ ಮಾಡುತ್ತಿದ್ದರು ಆನೆಗಳ ಹಂತಕರನ್ನೂ ಪತ್ತೆ ಮಾಡುತ್ತಿದ್ದರು ಎಂದು ತಿಳಿದಿದ್ದೇನೆ. ಆದ್ದರಿಂದ ದಯಮಾಡಿ ಮಾನ್ಯ ಮಂತ್ರಿಗಳು ಲಂಡನ್‌ಗೆ ಹೋಗಿ ಆ ಉಪಕರಣವನ್ನು ನೋಡಿ ಅದೇ ತರಹ ಉಕಪಕರಣವನ್ನು ವಿಧಾನಸೌಧದಲ್ಲಿ ತಮ್ಮ ಛೇಂಬರ್‌ನಲ್ಲೂ ಹಾಕಿಕೊಂಡು ಆ ಕಾಡಿನಲ್ಲಿರತಕ್ಕ ವೀರಪ್ಪನ್ ಅನ್ನು ಹಿಡಿಯುವುದಕ್ಕಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್:- ವೀರಪ್ಪನ್ ಬಗ್ಗೆ ಈ ಪ್ರಶ್ನೆಗಳನ್ನು ನೋಡಿ ನನಗೆ ದು:ಖವಾಗುತ್ತದೆ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಅನೇಕ ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅವರು ಪ್ರಚೋದನೆ ಆಗುವುದಕ್ಕೆ ನಾವು ಕಾರಣರು ಎಂದು ಹೇಳಿದ್ದಾರೆ. ಅದಕ್ಕೆ ನಾವು ಕಾರಣರಲ್ಲ. ಅವರೇ ಪ್ರಚೋದನೆಯಾಗಿ ನಮ್ಮನ್ನೂ ಪ್ರಚೋದನೆ ಮಾಡಿದರು. ಈ ಮೃಗಾಲಯಗಳನ್ನು ಎಲ್ಲ ಜಿಲ್ಲೆಗಳಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಮೈಸೂರಿನಲ್ಲಿ ಒಂದು ಮೃಗಾಲಯವಿದೆ. ವನ್ಯ ಪ್ರಾಣಿಗಳನ್ನು ಹಿಡಿದು ತಂದು ಜಿಲ್ಲೆಗಳಲ್ಲಿ ಮೃಗಾಲಯ ಮಾಡಿ ಇಟ್ಟರೆ ಅವುಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಂತಾಗುವುದಿಲ್ಲವೇ ವನ್ಯಮೃಗಗಳ ಸ್ವಾತಂತ್ರ್ಯ ಹರಣವಾಗುತ್ತದೆ. ಕೇಂದ್ರ ಸಚಿವೆಯರಾದ ಶ್ರೀಮತಿ ಮೇನಕಾ ಗಾಂಧಿಯವರು ಗಿಳಿ ಸಾಕುವುದೂ ಸರಿಯಲ್ಲ ಎಂದು ಹೇಳುತ್ತಿದ್ದಾರೆ. ಆದರಿಂದ ಪಕ್ಷಿಗಳ ಸ್ವಾತಂತ್ರ್ಯ ಅಪಹರಣ ಮಾಡಿದಂತಾಗುತ್ತದೆಂದು ಹೇಳುತ್ತಿದ್ದಾರೆ. ಆದ್ದರಿಂದ ತಾವು ಅರಣ್ಯದಲ್ಲಿರತಕ್ಕ ವನ್ಯಪ್ರಾಣಿಗಳಿಗೆ ತೊಂದರೆಯಾಗಬಾರದೆಂದು ಒಂದು ಕಡೆ ಹೇಳುತ್ತಿದ್ದೀರಿ. ಇನ್ನೊಂದು ಕಡೆ ಮೃಗಾಲಯಗಳನ್ನು ಮಾಡುತ್ತೇವೆಂದು ಹೇಳುತ್ತೀರಿ. ಇದು ಸರಿಯಲ್ಲ . ಇದನ್ನು ಸ್ಥಾಪನೆ ಮಾಡದೇ ಇರತಕ್ಕ ನೀತಿಯನ್ನು ತಾವು ಇಟ್ಟುಕೊಳ್ಳಬೇಕು. ಮತ್ತು ನಮ್ಮ ರಾಜ್ಯದ ಕಾಡುಗಳಲ್ಲಿ ಎಷ್ಟು ಹುಲಿಗಳು ಈಗ ಇವೆ ಎಂಬ ಅಂಕಿ ಅಂಶಗಳು ಸರ್ಕಾರದ ಕಡೆ ಇದ್ದರೆ ದಯಮಾಡಿ ತಿಳಿಸಬೇಕು.

ಅಧ್ಯಕ್ಷರು:- ಎಷ್ಟು ಹಾವುಗಳು ಇವೆ.

ಶ್ರೀ ವಾಟಾಳ್ ನಾಗರಾಜ್:- ಸಭೆಗೆ ಒಂದು ರೀತಿಯಲ್ಲಿ ಸ್ಪೂರ್ತಿ ತರುತ್ತಿದ್ದೀರಿ. ಬಹಳ ಸಂತೋಷ. ಹುಲಿಗಳ ಸಂಖ್ಯೆ ಬೇಕು. ಈಗಾಗಲೇ ಅವರೇ ಹೇಳಿದ ಹಾಗೆ ಅವುಗಳ ಕತ್ತಿಗೆ ಪಟ್ಟಿಯನ್ನು ಕಟ್ಟಿ ಪ್ರಯೋಗ ನಡೆಸಲಾಗುತ್ತಿದೆ. ಇದನ್ನು ದಯಮಾಡಿ ಹೇಳಬೇಕು. ಇದುವರೆವಿಗೂ ಈ ಸದನದಲ್ಲಿ ಪ್ರತಿವಿತ್ಯ ಆನೆಗಳನ್ನು ಕೊಲ್ಲತಕ್ಕಂತಹದ್ದು ನಡೆಯುತ್ತಿದೆ ಎಲ್ಲ ಕಡೆ ಕೇಳುತ್ತಿದ್ದೇವೆ. ಕನಕಪುರ ಇರಬಹುದು. ಬೆಳ್ತಂಗಡಿ ಚಾಮರಾಜನಗರದ ಭೂದಿ ಪದಗದಲ್ಲಿ 3 ತಿಂಗಳ ಹಿಂದೆ ಆನೆ ;ಸತ್ತು ಬಿದ್ದಿತ್ತು. ಸಮಗ್ರವಾಗಿ ಆನೆ ಕೊಲ್ಲುವುದನ್ನು ನಿಲ್ಲಿಸುವುದಕ್ಕೆ ತಕ್ಷಣವೇ ಕ್ರಮ ತೆಗೆದು ಕೊಳ್ಳುತ್ತೀರಾ ಈಗ ನಿಸರ್ಗ ಸಂಪತ್ತಿನ ನಾಶ ಏನು ಆಗುತ್ತಿದೆ. ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕಾರಣ ಶೇಕಡಾ 50 ಭಾಗಗ್ರಾನೈಟ್ ಕಲ್ಲುಗಳನ್ನು ಅರಣ್ಯ ಪ್ರದೇಶದಲ್ಲಿ ತೆಗೆಯುತ್ತಿದ್ದಾರೆ. ಅದು ನಿಮ್ಮ ವ್ಯಾಪ್ತಿಗೆ ಬರುತ್ತದೆ. ತಕ್ಷಣ ಅದನ್ನು ನಿಲ್ಲಿಸತಕ್ಕ ದಿಸೆಯಲ್ಲಿ ನಿಮ್ಮ ಇಲಾಖೆಯಿಂದ ಕಾನೂನನ್ನು ತಕ್ಷಣವೇ ಮಾಡುತ್ತೀರಾ ದಯಮಾಡಿ ಇದನ್ನು ಹೇಳಬೇಕು.

ಶ್ರೀ ಎನ್.ಜಿ.ನಾಯಕ್:- ನಮ್ಮ ಮಾನ್ಯ ಮಂತ್ರಿಗಳು ಚೆನ್ನಾಗಿ ವಿಷಯವನ್ನು ತಿಳಿಸಿದ್ದಾರೆ. ನಾನು ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ಜಿಲ್ಲಾಪರಿಷತ್ತಿನ ವತಿಯಿಂದ ಸಾಮಾಜಿಕ ಅರಣ್ಯ ಕೆಲಸ ಏನು ನಡೆಯುತ್ತಿದೆ, ಅವರು ಮಾಡಿರುವ ಕೆಲಸ ಸರಿಯಾಗಿಲ್ಲ. ಈಗ ಸಾಲು ಮರಗಳನ್ನು ಹಾಕುತ್ತಿದ್ದಾರೆ. ಆರ್ನಮೆಂಟಲ್ ಪ್ಲಾಂಟ್ಸ್ ಹಾಕುತ್ತಿದ್ದಾರೆ. ಅದರ ಬದಲು ಮಾವು ಹುಣಸೆ ಬೇವು ಇಂತಹವುಗಳನ್ನು ಹಾಕಿದರೆ ಒಳ್ಳೆಯದು. ಮುಂದೆ ಇದರಿಂದ ಸರ್ಕಾರಕ್ಕೂ ಕೂಡ ಅನುಕೂಲ ವಾಗುತ್ತದೆ.

ಅಧ್ಯಕ್ಷರು:- ನೀವು ಇದನ್ನೆಲ್ಲಾ ಕಾಗದ ಬರೆದು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡಿ.

ಶ್ರೀ ಎನ್.ಜಿ. ನಾಯಕ್:- ಸಾಮಾಜಿಕ ಅರಣ್ಯ ಮಾಡುವುದರಲ್ಲಿ ಹಣ ನಷ್ಟವಾಗುತ್ತಿದೆ. ಅದೇ ಹಣವನ್ನು ರೈತರಿಗೆ ನೀವೇ ಬೆಳೆಸಿಕೊಳ್ಳಿ ಅಂತ ಕೊಟ್ಟರೆ ಅವರ ಜಮೀನಿನಲ್ಲಿ ಅವರೇ ಬೆಳೆಸಿಕೊಳ್ಳುತ್ತಾರೆ, ಫಾರಿನ್‌ನಲ್ಲಿ ಈ ರೀತಿ ಮಾಡುತ್ತಿದ್ದಾರೆ. ಇದರಿಂದ ರೈತರಿಗೂ ಅನುಕೂಲ

ವಾಗುತ್ತದೆ. ಇದರಿಂದ ರೈತರಿಗೆ ಬೇಕಾದ ಇಂಪ್ಲಿಮೆಂಟ್ಸ್ ಕೂಡ ಸಿಕ್ಕುತ್ತದೆಂದು ನನ್ನ ಸಲಹೆ. ನನ್ನ ಜಿಲ್ಲೆಯಲ್ಲಿ ಸುಮಾರು 77 ಲಕ್ಷ ಹಣ ಸಾಮಾಜಿಕ ಅರಣ್ಯಕ್ಕಾಗಿ ಖರ್ಚಾಗಿದೆ. ಅಂದರೆ ಅವರು 77 ಲಕ್ಷ ಗಿಡಗಳನ್ನು ತೋರಿಸುತ್ತಾರೆಯೇ ಆಗುವುದಿಲ್ಲ. ಆದ್ದರಿಂದ ಇದನ್ನು ವರ್ಗಾವಣೆ ಮಾಡಿ ರೈತರಿಗೆ ನೇರವಾಗಿ ಸಾಮಾಜಿಕ ಅರಣ್ಯವನ್ನು ಬೆಳೆಸುವುದಕ್ಕೆ ಅನುಕೂಲ ಮಾಡಿಕೊಟ್ಟರೆ, ಅವರೇ ಬೆಳೆಸಿಕೊಳ್ಳುತ್ತಾರೆ. ಇದರಿಂದ ಖಂಡಿತವಾಗಿ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇನ್ನು.....

ಅಧ್ಯಕ್ಷರುಃ- ನಿಮ್ಮನ್ನು ಕರೆದು ತಪ್ಪು ಮಾಡಿದೆ. ಕುಳಿತುಕೊಳ್ಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡಃ- ಕೊಡಗು ಜಿಲ್ಲೆಯಲ್ಲಿ ರೆಡೀಮ್ಡ್ ಮತ್ತು ಅನ್‌ರೆಡೀಮ್ಡ್ ಎಂದು ಒಂದು ವರ್ಗದ ಭೂಮಿ ಇದೆ. ರೆಡೀಮ್ಡ್ ಭೂಮಿಯ ಬೆಲೆ ಮತ್ತು ಅರಣ್ಯದ ಬೆಲೆ ಎರಡನ್ನೂ ಕೊಟ್ಟರೆ ಅದು ರೆಡೀಮ್ಡ್ ಎಂದು ಆಗುತ್ತದೆ. ಅರಣ್ಯದ ಬೆಲೆಯನ್ನೂ ಕೊಡದಿದ್ದರೆ ಭೂಮಿಯ ಮೇಲೆ ಮಾತ್ರ ಬೆಲೆಯನ್ನು ಕೊಟ್ಟಿದ್ದರೆ ಅನ್-ರೆಡೀಮ್ಡ್ ಅಂತ ಆಗುತ್ತದೆ. ನಾನು ಕೆಲವು ಕಾಲದ ಹಿಂದೆ ರೆಕಾರ್ಡ್‌ಗಳನ್ನು ನೋಡಿದಾಗ ಯುಎನ್ ಎಂದು ಎರಡು ಅಕ್ಷರಗಳನ್ನು ಹೊಡೆದು ಹಾಕಿ ಎಲ್ಲವೂ ಆ ರೆಕಾರ್ಡ್‌ನಲ್ಲಿ ರೆಡೀಮ್ಡ್ ತಿದ್ದುಪಡಿ ಆಗಿಬಿಟ್ಟಿದೆ. ಆದರೆ ಅನ್ ರೆಡೀಮ್ಡ್ ಜಮೀನಿನಲ್ಲಿ ಸಾಕಾದಷ್ಟು ಉತ್ತಮವಾದ ಮರಗಳು ಇವೆ. ಅದು ಕಾಡಿನ ಪ್ರದೇಶವಾಗಿದೆ. ಆದರೆ ಪತ್ರಿಕೆಯಲ್ಲಿ ಬಂಧಂತಹ ವರದಿಯನ್ನು ನೋಡಿದಾಗ ಈ ಭೂಮಿಯನ್ನು ವರ್ಗ ಮಾಡತಕ್ಕ ಯೋಚನೆ ಸರ್ಕಾರಕ್ಕೆ ಇದೆ ಎಂಬ ವಿಚಾರವನ್ನು ಶ್ರೀಮಾನ್ ಬಸವಲಿಂಗಪ್ಪನವರು ಹೇಳಿದ್ದಾರೆಂಬ ವಿಷಯ ಗೊತ್ತಾಯಿತು. ಆದರೆ ಅದು ಅನ್‌ರೆಡೀಮ್ಡ್ ಲ್ಯಾಂಡ್ ಆಗಿರುವುದರಿಂದ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವ ಮರಗಳು ಇವೆ. ಆದ್ದರಿಂದ ಅದನ್ನು ಕೊಡುವುದಕ್ಕಿಂತ ಮುಂಚಿತವಾಗಿ ಆ ಅರಣ್ಯವನ್ನು ಉಳಿಸಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತಾರೆಯೇ ಎಂಬುದಾಗಿ ಪ್ರಶ್ನೆ ಮಾಡುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪಃ- ಅಧ್ಯಕ್ಷರೇ ಚರ್ಚೆಯಲ್ಲಿ ಭಾಗವಹಿಸದ ಸದಸ್ಯರಿಗೂ ವಿವರಣೆ ಕೇಳಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರುಃ- ಆಗಬಹುದು.

ಶ್ರೀ ಬಿ. ಸ್ವಾಮಿರಾವ್ಃ- ಅಧ್ಯಕ್ಷರೇ ನನ್ನ ಕ್ಷೇತ್ರ ಹೊಸನಗರದಲ್ಲಿ ಸಾರ್ವಜನಿಕರೆಲ್ಲಾ ಸೇರಿ ಒಬ್ಬ ರೇಂಜ್ ಆಫೀಸರ್ ಗಂಧದ ಮರವನ್ನು ಸಾಮಿಲ್‌ನಲ್ಲಿ ಕೊಯಿಸುತ್ತಿದ್ದಾಗ ಹಿಡಿಸಿದ್ದಾರೆ. ಆ ನಂತರ ಆತನನ್ನು ನಾಮಕಾವಸ್ಥೆಗೆ ಸಸ್ಪೆಂಡ್ ಮಾಡಿ ಮತ್ತೆ ಪ್ರಮೋಷನ್ ಕೊಟ್ಟು ಕಳುಹಿಸಿದ್ದಾರೆ. ನನ್ನ ದೃಷ್ಟಿಯಲ್ಲಿ ಅಧಿಕಾರಿಗಳು ಮಾಡತಕ್ಕ ಕಳ್ಳಸಾಗಾಣಿಕೆ ಜಾಸ್ತಿಯಾಗಿದೆ. ಆದ್ದರಿಂದ ಹೊಸನಗರದ ರವಿರಾಜ್ ಎನ್ನುವರೇಂಜರ್ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬಃ- ಸನ್ಮಾನ್ಯ ಅಧ್ಯಕ್ಷರೇ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಾಧಾರಣ 30 ವರ್ಷಗಳಿಂದ ಇರತಕ್ಕ ಕೊಯಿಲ ಜಾನುವಾರು ಕೇಂದ್ರ ಪ್ರತಿ ವರ್ಷ ನಷ್ಟದಲ್ಲಿ ನಡೆಯುತ್ತಿದೆ. ಒಂದು ತಾಲ್ಲೂಕಿಗೆ ಬೇಕಾದ ಹಾಲನ್ನೂ ಕೂಡಾ ತಯಾರು ಮಾಡುವುದಿಲ್ಲ. ಇದನ್ನು ತಪ್ಪಿಸುವುದಕ್ಕೆ ಏನಾದರೂ ದಾರಿ ಇದೆಯೇ ಇವತ್ತು ದಕ್ಷಿಣ ಕನ್ನಡದ ಭಾಗದಲ್ಲಿ ಕೇರಳಕ್ಕೆ ಕಳ್ಳಸಾಗಾಣಿಕೆಯಲ್ಲಿ ಗಂಧ ಶ್ರೀಗಂಧ ಬೀಟೆ ಮುಂತಾದ ಅಮೂಲ್ಯ ಮರಗಳು ಕಳ್ಳಸಾಗಾಣೆಯಲ್ಲಿ ಹೋಗುತ್ತಿವೆ. ಆದ್ದರಿಂದ ಗಡಿ ಭಾಗದಲ್ಲಿ ದಕ್ಷರಾದ ಅಧಿಕಾರಿಗಳನ್ನು ಇಟ್ಟು ಹೆಚ್ಚಿನ ಬಂದೋಬಸ್ತು ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಈ ಅರಣ್ಯಸಂಪತ್ತಿನಿಂದ ಮಳೆ ಮತ್ತು ಹುಲುಸಾದ ಬೆಳೆ ಆಗುತ್ತದೆಂದು ನಾವು ಹೇಳುತ್ತಿದ್ದೇವೆ. ಆದ್ದರಿಂದ ಈಗ ಕಾಡು ನಾಶ ಮಾಡುವ ಕಾಡುಕಳ್ಳರು ಯಾರಿದ್ದಾರೆ ಅವರನ್ನು ನುಚ್ಚುನೂರು ಮಾಡುವ ಏನಾದರೂ ಕಾರ್ಯಕ್ರಮವನ್ನು ಸರ್ಕಾರ ಇಟ್ಟುಕೊಂಡಿದೆಯೇ?

ಶ್ರೀ ಪಿ.ಸಿ. ಸಿದ್ದನಗೌಡರ್ಃ- ಅಧ್ಯಕ್ಷರೇ ಈಗ ಫಾರೆಸ್ಟ್ ಏರಿಯಾದಲ್ಲಿ ಕೆಲವು ಜನ ಅಲ್ಲಲ್ಲೇ ವಾಸವಾಗಿದ್ದಾರೆ. ಅವರನ್ನು ಒಂದೇ ಕಡೆ ತರುವ ವ್ಯವಸ್ಥೆ ಮಾಡಬೇಕು. ಇನ್ನು ಅರಣ್ಯ

ಇಲಾಖೆಯಲ್ಲಿ ಸಾಕಷ್ಟು ವೈರಲೆಸ್ ಸೆಟ್‌ಗಳು ವಾಹನಗಳು ಇಲ್ಲ. ಇದರಿಂದಾಗಿ ಕಳ್ಳಸಾಗಣೆ ಕಾರರನ್ನೂ ಹಿಡಿಯುವುದು ಬಹಳ ಕಷ್ಟವಾಗಿದೆ. ಈ ಬಗ್ಗೆ ಗಮನಹರಿಸಬೇಕು. ಇನ್ನುರೈತರಿಗೆ ಸಬ್ಸಿಡಿ ಮೇಲೆ ಏನಾದರೂ ಕೃಷಿ ಉತ್ಪಾದನೆ ಮಾಡುವುದಕ್ಕೆ ಬೇಕಾದ ರಂಟೆ ಕುಂಟೆ ಚಕ್ಕಡಿಗಳನ್ನು ಅರಣ್ಯ ಇಲಾಖೆಯಿಂದ ತಯಾರಿಸಿ ಪೂರೈಸುತ್ತಾರೋ ಹೇಗೆ ಎಂದು ಹೇಳಬೇಕು.

ಶ್ರೀ ಡಿ.ಎ. ಚಿನ್ನಪ್ಪ:- ಅಧ್ಯಕ್ಷರೇ ಕೊಡಗಿನ 5 ಸಾವಿರ ಹೆಕ್ಟೇರ್ಸ್ ಗಾಳಿಬೀಡಿನಲ್ಲಿ ಟೀ ಬೆಳೆಯಬೇಕೆಂದು ಹೇಳಿ ಈಗಾಗಲೇ ಸರ್ಕಾರ 51 ಹೆಕ್ಟೇರ್ ಭೂಮಿಯಲ್ಲಿ ಟೀ ಕೂಡಾ ಬೆಳೆಸಿದ್ದಾರೆ ಹಾಗೂ ಇದಕ್ಕೆ 1 ಕೋಟಿ 15 ಲಕ್ಷ ರೂಪಾಯಿ ಸಹಾ ಖರ್ಚು ಆಗಿದೆ. ಆದರೆ ಈ ಯೋಜನೆ ಯನ್ನು ಸರ್ಕಾರ ನೆಗ್ಲೆಕ್ಟ್ ಮಾಡುತ್ತಾ ಇದೆ. ಆದ್ದರಿಂದ ಈ ಯೋಜನೆಯನ್ನು ಸರ್ಕಾರ ಮುಂದುವರಿಸುತ್ತದೆಯೋ ಅಥವಾ ಕೈಬಿಡುತ್ತದೆಯೋ ಎಂ ಹೇಳಬೇಕು.

ಶ್ರೀ ಐ.ಎಂ. ಉಮಾಕಾಂತ್:- ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಪಶುಸಂಗೋಪನೆಗೆ ಸಂಬಂಧಪಟ್ಟಹಾಗೆ ದನಗಳ ದವಾಖಾನೆಯನ್ನು ಬಿಜಾಪುರ ಜಿಲ್ಲೆಗೆ ಕೊಡುತ್ತಾ ಇಲ್ಲ. ಅತ್ತಕಡೆ ನಮಗೆ ಜನಗಳ ದವಾಖಾನೆಯನ್ನೂ ಕೊಡುತ್ತಾ ಇಲ್ಲ. ಈಗ ನಮ್ಮ ಜಿಲ್ಲೆಯ ಇಂಡಿ ತಾಲ್ಲೂಕಿಗೆ ಒಂದು ದನಗಳ ದವಾಖಾನೆಯನ್ನಾದರೂ ಕೊಡುವ ಪ್ರಯತ್ನವನ್ನು ಮಾಡುತ್ತಾರಾ? ನಮ್ಮಲ್ಲಿ ಹಾಲು ಉತ್ಪಾದನೆ ಸ್ವಲ್ಪ ಹೆಚ್ಚು ಇರುವುದರಿಂದ ನಮ್ಮಲ್ಲಿ ಮಿಲ್ಕ್ ರೂಟ್ಸ್ ಜಾಸ್ತಿ ಮಾಡಬೇಕೆಂದು ಕೇಳುತ್ತೇನೆ. ಇನ್ನು ಸೋಶಿಯಲ್ ಫಾರೆಸ್ಟ್ರಿ ಸ್ಕೀಮ್‌ನಲ್ಲಿ ನಮ್ಮ ಬರಗಾಲ ಪೀಡಿತವಾದ ನಮ್ಮ ಜಿಲ್ಲೆಗೆ ವಿಶೇಷ ಗಮನ ಹರಿಸಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಸಹಾಯ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಅಂಜನಮೂರ್ತಿ:- ಅಧ್ಯಕ್ಷರೇ ಈಗ ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಬಹಳ ಇದೆ. ನಮ್ಮ ತಾಲ್ಲೂಕಿನ ಪಕ್ಕದಲ್ಲಿ ಅನ್‌ವಾಂಟೆಡ್ ಫಾರೆಸ್ಟ್ ಲ್ಯಾಂಡ್ ಏನು ಇದೆ ಅದು ಯಾರಿಗೂ ಉಪಯೋಗವಾಗುತ್ತಿಲ್ಲ. ಆದ್ದರಿಂದ ಅಂತಹ ಕಡೆಯಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಸ್ಥಾಪನೆ ಮಾಡಿದರೆ ನಿರುದ್ಯೋಗ ಸಮಸ್ಯೆ ಬಗೆಹರಿಸುವುದಕ್ಕೆ ಸಹಾಯಕವಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಆದೇಶ ಹೊರಡಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕರಿಯಣ್ಣ:- ಅಧ್ಯಕ್ಷರೇ ಮಲೆನಾಡು ಪ್ರದೇಶವಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಾಗರ ಸೊರಬಾದಲ್ಲಿ ತೇಗ ಬೀಟೆ ಹೊನ್ನೆ ಮತ್ತಿಯಂತಹ ಉತ್ಕೃಷ್ಟ ಮರಗಳನ್ನು ಕಡಿದು ನೀಲಗಿರಿ ಬೆಳೆಸುತ್ತಿದ್ದಾರೆ. ಇದು ಸರಿಯಾದ ಕ್ರಮ ಅಲ್ಲ. ಅಲ್ಲಿ ಉತ್ಕೃಷ್ಟ ಮರಗಳನ್ನೇ ಬೆಳೆಸುವ ಹಾಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಮತ್ತೆ ಈಗ ಊರ ಪಕ್ಕದಲ್ಲಿ ಏನು ಸಿ ಅಂಡ್ ಡಿ ಲ್ಯಾಂಡ್ ಇದೆ ಅದನ್ನು ಫಾರೆಸ್ಟ್ ಬೆಳೆಸಲು ಇಟ್ಟಿದ್ದೀರಿ. ಅದರಲ್ಲಿ ಊರಿನ ಅಭಿವೃದ್ಧಿಗೆ ಏನಾದರೂ ಸ್ವಲ್ಪ ಲ್ಯಾಂಡ್ ರಿಸರ್ವ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ:- ಈ ವರ್ಷ ಬಿ.ಎಸ್.ಸಿ. ಫಾರೆಸ್ಟ್ರಿನಲ್ಲಿ ಪಾಸ್ ಮಾಡಿದ ವಿದ್ಯಾರ್ಥಿಗಳು ಏನು ಹೊರ ಬಂದಿದ್ದಾರೆ. ಅವರಿಗೆ ಅರಣ್ಯ ಇಲಾಖೆಯಲ್ಲಿ ಏನಾದರೂ ಉದ್ಯೋಗ ನೀಡಲು ಅವಕಾಶ ಕಲ್ಪಿಸಿಕೊಡುತ್ತೀರಾ

ಶ್ರೀ ಹೆಚ್. ಏಕಾಂತಯ್ಯ:- ತಾವು ಹೊಸದಾಗಿ ಪಶುವೈದ್ಯ ಶಾಲೆಗಳನ್ನು ಕೊಡುವಾಗ ಯಾವ ಮಂಡಲ್‌ನಲ್ಲಿ ಒಂದೂ ಇಲ್ಲ ಆತಂಹ ಮಂಡಲ್‌ಗಳಿಗೆ ಆದ್ಯತೆ ಮೇರೆಗೆ ಕೊಡುತ್ತೀರಾ? ಎರಡನೆಯದಾಗಿ ಗಿಡ ಮತ್ತು ಮರಗಳನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಬೇರೆ ರಾಜ್ಯಗಳಲ್ಲಿ ಮತ್ತು ರಾಷ್ಟ್ರಗಳಲ್ಲಿರುವಂತೆ ಮೇಕೆ ಸಾಕುವುದನ್ನು ನಿಷೇಧ ಮಾಡುತ್ತೀರಾ

ಶ್ರೀ ಕೆ.ಎಸ್. ಕಾಳಮರೀಗೌಡ:- ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪದ ಹತ್ತಿರ 2400 ಎಕರೆ ಭೂಮಿಯನ್ನು ಲೀಸ್ ಮೇಲೆ ಸೆಂಟ್ ಗಿಡ ಬೆಳೆಸಲು ಕೊಟ್ಟಿದ್ದರು. ಅದರಲ್ಲಿ ಅವರು 600 ಎಕರೆಗಳನ್ನು ಮಾತ್ರ ಉಪಯೋಗ ಮಾಡಿಕೊಂಡು ಎರಡು ವರ್ಷಗಳಕಾಲ ಸೆಂಟ್ ಗಿಡ ಬೆಳೆಸಿದರು. ಈಗ ಅವರು ಮೆಷಿನ್ಸ್ ಎಲ್ಲಾ ತೆಗೆದುಕೊಂಡು ಹೊರಟು ಹೋಗಿದ್ದಾರೆ. ಅದು ಫಾರೆಸ್ಟ್ ಲ್ಯಾಂಡ್. ಈಗ ಅದನ್ನು ವಾಪಸ್ ತೆಗೆದುಕೊಂಡು ಬೇರೆಯವರಿಗೆ ವಿತರಣೆ ಮಾಡುತ್ತೀರಾ ಈ ಜಮೀನು

ತನಗೆ ಬೇಕೆಂದು ಅವರು ಕೋರ್ಟಿಗೆ ಹೋಗಿದ್ದಾರೆ. ಈ ಕೋರ್ಟ್‌ನಲ್ಲಿರತಕ್ಕ ಕೇಸನ್ನು ಬೇಗ ವೆಕೇಟ್‌ಗೊಳಿಸಿ ಈ ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸಿಕೊಳ್ಳಬೇಕು ಇಲ್ಲವೇ ಭೂ ಹೀನರಿಗೆ ಕೊಡಲು ವ್ಯವಸ್ಥೆ ಮಾಡುತ್ತೀರಾ

ಶ್ರೀ ಎಂ.ವಿ. ವೆಂಕಟಪ್ಪ:- ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ರೈತರು ಸಿಲ್ಕ್ ಮತ್ತು ಮಿಲ್ಕನಿಂದ ಜೀವನ ಮಾಡುತ್ತಿದ್ದಾರೆ. ಈ ಎರಡೂ ಕಸಬುಗಳೇ ಅವರಿಗೆ ಜೀವಕ್ಕೆ ಆಧಾರವಾಗಿದೆ. ನಮ್ಮ ಜಿಲ್ಲೆಯಲ್ಲಿ ಯಾವ ಮಹಾ ನದಿಗಳು ಇಲ್ಲ. ತುಂಗಭದ್ರ ನದಿ ಇಲ್ಲ; ಕಾವೇರಿ ನದಿ ಇಲ್ಲ; ಈ ಎರಡು ಜಿಲ್ಲೆಗಳಿಂದ ದಿವಸಕ್ಕೆ ಸುಮಾರು 4 ಲಕ್ಷ ಲೀಟರ್ ಹಾಲು ಬೆಂಗಳೂರು ಡೈರಿಗೆ ಸಪ್ಲೈ ಆಗುತ್ತಿದೆ. ವಾರಕ್ಕೆ ಒಂದುದಿವಸ ಈ ಬೆಂಗಳೂರು ಡೈರಿಯವರು ಸುಮಾರು 5 ಲಕ್ಷ ಲೀಟರ್ ಹಾಲನ್ನು ತೆಗೆದುಕೊಳ್ಳುವುದಿಲ್ಲ.ಇದರಿಂದ ತಿಂಗಳಿಗೆ ಕೋಟಿ ರೂಪಾಯಿ ರೈತರಿಗೆ ನಷ್ಟವಾಗುತ್ತಿದೆ. ಆದ್ದರಿಂದ ವಾರಕ್ಕೆ ಒಂದು ಸಲ ಹಾಲನ್ನು ತೆಗೆದುಕೊಳ್ಳುತ್ತಿರುವುದನ್ನು ಏನು ಬೆಂಗಳೂರು ಡೈರಿಯವರು ನಿಲ್ಲಿಸಿದ್ದಾರೆ ಇದನ್ನು ನಿಲ್ಲಿಸದಂತೆ ತಾವು ಆದೇಶ ನೀಡುತ್ತೀರಾ? ಇನ್ನು ಎರಡನೆಯ ದಾಗಿ ಈ ಹಾಲಿನ ಬೆಲೆ ಏನಿದೆ ಇದು ಬಹಳ ಕಡಿಮೆ ಇದೆ. ನಾನು 1966 ರಿಂದ 74ರವರೆಗೆ ಎಲೆಕ್ಟೆಡ್ ಡೈರೆಕ್ಟರ್ ಆಗಿ ಬೆಂಗಳೂರಿನ ಮಿಲ್ಕ್ ಯುನಿಯನ್‌ನಲ್ಲಿದ್ದೆ. ಈ ಮಿಲ್ಕ್ ರೇಟನ್ನು ಸ್ವಲ್ಪ ಹೆಚ್ಚು ಮಾಡಲು ಕ್ರಮಕೈಗೊಳ್ಳಬೇಕು. ಈಗ ಏನಾಗಿದೆ ಎಂದರೆ ಬೂಸ ಮುಂತಾದ ಇನ್-ಪ್ರುಟ್ಸ್ ಬೆಲೆ ಎಲ್ಲಾ ಜಾಸ್ತಿಯಾಗಿದೆ. ಆದ್ದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ರೈತರಿಗೆ ಕೊಡತಕ್ಕ ಮಿಲ್ಕ್ ರೇಟನ್ನು ಜಾಸ್ತಿ ಮಾಡಲು ಆಶ್ವಾಸನೆ ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೇ ಶ್ರೀಮಾನ್ ವೆಂಕಟಪ್ಪನವರು ಏನು ಹೇಳಿದ್ದಾರೆ ಮಿಲ್ಕ್ ಹಾಲಿದೆ ಎಂದು ಹೇಳಿ ಅದನ್ನು ಮಾಡಿದ್ದು ನಿಜ. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ಮಾನ್ಯ ಹುಚ್ಚೆಮಾಸ್ತಿಗೌಡರು ಬಹಳ ಒಳ್ಳೆಯ ವಿಷಯಗಳನ್ನು ಎತ್ತಿದ್ದಾರೆ. ಕೊಡಗು ಜಿಲ್ಲೆಯಲ್ಲಿ ರಿಡೀಮ್ಡ್ ಮತ್ತು ಅನ್-ರಿಡೀಮ್ಡ್ ಜಮೀನುಗಳು ಏನಿವೆ. ಅವುಗಳ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳುತ್ತೀರೆಂದು ಅವರು ಕೇಳಿದ್ದಾರೆ. ಇದರ ಬಗ್ಗೆ ಶೀಘ್ರವಾಗಿ ನಿರ್ಣಯ ತೆಗೆದುಕೊಳ್ಳುತ್ತೇವೆ. ಇದು ಸರ್ಕಾರದ ಮುಂದಿದೆ, ಇದನ್ನು ಶೀಘ್ರವಾಗಿ ಕ್ಯಾಬಿನೆಟ್‌ಗೆ ತಂದು ಸಮಗ್ರವಾಗಿ ಏನೇನು ಪ್ರಿವಿಲೆಜ್ಡ್ ಜಮೀನುಗಳು ಇವೆ ಅಂದರೆ ಇಂತಹ ರಿಡೀಮ್ಡ್ ಮತ್ತು ಅನ್‌ರಿಡೀಮ್ಡ್ ಜಮೀನುಗಳ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಶ್ರೀಮಾನ್ ಚಿನ್ನಪ್ಪನವರು ಟೀ ಪ್ಲಾನ್‌ಟೇಷನ್ ಬಗ್ಗೆ ಮಾತನಾಡಿದರು. 40 ಎಕರೆಯಲ್ಲಿ ಟೀ ಬೆಳೆಯಲು 15 ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆಂದು ಹೇಳಿದರು ಮತ್ತು ಅದು ಸರಿಯಲ್ಲವೆಂದು ಹೇಳಿದರು. ನಾವು ಮಾಡಿರುವುದು 40 ಎಕರೆ ಜಮೀನಿನಲ್ಲಿ ಖರ್ಚು ಮಾಡಿರುವುದು ಒಂದು ಕೋಟಿ ಹದಿನೈದು ಲಕ್ಷ. ಇದಕ್ಕಾಗಿ 2500 ಎಕರೆ ರಿಲೀಸ್ ಮಾಡಿದ್ದಾರೆ. ಈ ಟೀ ಪ್ಲಾನ್‌ಟೇಷನ್ ಅನ್ನು ಮುಂದುವರಿಸಬೇಕೋ ಬೇಡವೋ ಎಂಬುದರ ಬಗ್ಗೆ ಸರ್ಕಾರ ಇನ್ನು ನಿರ್ಧಾರ ಕೈಗೊಂಡಿಲ್ಲ. ಮತ್ತೆ ಹೆಚ್ಚುವರಿ ಖರ್ಚು ಮಾಡಿರುವುದರ ಬಗ್ಗೆ ಅನಾವಶ್ಯಕವಾಗಿ ಖರ್ಚು ಮಾಡಿರುವುದರ ಬಗ್ಗೆ ತನಿಖೆ ಮಾಡಿಸುತ್ತೇವೆ ಎಂದು ಮೊದಲು ಹೇಳಿದ್ದೆ. ಇವತ್ತು ನಾನು ಹೇಳುತ್ತಿದ್ದೇನೆ. ಶ್ರೀ ಸಿದ್ದಣ್ಣಗೌಡರು ಬುಟ್ಟಿ ಎಣೆಯುವವರಿಗೆ ಬ್ಯಾಂಬೂ ಕೊಡಿಸುವ ವ್ಯವಸ್ಥೆ ಮಾಡಿಸಬೇಕೆಂದು ಹೇಳಿದರು. ಇದರ ಬಗ್ಗೆ ಬಹಳ ಔದಾರ್ಯದಿಂದ ಮಾಡುತ್ತೇವೆ. ಇದರ ಬಗ್ಗೆ ಚಿಂತನೆ ಬೇಡ. ಇನ್ನು ಸೋಶಿಯಲ್ ಫಾರೆಸ್ಟ್ರಿ ಬಗ್ಗೆ ನಾವು 71 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಇನ್ನೂ 12 ಕೋಟಿ ಇದೆ. ಅದನ್ನೂ ಸಹ ಎಲ್ಲೆಲ್ಲಿ ಖರ್ಚು ಮಾಡಬೇಕು ಎಂಬುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಎಲ್ಲೆಲ್ಲಿ ಮಾಡಬೇಕು ಎಂಬುದನ್ನು ಗುರ್ತಿಸಿ ಈ ಹಣವನ್ನು ಖರ್ಚು ಮಾಡಲು ನಾವು ಪ್ರಯತ್ನ ಮಾಡುತ್ತೇವೆ. ಈಗ ಏನು ಅನಾವಶ್ಯಕವಾಗಿ ಖರ್ಚಾಗಿದೆ ಆ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಮತ್ತೆ ಈ ಯೋಜನೆಯ ಅಡಿ ಬೆಳೆಸಲಾದ ಮರಗಳನ್ನು ಹರಾಜು ಮಾಡಲು ತಮಗೆ ಅನುಮತಿ ಕೊಡಿ ಎಂದು ತುಮಕೂರಿನ ಜಿಲ್ಲಾ ಪರಿಷತ್‌ನವರು ಕೇಳಿದ್ದಾರೆ. ಈಗ ಮರ ಈ ಯಾರದ್ದು?

ಜಿಲ್ಲಾಪರಿಷತ್‌ನವರದ್ದೋ ಅಥವಾ ಸರ್ಕಾರದ್ದೋ ಎಂಬ ಪ್ರಶ್ನೆ ಬರುತ್ತದೆ. ಇಲ್ಲಿ ಅಧಿಕಾರಿಗಳು ನಮ್ಮವರು ಹಣ ನಮ್ಮದು ಹಾಗಿರುವಾಗ ಜಿಲ್ಲಾ ಪರಿಷತ್‌ನವರು ಈ ಮರಗಳ ಮಾರಾಟಕ್ಕೆ ಮರ ಪರವಾನಗಿ ಕೊಡಿಯೆಂದು ಕೇಳಿದರೆ ಕೊಡುವುದಕ್ಕಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದು ಸರ್ಕಾರಿ ಕಾಡು; ಸರ್ಕಾರಿ ತೋಪು; ಅದಕ್ಕೋಸ್ಕರ ಅವರಿಗೆ ಕೊಡುವುದಕ್ಕಾಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಶ್ರೀಮಾನ್ ಏಕಾಂತಯ್ಯನವರು ಪಶುವೈದ್ಯ ಶಾಲೆಗಳನ್ನು ಎಲ್ಲ ಕಡೆಗಳಲ್ಲಿ ಮಾಡಬೇಕೆಂದು ಹೇಳುತ್ತಿದ್ದಾರೆ. ಅದರಲ್ಲಿ ಮಂಡಲ ಪಂಚಾಯತಿಗಳಲ್ಲಿ ಎಲ್ಲೆಲ್ಲಿ ಇಲ್ಲ ಅಲ್ಲಿ ಮಾಡಿಯೆಂದು ಹೇಳಿದ್ದಾರೆ. ನಾನು ಆ ಬಗ್ಗೆ ಈಗಾಗಲೇ ಹೇಳಿದ್ದೇನೆ. ಹೊಸದಾಗಿ 186 ಪಶುವೈದ್ಯಶಾಲೆಗಳನ್ನು ತೆರೆಯಲು ನಾವು ಯೋಚನೆ ಮಾಡಿದ್ದೇವೆ. ತಾವು ಎಲ್ಲಿ ಮಾಡಬೇಕೆಂದು ಕಾಗದ ಬರೆದರೆ ಅಲ್ಲಿ ಮಾಡಿಕೊಡುತ್ತೇವೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಬಹಳ ಸ್ವಾರಸ್ಯವಾದ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ನನಗೆ ವಿವಾದದ ವ್ಯಕ್ತಿ ಎಂದು ಹೇಳುತ್ತೀರಿ. ಆದರೆ ನೀವು ಸ್ವಾರಸ್ಯಕರವಾದ ಪ್ರಶ್ನೆಯನ್ನು ಎತ್ತಿ ಎಲ್ಲ ಕಡೆ ಮೃಗಾಲಯಗಳನ್ನು ತೆರೆದು ಪ್ರಾಣಿಗಳನ್ನು ಇಟ್ಟರೆ ಅವುಗಳ ಸ್ವಾತಂತ್ರ್ಯಹರಣ ಆಗುವುದಿಲ್ಲವೇ ಎಂದು ಕೇಳಿದ್ದಾರೆ. ಈಗ ಸಫಾರಿ ಮಾಡುತ್ತಾರೆ. ಸಫಾರಿ ಎಂದರೆ ಕಾಡುಪ್ರಾಣಿಗಳನ್ನು ಸ್ವತಂತ್ರ್ಯ ವಾಗಿ ಬಿಟ್ಟುಬಿಡುವುದು. ಅವುಗಳನ್ನು ನೋಡಲು ಹೋಗುವ ಮನುಷ್ಯರನ್ನು ಬುಟ್ಟಿಗೆ ಹಾಕಿ ದೂರದಿಂದ ನೋಡುವ ವ್ಯವಸ್ಥೆ ಮಾಡಲಾಗಿದೆ. ಈ ವ್ಯವಸ್ಥೆಯಿಂದ ಪ್ರಾಣಿಗಳನ್ನು ಬಂಧನ ಮಾಡಿ ತೊಂದರೆ ಕೊಡತಕ್ಕ ಪ್ರಶ್ನೆಯಲ್ಲ. ಈಗ. ನಾವು ಸಫಾರಿಗಳು ಎಂದು ಮಾಡಿದ್ದೇವೆ. ತಾವು ಶಿವಮೊಗ್ಗಕ್ಕೆ ಹೋಗಿ ನೋಡಿ. ನಾಲ್ಕು ಸಿಂಹಗಳು ಇವೆ; ಬಹಳ ಚೆನ್ನಾಗಿ ಇವೆ. ಅಲ್ಲಿ ಟೈಗರ್ ಸಫಾರಿ ಮಾಡಿದ್ದೇವೆ. ಜಿಂಕೆ ಹರ್ಬಿಬರೋಸ್ ಎಂಬ ಪ್ರಾಣಿಗಳನ್ನು ತಂದಿಡುತ್ತೇವೆ. ಮಾನ್ಯ ಕೌಜಲಗಿಯವರು ಇದೇರೀತಿ ಸಫಾರಿಯನ್ನು ಅವರ ಕಡೆಗೂ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದನ್ನು ಪೂರೈಸುತ್ತೇವೆ. ಅದರ ಬಗ್ಗೆ ತಮಗೆ ಚಿಂತೆ ಬೇಡ. ಮಾನ್ಯ ಸಾಂದ್ರಾ ರವರು ಒಂದು ಮಾತನ್ನು ಹೇಳಿದ್ದಾರೆ. ಕುರಿ ಕೋಳಿಯ ಬಗ್ಗೆ ಸಾಕಷ್ಟು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲವೆಂದು ಹೇಳಿದ್ದಾರೆ.ನಾನು ಹೇಳಿದ್ದೇನೆ ಕೋಳಿ ಕುರಿ ಅಭಿವೃದ್ಧಿ ಮಾಡಲಿಕ್ಕೆ ಒಂದು ಕಾರ್ಪೊರೇಷನ್ ಮಾಡುತ್ತಿದ್ದೇವೆ. ಅದಕ್ಕೋಸ್ಕರ 29ಕೋಟಿ ರೂಪಾಯಿ ಸಾಲವನ್ನು ವರ್ಲ್ಡ್‌ಬ್ಯಾಂಕಿ ನಿಂದ ತರಬೇಕೇ ಅಥವಾ ಬೇರೆ ದೇಶದಿಂದ ತರಬೇಕೇ ಎಂದು ವಿಚಾರ ಮಾಡುತ್ತಿದ್ದೇವೆ. ಮತ್ತೆ ಮಿಲ್ಕ್ ಯೂನಿಯನ್‌ಗಳನ್ನು ಸಾಕಷ್ಟು ತೆರೆಯಬೇಕೆಂದೂ ಹೇಳಿದ್ದಾರೆ. ಇದನ್ನು ಪ್ರತಿ ಹಳ್ಳಿಯಲ್ಲೂ ಮಾಡಬೇಕೆಂದೂ ಅದರಲ್ಲಿ ಹೆಣ್ಣುಮಕ್ಕಳನ್ನು ಸದಸ್ಯರನ್ನಾಗಿ ಮಾಡಬೇಕೆಂದು ಈಗಾಗಲೇ ಹೇಳಿದ್ದೇನೆ. ಶ್ರೀಗಂಧದ ಕುಟುಂಬಗಳು ಇವೆ ಅಂತಹವರ ಹೆಸರುಗಳನ್ನು ಹೇಳಿಯೆಂದು ಹೇಳಿದ್ದಾರೆ. ಅದನ್ನು ಹೇಳಬೇಕಾ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಹೇಳಿಬಿಡಿ.

ಶ್ರೀ ಬಿ. ಬಸವಲಿಂಗಪ್ಪ:- ಆಗಲಿ ಹೇಳಿಬಿಡುತ್ತೇನೆ. ಅದಕ್ಕೆ ಕುಮ್ಮಕ್ಕುದಾರರು ಇದ್ದಾರೆ. ಒಂದು ಐದು ಜನರು ಇದ್ದಾರೆ. ಅವರ ಹೆಸರು ಹೇಳುತ್ತೇನೆ. They are Notorious sandalwood smugglers in Bangalore city. Abdul Khudas, Abdul Samad - all brothers, Bairapur Anwar, Shamir ಇವರು ಬೆಂಗಳೂರುನಲ್ಲಿದ್ದಾರಂತೆ. ಆಮೇಲೆ ಬೆಂಗಳೂರು ಹನ್‌ಸರ್. ಇವರು ಸಿದ್ದಯ್ಯ ರೋಡ್‌ನಲ್ಲಿ ಇದ್ದಾರಂತೆ. There are about 500 supporters of smugglers. Unless there are receivers of smuggled property, smuggling cannot continue. Therefore, we are now concentrating on these people. In Mysore City, they are Pailwan Mukthar, Sardar Shamir Khan, Chote Sab, Abdul Sattar, Aslam. In Group-2, Feroz Syed, Abdul Rahim, Nazir Khan. ಇವರುಗಳೆಲ್ಲಾ ಬಹಳ ಕುಮ್ಮಕ್ಕುದಾರರು. The receivers of smuggled property who are having links to transport smuggled sandalwood.

ಶ್ರೀ ಬಿ.ಎಸ್ .ಯಡಿಯೂರಪ್ಪ:- ಅಧಿಕಾರಿಗಳ ಹೆಸರುಗಳನ್ನು ಹೇಳಿ. ನಿಮಗೆ ನಾವು ಸಹಕಾರ ಕೊಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ:- ನೀವೇನು ಕೊಡುತ್ತೀರಿ? ಓಡಿಹೋಗುತ್ತೀರಿ. ಹೇಳಿದ್ದಾರಲ್ಲ ಬಸವಲಿಂಗಪ್ಪನವರು ವಿವಾದಾಸ್ಪದ ವ್ಯಕ್ತಿ ಅಂತ. ಇದನ್ನೆಲ್ಲ ನಾನು ಸಹಿಸಿಕೊಂಡರೆ ವಿವಾದ ಇಲ್ಲ. ಸಹಿಸಿಕೊಳ್ಳದಿದ್ದರೆ ವಿವಾದ ಅಷ್ಟೆ; ಶ್ರೀ ರಾಜೂಗೌಡರು ವೀರಪ್ಪನ್‌ನನ್ನು ಜಾಗ್ರತೆ ಹಿಡಿಯಿರಿ ಎಂದು ಹೇಳಿದ್ದಾರೆ. ಅವರು ಸಹಕಾರ ಕೊಡಬೇಕು. ಏಕೆಂದರೆ ಅವರು ಅಲ್ಲಿಯೇ ಇದ್ದಾರೆ. ಅವರು ಸಹಕಾರ ಕೊಟ್ಟರೆ ಜಾಗ್ರತೆಯಾಗಿ ಹಿಡಿಯುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ರಾಜೂಗೌಡರ ಸಹಕಾರ ಯಾವ ರೀತಿಯಿಂದ ತಮಗೆ ಬೇಕು?

ಶ್ರೀ ಜಿ. ರಾಜೂಗೌಡ:- ಉಪಗ್ರಹದ ಮೂಲಕ ಆತನನ್ನು ಹಿಡಿಯಲು ಪ್ರಯತ್ನ ಮಾಡಿ.

ಶ್ರೀ ಸಿ. ಬೈರೇಗೌಡ:- ಇದೇನು ಎಲ್ಲರ ಸಹಕಾರ ಕೇಳದೆ ರಾಜೂಗೌಡರ ಒಬ್ಬರದ್ದು ಮಾತ್ರ ಸಹಕಾರ ಕೇಳುತ್ತಿದ್ದೀರಲ್ಲ

ಶ್ರೀ ಬಿ. ಬಸವಲಿಂಗಪ್ಪ:- ಅವರು ಆ ಕಡೆಯವರಾಗಿದ್ದರಿಂದ ಕೇಳುತ್ತಿದ್ದೇನೆ. ಕೊಳ್ಳೇಗಾಲ ಚಾಮರಾಜನಗರ.....

ಶ್ರೀ ಸಿ. ಬೈರೇಗೌಡ:- ವಾಟಾಳ್‌ನಾಗರಾಜ್ ಅವರ ಸಹಕಾರವನ್ನು ನೀವು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸಹಕಾರ ಕೇಳಲಿಲ್ಲ ರಾಜೂಗೌಡರ ಸಹಕಾರ ಕೇಳುತ್ತಿದ್ದಾರೆ. ಮತ್ತೆ ಚಾಮರಾಜನಗರ ಹೆಸರು ಹೇಳುತ್ತಿದ್ದಾರೆ....

ಶ್ರೀ ಬಿ. ಬಸವಲಿಂಗಪ್ಪ:- ನೀವೂ ಕೊಡಿ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮನ್ನು ಲಂಡನ್ನಿಗೆ ಕಳಿಸಬೇಕೆಂದು ರಾಜೂಗೌಡರು ಹೇಳುತ್ತಿದ್ದಾರೆ. ನೀವು ಲಂಡನ್ನಿಗೆ ಹೋಗಿ ತರಬೇತಿ ಪಡೆದುಕೊಂಡು ಬಂದು ಇಲ್ಲಿ ವೀರಪ್ಪನನ್ನು ಹಿಡಿಯುವ ಹೊತ್ತಿಗೆ ನಿಮ್ಮ ಸರ್ಕಾರ ಉಳಿದಿರಬೇಕಲ್ಲ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ:- ಈಗ ಶ್ರೀಮತಿ ಅರಸುರವರು ಇದಿನಬ್ಬರವರು ಇದಕ್ಕೆ ಅಧಿಕಾರಿಗಳು ಶಾಮೀಲಾಗಿರುತ್ತಾರೆ. ಅವರು ಶಾಮೀಲಾಗಿಲ್ಲದೇ ಹೋದರೆ ಇಷ್ಟು ಪ್ರಮಾಣದಲ್ಲಿ ಸ್ಮಗ್ಲಿಂಗ್ ಆಗುತ್ತಿರಲಿಲ್ಲ ಎಂದು ಹೇಳಿದ್ದಾರೆ. ನನಗೆ ಅವರು ಹೇಳಿದ ಪ್ರಕಾರ ಅವರ ಅಭಿಪ್ರಾಯವನ್ನು ಒಪ್ಪುವ ಮನಸ್ಸು ನನಗೆ ಇದೆ. ಕಾರಣ ಏನೆಂದರೆ ರೇಂಜ್ ಆಫೀಸರ್‌ಗೆ ಕೆಲವು ವಿಧಿವತ್ತಾಗಿ ಕೆಲವು ಪ್ರದೇಶಗಳನ್ನು ಕೊಟ್ಟಿದ್ದೇವೆ. ಕನ್ಸರ್‌ವೇಟರ್‌ಗೆ ಕೊಟ್ಟಿದ್ದೇವೆ ಡಿ.ಎಫ್.ಓ.ಗೆ ಕೊಟ್ಟಿದ್ದೇವೆ. ಅವರ ಒಂದು ವ್ಯಾಪ್ತಿಯಲ್ಲಿ ಇರತಕ್ಕಂಥ ಪ್ರದೇಶದಲ್ಲಿ ಕಳ್ಳಸಾಗಾಣಿಕೆ ಆದರೆ ಅವರು ನೋಡಿಯೂ ಸುಮ್ಮನೆ ಇರಬಹುದು; ನಮ್ಮಲ್ಲಿ ಸತ್ಯವಂತರು ಕೆಲವರು ಇದ್ದಾರೆ. ಸತ್ಯವಂತರು ಅಲ್ಲದವರೂ ಇದ್ದಾರೆ. ಏಕೆಂದರೆ ಇದು ಆಸ್ತಿ. ಕಾಡಿನಲ್ಲಿ ಸರ್ಕಾರದ ಆಸ್ತಿ ಇದೆ. ಒಂದು ಬೀಟೆ ಮರಕ್ಕೆ ಒಂದೆರಡು ಲಕ್ಷ ರೂಪಾಯಿ ಆಗುತ್ತದೆ. ಒಂದು ಬೀಟೆ ಮರವನ್ನು ಕಳ್ಳತನ ಮಾಡಿ ಸಾಗಿಸಿದರೆ 2 ಲಕ್ಷ ರೂಪಾಯಿ ಸಿಗುತ್ತದೆ. ಅದಕ್ಕೋಸ್ಕರ ಕೆಲವರಿಗೆ ದುಡ್ಡಿನ ಮೇಲೆ ಆಸೆ ಬರುತ್ತದೆ. ಅಂತಹವರಿಗೆ ಇನ್ನು ಮೇಲೆ ಆಸೆಗೆ ಭಂಗ ಬರುವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ:- ಶ್ರೀಮಾನ್ ಯಡಿಯೂರಪ್ಪನವರು ಪಶುಪರೀಕ್ಷರ ಹುದ್ದೆಗಳಿಗೆ ಆಯ್ಕೆ ಮಾಡಿದ್ದರೂ ಕೆಲಸಕ್ಕೆ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಅದು ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಈಗ ತರಬೇತಿ ಹೊಂದಿದ ಕಾಂಪೌಂಡರ್ಸ್ ಇನ್‌ಸ್ಪೆಕ್ಟರ್ಸ್ ಇತ್ಯಾದಿ ಇದ್ದಾರೆ. ಅಂತಹವರಿಗೆ ನಾವು ರಿಕ್ರೂಟ್‌ಮೆಂಟ್‌ಗೆ ಕರೆಯುತ್ತೇವೆ.

ಶ್ರೀ.ಬಿ.ಎಸ್. ಯಡಿಯೂರಪ್ಪ:- ನಾನು ಹೇಳಿದ್ದು ರಿಕ್ರೂಟ್‌ಮೆಂಟ್ ಆಗಿ ಸೆಲೆಕ್ಟ್ ಆದವರಿಗೆ ಸಹ ಉದ್ಯೋಗ ಕೊಟ್ಟಿಲ್ಲ. ಈಗಾಗಲೇ ರಿಕ್ರೂಟ್‌ಮೆಂಟ್ ಕಮಿಟಿಯಿಂದ ಪಟ್ಟಿ ಪ್ರಕಟಣೆ ಮಾಡಿದ್ದಾರೆ. ಅಂತಹವರನ್ನು ನೇಮಕ ಮಾಡಬಹುದಲ್ಲಾ?

ಶ್ರೀ ಬಿ. ಬಸವಲಿಂಗಪ್ಪ:- ಇದು ನನ್ನ ಗಮನಕ್ಕೆ ಬಂದಿಲ್ಲ. ಬಂದರೆ ನಾನು ಮಾಡುತ್ತೇನೆ. ಅಂತಹವರನ್ನು ನೇಮಕ ಮಾಡಲೇಬೇಕಲ್ಲ. ಇಷ್ಟು ಹೇಳಿ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಉರುವಲು ಕಟ್ಟಿಗೆ ಬಗ್ಗೆ ಕೇಳಿದ್ದೇನೆ. ತಾವು ಉತ್ತರ ಕೊಡಬಾರದು ಎಂದು ನಿಶ್ಚಯ ಮಾಡಿದ್ದರೆ ನನ್ನ ಅಭ್ಯಂತರ ಇಲ್ಲ. ನಾನು ಮೊದಲೇ ಈ ಬಗ್ಗೆ ಕೇಳಿದ್ದೆ. ಆದರೆ ತಾವು ಕೊನೆಯಲ್ಲಿ ನನ್ನ ಹೆಸರು ಇಟ್ಟುಕೊಂಡಿದ್ದೀರಿ. ಇವತ್ತು ಇದು ಇಡೀ ರಾಜ್ಯದಲ್ಲೇ ಇದು ಪ್ರಮುಖ ಪ್ರಶ್ನೆ ಆಗಿದೆ. ಆದರೂ ಉತ್ತರ ಕೊಡದಿದ್ದರೆ ಹೇಗೆ?

ಶ್ರೀ.ಬಿ. ಬಸವಲಿಂಗಪ್ಪ:- ನಾವು ಉತ್ಪತ್ತಿ ಮಾಡತಕ್ಕಂಥಾದುದು 3 ಲಕ್ಷದಿಂದ 4 ಲಕ್ಷ ಟನ್‌ವರೆಗೆ. ನಮಗೆ ಬೇಡಿಕೆ ಇರುವುದು 30ರಿಂದ 40 ಲಕ್ಷ ಟನ್‌ವರೆಗೆ. ಬರೀ ಉರುವಲು ಕಟ್ಟಿಗೆ ಮೇಲೆ ಭಾರ ಹಾಕಿದರೆ ಆಗುವುದಿಲ್ಲ. ಬೇರೆ ಎಲೆಕ್ಟ್ರಿಸಿಟಿ ಗ್ಯಾಸ್ ಇದೆ. ಹೀಗೆ ಬೇರೆ ರೀತಿಯ ಫ್ಯುಯಲ್ ಸಪ್ಲೈ ಮಾಡಿಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ಇಲ್ಲದಿದ್ದರೆ ಕಾಡೆಲ್ಲ ಕಡಿದರೂ ಕಟ್ಟಿಗೆ ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ. 3 ಲಕ್ಷ ಎಲ್ಲಿ, 30 ಲಕ್ಷ ಟನ್ ಎಲ್ಲಿ

ಅಧ್ಯಕ್ಷರು:- ಶ್ರೀ ಘೋರ್ಪಡೆಯವರು.....

ಶ್ರೀ ಸಿ. ಬೈರೇಗೌಡ:- ನಾನು ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ಇವತ್ತು ಹಾಲಿನ ಬೆಲೆ......

ಅಧ್ಯಕ್ಷರು:- ಇಲ್ಲ ದಯವಿಟ್ಟು ಕ್ಷಮಿಸಬೇಕು. ಶ್ರೀ ಘೋರ್ಪಡೆಯವರೇ ನೀವು ಪ್ರಾರಂಭಿಸಿ.

ಶ್ರೀ ಸಿ. ಬೈರೇಗೌಡ:- ಹಾಲಿನ ಬೆಲೆ....

ಅಧ್ಯಕ್ಷರು:- ಹಾಲಿನ ಬೆಲೆ ಬಗ್ಗೆ ಶ್ರೀ ವೆಂಕಟಪ್ಪನವರು ಈಗಾಗಲೇ ಕೇಳಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ:- ನನ್ನ ಪ್ರಶ್ನೆಗೂ ಸರಿಯಾದ ಉತ್ತರ ಬರಲಿಲ್ಲ;

ಶ್ರೀ ಸಿ. ಬೈರೇಗೌಡ:- ಹಾಲಿನ ಬೆಲೆ ವಿಷಯದಲ್ಲಿ ಹೇಳಿಲ್ಲ. ಇವತ್ತು ಕುಡಿಯುವುದಕ್ಕೆ ನೀರಿಲ್ಲ ಮಳೆ ಬರುತ್ತಾ ಇಲ್ಲ. ಹಾಲಾದರೂ ಕರೆದುಕೊಂಡು ಜೀವನ ಮಾಡತಕ್ಕ ಪರಿಸ್ಥಿತಿ ಇದೆ. ಇವತ್ತು ಹಸುಗಳನ್ನು ಮಾರಾಟ ಮಾಡುತ್ತಿದ್ದಾರೆ. ಮೇವಿನ ಬೆಲೆ ಜಾಸ್ತಿಯಾಗಿದೆ ಹಿಂಡಿ ಬೆಲೆ ಜಾಸ್ತಿಯಗಿದೆ. ಬೂಸಾ ಬೆಲೆ ಜಾಸ್ತಿಯಾಗಿದೆ. ಪ್ರತಿಯೊಂದರ ಬೆಲೆಯೂ ಜಾಸ್ತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಸುಗಳನ್ನು ಸಾಕಿರತಕ್ಕವರು. ನೂರಾರು ಜನ ಸಾವಿರಾರು ಜನ ಹಸುಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಹಾಲು ಉತ್ಪಾದನೆ ಮಾಡುವವರಿಗೆ ತುಂಬಾ ನಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರ ಏನು ಮಾಡುತ್ತದೆ ಎನ್ನುವುದರ ಬಗ್ಗೆ ಉತ್ತರ ಕೊಡದಿದ್ದರೆ.....

ಶ್ರೀ ಬಿ. ಬಸವಲಿಂಗಪ್ಪ:- ಅವರ ಬೇಡಿಕೆ ಸರ್ಕಾರದ ಮುಂದೆ ಇದೆ. ಇದನ್ನು ಎಷ್ಟು ಹೆಚ್ಚು ಮಾಡಬೇಕು ಎಷ್ಟು ಕಡಿಮೆ ಮಾಡಬೇಕು ಎಂಬುದನ್ನು ವಿಚಾರ ಮಾಡುತ್ತಿದ್ದೇವೆ. ಗ್ರಾಹಕರೂ ಇದ್ದಾರೆ ರೈತರೂ ಇದ್ದಾರೆ ರೈತರಿಗೆ ಲಾಭದಾಯಕವಾಗಿ ಎಷ್ಟು ಹೆಚ್ಚಿಸಬೇಕು ಮತ್ತೆ ಈ ಕಡೆ ಗ್ರಾಹಕರ ಚಿಂತನೆಯನ್ನೂ ಮನಸ್ಸಿನಲ್ಲಿಟ್ಟುಕೊಂಡು ಇದರ ಬಗ್ಗೆ ಶೀಘ್ರವಾಗಿ ತೀರ್ಮಾನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:- ಹಾಲಿನ ಬೆಲೆ ವಿರೋಧ ಮಾಡಿ ಹೇಳಿಕೆ ಕೊಡತಕ್ಕವರೂ ಕೆಲವರು ಇದ್ದಾರೆ. ಇಂತಹವರಲ್ಲಿ ಯಾರು ಹಸುಗಳನ್ನು ಸಾಕುತ್ತಾರೆ ಅವರಿಗೆ ಒಂದೊಂದು ಹಸುಗಳನ್ನು ಫ್ರೀಯಾಗಿ ಕೊಡುತ್ತಾರೆ ಅವರು ಈ ಹಸುಗಳನ್ನು ಸಾಕಿಕೊಂಡು ಮೇವು ಹಾಕಿ ಗಂಜಲ ಎತ್ತಿ ಸಗಣಿ ಎತ್ತಿ ಅವರು ಹಾಲು ಕುಡಿದುಕೊಳ್ಳಲಿ ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ಉತ್ಪಾದನೆ ಮಾಡತಕ್ಕವರಿಗೆ.......

ಅಧ್ಯಕ್ಷರು:- ಬೆಲೆ ಹೆಚ್ಚು ಮಾಡಬೇಕೆಂದು ನೀವೂ ಹೇಳಿಕೆಗಳನ್ನು ಕೊಡಿ...

ಶ್ರೀ ಸಿ. ಬೈರೇಗೌಡ:- ನಾನು ಮಂತ್ರಿಯಲ್ಲ ಸರ್ಕಾರದಲ್ಲಿ ಇಲ್ಲ. ನಾನು ಸರ್ಕಾರದಲ್ಲಿ ಇದ್ದರೆ ಹೇಳುತ್ತಿದ್ದೆ.

ಅಧ್ಯಕ್ಷರು:- ಕೆಲವರು ಗ್ರಾಹಕರ ಪರವಾಗಿ ಹೇಳಿಕೆ ಕೊಡುತ್ತಾರೆಂದು ನೀವು ಹೇಳಿದಿರಿ; ನೀವು ರೈತರ ಪರವಾಗಿ ಹೇಳಿಕೆ ಕೊಡಿ..

ಶ್ರೀ ಸಿ. ಬೈರೇಗೌಡ:- ರೈತರ ಪರವಾಗಿ ಸರ್ಕಾರದವರು ಹೇಳಬೇಕಾಗುತ್ತದೆ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಮಂತ್ರಿಗಳ ಹತ್ತಿರ ಖಾಸಗಿಯಾಗಿಯೂ ಮಾತನಾಡಿದ್ದೇನೆ. ಈಗ್ಗೆ ಆರು ತಿಂಗಳಿಂದಲೂ ಹೇಳುತ್ತಿದ್ದೇನೆ. ನಮ್ಮಲ್ಲಿ ನೂರಾರು ಜನ ರೈತರು......

MR.SPEAKER:- You cannot expect him to make a statement right now.

ಶ್ರೀ ಬಿ. ಬಸವಲಿಂಗಪ್ಪ:- ವಿಚಾರ ಮಾಡೋಣ.

ಅಧ್ಯಕ್ಷರು:- ವಿಚಾರ ಮಾಡೋಣ ಎಂದು ಹೇಳಿದ್ದಾರೆ. ನೀವೆಲ್ಲರೂ ಸೇರಿ ವಿಚಾರ ಮಾಡಿ. ಈಗ ಮಾನ್ಯ ಘೋರ್ಪಡೆ ಅವರಿಂದ ಉತ್ತರ.

ಶ್ರೀ ಎಂ.ವಿ. ವೆಂಕಟಪ್ಪ:- ವಿಚಾರ ಮಾಡುವಾಗ ನಮ್ಮ ಸಲಹೆಗಳನ್ನು ಸಹ ಪಡೆದುಕೊಳ್ಳಬೇಕು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಸಚಿವರು):- ಮಾನ್ಯ ಅಧ್ಯಕ್ಷರೇ ಈ ಸಭೆ ಪ್ರಾರಂಭವಾಗಿ ಮೂರು ಗಂಟೆ ಆದ ನಂತರವಾದರೂ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಇದೇ ರೀತಿ ಮೂರು ಜನ ಮಂತ್ರಿಗಳು ಮಾತನಾಡುವುದಾದರೆ 9 ಗಂಟೆ ಬೇಕಾಗುತ್ತದೆ. ಆದ್ದರಿಂದ ನಾನು ಸಂಕ್ಷಿಪ್ತವಾಗಿ ಉತ್ತರ ಹೇಳಬೇಕಾಗುತ್ತದೆ. ಎರಡೂ ಕಡೆಯಿಂದ ಮಾನ್ಯಸದಸ್ಯರು ಕೊಟ್ಟಿರತಕ್ಕ ರಚನಾತ್ಮಕವಾದ ಸಲಹೆಗಳಿಗೆ ಸಂಕ್ಷಿಪ್ತವಾಗಿಯಾದರೂ ಕೂಡ ನೇರವಾಗಿ ಉತ್ತರ ಕೊಡತಕ್ಕ ಪ್ರಯತ್ನ ಮಾಡುತ್ತೇನೆ. ಕಾಲದ ಅಭಾವದಿಂದ ದಯಮಾಡಿ ಎಲ್ಲರೂ ಸಹಕರಿಸಿ ಮಧ್ಯೆ ಪ್ರವೇಶ ಆಗಬಾರದೆಂದು ನನ್ನ ವಿನಂತಿ. ಈಗ...

ಶ್ರೀ ಡಿ.ಬಿ.ಚಂದ್ರೇಗೌಡ:- ನಾವೇನಾದರೂ ಮಧ್ಯೆ ಪ್ರವೇಶ ಮಾಡಿದರೆ it will be only to rebrush your commensense.

ಶ್ರೀ ಎಂ.ವೈ.ಘೋರ್ಪಡೆ:- ಈಗ ವಿರೋಧಪಕ್ಷದ ನಾಯಕರು ಎಲ್ಲಿಗೋ ಹೊರಟು ಹೋಗಿದ್ದರು ಸುದೈವದಿಂದ ಸಭೆಗೆ ಬಂದಿದ್ದಾರೆ. ಏಕೆಂದರೆ ಹಲವಾರು ಮುಖ್ಯವಾದ ಪ್ರಶ್ನೆಗಳನ್ನು ಅವರು ಎತ್ತಿದ್ದರು. ಅದಕ್ಕೆ ಉತ್ತರ ಕೊಡುವುದಕ್ಕೆ ಮುಂಚೆ ಒಂದು ಮಾತು ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ಸರ್ಕಾರದ ಪಂಚಾಯತ್‌ರಾಜ್ ಏನಿದೆ ಅದನ್ನು ಬಲಪಡಿಸುವುದಕ್ಕೆ ಇದೆ ಅದನ್ನು ಶಿಥಿಲಗೊಳಿಸುವುದಕ್ಕಲ್ಲ. This Government is there to strengthen the Panchayati Raj. We are not here to preside over the liquidation of Panchayati Raj. ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ತಾವು ಸಂವಿಧಾನದ ಬಗ್ಗೆ ಬಹಳಷ್ಟು ಪ್ರಸ್ತಾಪ ಮಾಡಿದ್ದೀರಿ. ನಾನು ಹೇಳುವುದು ಇಷ್ಟೇ; ಸಂವಿಧಾನ ನಮಗೆ ಅಡ್ಡ ಬರುತ್ತಾ ಇಲ್ಲ. ಇವತ್ತು ಆ ಮಟ್ಟದಲ್ಲಿ ಅವರು ಏನು ತಿದ್ದುಪಡಿ ಮಾಡುತ್ತಿದ್ದಾರೆ ನಾವು ಯಾವ ರೀತಿ ಮಾಡಿದ್ದೇವೆ ಅದೇ ರೀತಿ ಇಡೀ ದೇಶದಲ್ಲಿ ಯಾವುದೇ ರಾಜ್ಯದಲ್ಲಾದರೂ ಜನಕ್ಕೆ ಪಂಚಾಯತ ವ್ಯವಸ್ಥೆಯಲ್ಲಿ Third Tier ಕೇಳುವಂಥ ಹಕ್ಕು ಕೊಡುವ ದೃಷ್ಟಿಯಿಂದ ಅವರಲ್ಲಿ ಅಮೆಂಡ್‌ಮೆಂಟ್ ಮಾಡುವ ವಿಚಾರದಲ್ಲಿ ರಾಜೀವ್ ಗಾಂಧಿಯವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಏನು ಪ್ರಾರಂಭ ಮಾಡಿತು ಅದೇ ವಿಚಾರ ಇವತ್ತು ಈ ಸರಕಾರ ಮುಂದುವರಿಸುತ್ತಿದೆ. ರೈಟ್ ಟು ಅಮೆಂಡ್‌ಆಕ್ಟ್ ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದರು. ಅದರ ಬಗ್ಗೆ ಯಾವುದೇ ಅನುಮಾನ ಇಲ್ಲ; ನಮ್ಮ ಅಧಿಕಾರ ಅಂದರೆ ಸರಕಾರದ ಅಧಿಕಾರ ಏನಿದೆ ಅದರ ವಿಕೇಂದ್ರೀಕರಣ ಮಾಡುವುದರಲ್ಲಿ ನಮಗೆ ಯಾರೂ ಅಡ್ಡ ಬರಲಿಕ್ಕೆ ಸಾಧ್ಯ ಇಲ್ಲ. ನಾನು ಆಗಲೇ ಹೇಳಿದೆ ನಮ್ಮ ಅಧಿಕಾರ ಎಂದರೆ

ರಾಜ್ಯದ ಅಧಿಕಾರ ನಾವು ಎಷ್ಟರಮಟ್ಟಿಗೆ ವಿಕೇಂದ್ರೀಕರಣ ಮಾಡಬೇಕು ಯಾವ ಮಟ್ಟದಲ್ಲಿ ಮಾಡಬೇಕು ಯಾವ ರೀತಿಯಲ್ಲಿ ಮಾಡಬೇಕು ಇದು ಸಂಪೂರ್ಣವಾಗಿ ನಮ್ಮ ರಾಜ್ಯಕ್ಕೆ ಸೇರಿರತಕ್ಕಂಥಾದ್ದು. ಅವರ ಪ್ರಕಾರ ನಾವು ಮಾಡುತ್ತೇವೆ ಹಿಂದೆ ಮಾಡಿದ್ದೇವೆ. ಮುಂದೆ ಕೂಡಾ ಮಾಡುತ್ತೇವೆ. ಈಗ ಈ ವಿಕೇಂದ್ರೀಕರಣ ಏನಿದೆ ಅದು ಎಷ್ಟರ ಮಟ್ಟಿಗೆ ಆಗಿದೆ ಅದರ ಉದ್ದೇಶ ಏನು ಎಂಬ ಮೂಲಭೂತವಾದ ಪ್ರಶ್ನೆ ಬಗ್ಗೆ ತಾವು ಕೇಳಿದ್ದೀರಿ. ಇದಕ್ಕೆ ಉತ್ತರ ಹೇಳಬೇಕಾದುದು ನನ್ನ ಕರ್ತವ್ಯ. ಡೀಸೆಂಟ್ರಲೈಸೇಷನ್ ಅಥವಾ ವಿಕೇಂದ್ರೀಕರಣ ಮಾಡುವ ಉದ್ದೇಶ ಏನೆಂದರೆ ನಮ್ಮ ಡೆವೆಲಪ್‌ಮೆಂಟ್ ಏನಿದೆ ಅದು ಇನ್ನಷ್ಟು ಚೆನ್ನಾಗಿ ಆಗಬೇಕು ಎಂಬುದು. ಮತ್ತೆ ಪಬ್ಲಿಕ್ ಪಾರ್ಟಿಸಿಪೇಷನ್ ಹೆಚ್ಚಾಗಲಿ ಎಂಬುದು ಇದು ಮೂಲಭೂತವಾದ ಉದ್ದೇಶ. ಎರಡನೆಯದು ಇದರಲ್ಲಿ ಗ್ರಾಮೀಣ ಜನತೆಯ ಒಂದು ಸಹಕಾರ ಪ್ಲಾನಿಂಗ್ ಮಾಡುವುದರಲ್ಲಿ ಹೆಚ್ಚಿಸಲಿ ಎಂದು. ನಾವು ಮೇಲಿನಿಂದ ಪ್ಲಾನಿಂಗ್ ಮಾಡಿ ಸ್ಕೀಮ್ಸ್ ಏನು ಕಳುಹಿಸುತ್ತೇವೆ ಅದು ಎಷ್ಟರಮಟ್ಟಿಗೆ ಸರಿಯಾಗಿದೆ ಎಷ್ಟರಮಟ್ಟಿಗೆ ಅವರಿಗೆ ಅನುಕೂಲವಾಗಿದೆ ಅದರಲ್ಲಿ ಯಾವ ತಿದ್ದುಪಡಿಗಳನ್ನು ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಈ ಫೀಡ್ ಬ್ಯಾಕ್ ಜನತೆಯಿಂದ ಗ್ರಾಸ್‌ರೂಟ್‌ನಿಂದ ಅವರ ಅನುಭವ ನಮಗೆ ಸಿಗಬೇಕು. ಇದು ಮುಖ್ಯವಾದ ಉದ್ದೇಶ. ಆನಂತರ ಜಿಲ್ಲಾ ಮಟ್ಟದಲ್ಲಾಗಲೀ ತಾಲ್ಲೂಕು ಮಟ್ಟದಲ್ಲಾಗಲೀ ಗ್ರಾಮೀಣ ಮಟ್ಟದಲ್ಲಾಗಲೀ ನಾವು ಕೊಟ್ಟಿರತಕ್ಕಂಥ ಹಣ ಯಾವರೀತಿ ಖರ್ಚಾಗಬೇಕು ಜನತೆಯ ಪ್ರಿಯಾರಿಟೀಸ್ ನಮಗೆ ಗೊತ್ತಾಗಲೀ ಎಂಬುದು ಇದರ ಉದ್ದೇಶ. ಎಲ್ಲಿ ರಿಪೇರಿ ಕೆಲಸದ ಅವಶ್ಯಕತೆ ಇದೆ ಎಲ್ಲಿ ಸ್ಕೂಲ್ ಕಟ್ಟಡದ ಅವಶ್ಯಕತೆ ಇದೆ ಎಲ್ಲಿ ರಸ್ತೆ ಕೆಲಸ ಹೆಚ್ಚಾಗಿ ಬೇಕು ಎಂಬುದು ಗೊತ್ತಾಗಬೇಕು ನಾವು ಕೊಡುವ ಹಣ ಸಾಲದು. ಹಣದ ಅಭಾವ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇಡೀ ದೇಶದಲ್ಲಿ ಯಾರಿಗೆ ಎಷ್ಟು ಹಣ ಬೇಕೋ ಅಷ್ಟು ಹಣ ಯಾರಿಗೂ ಸಿಗುವುದಿಲ್ಲ. ಆದಕಾರಣ ನಾವು ಕೊಟ್ಟಿರತಕ್ಕಂಥ ಹಣವನ್ನು ಜನತೆಗೆ ಬೇಕಾಗುವಂತಹ ರೀತಿಯಲ್ಲಿ ಜನತೆಯ ಪ್ರಿಯಾರಿಟೀಸ್ ಮೇಲೆ ಅವರಿಗೆ ಸಮಾಧಾನಕರವಾಗುವ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯ ಇದೆ. ಆದುದರಿಂದ ಎಫೆಕ್ಟೀವ್ ಇಂಪ್ಲಿಮೆಂಟೇಷನ್ ಮತ್ತು ಪಬ್ಲಿಕ್ ಪಾರ್ಟಿಸಿಪೇಷನ್ ಇದು ವಿಕೇಂದ್ರೀಕರಣದ ಗುರಿ. ಇವತ್ತು ಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ ಆಗಲೇ ಈ ಸಭೆಯಲ್ಲಿ ಒಂದೆರಡು ಪ್ರಶ್ನೆಗೆ ಉತ್ತರ ಹೇಳುವಾಗ ನಾನು ಹೇಳಿದೆ. 550 ಕೋಟಿ ರೂಪಾಯಿ ಹಣವನ್ನು ನಾವು ಡೆವಲೂಷನ್ ಮಾಡಿದ್ದೇವೆ. ಪಂಚಾಯತ್ ಬಾಡೀಸ್‌ಗೆ ಕೊಟ್ಟಿದ್ದೇವೆ. ಅದರಲ್ಲಿ ಕೇಂದ್ರದ್ದು 250 ಕೋಟಿ ರೂಪಾಯಿ ಸೇರಿದೆ. 550 ಕೋಟಿ ರೂಪಾಯಿ ಡೆವಲಪ್‌ಮೆಂಟ್ ಅಥವಾ ಪ್ಲಾನ್ ಹಣ ನಾವು ಡೆವಲ್ಯೂಷನ್ ಮಾಡಿದ್ದೇವೆ. ಇದರಲ್ಲಿ 250 ಕೋಟಿ ರೂಪಾಯಿ ಕೇಂದ್ರ ಸರಕಾರಕ್ಕೆ ಸೇರಿರತಕ್ಕಂಥಾದ್ದು. ಇದು ಹೆಚ್ಚುಕಡಿಮೆ ಪ್ಲಾನ್ ವೆಚ್ಚದಲ್ಲಿ ಮೂರನೇ ಒಂದು ಭಾಗ ಎಂದು ನಾವು ಇಟ್ಟುಕೊಳ್ಳಬಹುದು. ಅಂದರೆ ಡೆವಲಪ್‌ಮೆಂಟ್‌ಗೆ ಎಷ್ಟು ಹಣ ಖರ್ಚು ಮಾಡುತ್ತೇವೆ. ಅದರಲ್ಲಿ ಮೂರರಲ್ಲಿ ಒಂದು ಭಾಗ ವಿಕೇಂದ್ರೀಕರಣ ಮಾಡಿ ಪಂಚಾಯತ್ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಅದೂ ಅಲ್ಲದೆ ನಾನ್‌ಪ್ಲಾನ್ ಹಣ 700 ಕೋಟಿವರೆಗೆ ಕೊಟ್ಟಿದ್ದೇವೆ. ನಾನ್ ಪ್ಲಾನ್ 700 ಕೋಟಿ ಎಂದರೆ ಕಳೆದ ಪ್ಲಾನ್‌ನಲ್ಲಿ ನೇಮಕ ಮಾಡಿರತಕ್ಕಂಥ ಉಪಾಧ್ಯಾಯ ರಾಗಲೀ ಬೇರೆ ಜನ ಆಗಲಿ ಅವರಿಗೆ ಕೊಡುವ ಸಂಬಳ ಇನ್-ಪ್ಲಾನ್‌ನಲ್ಲಿ ಆದರೂ ನಾನ್ ಪ್ಲಾನ್ ಆಗುತ್ತದೆ. ಪ್ರಾರಂಭದಿಂದ ನೇಮಕ ಆಗಿರತಕ್ಕಂಥ ಸಿಬ್ಬಂದಿ ವರ್ಗ ಏನಿದೆ ಕಳೆದ ಪ್ಲಾನ್‌ಗಳಲ್ಲಿ ನೇಮಕ ಆಗಿರತಕ್ಕಂಥವರು ಅವರಿಗೆ ಈ ಪ್ಲಾನ್‌ನಲ್ಲಿ ಕೊಡುವ ಹಣವನ್ನು ನಾನ್ ಪ್ಲಾನ್ ಎಂದು ಕರೆಯುತ್ತಾರೆ. ನಾನ್ ಪ್ಲಾನ್‌ನಲ್ಲಿ ಏಳು ನೂರು ಕೋಟಿ ರೂಪಾಯಿಗಳನ್ನು ಪಂಚಾಯತ್ ರಾಜ್ ಬಜೆಟ್ ಮೂಲಕ ಖರ್ಚು ಮಾಡುವುದಕ್ಕೆ ಕೊಡುತ್ತಿದ್ದೇವೆ. ಇದು ಇಡೀ ರಾಜ್ಯದ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ 3500 ಕೋಟಿ ರೂಪಾಯಿ ಇದೆ. ಇದರಲ್ಲಿ 700 ಕೋಟಿ ರೂಪಾಯಿ ಕೊಟ್ಟರೆ ಅದು ಅದರ ಐದನೇ ಒಂದು ಭಾಗ ಆಗುತ್ತದೆ.

(ಶ್ರೀ ಬಿ. ಸ್ವಾಮಿರಾವ್ ಅವರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಡೆವಲಪ್‌ಮೆಂಟ್ ಪ್ಲಾನ್ ಎಕ್ಸಪೆಂಡೇಚರ್‌ನಲ್ಲಿ ಮೂರನೇ ಒಂದು ಭಾಗ. ಅದೇ ಪ್ರಕಾರ ನಾನ್ ಪ್ಲಾನ್ ಎಕ್ಸ್‌ಪೆಂಡೇಚರ್‌ನಲ್ಲಿ ಐದನೇ ಒಂದು ಭಾಗ ನಾವು ಈಗಾಗಲೇ ಅವರ ಮೂಲಕ ಖರ್ಚು ಮಾಡುತ್ತಿದ್ದೇವೆ. ಇದನ್ನು ರೆವಲೂಶನ್ ಎಂದು ಕರೆಯುತ್ತೇವೆ. ಈಗ ಏನು 550 ಕೋಟಿ ರೂಪಾಯಿಗಳನ್ನು ನಾವು ಡೆವಲಪ್‌ಮೆಂಟ್‌ಗೆ ಏನು ಕೊಡುತ್ತಿದ್ದೇವೆ ಇದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಇದರಲ್ಲಿ 300 ಕೋಟಿ ರೂಪಾಯಿಗಳನ್ನು ನೇರವಾಗಿ ಜಿಲ್ಲಾ ಪರಿಷತ್ತು ಅಂದರೆ ಜಿಲ್ಲಾ ಮಟ್ಟದಲ್ಲಿ ಖರ್ಚು ಮಾಡುವ ಅವಕಾಶ ಇದೆ. ಬಾಕಿ 250 ಕೋಟಿ ರೂಪಾಯಿಗಳು ಏನು ಇದೆ ಇದರಲ್ಲಿ ಸುಮಾರು 140ಕೋಟಿ ರೂಪಾಯಿಗಳು ನೇರವಾಗಿ ಮಂಡಲ ಪಂಚಾಯಿತಿಗಳಿಗೆ ಕೊಡುತ್ತಿದ್ದೇವೆ. ಮಂಡಲ ಪಂಚಾಯಿತಿಗಳಲ್ಲಿ ಖರ್ಚು ಆಗಬೇಕೆಂದು ನಾವು ನೇರವಾಗಿ ಅವರಿಗೆ ಕೊಡುತ್ತಿದ್ದೇವೆ. ಈ 140 ಕೋಟಿರೂಪಾಯಿಗಳಲ್ಲಿ ರೋಜ್‌ಗಾರ್ ಯೋಜನೆ ಹಣ ಸುಮಾರು 120 ಕೋಟಿ ರೂಪಾಯಿಗಳು ಇದೆ. ನಾವು ಕೊಡುವ ಪರ್ ಕ್ಯಾಪಿಟಾ ಗ್ರ್ಯಾಂಟ್ 21 ಕೋಟಿ ರೂಪಾಯಿಗಳು ಇದೆ. ಈ ಮಂಡಲ ಪಂಚಾಯಿತಿಗಳ ಮಟ್ಟದಲ್ಲಿ 140 ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆ. ಆಮೇಲೆ ಇನ್ನೊಂದು ಸುಮಾರು 110 ಕೋಟಿ ರುಪಾಯಿಗಳು ಇದೆ. ಅದೂ ಕೂಡ ಮಂಡಲ ಪಂಚಾಯಿತಿಗಳಮಟ್ಟದಲ್ಲಿಯೇ ಖರ್ಚುಆಗುತ್ತದೆ. ಆದರೆ ಇದು ನೇರವಾಗಿ ಮಂಡಲ ಪಂಚಾಯಿತಿಗಳಿಗೆ ಸಿಗುತ್ತಿಲ್ಲ. ಅದಕ್ಕೆ ಮಂಡಲ ಪಂಚಾಯಿತಿ-೨ ಎಂದು ಕರೆಯುತ್ತೇವೆ. ಅಂದರೆ ವರ್ಗ–೨ ಅಥವಾ ಮಂಡಲ ಪಂಚಾಯಿತಿ–೨ ಹಣ ಏನು ಇದೆ/ಅದು ಸುಮಾರು 110 ಕೋಟಿ ರೂಪಾಯಿ ಇದೆ. ನಮ್ಮ ಮಂತ್ರಿಗಳು ಏನು ಹೇಳಿದ್ದಾರೆ ಅದನ್ನೆಲ್ಲಾ ಸೇರಿಸಿದರೆ ಜಾಸ್ತಿಯಾಗುತ್ತದೆ. ಅದು ಸುಮಾರು 150 ರಿಂದ 160 ಕೋಟಿ ರೂಪಾಯಿಗಳು ಆಗಬಹುದು. ಇದರಲ್ಲಿ ಏನಾಗುತ್ತದೆ ಅಂದರೆ ಈ ಹಣ ಜಿಲ್ಲಾ ಮಟ್ಟದಿಂದ ಮಂಡಲ ಪಂಚಾಯಿತಿ ಮಟ್ಟಕ್ಕೆ ಬರುವುದರಲ್ಲಿ ಇವತ್ತು ಸ್ವಲ್ಪ ತೊಂದರೆಯಾಗುತ್ತಿದೆ. ಅಕೌಂಟೆಂಟ್ ಜನರಲ್‌ರವರು ಸಹ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಮಿಕ್ಸ್ ಅಪ್ ಆಗುತ್ತಿದೆ.ಎಲ್ಲಾ ಮಂಡಲ ಪಂಚಾಯಿತಿಗಳಿಗೂ ಯಾವ ರೀತಿಯಲ್ಲಿ ಹಣ ಹೋಗಬೇಕಾಗಿತ್ತೋ ಆ ರೀತಿ ಹೋಗುತ್ತಿಲ್ಲವೆನ್ನುವ ಮಾತನ್ನು ಅವರು ಹೇಳಿದ್ದಾರೆ. ಅದಕ್ಕೆ ಮಂಡಲ ಪಂಚಾಯಿತಿ ಮಟ್ಟದಲ್ಲಿ ಹಣ ಖರ್ಚು ಆಗುವಂತೆ ಮಾಡಲು ಮಂಡಲ ಪಂಚಾಯಿತಿ–೨ಗೆ ಸೇರಿದ್ದ ಸುಮಾರು 110 ಕೋಟಿ ರೂಪಾಯಿಗಳು ಏನು ಇದೆ ಅದನ್ನು ನಾವು ತಾಲ್ಲೂಕು ಮಟ್ಟದಲ್ಲಿ ಕಳುಹಿಸಿ ಕೊಟ್ಟರೆ ಬಹುಶಃ ಅದುಮಂಡಲ ಪಂಚಾಯಿತಿಗಳಿಗೆ ಮುಟ್ಟಿಸುವುದರಲ್ಲಿ ಅನುಕೂಲವಾಗುತ್ತದೆ. ಎನ್ನುವ ವಿಚಾರ ನಮ್ಮಲ್ಲಿ ಇದೆ.ಇದನ್ನು ನಾವು ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ. ಇದರಲ್ಲಿ ವ್ಯತ್ಯಾಸ ಏನೂ ಇಲ್ಲ. ಕಾನೂನಿನ ವ್ಯತ್ಯಾಸ ಕೂಡ ಏನೂ ಇಲ್ಲ. ಈ ರೀತಿಯಲ್ಲಿ ನಾವು ಮಾಡಿದರೆ ಒಂದು ಅಕೌಂಟಿಂಗ್ ಎಫಿಷಿಯೆನ್ಸಿ ಜಾಸ್ತಿಯಾಗುತ್ತದೆ. ಮತ್ತೆ ಜಿಲ್ಲೆಯಿಂದ ದೂರವಿರುವ ಹಳ್ಳಿಯ ಮಟ್ಟಕ್ಕೆ ಅನುಕೂಲ ವಾಗುವ ಹಾಗೆ ತಾಲ್ಲೂಕು ಮಟ್ಟಕ್ಕೆ ನಾವು ಹಣ ಕಳುಹಿಸಿದರೆ ಆಗ ಹಣದ ಉಪಯೋಗ ಇನ್ನಷ್ಟು ಪರಿಣಾಮಕಾರಿಯಾಗಿ ಮಂಡಲ ಪಂಚಾಯಿತಿ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತವೆ ಎನ್ನುವ ವಿಚಾರ ಸರ್ಕಾರಕ್ಕೆ ಇದೆ. ಇದರ ಬಗ್ಗೆ ಕೂಡ ಸೂಕ್ತ ಒಂದು ಕಾರ್ಯಕ್ರಮ ಹಾಕಿಕೊಳ್ಳು ತ್ತಿದ್ದೇವೆ. ಈಗ ಇದೂ ಅಲ್ಲದೆ ನಮ್ಮ ರಾಜ್ಯ ಸರ್ಕಾರ ನೇರವಾಗಿ ಎಷ್ಟು ಹಣ ಈ ಪಂಚಾಯತ್‌ರಾಜ್ಯ ಸಂಸ್ಥೆಗಳಿಗೆ ಕೊಡುತ್ತಿದೆ ಅಂದರೆ ಪರ್ ಕ್ಯಾಪಿಟಾ ಗ್ರ್ಯಾಂಟ್ ಎಷ್ಟು ಇದೆ ಅಂದರೆ 10 ರೂಪಾಯಿಗಳು ಪರ್ ಹೆಡ್ ಆಫ್ ರೂರಲ್ ಪಾಪ್ಯುಲೇಷನ್. ಇದು ಸುಮಾರು 28 ಕೋಟಿ ರೂಪಾಯಿಗಳು ಆಗುತ್ತದೆ. ಈ 28 ಕೋಟಿರೂಪಾಯಿಗಳಲ್ಲಿ 7 ಕೋಟಿ ರೂಪಾಯಿಗಳು ಜಿಲ್ಲಾ ಪರಿಷತ್ತಿಗೆ ಹೋಗುತ್ತದೆ. ಇನ್ನು ಉಳಿದ 21 ಕೋಟಿ ರೂಪಾಯಿಗಳು ಅಂದರೆ ಮುಕ್ಕಾಲು ಭಾಗದ ಹಣ ಮಂಡಲ ಪಂಚಾಯಿತಿಗಳಿಗೆ ಹೋಗುತ್ತದೆ ಈಹಣ ಏನು ಇದೆ ಅವರ ಸ್ವಂತ ಸಿಬ್ಬಂದಿಗೋಸ್ಕರ ಮತ್ತು ಅವರ ಪ್ಲಾನ್ ಪ್ರಕಾರ ಅವರಿಗೆ ತಿಳಿದ ಮಟ್ಟಿಗೆಖರ್ಚು ಮಾಡಲಿಕ್ಕೆ ಅವರಿಗೆ ಸ್ವಾತಂತ್ರ್ಯ ಇದೆ. ನಾವು ಏನು ರಿವಾಲ್ವ್ ಮಾಡುತ್ತಿದ್ದೇವೆ ಅವರು ಆಯಾಯ ಸ್ಕೀಮ್‌ಗಳ ವ್ಯಾಪ್ತಿಯಲ್ಲಿ ಖರ್ಚು ಮಾಡಬೇಕಾಗುತ್ತದೆ. ಇಷ್ಟೆಲ್ಲಾ ಹಣ ಖರ್ಚು ಮಾಡಲು ಅವರಿಗೆ ಸಾಕಷ್ಟು

ಸಿಬ್ಬಂದಿ ಇಲ್ಲ. ಆದ್ದರಿಂದ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ಸಿಬ್ಬಂದಿಯನ್ನು ಸಹ ನಾವೇ ಕೊಟ್ಟಿದ್ದೇವೆ. ಎಷ್ಟು ಸಿಬ್ಬಂದಿ ಕೊಟ್ಟಿದ್ದೇವೆ ಎಂದರೆ ಎ ಕ್ಲಾಸ್ ಆಫೀಸರ್ಸ್ ಸಾವಿರ ಜನರನ್ನು ಕೊಟ್ಟಿದ್ದೇವೆ. ಅಂದರೆ ಡೆಪ್ಯುಟೇಷನ್ ಮೇಲೆ ಕೊಟ್ಟಿದ್ದೇವೆ. ಬಿ ಕ್ಲಾಸ್ ಆಫೀಸರ್ಸ್ ಸಾವಿರ ಜನರು ಇದ್ದಾರೆ ಮತ್ತು ಸಿ ಅಂಡ್ ಡಿ ಕ್ಲಾಸ್ ಅಫಿಷಿಯಲ್ಸ್ 2 ಲಕ್ಷದ 69 ಸಾವಿರ ಜನ ಇದ್ದಾರೆ. ಇಷ್ಟು ಅಧಿಕಾರಸಥರನ್ನು ನಾವು ಅವರಿಗೆ ಕೊಟ್ಟಿದ್ದೇವೆಂದರೆ ಡೆಪ್ಯುಟೇಷನ್ ಮೇಲೆ ಸರ್ಕಾರಿ ನೌಕರರು ಜಿಲ್ಲಾಪರಿಷತ್ತಿನಲ್ಲಾಗಲೀ ಸಮಿತಿಯಲ್ಲಾಗಲೀ ಮಂಡಲ ಪಂಚಾಯಿತಿಗಳಲ್ಲಾಗಲೀ ಆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ಈ ರೀತಿ ನಾವು ರೆವಲ್ಯೂಷನ್ ಏನು ಮಾಡಿದ್ದೇವೆ ಇದನ್ನು ಯಶಸ್ವಿಯಾಗಿ ನಡೆಸಬೇಕಾಗುತ್ತದೆ. ಈಗ ಎಂಪ್ಲಾಯ್‌ಮೆಂಟ್ ಏನಿದೆ ಅಂದರೆ ನಾವು ಕೊಟ್ಟಿರತಕ್ಕಂಥ ಆಫೀಸರ್ಸ್ ಏನಿದ್ದಾರೆ ಅದೂ ಅಲ್ಲದೆ ಅವರೇ ಆಫೀಸರ್ಸ್‌ನ್ನು ನೇಮಕ ಮಾಡುವಂಥ ಶಕ್ತಿಯೂ ಇಲ್ಲ ಹಾಗೆ ಮಾಡಲು ಅವರು ಹೋಗಬಾರದು. ಏಕೆಂದರೆ ಅಲ್ಲಿ ಇರೆಗ್ಯುಲರ್ ಎಂಪ್ಲಾಂಯ್‌ಮೆಂಟ್ಸ್ ಕೂಡಾ ನಡೆದಿದೆ. ಇವತ್ತು ಇಲ್ಲವೆಂದು ಇಲ್ಲ. ತಮಗೆ ಗೊತ್ತಿರಬೇಕು ಪಂಚಾಯತ್ ರಾಜ್ಯ ಸ್ಥಾಪನೆಯಾದ ಮೇಲೆ ದಿನಾಂಕ 1-4-87 ಕ್ಕೆ ಮುಂಚೆ ಸುಮಾರು 5 ಸಾವಿರ ಇರೆಗ್ಯುಲರ್ ಅಪಾಯಿಂಟ್‌ಮೆಂಟ್ ಆಗಿದ್ದರೆ ಇವತ್ತು 10 ಸಾವಿರ ಜನ ಇಂತಹವರು ಇದ್ದಾರೆ. 10,000 people are appointed by Mandal Panchayats irregularly and without authority. I call them irregular because without proper authority, they have appointed 10,000 people in addition to 5,000 people who were there as on 1-4-1987. ಈ ರೀತಿ ನಡೆದರೆ ಇದಕ್ಕೆ ಯಾರು ಜವಾಬ್ದಾರಿ ಸರ್ಕಾರ ಇದರ ಬಗ್ಗೆ ನೋಡಬೇಕಾಗುತ್ತದೆ. ಈ ರೀತಿ ಆಗದ ಹಾಗೆ ನೋಡಿಕೊಂಡುಹೋಗುವಂಥ ಜವಾಬ್ದಾರಿ ನಮ್ಮ ಮೇಲೆ ಇದೆ. ಏಕೆಂದರೆ ಈ ಸಂಸ್ಥೆಗಳಿಗೆ ಏನಾದರೂ ಅಪಾಯವಾದರೆ ಅದು ಪಂಚಾಯತ್ ರಾಜ್ ವ್ಯವಸ್ಥೆಗೆ ಅಪಾಯ ಮಾಡಿದ ಹಾಗಾಗುತ್ತದೆ. ವಿಕೇಂದ್ರೀಕರಣಕ್ಕೂ ಕೂಡ ಅಪಾಯ ಮಾಡಿದ ಹಾಗಾಗುತ್ತದೆ. ತನ್ಮೂಲಕ ಜನಕ್ಕೂ ಅಪಾಯ ಮಾಡಿದಂತೆ ಆಗುತ್ತದೆ. ಆ ದೃಷ್ಟಿಯಿಂದ ಈ ಮಾತ್ನು ಹೇಳಿದೆ. ನಾವು ಇಷ್ಟೊಂದು ಫಂಡ್ಸ್‌ನ್ನು ಮತ್ತು ಅಧಿಕಾರಿಗಳನ್ನು ಅವರಿಗೆ ಕೊಟ್ಟಿರುವಾಗ ಸ್ವಾಭಾವಿಕವಾಗಿ ಅಲ್ಲಿ ಏನು ತಪ್ಪು ನಡೆಯುತ್ತದೋ ಅದನ್ನು ತಿದ್ದುವಂಥ ಅಧಿಕಾರ ನಮ್ಮ ಸರ್ಕಾರದ ಕಡೆ ಇದೆ. ಯಾವ ಉದ್ದೇಶಕ್ಕಾಗಿ ನಾವು ಹಣ ಕೊಟ್ಟಿದ್ದೆವೆಯೋ ಅದನ್ನು ನೋಡಿಕೊಳ್ಳುವಂತ ಜವಾಬ್ದಾರಿ ಕೂಡ ನಮ್ಮ ಮೇಲೆ ಇದ್ದೇ ಇರುತ್ತದೆ. ಉದಾಹರಣೆಗಾಗಿ ಯಾವುದೋ ಜಿಲ್ಲಾ ಪರಿಷತ್ತಿನವರು ಈಗಿನ ಆಕ್ಟ್‌ಗೆ ಮತ್ತು ಸರ್ಕಾರದ ಉದ್ದಶಕ್ಕೆ ವಿರುದ್ಧವಾಗಿ ತಪ್ಪು ನಿರ್ಣಯ ಮಾಡಿದರೆ ಅದನ್ನು ಸಸ್ಪೆಂಡ್ ಮಾಡುವಂಥ ಅಧಿಕಾರವನ್ನಾದರೂ ಸಹ ನಾವು ಉಳಿಸಿಕೊಳ್ಳಬೇಕೋ ಬೇಡವೋ ಏನು ಕೌಜಲಗಿಯವರೇ?

ಶ್ರೀ ಎಸ್.ಹೆಚ್. ಕೌಜಲಗಿ:- ಹೌದು.

ಶ್ರೀ ಎಂ.ವೈ. ಘೋರ್ಪಡೆ:- ಅದಕ್ಕೆ ನಾನು ಹೇಳಿದೆ ಈ ಆಕ್ಟ್ ಸರಿಯಲ್ಲ ಮತ್ತು ಇಂಥಾದ್ದನ್ನು ಸಸ್ಪೆಂಡ್ ಮಾಡುವ ಪವರ್ ಕೂಡ ಸ್ಪಷ್ಟವಾಗಿ ಇಲ್ಲ ತಿದ್ದುಪಡಿ ತಂದು ನಾವು ಅದನ್ನು ಮಾಡಬೇಕಾಗುತ್ತದೆ. ತಪ್ಪುನಿರ್ಣಯ ಮಾಡಿದರೆ ಸರ್ಕಾರ ಅದನ್ನು ಸಸ್ಪೆಂಡ್ ಮಾಡತಕ್ಕಂಥ ಅಧಿಕಾರ ವನ್ನು ಹೊಂದಿರಬೇಕಾಗುತ್ತದೆ. If they pass wrong resolutions in any Panchayat Raj bodies,Government should have the powers to suspend it.

SRI R.V. DESHPANDE:- If Mandal Panchayat does it, the Zilla Parishads will have the powers to suspend it.

SRI M.Y. GHORPADE:- If the Zilla Parishads pass wrong resolutions, then what is to be done?

SRI R.V. DESHPANDE:- You have to believe. If you believe in decentralisation, you have to believe them.

SRI M.Y. GHORPADE:- We cannot believe wrong doing...

SRI R.V. DESHPANDE:- When you are asking more powers for the State from the Central Government, you should also think of giving more powers to Zilla Parishads. It is a move again to withdraw their powers.

SRI M.Y. GHORPADE:- No. If the State Government does something wrong, people have a right to go to High Court. If you offend the Constitution, the Centre can take some action.

SRI R.V. DESHPANDE:- You should apply the same principle there also.

SRI M.V. GHORPADE:- Let me finish. I only gave it as an example. If they pass patently wrong resolutions outside their scope, authority and the purpose, then the Government should have powers to suspend it. ಆಮೇಲೆ ನಾವು ಅವರಿಗೆ ಏನುಜವಾಬ್ದಾರಿ ಕೊಟ್ಟಿರುತ್ತೇವೆಯೋ ಅದನ್ನು ಅವರು ನಿರ್ವಹಿಸಬೇಕು. ಏಕೆಂದರೆ ಇದು ಪಕ್ಷದ ವಿಷಯ ಅಲ್ಲ. ಇದನ್ನು ಎಲ್ಲಾ ಪಕ್ಷಗಳೂ ಒಪ್ಪಿಕೊಂಡಿವೆ. ಇದರ ಬಗ್ಗೆ ರಾಷ್ಟ್ರ ಮಟ್ಟದಲ್ಲೇ ಒಂದು ತೀರ್ಮಾನವಾಗಿದೆ. ಆದ್ದರಿಂದ ಪಕ್ಷಾತೀತವಾದ ರೀತಿಯಲ್ಲಿ ನಾವು ಚರ್ಚೆ ಮಾಡೋಣ. ನಮ್ಮ ಉದ್ದೇಶ ಏನೆಂದರೆ ಯಾವ ಯಾವ ಮಟ್ಟದಲ್ಲಿ ಎಷ್ಟೆಷ್ಟು ಅಧಿಕಾರ ಕೊಡಬೇಕೋ ಜವಾಬ್ದಾರಿ ಕೊಡಬೇಕೋ ಅಷ್ಟನ್ನು ಕೊಟ್ಟರೇನೇ ನಮ್ಮ ಕೆಲಸ ಸುಗಮವಾಗಿ ನಡೆಯುತ್ತದೆ. ಜನಕ್ಕೂ ತೃಪ್ತಿಯಾಗುತ್ತದೆ. ಹೀಗಿರುವಾಗ We are not arguing against each other. What is the right thing to do is the question. ಆದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇಂಥ ಇಂಥ ರಸ್ತೆಗಳನ್ನು ನಾವು ಜಿಲ್ಲಾಪರಿಷತ್ತಿಗೆ ವಹಿಸಿಕೊಟ್ಟಿದ್ದೇವೆ ಅಂದರೆ ಆ ರಸ್ತೆಗಳ ರಿಪೇರಿ ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ ಅಷ್ಟನ್ನೂ ನಾವು ಕೊಡಬೇಕಾಗುತ್ತದೆ. ಆ ರೀತಿಯಲ್ಲಿ ನಾವು ನಿಯಮಗಳನ್ನು ಮಾಡಿದರೆ ಅದು ಸರಿಯಾಗುತ್ತದೆ. ಅದಕ್ಕೆ ಆ ವಿಚಾರದಲ್ಲಿ ನಾವು ಸ್ಪಷ್ಟಮಾಡಬೇಕಾಗಿದೆ. ಇಂಥ ರಸ್ತೆಗಳಿಗೆ ನಾವು ರಿಪೇರಿ ಮಾಡುವುದಕ್ಕೆ ನಿಮಗೆ ಹಣವನ್ನು ಕೊಟ್ಟಿದ್ದೇವೆ ಇನ್ನುಳಿದ ರಸ್ತೆಗಳನ್ನು ನಾವು ನಿರ್ವಹಿಸುತ್ತೇವೆ ಅದು ನಮಗೆ ಸೇರಿದ್ದು ಎಂದೂ ಹೇಳಬೇಕಾಗುತ್ತದೆ. ಅದೇ ರೀತಿಯಲ್ಲಿ ಸ್ಕೂಲ್ ಟೀಚರ್ಸ್ ಸಂಬಳ ಅವರ ಬಜೆಟ್ ಮುಖಾಂತರ ಖರ್ಚು ಮಾಡಬೇಕೆಂದಿದ್ದರೆ ಅಲ್ಲಿ ಎಷ್ಟು ಜನ ಟೀಚರ್ಸ್ ಇದ್ದಾರೆ ಎಷ್ಟು ಸ್ಕೂಲ್‌ಗಳು ಇವೆ ಅವುಗಳಿಗೆ ತಗಲುವ ಒಟ್ಟು ಖರ್ಚಿನಮೊತ್ತವನ್ನು ಕಳುಹಿಸುವ ಜವಾಬ್ದಾರಿಯು ಸರಕಾರದ್ದು. ಒಂದು ವೇಳೆ ಅದರಲ್ಲಿ ಏನಾದರೂ ತಪ್ಪಾಗಿದ್ದರೆ ಅದನ್ನು ಹೇಳುವಂತಹ ಹಕ್ಕು ನಮಗಿದೆ. ಆದುದರಿಂದ ಯಾವ ವಿಷಯವನ್ನೂ ಕೂಡ ಅವರ ಕಡೆಯಿಂದ ವಾಪಸ್ ತೆಗೆದುಕೊಂಡು ನಾವು ಸರಿಪಡಿಸುವುದ ಕ್ಕಾಗುವುದಿಲ್ಲ. ಅವರಿಗೆ ನಾವು ಯಾವ ಜವಾಬ್ದಾರಿಯನ್ನು ನಿರ್ವಹಿಸಲು ಕೊಟ್ಟಿದ್ದೇವೋ ಅದಕ್ಕೆ ಬೇಕಾದಷ್ಟು ಹಣವನ್ನು ನಾವು ಕೊಡ ಬೇಕಾಗುತ್ತದೆ ಮತ್ತು ಅದರಲ್ಲಿ ಏನಾದರೂ ತಪ್ಪು ನಿರ್ವಹಣೆ ಕಂಡು ಬಂದಲ್ಲಿ ಅದನ್ನು ಸರಿಪಡಿಸುವುದಕ್ಕೆ ಸರಕಾರ ಇದ್ದೇ ಇದೆ ಎಂದು ಹೇಳ ಬಯಸುತ್ತೇನೆ. ಇನ್ನೊಂದು ಅತಿ ಮುಖ್ಯವಾದಂಥ ವಿಚಾರ ಅಂದರೆ ಅಫೀಶಿಯಲ್ಸ್ ಮತ್ತು ನಾನ್‌ಅಫೀಶಿಯಲ್ಸ್. ಇವರುಗಳ ಡ್ಯೂಟಿ ಏನೆಂಬುದರ ಬಗ್ಗೆ ನಾವು ಚಿಂತನೆ ಮಾಡಬೇಕು. ಸಾಕಷ್ಟು ಆಳವಾಗಿ ಚಿಂತನೆ ಮಾಡಬೇಕು. ಏಕೆಂದರೆ ಅದರಲ್ಲಿ ಸ್ವಲ್ಪ ಮಿಕ್ಸ್‌ಅಪ್ ಆಗಿದೆ ಎಂದು ನನ್ನ ಅಭಿಪ್ರಾಯ. ಯಾವುದೇ ಲೆವೆಲ್‌ನಲ್ಲಿ ಅಫೀಶಿಯಲ್ಸ್ ಏನು ಮಾಡಬೇಕು ಮತ್ತು ನಾನ್‌ಅಫೀ ಶಿಯಲ್ಸ್ ಏನು ಮಾಡಬೇಕು ಎಂಬುದನ್ನು ನೋಡುವುದಾದರೆ ತಮಗೆ ಗೊತ್ತಿರುವ ಹಾಗೆ so far as policies and programmes are concerned, ಇದು ನಾನ್‌ಅಫೀಶಿಯಲ್ಸ್‌ಗೆ ಸಂಬಂಧ ಪಟ್ಟಿದ್ದು. ಇದು ಕೇಂದ್ರ ಸರಕಾರ ಆಗಲಿ ರಾಜ್ಯ ಸರಕಾರ ಆಗಲಿ ಜಿಲ್ಲಾ ಆಗಲಿ ತಾಲ್ಲೂಕು ಆಗಲಿ ಪಂಚಾಯತ್ ಆಗಲಿ ಆಯಾ ಮಟ್ಟಕ್ಕೆ ಸಂಬಂಧಪಟ್ಟಂಥ ಜವಾಬ್ದಾರಿ ಅಂದರೆ policies, programmes and priorities, ಇದು ಸ್ವಾಭಾವಿಕವಾಗಿ ನಾನ್‌ಅಫೀಶಿಯಲ್ಸ್‌ಗೆ ಬಿಟ್ಟಿದ್ದು. ಗೈಡ್‌ಲೈನ್ಸ್ ಹಾಕುವುದು

ಸಹ ನಾನ್‌ಅಫೀಶಿಯಲ್ಸ್ ಅದರ ಪ್ರಕಾರ ಕಾರ್ಯಗತ ಮಾಡಲು ಬ್ಯುರಾಕ್ರಸಿ ಇದೆ. ನಾನ್ ಅಫೀಶಿಯಲ್ಸ್‌ಗೂ ಬ್ಯೂರಾಕ್ರಸಿಗೂ ಇರತಕ್ಕಂಥ ವ್ಯತ್ಯಾಸ ಇಷ್ಟೆ; ಪಾಲಿಸೀಸ್ ಪ್ರೋಗ್ರಾಂಸ್ ಮತ್ತು ಪ್ರೈಯಾರಿಟೀಸ್ ಇದನ್ನು ನಾನ್‌ಅಫೀಶಿಯಲ್ಸ್ ಮಾಡುತ್ತಾರೆ. ಆದರೆ ಇದನ್ನೆಲ್ಲಾ ಕಾರ್ಯಗತ ಮಾಡುವಾಗ ಅಂದರೆ ಬಿಲ್ ಸಹಿ ಮಾಡುವುದು, ಟೆಕ್ನಿಕಲ್ ಸ್ಕ್ರೂಟಿನಿ ಮಾಡುವುದು ಇಂತಹ ಕೆಲಸಗಳಿಗೆ ಅಫಿಶಿಯಲ್ಸ್ ಇದ್ದಾರೆ. ಆದುದರಿಂದ ಈ ವ್ಯತ್ಯಾಸ ಏನಿದೆ ಇದನ್ನು ನಾವು ಯಾವಾಗಲೂ ಸ್ಪಷ್ಟವಾಗಿ ಇಟ್ಟಿರಬೇಕು. ಈಗ ಉದಾಹರಣೆಗೆ ನಮ್ಮಲ್ಲಿ ಅಧ್ಯಕ್ಷರು ಮತ್ತು ಮುಖ್ಯಕಾರ್ಯದರ್ಶಿಗಳು ಮಾಡುವ ಕೆಲಸಗಳ ಬಗ್ಗೆ ಸ್ವಲ್ಪ ಗೊಂದಲ ಇದೆ. ಏಕೆಂದರೆ ನಮ್ಮದೇಶದಲ್ಲಿ ನಾವು ಬ್ರಿಟೀಷ್ ಪಾರ್ಲಿಮೆಂಟರಿ ಪದ್ಧತಿ ಪ್ರಕಾರ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದೇವೆ. ಆದರೆ ಅಮೇರಿಕಾದಲ್ಲಿ ಹಾಗಿಲ್ಲ. ತಮಗೆ ಗೊತ್ತಿರುವ ಹಾಗೆ ಅಲ್ಲಿನ ಅಧ್ಯಕ್ಷರು ಡೈರೆಕ್ಟ್ ಆಗಿ ಚುನಾಯಿತರಾಗುವುದರಿಂದ ಅವರು ಇಡೀ ದೇಶಕ್ಕೆ ಚೀಫ್ ಎಕ್ಸಿಕ್ಯೂಟಿವ್ ಆಗಿ ಅವರ ಜೊತೆಗೆ ಕೆಲವು ಆಫೀಸರ್ಸ್ ಅನ್ನು ಕರೆದುಕೊಂಡು ಬರುತ್ತಾರೆ ಅಧ್ಯಕ್ಷರು ಹೊರಟು ಹೋಗುವಾಗ ಅವರ ಜೊತೆಯಲ್ಲಿಯೇ ಇವರೂ ಕೂಡ ಹೊರಟು ಹೋಗುತ್ತಾರೆ. ಆದರೆ ಇಂಗ್ಲೇಂಡ್‌ನಲ್ಲಿ ಬ್ರಿಟಿಷ್ ಪ್ರೈಮ್-ಮಿನಿಷ್ಟರ್ ಬಂದರೇನು ಹೋದರೇನು ಒಬ್ಬರು ಹೋದರೆ ಇನ್ನೊಬ್ಬರು ಆರಿಸಿ ಬರುತ್ತಾರೆ ಆದರೆ ಅಲ್ಲಿನ ಬ್ಯೂರಾಕ್ರಸಿ ಹಾಗೇ ಇರುತ್ತದೆ. elected leaders may come and go but bureaucracy continues. Bureaucracy ensures continuity. ಈಗ ನಮ್ಮ ದೇಶದಲ್ಲಿ ನಾವು ಬ್ರಿಟೀಷ್ ಪಾರ್ಲಿಮೆಂಟರಿ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಇಲ್ಲಿ ಅಧ್ಯಕ್ಷರ ಮತ್ತು ಮುಖ್ಯ ಕಾರ್ಯದರ್ಶಿಗಳ ಪವರ್ಸ್‌ನ್ನು ಈಗಿನ ಆಕ್ಟ್‌ನಲ್ಲಿ ಬರೆಯುವಾಗ ಸ್ವಲ್ಪ ಗೊಂದಲವಾಗಿದೆ. ಅಮೇರಿಕಾದ ಅಧ್ಯಕ್ಷರ ವಿಚಾರವನ್ನೆ ಜಿಲ್ಲಾ ಮಟ್ಟದಲ್ಲಿ ತಂದು ಇಲ್ಲಿ ಹೋಲಿಕೆ ಮಾಡಲು ಪ್ರಯತ್ನ ಮಾಡಿದ್ದಾರೆಂದು ನನಗೆ ಒಂದೊಂದು ಸಲ ಅನ್ನಿಸುತ್ತದೆ. ಇದನ್ನೂ ಉದ್ದೇಶಪೂರ್ವಕವಾಗಿ ಮಾಡಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ ಈಗ ನಾವು ಬ್ರಿಟೀಷ್ ಪಾರ್ಲಿಮೆಂಟ್ ಸಿಸ್ಟಮ್‌ನಲ್ಲಿ ಹೋಗುವುದಿದ್ದರೆ ಆಗ ಅಫೀಶಿಯಲ್ಸ್ ಏನು ಮಾಡಬೇಕು ನಾನ್‌ಅಫೀಶಿಯಲ್ಸ್ ಏನು ಮಾಡ ಬೇಕೆಂಬ ಬಗ್ಗೆ ಎಳ್ಳಷ್ಟೂ ಗೊಂದಲ-ಇರಬಾರದು ಒಂದು ವೇಳೆ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡ ಬೇಕಾಗುತ್ತದೆ. ಅದೇ ರೀತಿ ಚೀಫ್ ಅಕೌಂಟ್ಸ್ ಆಫೀಸರ್‌ಗಳು ಡೆಪ್ಯುಟಿ ಸೆಕ್ರೆಟರಿಗಳು ಬಿಡಿಒಗಳು ಅಸಿಸ್ಟೆಂಟ್ ಕಮಿಷನರ್‌ಗಳು ಇವರುಗಳು ಏನಿದ್ದಾರೆ ಅವರು ಚೆಂದಕ್ಕಾಗಿ ಸಂಬಳ ತೆಗೆದುಕೊಂಡು ಸುಮ್ಮನೆ ಕೂತು ಹೋಗುವುದಕ್ಕೆ ಅಲ್ಲ. ಅವರವರ ಕೆಲಸ ಅವರು ಮಾಡಬೇಕು. ಜಿಲ್ಲಾ ಪರಿಷತ್‌ನಲ್ಲಿ ಏನಾದರೂ ಅಕ್ರಮ ನಡೆದರೆ ಸಿ.ಎ.ಒ. ಆದವರು ಅದು ಸರಿಯಲ್ಲವೆಂದು ಬರೆಯುವ ಶಕ್ತಿ ಅವರಿಗೆ ಇರಬೇಕು. ಅವರು ಆ ಕೆಲಸ ಮಾಡದೇ ಹೋದರೆ ಅವರನ್ನು ಸಿಇಒ ಎಂದು ಏಕೆ ಕರೆಯಬೇಕು ಪ್ಲಾನಿಂಗ್ ಇಲಾಖೆಯ ಡಿ.ಎಸ್. ಅವರಿಗೆ ಪ್ಲಾನಿಂಗಿನ ಜವಾಬ್ದಾರಿ ಇಲ್ಲದೇ ಹೋದರೆ ಅವರನ್ನು ಡಿ ಎಸ್ ಫಾರ್ ಪ್ಲಾನಿಂಗ್ ಎಂದು ಏಕೆ ಕರೆಯಬೇಕು ಅದೇ ರೀತಿ ಬಿಡಿಒಗಳು ಮತ್ತು ಎಸಿಗಳು ಇದ್ದಾರೆ. ಪ್ರತಿ ತಾಲ್ಲೂಕು ಮಟ್ಟದಲ್ಲಿ ಎಸಿಯನ್ನು ಚೀಫ್ ಎಕ್ಸಿಕ್ಯುಟಿವಾಗಿ ಮಾಡಬೇಕೆಂದು ಜನಾಭಿಪ್ರಾಯವಿದೆ. ಈಗ ಜಿಲ್ಲಾ ಪರಿಷತ್ ಮಟ್ಟದಲ್ಲಿ ಚೀಫ್ ಸೆಕ್ರೆಟರಿ ಇದ್ದಾರೆ ಈಗ ಬೇರೆ ಆಫೀಸರ್ಸ್‌ಗಳನ್ನು ಕಂಟ್ರೋಲ್ ಮಾಡಲು ಬಿಡಿಒಕೈಲಿ ಆಗುವುದಿಲ್ಲ. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ The Assistant Commissioner should be the Chief Exeutive of the Taluka Samithi ಎಂಬ ಅಭಿಪ್ರಾಯವಿದೆ. ಇದರಲ್ಲಿ ಸಾಕಷ್ಟು ಅರ್ಥ ಇದೆ ಎಂದು ನನಗನ್ನಿಸುತ್ತದೆ. ಮತ್ತೆ ಎಲ್ಲಾ ಅಧಿಕಾರಿಗಳನ್ನೂ ಜಿಲ್ಲಾಮಟ್ಟದಲ್ಲಿ ನೀವು ಕೇಂದ್ರೀಕರಣ ಮಾಡಿದರೆ ಅದು ಕೂಡ ಬಹಳ ತಪ್ಪಾಗುತ್ತದೆ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಹಾಗೂ ಗ್ರಾಮಮಟ್ಟದಲ್ಲಿ ಯಾವ್ಯಾವ ಕೆಲಸಗಳು ಆಗಬೇಕೋ ಅವನ್ನು ಮಾಡಲು ಸಂಬಂಧಿಸಿದ ಅಧಿಕಾರಿಗಳು ಅಲ್ಲಲ್ಲಿ ಇರಬೇಕು. ಗ್ರಾಮ ಸಭೆ ಏನಿದೆ ಅದು ಪಂಚಾಯತ್ ರಾಜ್ ವ್ಯವಸ್ಥೆಯ ಜೀವಾಳ. ಅದು

ಬಲವಾಗಿದ್ದರೆ ಗ್ರಾಮಸ್ವರಾಜ್ಯ ಪ್ರಬಲವಾಗಿ ನಿಲ್ಲುತ್ತದೆ. ಈ ಗ್ರಾಮಸಭೆ ಮೀಟಿಂಗಗಳನ್ನು ಎಷ್ಟು ಸಲ ಕರೆಯಬೇಕೋ ಅಷ್ಟು ಸಲ ಕರೆಯದಿದ್ದರೆ ಏನು ಮಾಡಬೇಕು It may not be wrong even to supersede the Mandal who deliberatley do not call the grama Sabha. ಆ ಕಡೆಯುವರ ಮತ್ತು ಈ ಕಡೆಯುವರು ಈ ಬಗ್ಗೆ ಮಾತನಾಡಿದ್ದಾರೆ. ಎಷ್ಟರಮಟ್ಟಿಗೆ ಗ್ರಾಮಸಭೆಯನ್ನು ನಾವು ಬಲಗೊಳಿಸುವೆವೊ ಅಷ್ಟರಮಟ್ಟಿಗೆ ಗ್ರಾಮಸ್ವರಾಜ್ಯದ ಕನಸು ನನಸಾಗುವುದು ಮತ್ತು ಪಟ್ಟಭದ್ರ ಹಿತಾಶಕ್ತಿಗಳು ಇದನ್ನು ಕ್ಯಾಪ್ಚರ್ ಮಾಡಿ ... ಬಡ ಜನರಿಗೆ ಅಧಿಕಾರಕ್ಕೆ ಬರಲು ಅವಕಾಶ ಕೊಡುತ್ತಿಲ್ಲ ಎನ್ನುವ ಮಾತಿಗೆ ಸಹ ಅವಕಾಶವಿರುವುದಿಲ್ಲ. ಆದ್ದರಿಂದ ನಾವು ಗ್ರಾಮ ಸಭಾಗಳನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಇನ್ನು ಟೂ ಥರ್ಡ್ ಮೆಜಾರಿಟಿ ಬಗ್ಗೆ ಮತ್ತು ಸಿಂಪಲ್ ಮೆಜಾರಿಟಿ ಬಗ್ಗೆ ಕೂಡ ಬಹಳಷ್ಟು ಸಲಹೆಗಳು ನಮ್ಮ ಪಕ್ಷದಿಂದ ಮತ್ತು ವಿರೋಧಪಕ್ಷದವರಿಂದಲೂ ಬಂದಿವೆ. ನಾವು ಅಧ್ಯಕ್ಷರನ್ನು ಆರಿಸುವಾಗ ಸಿಂಪಲ್ ಮೆಜಾರಿಯಿಟಿಯಿಂದ ಆರಿಸುತ್ತೇವೆ. ಆದರೆ ಅವರನ್ನು ಅಧಿಕಾರದಿಂದ ಇಳಿಸಬೇಕಾದರೆ ಟೂಥರ್ಡ್ ಮೆಜಾರಿಟಿ ಬೇಕೆಂದು ಕಾನೂನು ಹೇಳುತ್ತದೆ. ಒಂದೊಂದು ಸಲ ಏನಾಗುತ್ತದೆಂದರೆ, ದುರ್ದೈವದಿಂದ ಮೆಜಾರಿಟಿ ಹೊರಟುಹೋದರೆ ಜಿಲ್ಲಾ ಪರಿಷತ್ ಆಗಲಿ ಮಂಡಲ್ ಆಗಲಿ ನಡೆಸುವುದು ಬಹಳ ಕಷ್ಟವಾಗುತ್ತದೆ ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಯಾವ ಕೆಲಸ ಮಾಡಿದರೂ ಮೆಜಾರಿಟಿ ಪ್ರಕಾರ ಮಾಡಬೇಕು. ಆದರೆ ಮೆಜಾರಿಟಿಯೇ ಇಲ್ಲ ಅಂದರೆ ಆಗ ಅವರು ಅಧ್ಯಕ್ಷರಾಗಿ ಉಪಯುಕ್ತವಾಗಿ ಕೆಲಸ ಮಾಡಲು ಸಾಧ್ಯ ಆಗುವುದಿಲ್ಲ. ಮತ್ತೆ ಪ್ರಜಾಪ್ರಭುತ್ವಕ್ಕೆ ವಿರೋಧ ಬಂದುಬಿಡುತ್ತದೆ. ಆ ಕಾರಣ ಹಿಂದೆ ಏನು 2/3 ಮೆಜಾರಿಟಿ ಮಾಡಿದ್ದಾರೆ ಅದು ಜಿಲ್ಲಾ ಬೋರ್ಡ್‌ನಲ್ಲಿ ಕೂಡಾ ಇತ್ತು. ಏಕೆಂದರೆ ಪದೇ ಪದೇ ಅಧ್ಯಕ್ಷರನ್ನು ಛೇಂಜ್ ಮಾಡಬಾರದು ಎಂದು; that was the original idea. ಈಗ ಛೇಂಜ್ ಮಾಡುವ ಪ್ರಶ್ನೆ ಪದೇ ಪದೇ ಬರುವುದಿಲ್ಲ. ಏಕೆಂದರೆ Anti-Defection ಲಾ ಇದೆ ಮತ್ತು ರಾಜಕೀಯವಾಗಿ ಕೂಡ ಸ್ವಲ್ಪ ಮೆಜ್ಯಾರಿಟಿ ನಮ್ಮ ಜನರಿಗೆ ಬಂದಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆ ಕಾರಣ 2/3 ಮೆಜಾರಿಟಿಯನ್ನು ತೆಗೆದು ಸಿಂಪಲ್ ಮೆಜಾರಿಟಿಯನ್ನು ಮಾಡಿದ ತಕ್ಷಣ ಅಸ್ಥಿರತೆ ಆ ಮಟ್ಟದಲ್ಲಿ ಬರುತ್ತದೆ ಎಂದ ನಾವು ಭಾವಿಸ ಬೇಕಾಗಿಲ್ಲ. ಇದು ಕೂಡಾ ನಮ್ಮ ಗಮನದಲ್ಲಿದೆ ಮತ್ತೆ ವಿಶೇಷ ಅಧಿವೇಶನ ಕರೆದು ಈ ಆಕ್ಟನ್ನು ಮಾರ್ಪಾಡುಮಾಡುವಾಗ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇರುತ್ತದೆ ಮತ್ತು ಇವತ್ತು ನಾನು ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾದ್ದು ಇಲ್ಲ. It is a point worth considering. ನಾನು ವಾದ ಹೇಳಿದೆ ಮತ್ತು ಇದರಲ್ಲಿ ಇರತಕ್ಕಂಥ ವಿಚಾರ ಹೇಳಿದೆ. ಇನ್ನು ನಾಮಕರಣ ಪದ್ಧತಿ ಏನು ಇದೆ ಇದು ....

SRI R.V. DESHPANDE:- I cannot understand what you have said.

ಶ್ರೀ ಎಂ.ವೈ. ಘೋರ್ಪಡೆ:- ನ್ಯಾಯವಾಗಿ ನೋಡಿದರೆ ಈ ವಿಚಾರದಲ್ಲಿ ಇದರ ಬಗ್ಗೆ ಇಷ್ಟೊಂದು ಮಾತನಾಡಲೇಬಾರದು. ಇದು ಸಿಂಪಲ್ ಇದೆ. ಇದು ನಿಮಗೆಲ್ಲಾ ಗೊತ್ತಿದೆ. ನಾನು ನಿಮಗೆ ತಿಳಿಸುವ ವಿಚಾರ ಇಲ್ಲಿ ಬರಬಾರದು. ಏಕೆಂದರೆ ಕರ್ನಾಟಕದಲ್ಲಿ ರಾಜಕೀಯ ಸ್ವಲ್ಪ ಗೊತ್ತಿದ್ದವರಿಗೂ ಈ ವಿಚಾರ ಗೊತ್ತಿದೆ. ಇವತ್ತು ನೀವು ಮಾಡಿರತಕ್ಕಂಥ ಕಾನೂನು ಪ್ರಕಾರ ಮೆಜಾರಿಟಿಯಿಂದ ಅವನು ಆರಿಸಿ ಬಂದರೂ ಮುಂದೆ ಆತನನ್ನು ಆ ಜಾಗದಿಂದ ತೆಗೆಯಬೇಕಾದರೆ 2/3 ಮೆಜಾರಿಟಿ ಬೇಕಾಗುತ್ತದೆ. ಆಮೇಲೆ ಮೆಜಾರಿಟಿ ಹೊರಟು ಎಲೆಕ್ಟ್ ಮಾಡುವಾಗ ಮೆಜಾರಿಟಿ ಇರುತ್ತದೆ. ಆಮೇಲೆ ಮೆಜಾರಿಟಿ ಹೊರಟು ಹೋದರೆ ಆಗ ಮೆಜಾರಿಟಿ ಪ್ರಕಾರ ಕೆಲಸ ಮಾಡಲಿಕ್ಕೆ ಅಧ್ಯಕ್ಷನಿಗೆ ಆಗುವುದಿಲ್ಲ. ಮತ್ತೆ 2/3 ರೂಲ್ ಇರುವುದರಿಂದ ಅವನನ್ನು ತೆಗೆಯಲಿಕ್ಕೆ ಸಹ ಆಗುವುದಿಲ್ಲ. ಆದ ಕಾರಣ ಈ ಧರ್ಮ ಸಂಕಟಕ್ಕೆ ಜಿಲ್ಲಾ ಪರಿಷತ್ತನ್ನು ನಾವು ಗುರಿ ಮಾಡಿದಂತಾಗುತ್ತದೆ. ಅದಕ್ಕೋಸ್ಕರ ಎಷ್ಟೋ ಜನ ಸದಸ್ಯರು ಇದನ್ನು ಸಿಂಪಲ್ ಮೆಜಾರಿಟಿ ಮಾಡಿರಿ ಎಂದು ಸದಸ್ಯರುಗಳು ಸಲಹೆಯನ್ನು ಕೊಟ್ಟಿದ್ದಾರೆ. ಅಷ್ಟು ಮಾತ್ರ ನಾನು ಈ ಸಭೆಗೆ ತಿಳಿಸುತ್ತಿದ್ದೇನೆ.

All these matters will be taken into consideration at the time of amendment of the Act. At this stage, it is my duty to convey the thinking of the Government. We should not mix politics. If we want change we have to improve and amend the act.

ಶ್ರೀ ಡಿ.ಬಿ. ಚಂದ್ರೇಗೌಡ:- ನಿಮ್ಮ ಈ 2/3 ಮತ್ತು 1/3 ಬಗ್ಗೆ ಹೇಳಬೇಕೆಂದರೆ, ಮೆಜಾರಿಟಿ ಏತಕ್ಕೆ ಹೋಗುತ್ತದೆ ಎನ್ನುವುದು ಮುಖ್ಯ. ಮೆಜಾರಿಟಿ ಏತಕ್ಕೆ ಹೋಗುತ್ತದೆ ಎಂದರೆ ಜಿಲ್ಲಾ ಪರಿಷತ್ತಿನ ಸದಸ್ಯರು ಅಲ್ಲದೇ ಇರುವವರು ಸದಸ್ಯರುಗಳಾಗುವುದರಿಂದ ಮೆಜಾರಿಟಿ ಹೋಗುತ್ತದೆ. Please bear it in mind.

SRI R.V. DESHPANDE:- If you feel that 2/3rds majority should go, I would request you that such amendments are required in many acts like Co-operative Societies Act. Your Government will have to bring such amendments to all acts.

SRI M.Y. GHORPHADE:- I am fully aware of the impediments when we bring amendments. These are the questions. I was coming to the point. ಈ ನಾಮಿನೇಟೆಡ್ ಜನ ಏನಿದ್ದಾರೆ ಅವರಿಗೆ ವೋಟಿಂಗ್ ರೈಟ್ಸ್ ಇರಬೇಕೇ ಬೇಡವೇ ಎಕ್ಸ್ ಆಫಿಸಿಯೋ ಮೆಂಬರ್ಸ್ ಏನು ಇದ್ದಾರೆ ಅವರಿಗೆ ವೋಟಿಂಗ್ ರೈಟ್ಸ್ ಇರಬೇಕೇ ಬೇಡವೇ ಈ ಪ್ರಶ್ನೆಗಳು ಕನೆಕ್ಟೆಡ್ ಇಷ್ಯೂ ಇರಬಹುದು. ಅದೆಲ್ಲವನ್ನು ಮಿಕ್ಸ್ ಅಪ್ ಮಾಡುವುದು ಬೇಡ.

SRI K.B. KOLIWAD:- There is also the possibility of an independent member joining other party.

SRI M.Y. GHORPADE:- Let them ask questions. But it is my duty to put before them clearly the basic issues. ಈಗ ನಾಮಿನೇಷನ್ಸ್ ಇದೆ ಮಂಡಲಪಂಚಾಯಿತಿಗೆ ಜಿಲ್ಲಾ ಪರಿಷತ್ತಿನವರು ನಾಮಿನೇಷನ್ಸ್ ಮಾಡುತ್ತಿದ್ದಾರೆ ಅದು ಪ್ರಜಾಪ್ರಭುತ್ವದ ನೀತಿಗೆ ಸಂಪೂರ್ಣವಾದ ವಿರೋಧ ಇದೆ. ಏಕೆಂದರೆ ನಾಮಿನೇಷನ್ಸ್ ಮಾಡಿ ಅಲ್ಲಿ ಏನು ಆಗುತ್ತಿದೆ ಎಷ್ಟೋ ಕಡೆ ಎಲ್ಲಿ ಸ್ಲೆಂಡರ್ ಮೆಜಾರಿಟಿ ಇದೆ ಎರಡು ವೋಟಿನಿಂದ ಯಾವ ಒಂದು ಪಕ್ಷ ಮಂಡಲ್‌ನಲ್ಲಿ ಗೆದ್ದು ಬಂದಿದೆ ಅದನ್ನು ಸೋಲಿಸುವುದಕ್ಕೋಸ್ಕರ ಜಿಲ್ಲಾ ಪರಿಷತ್ತಿನವರು ಬೇರೆ ಪಕ್ಷಕ್ಕೆ ಸೇರಿದ್ದರೆ ಇಬ್ಬರನ್ನೂ ನಾಮಿನೇಟ್ ಮಾಡುತ್ತಾರೆ.

ಶ್ರೀ ಎಂ.ವಿ. ವೆಂಕಟಪ್ಪ:- ಇಂತಹದು ಐನೂರು ಮಂಡಲ್ ಇದೆ.

ಶ್ರೀ ಎಂ.ವೈ. ಘೋರ್ಪಡೆ:- ಇಂತಹದು ಬೇಕಾದಷ್ಟು ಆಗಿದೆ. ಸುಮಾರು 2500 ಮಂಡಲ್‌ಗಳ ಪೈಕಿ ಸುಮಾರು 10 ಪರ್ಸೆಂಟ್ ಮಂಡಲ್‌ಗಳಲ್ಲಿ ಇಲ್ಲವೇ ಎಷ್ಟು ಕಡೆ ಆದರೂ ಆಗಲಿ ಎರಡು ನೂರು ಇಲ್ಲವೇ ಐದು ನೂರು ಕಡೆ ಆಗಲಿ ಅಥವಾ ಒಂದೇ ಕಡೆ ಆಗಲಿ ಅದನ್ನು ನಾವು ಸಮರ್ಥನೆ ಮಾಡುವುದಕ್ಕೆ ಆಗುವುದಿಲ್ಲ. It is against democracy. ನಾನು ಎಂ.ಎಲ್.ಎ. ಇಲ್ಲದಿದ್ದಾಗ ಸಹ ಈ ಮಾತನ್ನು ಹೇಳಿದೆ. ಮಾನ್ಯ ಹೆಗ್ಗಡೆಯವರಿಗೂ ಇದನ್ನು ಮಾಡಬೇಡಿ ಎಂದು ಹೇಳಿದೆ. ಏಕೆಂದರೆ it is against democracy. ಈಗ ಅದನ್ನು ಅಮೆಂಡ್‌ಮೆಂಟ್ ತರುವಾಗ ಸ್ವಾಭಾವಿಕವಾಗಿ ಇದರ ಬಗ್ಗೆ ಏನು ಮಾಡಬೇಕು ನಾಮಿನೇಷನ್ ತೆಗೆದು ಹಾಕಬೇಕೋ ಅಥವಾ ನಾಮಿನೇಷನ್ ಇಟ್ಟುಕೊಂಡು ಅವರ ವೋಟಿಂಗ್ ರೈಟ್ಸನ್ನು ತೆಗೆಯಬೇಕೋ ಎಂಬ ಪ್ರಶ್ನೆಗಳು ಬರುವುದರಿಂದ ಆಗ ಇದರ ಬಗ್ಗೆ ಚರ್ಚೆಗೆ ಸಾಕಷ್ಟು ಅವಕಾಶ ಇರುತ್ತದೆ. ಆಗ ಇದರ ಬಗ್ಗೆ ತಾವು ತಮ್ಮ ಅಭಿಪ್ರಾಯ ಕೊಡಬಹುದು. ಇದು ಬ್ಯಾಕ್‌ವರ್ಡ್ ಕ್ಲಾಸ್ ಹೆಸರಿನಲ್ಲಿ ರಾಜಕೀಯ ನಡೆದಿದೆ. ಸೊಂಡೋರಿನ ಒಂದು ಉದಾಹರಣೆ ಹೇಳಬೇಕೆಂದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಅದನ್ನೇ ಮಾಡುತ್ತಿದ್ದೀರಿ. ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ.. ತಾತ್ವಿಕವಾಗಿ ಅಲ್ಲ..

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಮಾರ್ಕೆಟಿಂಗ್ ಸೊಸೈಟಿಯಲ್ಲಿ ಲ್ಯಾಂಡ್ ಬ್ಯಾಂಕ್‌ನಲ್ಲಿ...

(ಗೊಂದಲ)

ಛೇರ್ಮನ್:- ಮಂತ್ರಿಯವರು ಮಾತನಾಡಲಿ..

(ಗೊಂದಲ)

ಶ್ರೀ ವಿನಯಕುಮಾರ್ ಸೊರಕೆ:- ಒಂದೊಂದು ಸಾವಿರ ಯಾರು ಯಾರು ಪೆನ್‌ಷನ್ ತೆಗೆದು ಕೊಳ್ಳುತ್ತಿದ್ದರು ಅಂಥವರನ್ನೆಲ್ಲಾ ಈ ಹಿಂದಿನ ಸರಕಾರದವರು ನಾಮಿನೇಟ್ ಮಾಡಿದರು.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಒಂದೇ ಮಾತು ಹೇಳುತ್ತೇನೆ. ಈಗ ನೀವು ಕೇವಲ ಜಿಲ್ಲಾ ಪರಿಷತ್ತಿನದು ಮಾತ್ರ ನೋಡಬೇಡಿ. ಎಪಿಎಂಸಿ ನಾಮಿನೇಷನ್ಸ್ ಮಾಡುವುದಿಲ್ಲವೇ ಮಾರ್ಕೆಟಿಂಗ್ ಸೊಸೈಟಿಯಲ್ಲಿ ನಾಮಿನೇಷನ್ಸ್ ಮಾಡುವುದಿಲ್ಲವೇ ಎಲ್ಲಿ ನಾಮಿನೇಷನ್ಸ್ ಮಾಡುವುದಿಲ್ಲ ಹಾಗಿದ್ದರೆ ಎಲ್ಲ ಕಡೆಯೂ ನಾಮಿನೇಷನ್ಸ್‌ಗಳನ್ನು ತೆಗೆದು ಬಿಡಿ..

(ಗೊಂದಲ)

ಛೇರ್ಮನ್:- ಮಾನ್ಯ ಬನ್ನಿಕೋಡ್‌ರವರೇ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ...

ಶ್ರೀ ಎಂ.ವೈ. ಘೋರ್ಪಡೆ:- ನಾಮಿನೇಟೆಡ್ ಮೆಂಬರ್‌ಗೆ ವೋಟ್ ಹಾಕುವ ರೈಟ್ಸ್ ಕೊಡುವುದು ಪ್ರಜಾಪ್ರಭುತ್ವಕ್ಕೆ ವಿರೋಧ ಎಂದು ಹೇಳಿದೆ. ನಾನು ಅದಕ್ಕೆ ಬದ್ಧನಾಗಿದ್ದೇನೆ. ನಾನು ಬೇರೆ ಇಲಾಖೆಗಳ ವಿಚಾರ ಹೇಳುವುದಿಲ್ಲ. ನಾನು ಈ ಇಲಾಖೆಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಇದು ಸರ್ಕಾರದ ನೀತಿ ಆಗಿರಬೇಕು....

(ಗೊಂದಲ)

SRI R.V.DESHPANDE:- If your Government agrees to amend all these acts...

SRI M.Y. GHORPADE:- I cannot speak about other departments.

(ಗೊಂದಲ)

ಶ್ರೀ ಮಲ್ಲಾರಿ ಗೌಡ ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ ಒಂದೇ ಸಲಕ್ಕೆ ಎಷ್ಟು ಜನ ಬೇಕಾದರೂ ಎದ್ದು ನಿಂತು ಮಾತನಾಡಬಹುದಾ?

(ಗೊಂದಲ)

ಶ್ರೀ ಬಿ.ಹೆಚ್ ಬನ್ನಿಕೋಡ್:- ಜನತಂತ್ರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ರಾದವರು ಅಲ್ಲಿ ಕೆಲಸ ಮಾಡಲಿಕ್ಕೆ..

ಶ್ರೀ ಮಲ್ಲಾರಿ ಗೌಡ ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳ ರಿಪ್ಲೈ ಆದ ಮೇಲೆ ಯಾರು ಬೇಕಾದರೂ ಕೇಳಲಿ. ಇವರು ಈ ರೀತಿ ಮೂರು ನಾಲ್ಕು ಜನ ಕೇಳಲಿಕ್ಕೆ ನಿಂತರೆ ಈ ಕಡೆ ಗಾಡಿ ಆ ಕಡೆಗೆ ಹೋಗಿಬಿಡುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :- ಗಾಡಿ ನಿಮ್ಮ ಕಡೆಯೇ ಇದೆ. ನಮ್ಮ ಕಡೆಗೆ ಇಲ್ಲ.

ಛೇರ್ಮನ್:- ಈಗ ಮಂತ್ರಿಗಳು ಮಾತನಾಡಲಿ.

ಶ್ರೀ ಎಂ.ವೈ. ಘೋರ್ಪಡೆ:- ಮಾನ್ಯ ವಾಟಾಳ್ ನಾಗರಾಜ್ ಅವರು ಬಹಳ ರಚನಾತ್ಮಕವಾದ ಭಾಷಣ ಮಾಡಿದರು. ನನಗೆ ಬಹಳ ಆಶ್ಚರ್ಯ ಆಯಿತು. ಏಕೆಂದರೆ ವಾಟಾಳ್

ನಾಗರಾಜ್‌ರವರು ಮಾತನಾಡುತ್ತಿದ್ದಾರೋ ಅಥವಾ ಬೇರೆ ಯಾರಾದರೂ ಮಾತನಾಡುತ್ತಿದ್ದಾರೋ ಎಂದು; ಏಕೆಂದರೆ ಹಳೇ ದಾಟಿ ಬಿಟ್ಟು ಸ್ವಾಭಾವಿಕವಾದ ದಾಟಿ ಬಿಟ್ಟು ಮಾತನಾಡಿದರು. ಇದರ ಪರಿಣಾಮ ಏನಾಯಿತೆಂದರೆ ಅವರ ಮೂರು ನಾಲ್ಕು ಪಾಯಿಂಟ್ಸ್ ಮೇಲೆ ನಾನು ಉತ್ತರ ಕೊಡಬೇಕಾಗಿ ಬಂತು. ಈಗ ಅವರು ಹೇಳಿದರು ಅದರಲ್ಲಿ ಏನಾದರೂ ತಪ್ಪಿದ್ದರೆ ತಿದ್ದಿರಿ ಆದರೆ ಕಣ್ಣೇ ಕಿತ್ತಬೇಡಿರಿ ಎನ್ನುವ ಮಾತನ್ನು ಹೇಳಿದರು. ಇದರ ಬಗ್ಗೆ ನಾನೂ ಕೂಡ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದೆ. ಇದು ಒಂದೊಂದು ಕ್ಷೇತ್ರಕ್ಕೆ ಎರಡು ಕಣ್ಣುಗಳು ಇದ್ದಂತೆ. ಒಂದನೆಯ ಕಣ್ಣು ಎಂ.ಎಲ್.ಎ; ಎರಡನೆಯ ಕಣ್ಣು ಪಂಚಾಯತ್‌ರಾಜ್ ಸಂಸ್ಥೆಗಳು. ಈ ಪಂಚಾಯತ್‌ರಾಜ್ ಸಂಸ್ಥೆಗಳ ಎರಡನೇ ಕಣ್ಣಿಗೆ ಏನಾದರೂ ಪೊರೆ ಬಂದಿದ್ದರೆ ನಾವು ಅದಕ್ಕೆ ಆಪರೇಷನ್ ಮಾಡುತ್ತೇವೆಯೇ ಹೊರತು ಕಣ್ಣು ಕಿತ್ತುವಂಥ ಪ್ರಶ್ನೆಯಿಲ್ಲ. ಇದರ ಜೊತೆಗೆ ಮೊದಲನೆ ಕಣ್ಣುದೆಯೆಲ್ಲ ಎಂ.ಎಲ್.ಎ; ಅದನ್ನೂ ಕೂಡ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುವುದು ಸರಿಯಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ ಪಂಚಾಯಿತ್‌ರಾಜ್ ಬರುವುದಕ್ಕೆ ಮುಂಚೆ ಅವರೇ ಎಲ್ಲ ಮಾಡುತ್ತಾ ಇದ್ದರು. ಈಗ ಅವರಿಗೆ ತಾಲ್ಲೂಕಿನ ಬಗ್ಗೆ ಸಮಗ್ರವಾದಂಥ ಒಂದು ಅನುಭವ ಜವಾಬ್ದಾರಿ ಕೂಡ ಇರುತ್ತದೆ. ಯಾವುದೇ ಪಂಚಾಯಿತ್‌ರಾಜ್ ಸಂಸ್ಥೆಗಳನ್ನು ನಾವು ನೇಮಕ ಮಾಡಿದರೂ ಸಹ ಎಂ.ಎಲ್.ಎ.ಗಳು ಕೊಡುವಂಥ ಅನುಭವಕ್ಕೆ ಸ್ಥಳೀಯಸಂಸ್ಥೆಗಳ ಮನ್ನಣೆ ಕೊಡಬೇಕು ಎಂದು ಹೇಳಬೇಕಾಗುತ್ತದೆ. ಈಗ ಇನ್ನೊಂದು ಪ್ರಶ್ನೆಯನ್ನು ನೀವು ಎತ್ತಿದಿರಿ. ಏನೆಂದರೆ ಎಂ.ಎಲ್.ಎ.ಗಳಿಗೆ ಬೆಲೆನೇ ಇಲ್ಲ. ಎಕ್ಸಿಕ್ಯೂಟೀವ್ ಪವರ್ಸ್ ಇಲ್ಲ ಎಂದು ಹೇಳಿದರು ಅದಕ್ಕೆ ನಾನು ಹೇಳುತ್ತಿದ್ದೇನೆ. ಡಿಸ್ಟಿಂಕ್‌ಷನ್ ಬಿಟ್ವೀನ್ ಆಫಿಷಿಯಲ್ಸ್ ಅಂಡ್ ನಾನ್ ಅಫಷಿಯಲ್ಸ್ ಬಹಳ ಸ್ಪಷ್ಟವಾಗಿರಬೇಕು. ಎಕ್ಸಿಕ್ಯೂಟೀವ್ಸ್ ಪವರ್ಸ್ ಶುಡ್ ಬಿ ವಿತ್‌ದಿ ಆಫೀಸರ್ಸ್. ಅದಕ್ಕೆ ನಾವು ಎಕ್ಸಿಕ್ಯೂಟೀವ್ಸ್ ಪವರ್ಸ್ ಎಂದು ಕರೆಯಬೇಕು. ಹೀಗೆ ಅಂದತಕ್ಷಣ ಇವರದ್ದು ಪ್ರೊಗ್ರಾಂ ಪ್ರಭಾವ ಇರಬಾರದು ಎಂದು ಅಲ್ಲ. ಪ್ರಭಾವಕ್ಕೂ ಆಫಿಷಿಯಲ್ಸ್ ಎಕ್ಸಕ್ಯೂಟೀವ್ಸ್ ಪವರ್ಸ್‌ಗೂ ಬಹಳ ವ್ಯತ್ಯಾಸ ಇದೆ. ನಾನು 17 ವರ್ಷ ಎಂ.ಎಲ್.ಎ.ಆಗಿ ಕೆಲಸ ಮಾಡಿದ್ದೇನೆ ಮಂತ್ರಿಯಾಗಿದ್ದೇನೆ, ತಾಲ್ಲೂಕು ಸಮಿತಿ ಛೇರ್ಮನ್ನಾಗಿದ್ದೇನೆ. ಎಂ.ಎಲ್.ಎ.ಗೆ ಪ್ರಭಾವ ಯಾವಾಗ ಬರುತ್ತದೆ ಅಂದರೆ ಅವರು ಪ್ರತಿಯೊಂದು ವಿಷಯವನ್ನು ಅರ್ಥಮಾಡಿಕೊಂಡು ಸರಿಯಾದಂಥ ನಾಯಕತ್ವದಿಂದ ಹೆಜ್ಜೆಹೆಜ್ಜೆಗೆ ನೋಡಿದಾಗ ಅವರ ಪ್ರಭಾವ ಜಾಸ್ತಿಯಾಗುತ್ತದೆ. ಅವರು ಸ್ವತ: ಕುಳಿತುಕೊಂಡು ಬಿಲ್ಸ್‌ಗೆ ಸೈನ್ ಮಾಡಬೇಕಾದ್ದಿಲ್ಲ ಸ್ವತ: ಟ್ರಾನ್ಸ್‌ಫರ್ ಮಾಡಬೇಕಾದ್ದಿಲ್ಲ. ಆದ್ದರಿಂದ ಪ್ರಭಾವಕ್ಕೂ ಈ ಕೆಲಸಕ್ಕೂ ಬಹಳ ಅಂತರವಿದೆ. ಈ ಕೆಲಸ ನಾವು ಮಾಡಲಿಕ್ಕೆ ಹೋದರೆ ನಮಗೆ ಇರತಕ್ಕಂಥ ಪ್ರಭಾವ ಹೊರಟು ಹೋಗುತ್ತದೆ. ಅದಕ್ಕೆ ನಾನ್ ಅಫಿಷಿಯಲ್ಸ್‌ನ ಪ್ರಭಾವ ಏನಿದೆ ಅದು ನ್ಯಾಯವಾಗಿರಬೇಕು. ನಾವು ಅದನ್ನು ಕಾಪಾಡಿಕೊಂಡು ಹೋಗಬೇಕಾದರೆ ಈ ಡಿಸ್ಟಿಂಕ್ಷನ್ ಏನಿದೆ ಅಫಿಷಿಯಲ್ಸ್ ಏನು ಮಾಡಬೇಕು ನಾನ್ ಅಫಿಷಿಯಲ್ಸ್ ಏನು ಮಾಡಬೇಕು ಎಂದು ಇದೆ. ಇದನ್ನು ಕಾಪಡಿಕೊಂಡು ಹೋಗುವುದು ಬಹಳ ಮುಖ್ಯ. ಆದರೆ ಇದು ಅದರಲ್ಲಿ ಗೊಂದಲವಾಗಿರುವುದರಿಂದ ಕೆಲವರಿಗೆ ಅನಿಸುತ್ತದೆ ಏನಪ್ಪ ಜಿಲ್ಲಾ ಅಧ್ಯಕ್ಷರು ಏನು ಬೇಕಾದರೂ ಮಾಡುತ್ತಾ ಇದ್ದಾರೆ ನಾವು ಏಕೆ ಮಾಡಬಾರದು ಎಂದು. ಅವರು ಏನು ಬೇಕಾದರೂ ಮಾಡುತ್ತಾ ಇದ್ದರೆ ಅದು ತಪ್ಪು ಎಂದು ನಮಗೆ ಅನಿಸಿದರೆ ಅದನ್ನು ತಿದ್ದಬೇಕು. But we should maintain the distinction between the executive functions of the officials and the functions of the non-officials. ಆಗ ಈ ಭಾವನೆ ಬರಲಿಕ್ಕೆ ಎಳ್ಳಷ್ಟೂ ಆಸ್ಪದ ಇರುವುದಿಲ್ಲ. ಈ ಕರೆಕ್ಟೀವ್ ಸ್ಟೆಪ್ಸ್ ತೆಗೆದು ಕೊಳ್ಳಬೇಕು ಏನು ತಪ್ಪಿದೆ ಅದನ್ನು ನಾವು ತಿದ್ದಬೇಕು; ತಿದ್ದಲಿಕ್ಕೆ ಮೂರು ವಿಧಾನ ಇದೆ. ಒಂದನೆಯದು ಅಡ್ಮಿನಿಸ್ಟ್ರೇಟೀವ್ ಆರ್ಡರ್ಸ್‌ನಿಂದ ನಾವು ಎಷ್ಟೋ ತಪ್ಪುಗಳನ್ನು ತಿದ್ದಬಹುದು. ಎರಡನೇಯದು ಆಕ್ಟನ್ನು ಅಮೆಂಡ್ ಮಾಡಿ ಆಫ್ಟರ್ ಡಿಸ್ಕಷನ್ ತಿದ್ದಬಹುದು. ಮೂರನೆಯದು ಒಂದು ಸರಿಯಾದಂಥ ವಾತಾವರಣ ಕಲ್ಪನೆಮಾಡಿ ಎಷ್ಟೋ ವಿಷಯಗಳನ್ನು ನಾವು ಸರಿಪಡಿಸಲಿಕ್ಕೆ ಸಾಧ್ಯವಿದೆ. ಏಕೆಂದರೆ ಘರ್ಷಣೆ

ವಾತಾವರಣ ಬಂದುಬಿಟ್ಟರೆ ಆಗ ಬಹಳ ಕಷ್ಟವಾಗುತ್ತದೆ. ಈಗ ಪ್ರೊಫೆಸರ್ ನಂಜುಂಡಸ್ವಾಮಿ ಯವರು ಈ ಮಾತನ್ನು ಹೇಳಿದರು. ಮಾನ್ಯ ಪಿಜಿಆರ್.ಸಿಂಧ್ಯರವರು ಕೂಡ ಹೇಳಿದರು. ಈ ರಾಜಕೀಯ ಪಕ್ಷಗಳು ಅದರಲ್ಲಿ ಪ್ರವೇಶವಾಗಿ ತಮ್ಮತಮ್ಮ ಪಕ್ಷಗಳ ವತಿಯಿಂದ ಕ್ಯಾಂಡಿಡೇಟ್ ಗಳನ್ನು ಇಟ್ಟು ಅಲ್ಲಿ ಘರ್ಷಣೆಯ ವಾತಾವರಣವಾಗಿದೆ. ಈ ಪಕ್ಷಗಳು ಅದರಲ್ಲಿ ಏಕೆ ಪ್ರವೇಶ ವಾಗಬೇಕು ಎಂದು; ನಾನೂ ಕೂಡ ಹೇಳುತ್ತೇನೆ; ನನಗೆ ಏನೂ ಆಕ್ಷೇಪಣೆ ಇಲ್ಲ ನನ್ನ ವೈಯಕ್ತಿಕ ಅಭಿಪ್ರಾಯ ಅದೇ ರೀತಿ ಇಡೆ. ಇವತ್ತು ಅಲ್ಲಿ ಸಿದ್ಧಾಂತದ ಪ್ರಶ್ನೆ ಏನಿದೆ ನ್ಯಾಯಸ್ಥರು ನ್ಯಾಯ ವಾದಂಥ ದಕ್ಷರಾಗಿರತಕ್ಕಂಥ ಜನರನ್ನು ಆರಿಸಬೇಕಾಗಿದೆ. ಏಕೆಂದರೆ ಈ ಸಿದ್ಧಾಂತವನ್ನು ಎಲ್ಲರೂ ಒಪ್ಪಿದ್ದಾರೆ. ಆದಕಾರಣ ಈ ದೇಶದಲ್ಲಿರತಕ್ಕಂಥ ಅಥವಾ ಕರ್ನಾಟಕದಲ್ಲಿರತಕ್ಕಂಥ ಎಲ್ಲ ಪಕ್ಷಗಳು ರಾಜಕೀಯಕವಾಗಿ ಆ ತೀರ್ಮಾನಕ್ಕೆ ಬರುವುದಾದರೆ ಆಗ ಪಂಚಾಯಿತಿ ರಾಜ್ಯ ಸಂಸ್ಥೆಗಳಿಗೆ ಅಥವಾ ರಾಜಕೀಯ ಘರ್ಷಣೆಯಿಂದ ಆಗುವಂಥ ಒಂದು ಅಪಾಯದಿಂದ ನಾವು ಸ್ವಲ್ಪಮಟ್ಟಿಗೆ ಅವರಿಗೆ ರಕ್ಷಣೆಕೊಟ್ಟಂತಾಗುತ್ತದೆ ಎನ್ನುವ ಮಾತನ್ನು ನಾನಾದರೂ ಒಪ್ಪಲಿಕ್ಕೆ ಸಿದ್ಧನಾಗಿದ್ದೇನೆ. ಈಗ ನಾವು ಏನಾದರೂ ತಪ್ಪು ಇದ್ದುದ್ದನ್ನು ಕರೆಕ್ಟ್ ಮಾಡದೇಹೋದರೆ ಏನಾಗುತ್ತದೆಯೆಂದರೆ ಆ ಸಿಸ್ಟಂಗೆ ಅಪಾಯವಾಗುತ್ತದೆ. ನಾವು ಏನೇನೊ ಅಧಿಕಾರದ ಪೈಪೋಟಿಯಲ್ಲಿ ಎಲ್ಲೆಲ್ಲಿ ತಪ್ಪಿದೆ ಅದನ್ನುನಾವು ತಿದ್ದದೇಹೋದರೆ ಆ ಸಿಸ್ಟಂಗೆ ಅಪಾಯವಾಗುತ್ತದೆ. ಆ ಸಿಸ್ಟಂಗೆ ಅಪಾಯವಾದರೆ ಸಾಮಾನ್ಯ ಜನರಿಗೆ ಅಪಾಯವಾಗುತ್ತದೆ-ಮತ್ತು ಪಂಚಾಯಿತಿ ರಾಜ್ಯಕ್ಕೂ ಅಪಾಯವಾಗುತ್ತದೆ. ಈ ದೃಷ್ಟಿ ಯಿಂದ ತಮ್ಮ ಪಕ್ಷ ಯಾವುದೇ ಆಗಲಿ ಎಲ್ಲೆಲ್ಲಿ ನಾವು ತಿದ್ದುಪಡಿ ಮಾಡಬೇಕು ಅಲ್ಲಿ ನಿಷ್ಪಕ್ಷಪಾತವಾದಂಥ ರೀತಿಯಿಂದ ಸರ್ಕಾರಕ್ಕೆ ಸಲಹೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಈಗ ತಾಲ್ಲೂಕುಬೋರ್ಡ್ ಬಗ್ಗೆ ತಾವು ಮರೆತೇಬಿಟ್ಟಿರಿ ನನಗೆ ಬಹಳ ಆಶ್ಚರ್ಯವಾಯಿತು. ತಾಲ್ಲೂಕು ಸಮಿತಿ ಇದೆ ಆ ಮಟ್ಟವನ್ನೇ ತಾವು ಮರೆತು ಬಿಟ್ಟಿದ್ದೀರಿ. ಬರೀ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿ ಬಗ್ಗೆ ಮಾತ್ರ ಮಾತನಾಡಿದಿರಿ. ಅದರ ಮಧ್ಯೆ ಏನಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಅದನ್ನು ಬಲಪಡಿಸಬೇಕು ಎಂದು ಹೇಳಿದ್ದಾರೆ. ಮತ್ತೆ ಶ್ರೀಮತಿ ಚಂದ್ರಪ್ರಭ ಅರಸುರವರೂ ಕೂಡ ಹೇಳಿದ್ದಾರೆ. ಏಕೆಂದರೆ ಅವರಿಗೆ ಚೆನ್ನಾಗಿ ಗೊತ್ತಿದೆ. ಏಳನೇ ಶತಕದಲ್ಲಿ ಶ್ರೀಮಾನ್ ದೇವರಾಜ ಅರಸರ ನಾಯಕತ್ವದಲ್ಲಿ ತಾಲ್ಲೂಕು ಬೋರ್ಡ್‌ಗಳು ಮಾತ್ರ ಇತ್ತು. ತಾಲ್ಲೂಕುಬೋರ್ಡ್ ಮುಖಾಂತರ ನಾವು ಎಷ್ಟರಮಟ್ಟಿಗೆ ಹಳ್ಳಿ ಮಟ್ಟದಲ್ಲಿ ಕೆಲಸಮಾಡಿದ್ದೇವೆ ಎನ್ನುವುದು ಅವರಿಗೆ ಗೊತ್ತು; ನನಗೂಗೊತ್ತಿದೆ. ತಮ್ಮಲ್ಲೂ ಎಷ್ಟೋ ಜನರಿಗೆ ಗೊತ್ತಿದೆ; ಆದಕಾರಣ ನಾವು ಅದನ್ನು ಬಲಪಡಿಸಬೇಕು. ಅದೇ ದೃಷ್ಟಿಯಿಂದ ನಾನು ಹೇಳಿದೆ. ಆ ಮಟ್ಟದಲ್ಲಿ ಕೂಡ ನಾವು ಸ್ವಲ್ಪ ಹಣ ಕೊಡಬೇಕು. ಏಕೆಂದರೆ ತಾಲ್ಲೂಕು ಸಮಿತಿಗಳು ಏನಿವೆ ಅಲ್ಲಿ ಪ್ರಧಾನರು ಮೆಂಬರಾಗಿದ್ದಾರೆ ಎಂ.ಎಲ್.ಎ.ನೂ ಇದ್ದಾರೆ ಜಿಲ್ಲಾಪರಿಷತ್ತಿನಿಂದ ಆರಿಸಿ ಹೋಗಿರತಕ್ಕಂಥ ಸದಸ್ಯರೂ ಇದ್ದಾರೆ. ಆದಕಾರಣ ಆ ಮಟ್ಟಕ್ಕೆ ಹಣ ಕೊಡಬೇಕು. ಯಾವ ಯಾವ ಮಂಡಲ್‌ಗೆ ಎಷ್ಟೆಷ್ಟು ಕೊಡಬೇಕು ಎಂದು ಹೇಳಿ. ಈ ಜವಾಬ್ದಾರಿ ಕೊಟ್ಟರೆ ಆ ಹಣ ದುರುಪಯೋಗವೇನೂ ಆಗುವುದಿಲ್ಲ ಜನರಿಗೆ ಬೇಕಾಗುವ ರೀತಿಯಲ್ಲಿ ಅವರು ಖರ್ಚುಮಾಡುತ್ತಾರೆ. ಜಿಲ್ಲಾಮಟ್ಟದಿಂದ ಆ ಕೆಲಸ ಮಾಡುವುದು ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಅದನ್ನು ಹೇಗೆ ಬದಲಾವಣೆ ಮಾಡುತ್ತೀರಿ.

ಶ್ರೀ ಎಂ.ವೈ. ಘೋರ್ಪಡೆ:- ಮುಂದೆ ಯಾವರೀತಿಯಲ್ಲಿ ಅದರಲ್ಲಿ ಬದಲಾವಣೆ ಮಾಡಬೇಕು ಎಂದು ಯೋಚನೆ ಮಾಡೋಣ. ಪುನಃ ಎಲೆಕ್ಷನ್ ಬಂದಾಗ ನೋಡೋಣ. ಎಷ್ಟರಮಟ್ಟಿಗೆ ಅದರಲ್ಲಿ ಎಲೆಕ್ಷನ್ ಮಾಡಬೇಕು ಎಂದು ನೋಡೋಣ. ಕೆಲವರು ಎಲೆಕ್ಟೆಡ್ ಬಾಡಿ ಮಾಡಿ ಎಂದು ಹೇಳಿದ್ದಾರೆ. ಇನ್ನು ಕೆಲವರೂ ಪಾರ್ಷಿಯಲ್ ಎಲೆಕ್ಟೆಡ್ ಆಗಲಿ ಎಂದು ಹೇಳಿದ್ದಾರೆ. ಏಕೆಂದರೆ ತಾಲ್ಲೂಕು ಮಟ್ಟದಲ್ಲಿ ಈಗ ಎಲೆಕ್ಷನ್ ಇಲ್ಲ. ಅದನ್ನು ಆಮೇಲೆ ನೋಡೋಣ. ಆದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ನೀವು ಡೀಸೆಂಟ್ರಲೈಸ್ ಮಾಡಲಿಕ್ಕೆ ಹೋಗಿ ಅದರಲ್ಲಿ ಸೆಂಟ್ರಲೈಸೇಷನ್

ಕೂಡ ನಡೆದು ಹೋಗಿದೆ. ಅದು ಹೇಗೆಂದರೆ ರಾಜ್ಯದಿಂದ ಜಿಲ್ಲಾಪರಿಷತ್ತಿಗೆ ಜವಾಬ್ದಾರಿ ಕೊಡುವುದು ಅದು ಡೀಸೆಂಟ್ರಲೈಸೇಷನ್; ಅಧಿಕಾರದ ವಿಕೇಂದ್ರೀಕರಣ. ಆದರೆ ತಾಲ್ಲೂಕುಮಟ್ಟದಲ್ಲಿ ನಡೆಯುತ್ತಿದ್ದುದನ್ನು ಅದನ್ನು ಜಿಲ್ಲಾಮಟ್ಟಕ್ಕೆ ಎಳೆದುಕೊಂಡು ಹೋಗುವುದು ಅದು ಕೇಂದ್ರೀಕರಣ ಅಲ್ಲಿ ಡೀಸೆಂಟ್ರಲೈಸೇಷನ್ ಖಂಡಿತ ಆಗುವುದಿಲ್ಲ. ಆದರೆ ನೀವು ಉದ್ದೇಶಪೂರ್ವಕವಾಗಿ ಮಾಡಿದ್ದೀರ ಎಂದು ಅಲ್ಲ ಆ ಏಮ್ಸ್ ಮರೆತು ಹೋಗಿದೆ. ಆದಕಾರಣ ಜಿಲ್ಲಾ ಪರಿಷತ್ ಇದ್ದರೂ ತಾಲ್ಲೂಕು ಮಟ್ಟದಲ್ಲಿ ಜನರಿಗೆ ಮಾಡುವ ಸಾಮರ್ಥ್ಯವಿದೆ. ಅದನ್ನು ತಾಲ್ಲೂಕುಮಟ್ಟಕ್ಕೆ ಕೊಡಬೇಕು ಅದೇರೀತಿ ಮಂಡಲ್‌ಗೂ ಕೊಡಬೇಕು. ಅದಕ್ಕೆ ನಾನು ವಿಕೇಂದ್ರೀಕರಣವನ್ನು ನಾವು ಬಲಪಡಿಸಬೇಕು ಎಂದು ಹೇಳಿದೆ. ಅದನ್ನು ವೀಕನ್ ಮಾಡುವ ಪ್ರಶ್ನೆಯಿಲ್ಲ. ಉದಾಹರಣೆಗೆ ರಿಪೇರ್ಸ್ ಟು ಬೋರ್‌ವೆಲ್ಸ್ ಬಗ್ಗೆ ಎಷ್ಟೋ ಸದಸ್ಯರು ಹೇಳಿದರು. ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವವರು ಗತಿಯಿಲ್ಲ ನಾವು ಜಿಲ್ಲಾಮಟ್ಟಕ್ಕೆ ಹೋಗಿ ಅರ್ಜಿ ಕೊಟ್ಟು ಕೊಟ್ಟು ನಮಗೆ ಸಾಕಾಯಿತು ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ; ತಾಲ್ಲೂಕು ಮಟ್ಟಕ್ಕೆ ಈ ವ್ಯವಸ್ಥೆ ಇರಬೇಕು ಎಂದು. ರಿಪೇರಿ ಮಾಡುವವರು 5 ಜನ ಮೊಬೈಲ್ ವ್ಯಾನ್ ಅವರು ಒಂದು ಕಾರ್ಯಕ್ರಮ ಹಾಕಿಕೊಂಡು ಸತತವಾಗಿ ಹಳ್ಳಿಗಳಲ್ಲಿ ತಿರುಗಬೇಕು. ಆದರೆ ಅದಕ್ಕೆ ಇವತ್ತು ಪ್ರೊವಿಜನ್ ಇಲ್ಲ. ದೇರ್ ಈಸ್ ನೊ ಎಕ್ಸಿಕ್ಯೂಟೀವ್ ಫಂಕ್ಷನ್ ಅಟ್ ದಿ ತಾಲ್ಲೂಕ್ ಲೆವೆಲ್. ಅಲ್ಲಿ ಮಂಡಲ್ ಇದೆ ಅಥವಾ ಜಿಲ್ಲಾಪರಿಷತ್ ಇದೆ. ಮಂಡಲ್‌ಗೆ ರಿಪೇರಿ ಮಾಡುವಂಥ ತ್ರಾಣ ಇಲ್ಲ. ಮತ್ತೆ ಜಿಲ್ಲಾಗೆ ಪ್ರತಿಯೊಂದು ಹಳ್ಳಿ ಕಡೆ ನೋಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ತಾಲ್ಲೂಕ್ ಬೋರ್ಡ್‌ಗಳು ಇದ್ದಾಗ ಸಣ್ಣ ಸಣ್ಣ ಮಂಡಲಪಂಚಾಯಿತಿ ಎಂದು ನಾವು ಕರೆಯುತ್ತಾ ಇರಲಿಲ್ಲ; ಪಂಚಾಯಿತಿ ಎಂದು ಕರೆಯುತ್ತಾ ಇದ್ದೆವು. ಅದು ಸ್ವಲ್ಪ ವಯೊಬಲ್ ಆಗಲಿ ಎಂದು 8 ಸಾವಿರ 12 ಸಾವಿರ ಜನಸಂಖ್ಯೆಯುಳ್ಳ ಮಂಡಲಪಂಚಾಯಿತಿ ಮಾಡಿದ್ದಾರೆ. ಆದರೆ ಇದೂ ಕೂಡ ಪರ್‌ಫೆಕ್ಟ್ ಇದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಈಗ ಚಂದ್ರೇಗೌಡರು ಹೇಳಿದರು ಈ ಡೀಸೆಂಟ್ರಲೈಜೇಷನ್ ನಾವು ಮಾಡಿದ್ದಲ್ಲ ಅಥವಾ ಅದು ಪರ್‌ಫೆಕ್ಟ್ ಇದೆ ಎಂದು ನಾನು ಕ್ಲೈಂ ಮಾಡುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಏಕೆಂದರೆ ಡೀಸೆಂಟ್ರಲೈಜೇಷನ್ ಯಾವ ಒಬ್ಬರೂ ಮಾಡಿದ್ದಲ್ಲ. ಇದು ಕಾನ್‌ಸ್ಟಿಟ್ಯೂಷನ್ನಿನ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನಲ್ಲಿ ಅಡಕವಾಗಿದೆ. ಅನಂತರ ಬಲವಂತರಾವ್ ಮೆಹತ ಕಮಿಟಿಯಾಯಿತು. ಎಷ್ಟೋ ಕಮಿಟಿಗಳಾಗಿ ಕರ್ನಾಟಕದಲ್ಲಿ ಎಷ್ಟೋ ಪ್ರಯೋಗವಾಗಿ ತಾಲ್ಲೂಕುಬೋರ್ಡ್ ಎಫೆಕ್ಟೀವಾಗಿ ಕೆಲಸಮಾಡಿ. ನೀವು ಮಾಡಿದ್ದು ಏನೆಂದರೆ ಜಿಲ್ಲಾಮಟ್ಟದಲ್ಲಿ ಅದಕ್ಕೆ ಒಂದು ಅಸ್ತಿತ್ವ ಕೊಟ್ಟಿರಿ. ಹಾಗೆ ಅಂದತಕ್ಷಣ ಅಲ್ಲಿಂದ ಪಂಚಾಯತ್‌ರಾಜ್ ಪ್ರಾರಂಭವಾಯಿತು ಎಂದು ಯಾರು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಚಂದ್ರೇಗೌಡರು ಈ ಡೀಸೆಂಟ್ರಲೈಸೇಷನ್ ನಾವೇ ಮಾಡಿದ್ದು ಅಲ್ಲ ಅಥವಾ ಅದು ಪರಿಪೂರ್ಣವಾಗಿದೆ ಅಥವಾ ದೋಷರಹಿತವಾಗಿದೆ ಅಂತ ಕೂಡ ಹೇಳುವುದಿಲ್ಲ ಎನ್ನುವ ಅವರ ಮಾತನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ಶಿವಮೂರ್ತಿಯವರು ಈ ವೀಕರ್‌ಸೆಕ್ಷನ್‌ಗೆ ಅಪಾಯವಾಗುತ್ತಿದೆ ಎನ್ನುವ ಮಾತನ್ನು ಹೇಳಿದರು. ಇದು ಕೆಲವರ ಮನಸ್ಸಿನಲ್ಲಿದೆ ಅವರು ಬಹಿರಂಗವಾಗಿ ಹೇಳಿದರೂ ಕೂಡ ಈ ಪಂಚಾಯಿತ್ ರಾಜ್ ಸಂಸ್ಥೆಗಳಿಂದ ವೀಕರ್‌ಸೆಕ್ಷನ್‌ಗೆ ತೊಂದರೆಯಾಗುತ್ತಿದೆ ಅಥವಾ ಸಾಕಷ್ಟು ಅವರಿಗೆ ಪ್ರಾಧಾನ್ಯತೆ ಸಿಕ್ಕುತ್ತಿಲ್ಲ ಎನ್ನುವ ವಿಚಾರ ಅವರಿಗೆ ಇದೆ. ಇದಕ್ಕೆ ನನ್ನ ಉತ್ತರ ಅಷ್ಟೆ ವೀಕರ್‌ಸೆಕ್ಷನ್‌ಗೆ ಆ ಮಟ್ಟದಲ್ಲಿ ಇರತಕ್ಕಂಥ ಅವಕಾಶ ಇನ್ನು ಯಾವಮಟ್ಟದಲ್ಲಿಯೂ ಇಲ್ಲ. ಏಕೆಂದರೆ ಅಲ್ಲಿ ಆರಿಸಿಬರುತ್ತಾರೆ. ಸುಲಭವಾಗಿ ಆರಿಸಿಬರಲಿಕ್ಕೆ ಸಾಧ್ಯವಿದೆ. ಮೇಲ್ಮಟ್ಟದಲ್ಲಿ ಅಷ್ಟು ಸುಲಭವಾಗಿ ಆರಿಸಿಬರಲಿಕ್ಕೆ ಕಷ್ಟ. ನನ್ನ ಸಂಡೂರು ಉದಾಹರಣೆ ಹೇಳಬೇಕಾದರೆ ನೀವು ಬಂದುನೋಡಿ ಮಂಡಲ್ ಮಟ್ಟದಲ್ಲಿ ಎಷ್ಟು ಜನ ಆರಿಸಿಬಂದಿದ್ದಾರೆಂದು ತಮಗೆ ಗೊತ್ತಾಗುತ್ತದೆ. ಅದರಲ್ಲಿ ಎಷ್ಟು ಜನ ವೀಕರ್‌ಸೆಕ್ಷನ್ ಎಷ್ಟು ಜನ ಬ್ಯಾಕ್‌ವರ್ಡ್‌ನವರು ಇದ್ದಾರೆ ಎನ್ನುವುದನ್ನು ನೋಡಿ ತಮಗೆ ಆಶ್ಚರ್ಯವಾಗಬಹುದು. ಇಷ್ಟು ಜನ ಹೇಗೆ ಆರಿಸಿಬರಲಿಕ್ಕೆ ಸಾಧ್ಯ ಎಂದು ತಮಗೆ

ಆಶ್ಚರ್ಯವಾಗಬಹುದು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಪಂಚಾಯತ್‌ರಾಜ್ ಸಂಸ್ಥೆಗಳು ವೀಕರ್‌ಸೆಕ್ಷನ್‌ಗೆ ಬ್ಯಾಕ್‌ವರ್ಡ್ ಜನರಿಗೆ ಸಾಕಷ್ಟು ಅವಕಾಶ ಕೊಡುವ ಉದ್ದೇಶದಿಂದಲೇ ಮಾಡಿದ್ದು. ಏಕೆಂದರೆ ಮೇಲ್ಮಟ್ಟದಲ್ಲಿ ಪಾರ್ಲಿಮೆಂಟ್ ಮಟ್ಟದಲ್ಲಿ ಆರಿಸಿ ಬರುವುದು ಕಷ್ಟವಾಗುತ್ತದೆ.

ಶ್ರೀ ಕರಿಯಣ್ಣ:- ಅವರು ಪ್ರಧಾನರು ಉಪಪ್ರಧಾನರು ಆಗಲಿಕ್ಕೆ ಸಾಧ್ಯ ಇಲ್ಲ ಬರೀ ಅಲ್ಲಿಗೆ ಬಂದು ಕುಳಿತುಕೊಂಡು ಅವರು ಮಾಡುವ ನಿರ್ಣಯಗಳನ್ನು ಕೇಳಲು ಅವಕಾಶ ಆಗಿದೆಯೇ ಹೊರತು ಹರಿಜನಗಿರಿಜನರಿಗೆ ಅಲ್ಲಿ ಪ್ರಧಾನರಾಗಲು ಅವಕಾಶವೇ ಇಲ್ಲ.

ಶ್ರೀ ಎಂ.ವೈ. ಘೋರ್ಪಡೆ:- ನಾನು ಸಂಡೂರು ಪಂಚಾಯ್ತಿಯಲ್ಲಿ ನಾನು ಚೇರ್ಮನ್ ಆಗಿದ್ದಾಗ ಆಗ ಮೆಂಬರ್ ಆಗಲಿಕ್ಕೆ ಜನರು ಬರುತ್ತಾ ಇರಲಿಲ್ಲ. ಅಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಈಗಿನ ಪ್ರಜಾಪಭುತ್ವವನ್ನು ಅಷ್ಟು ಸುಲಭವಾಗಿ ಕಟ್ಟಿಲ್ಲ. ಆದ್ದರಿಂದ ಜನರಿಗೆ ನಾವು ತಯಾರು ಮಾಡಬೇಕಾಗುತ್ತದೆ ಧೈರ್ಯ ಕೊಡಬೇಕಾಗುತ್ತದೆ. ಪೊಲಿಟಿಕಲ್ ವಿಲ್ ಇಡಬೇಕಾಗುತ್ತದೆ. ರಾಜಕೀಯವಾಗಿ...

ಶ್ರೀ ಕರಿಯಣ್ಣ:- ಈಗ ಎಲ್ಲಾ ತಯಾರಾಗಿದ್ದಾರೆ ಆದರೆ ಅಲ್ಲಿ ಮಾಡಲಿಕ್ಕೆ ಅವಕಾಶ ಇಲ್ಲವಲ್ಲ. ಪ್ರಧಾನರು ಉಪಪ್ರಧಾನರನ್ನು ಮಾಡಲಿಕ್ಕೆ ಏನಾದರೂ ಹೊಸ ಯೋಜನೆ ತಾವು ಹಾಕಿಕೊಂಡಿದ್ದರೆ ಅದನ್ನು ಹೇಳಿ.

ಶ್ರೀ ಎಂ.ವೈ. ಘೋರ್ಪಡೆ:- ಅದರ ಬಗ್ಗೆ ವಿಚಾರ ಇದೆ. ಈಗ ಅದೇ ಧಾಟಿಯಲ್ಲಿ ಛೇರ್ಮನ್ ರಿಸರ್ವೆಷನ್ಸ್ ಎಸ್‌ಸಿ.ಎಸ್‌ಟಿ.ಗೆ ಮಾಡಬೇಕು ಎನ್ನುವ ವಿಚಾರ ಕೂಡ ಇದೆ. ಅದು ಗೈಡ್‌ಲೈನ್ಸ್ ನಮ್ಮ ಪಕ್ಷದ ರಾಜೀವ್‌ಗಾಂಧಿಯವರ ಮುಖಂಡತ್ವದಲ್ಲಿ ಏನು ಗೈಡ್‌ಲೈನ್ ತಯಾರಾದವು ಅದರಲ್ಲೂ ಕೂಡ ಇದೆ. ಎಸ್‌ಸಿ.ಎಸ್‌ಟಿ ಅವರ ಪಾಪ್ಯುಲೇಷನ್ ಪ್ರಕಾರ ರಿಸರ್ವೇಷನ್ ಅಂದರೆ ಐದರಲ್ಲಿ ಒಂದುಭಾಗ ಹೆಚ್ಚು ಕಡಿಮೆ ಆಗುತ್ತದೆ. ಮತ್ತೆ ಮೂರನೆಯ ಒಂದುಭಾಗ ಹೆಣ್ಣುಮಕ್ಕಳಿಗೆ ಹೀಗೆ ಎಂದು ಒಂದು ಇದೆ. ಅದೂಕೂಡ ತೀವ್ರ ಪರಿಶೀಲನೆಯಲ್ಲಿದೆ. ಅದು ಅಮೆಂಡ್ ಮಾಡುವಾಗ ಇದನ್ನೆಲ್ಲಾ ಗಮನದಲ್ಲಿಟ್ಟು ಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ:- ಮಹಿಳೆಯರ ಬಗ್ಗೆ ಹೇಳಲಿಲ್ಲ.

ಶ್ರೀ ಎಂ.ವೈ. ಘೋರ್ಪಡೆ:- ನಾನು ಇದರ ಬಗ್ಗೆ ವಿಚಾರ ನಿಮ್ಮ ಮುಂದಿಡುತ್ತಿದ್ದೇನೆ. ಅಮೆಂಡ್‌ಮೆಂಟ್ ಪ್ರಶ್ನೆಬಂದಾಗ ಅದರ ಬಗ್ಗೆ ಸ್ಪಷ್ಟವಾದಂಥ ಸರ್ಕಾರದ ಧೋರಣೆ ಏನು ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಮಹಿಳೆಯರ ಬಗ್ಗೆ ರಿಸರ್ವೇಷನ್ ಮಾಡಬೇಕೆಂದು ಇದೆ. ಎಸ್‌ಸಿಎಸ್‌ಟಿಗೆ ಕೂಡ ಮಾಡಬೇಕೆಂದು ಇದೆ. ಇದನ್ನೆಲ್ಲಾ ಈಗಲೇ ಯಾವರೀತಿ ಹೇಳಲಿಕ್ಕೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸಂಪೂರ್ಣ ಬೆಂಬಲ ಮಹಿಳೆಯರ ಪರ ಇದೆ. ಅದರಲ್ಲಿ ಏನೂ ಅನುಮಾನ ಇಲ್ಲ.

ಶ್ರೀ ಎಂ.ವೈ. ಘೋರ್ಪಡೆ:- ಇನ್ನೊಂದು ವಿಚಾರ ಅಂದರೆ ಪ್ರೊಫೆಸರ್ ನಂಜುಂಡಸ್ವಾಮಿ ಯವರು ಈ ಸಭೆಯಲ್ಲಿ ಇರಬೇಕಾಗಿತ್ತು. ಏಕೆಂದರೆ ಅವರು ಸುದೀರ್ಘವಾಗಿ ಭಾಷಣ ಮಾಡಿದರು. ಅವರು ಏನು ಹೇಳಿದರು ಅಂದರೆ ಮೂಲಭೂತವಾಗಿ ನೀವು ಸೋಷಿಯೋ ಎಕನಾಮಿಕ್ ಕಂಡೀಷನ್ ಹಳ್ಳಿಮಟ್ಟದಲ್ಲಿ ಬಲಪಡಿಸದೇ ಹೋದರೆ ಏನೂ ಉಪಯೋಗವಾಗುವುದಿಲ್ಲ ಎನ್ನುವ ಮಾತನ್ನು ಹೇಳಿದರು ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳಿದರು ಅಗ್ರಿಕಲ್ಚರ್ ಬಗ್ಗೆ ಹೇಳಿದರು ಇದರ ಬಗ್ಗೆ ನಾನು ಕೂಡ ಡೆಲ್ಲಿಯಲ್ಲಿ ನಾನು ಎಂ.ಪಿ.ಇದ್ದಾಗ ಪ್ಲಾನಿಂಗ್ ಕೌನ್ಸಿಲ್ ಕನ್‌ಸೆಲ್‌ಟೇಟೀವ್ ಕಮಿಟಿ ಮೆಂಬರ್ ಆಗಿದ್ದಾಗ ಒಂದು ಮಾತು ಅವರಿಗೂ ಸ್ಪಷ್ಟವಾಗಿ ಹೇಳಿದ್ದೆ. ಏನೆಂದರೆ ನಾವು ಕೆಲಸವನ್ನು ಸಾಕಷ್ಟು ಬಡ ಜನಕ್ಕೆ ಹಳ್ಳಿಯ ಜನರಿಗೆ ಕೊಡಬೇಕಾದರೆ ಇವತ್ತಿನ ಅಗ್ರಿಕಲ್ಚರ್ ಗ್ರೋತ್ ರೇಟ್ 3 ಪರ್ಸೆಂಟ್‌ಗಿಂತ ಏನು ಕಡಿಮೆ ಇದೆ ಅದು 4 ಪರ್ಸೆಂಟ್‌ಗೂ ಜಾಸ್ತಿಯಾಗಬೇಕು ಎಂದು ಪ್ಲಾನಿಂಗ್ ಕಮೀಷನ್‌ನವರು ಕೂಡ ಯೋಜನೆ ಮಾಡುವಾಗ 4.5 ಪರ್ಸೆಂಟ್ ಗ್ರೋತ್‌ರೇಟ್ ಇರಬೇಕೆಂದು ಒಪ್ಪಿದ್ದು ಸ್ವಾಗತಾರ್ಹ. ಆ ರೀತಿ ಮಾಡಿದರೆ ಎಂಪ್ಲಾಯ್ಡ್ ಮೆಂಟ್ ಪೊಸಿಷನ್

ಬಹಳಷ್ಟು ಸುಧಾರಣೆಯಾಗುತ್ತದೆ. ಇನ್ನೂ ಒಂದು ಮೂಲಭೂತವಾದುದು ಯಾವುದೆಂದರೆ ಸರ್ಫೇಸ್ ಅಂಡ್ 'ಗ್ರೌಂಡ್‌ವಾಟರ್ ಅಂದರೆ ಏನು ಮಳೆ ಬರುತ್ತದೆ ಅದರ ಪ್ರತಿಯೊಂದು ಹನಿಯನ್ನೂ ಉಪಯೋಗಿಸಬೇಕು ಇಲ್ಲದೇ ಹೋದರೆ ನಮ್ಮ ನದಿಗೆ ಇದು ಹರಿದು ಹೋದರೆ ಆಗ ಅಪಾಯವಾಗುತ್ತದೆ. ಅದರ ಬಗ್ಗೆ ಸಮಗ್ರವಾದಂಥ ಚಿಂತನೆ ಮಾಡಬೇಕು. ಇಷ್ಟೆಲ್ಲಾ ಮಾಡುವಾಗ ಎಂಪ್ಲಾಯಮೆಂಟ್ ಬಗ್ಗೆ ಒಂದು ಪ್ರಯೋಗವನ್ನು ಕರ್ನಾಟಕದಲ್ಲಿ ಮಾಡಿ ನೋಡಬೇಕೆಂಬ ವಿಚಾರ ನನ್ನದು ಇದೆ. ಪ್ರಯೋಗ ಏನು ಎಂದರೆ ಮಂಡಲವೈಸ್ ಡ್ಯಾಟಾ ಕಲೆಕ್ಟ್ ಮಾಡಿ ಅಲ್ಲಿನ ಎಂಪ್ಲಾಯ್‌ಮೆಂಟ್ ಪರಿಸ್ಥಿತಿ ಏನು ಇದೆ ಎಂಬುದನ್ನು ನೇರವಾಗಿ ನಾವು ತಿಳಿದುಕೊಳ್ಳಬೇಕು. ದಿಲ್ಲಿ ಮಟ್ಟದಲ್ಲಿ ಕೂಡ ಅಂತಹ ಸ್ಪಷ್ಟವಾದ ಚಿತ್ರ ಅಲ್ಲಿ ಇಲ್ಲ. ಎಂಪ್ಲಾಯ್‌ಮೆಂಟ್ ಡಾಟಾ ಮಂಡಲ ಲೆವೆಲ್‌ನಲ್ಲಿ ಅಗ್ರಿಕಲ್ಚರ್‌ನಲ್ಲಿ ಎಷ್ಟು ಜನರು ಕೆಲಸಕ್ಕೆ ಹೋಗುತ್ತಾರೆ ಅಲೈಡ್ ಆಕ್ಟಿವಿಟೀಸ್‌ನಲ್ಲಿ ಎಷ್ಟು ಇದೆ. ಡೈರೆಕ್ಟ್ ಎಂಪ್ಲಾಯಿಮೆಂಟ್‌ನಲ್ಲಿ ಎಷ್ಟು ಜನರಿಗೆ ಸಿಕ್ಕಿದೆ ಮತ್ತು ಎಷ್ಟು ಜನರಿಗೆ ನಾವು ಸೆಲ್ಫ್ ಎಂಪ್ಲಾಯ್‌ಮೆಂಟ್‌ನಲ್ಲಿ ತರಬೇತಿ ಕೊಟ್ಟು ಅವರಿಂದ ಕೆಲಸ ಮಾಡಿಸುವುದಕ್ಕೆ ಸಾಧ್ಯ ಎಂಬುದನ್ನು ಎಲ್ಲಾ ಸೇರಿಸಿ ವಿಚಾರ ಮಾಡಬೇಕಾಗುತ್ತದೆ. ಈ ಎಲ್ಲಾ ಎಂಪ್ಲಾಯ್‌ಮೆಂಟ್ ಅವಿನ್ಯೂಸ್ ಅನ್ನು ನಾವು ಗಮನದಲ್ಲಿಟ್ಟು ಕೊಂಡು ವಿಚಾರ ಮಾಡಬೇಕಾಗುತ್ತದೆ. ಸೆಲ್ಫ್ ಎಂಪ್ಲಾಯ್‌ಮೆಂಟ್‌ನಲ್ಲಿ ತರಬೇತಿ ಕೊಡಬೇಕಾಗುತ್ತದೆ. ಸಂಗನಕಲ್‌ನಲ್ಲಿ ತಾವು ನೋಡಿರಬಹುದು. ಅಲ್ಲಿನ ಹಳ್ಳಿಯಲ್ಲಿ ಎಷ್ಟೋ ಮನೆಗಳು ಸುಟ್ಟು ಹೋದವು ಅಲ್ಲಿ ಹೊಸ ಮನೆಗಳನ್ನು ಪ್ರಾರಂಭ ಮಾಡುವುದಕ್ಕೆ ನಾನು ಹೋಗಿದ್ದೆ. ಅಲ್ಲಿ ಹರಿಜನ ಹೆಣ್ಣುಮಕ್ಕಳಿಗೆ ಬೇರೆ ಬೇರೆ ರೀತಿಯಿಂದ ತರಬೇತಿ ಕೊಟ್ಟು ಒಂದು ದಿನಕ್ಕೆ 10-15 ರೂಪಾಯಿ ಸಂಪಾದನೆ ಮಾಡುವಂತಹ ಶಕ್ತಿ ತಂದಿದ್ದಾರೆ. ತಾವು ಹೋಗಿ ನೋಡಬಹುದು. Elder women of the poorest section, they can be trained in short time to acquire some skill to earn Rs.10 to 15 a day. ಇದು ನಮ್ಮ ದೇಶದ ಯೋಜನೆ ಏಕೆ ಆಗಬಾರದು. ಇಡೀ ಕರ್ನಾಟಕದಲ್ಲಿ ಅದನ್ನು ವ್ಯಾಪಕವಾಗಿ ಏಕೆ ಮಾಡಬಾರದು. ಇದರ ಬಗ್ಗೆ ಲಕ್ಷ್ಯ ಕೊಟ್ಟರೆ ಇದು ಆಗುತ್ತದೆ. ಅದಕ್ಕಾಗಿ ಇಡೀ ಕರ್ನಾಟಕದಲ್ಲಿ ಏಕ ಕಾಲಕ್ಕೆ ಇದನ್ನು ಮಾಡುವುದಕ್ಕೆ ಆಗದಿದ್ದರೂ ಕೂಡ ಇವತ್ತು ಜನರಿಗೆ ವಿಶ್ವಾಸ ಬರುವ ರೀತಿಯಲ್ಲಿ ಜನ ನೋಡುವ ರೀತಿಯಲ್ಲಿ ಇಡೀ ದೇಶಕ್ಕೆ ಮಾರ್ಗದರ್ಶನ ಮಾಡುವ ರೀತಿಯಲ್ಲಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕನ್ನು ತೆಗೆದುಕೊಳ್ಳುವುದು ಒಂದು ತಾಲ್ಲೂಕಿನ ಎರಡು ಮಂಡಲಗಳನ್ನು ತೆಗೆದುಕೊಂಡು ಈ ರೀತಿ ಇಂಟೆನ್‌ಸಿವ್ ಎಂಪ್ಲಾಯ್‌ಮೆಂಟ್ ಡ್ಯಾಟಾ ಮತ್ತು ಎಂಪ್ಲಾಯ್‌ಮೆಂಟ್ ಬಡ್ಜೆಟ್ ಎಂದು ನಾವು ಏನು ಅದನ್ನು ಕರೆಯುತ್ತೇವೆ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಯಾವ್ಯಾವ ಸೆಕ್ಟಾರ್‌ನಲ್ಲಿ ಎಷ್ಟೆಷ್ಟು ಪರ್ಸೆಂಟ್ ಜನ ಕೆಲಸ ಮಾಡುತ್ತಾರೆ ಎಂಬುದರ ಬಗ್ಗೆ ವಿವರಗಳು ದೆಹಲಿಯಲ್ಲಿ ಸಿಗುತ್ತದೆ. ಆದರೆ ಅದರಿಂದ ಪ್ಲಾನಿಂಗ್ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನಮಗೆ ನೇರವಾದ ಮೈಕ್ರೋ ಫಿಗರ್ಸ್ ಬೇಕು ಎಷ್ಟೆಷ್ಟು ಜನ ಯಾವ್ಯಾವ ಕೆಲಸಕ್ಕೆ ಹೋಗುತ್ತಾರೆ ಎಂಬ ಬಗ್ಗೆ ಮಾಹಿತಿ ಬೇಕು. It is essential for effective and scientific employment policy ಅಂತ ಹೇಳಿ ನನ್ನ ವಿಚಾರವಿದೆ. ಆದ್ದರಿಂದ ಅಂತಹ ಮಂಡಲವಾರು ಡ್ಯಾಟಾ ಮಾಡಿ ಒಂದೊಂದು ಜಿಲ್ಲೆಯ ಒಂದೊಂದು ತಾಲ್ಲೂಕಿನಲ್ಲಿ ಒಂದೆರಡು ಮಂಡಲಗಳಲ್ಲಿ ಈ ಎಂಪ್ಲಾಯ್‌ಮೆಂಟ್ ಬಜೆಟ್ ಮಾಡಿ ಅದರ ಪ್ರಕಾರ poorer sections below the powerty lineನಲ್ಲಿ ಇರುವವರಿಗೆ ಎಷ್ಟು ಎಷ್ಟರ ಮಟ್ಟಿಗೆ ಜಾಸ್ತಿ ಮಾಡಲಿಕ್ಕೆ ಸಾಧ್ಯ ಎಂಬುದನ್ನು ಮಾಡಿ ತೋರಿಸಿದರೆ ಕ್ರಾಂತಿಕಾರಕ ಯೋಜನೆಯನ್ನು ಮಾಡುವುದರಲ್ಲಿ ಮತ್ತು ಅನುಷ್ಠಾನದಲ್ಲಿ ಕ್ರಾಂತಿಕಾರಕ ಮಾರ್ಗದರ್ಶನವನ್ನು ನಾವು ಕರ್ನಾಟಕ ರಾಜ್ಯದಲ್ಲಿ ಮಾಡಿ ತೋರಿಸಿದಂತಾಗುತ್ತದೆ. ಇದರಲ್ಲಿ ಯಾರೂ ತಾತ್ಸಾರ ಮಾಡಬಾರದು. ಇವತ್ತು ಅಫಿಷಿಯಲ್ಸ್, ಮತ್ತು ನಾನ್ ಅಫಿಷಿಯಲ್ಸ್ ಯಾರಿದ್ದಾರೆ ಇವರು ಇದರ ಬಗ್ಗೆ ಸಾಕಷ್ಟು ಗಮನಕೊಟ್ಟಿಲ್ಲ. ಯಾವುದೋ ಒಂದು ಸಿಂಬಾಲಿಕ್ ಸ್ಕೀಂ ಇದೆ. ಇದು ವ್ಯಾಪಕವಾಗಿ ಚಳುವಳಿಯ ರೀತಿಯಲ್ಲಿ ಆರ್ಥಿಕ ಪರಿಸ್ಥಿತಿಯಮೇಲೆ ಗಮನಾರ್ಹವಾದ ಬದಲಾವಣೆ ಉಂಟುಮಾಡತಕ್ಕ ಶಕ್ತಿ ಇದರಲ್ಲಿದೆ ಎಂಬುದರಲ್ಲಿ ಯಾರಿಗೂ

ವಿಶ್ವಾಸ ಇಲ್ಲ. ಈ ರೀತಿ ವಿಶ್ವಾಸ ಬರತಕ್ಕ ರೀತಿಯಲ್ಲಿ ಎಲ್ಲರೂ ಆಸಕ್ತಿವಹಿಸಬೇಕು. ಇದರ ಬಗ್ಗೆ ನಾನು ಎಕ್ಸ್‌ಪರ್ಟ್ಸ್‌ನ್ನು ಕರೆಸಿಕೊಂಡು ಅವರ ಅನುಭವವನ್ನು ನಾನು ತೆಗೆದುಕೊಳ್ಳಬೇಕಾಗಿದೆ. ಇದನ್ನು ತಾವು ಕೊಡುತ್ತೀರೆಂದು ನಾನು ನಂಬಿದ್ದೇನೆ.

ಇನ್ನು ರೂರಲ್ ಎನರ್ಜಿ ಪ್ರೋಗ್ರಾಂ ಬಗ್ಗೆ ಹೇಳುವುದಾದರೆ biogas, improved chullas ಪ್ರೋಗ್ರಾಂಗೆ 4-5 ಕೋಟಿ ರೂ. ಮಾತ್ರ ನಮ್ಮ ಬಜೆಟ್‌ನಲ್ಲಿದೆ. ಆದರೆ integrated ರೂರಲ್ ಎನರ್ಜಿ non-conventional energy, ಸೋಲಾರ್ ಎನರ್ಜಿ ಗೋಬರ್ ಗ್ಯಾಸ್ ಎನರ್ಜಿ ಇವು ಕೇವಲ ಸಿಂಬಾಲಿಕ್ ಆಗಿ ಅಲ್ಲ. ಇದನ್ನು ಯಾವರೀತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಸುವುದಕ್ಕೆ ಸಾಧ್ಯ ಎಂಬುದನ್ನು ನೋಡುತ್ತಿದ್ದೇವೆ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಒಮ್ಮೆ ಇದರ ಬಗ್ಗೆ ನನ್ನನ್ನು ಕೇಳಿದಾಗ ನಾನು ಒಂದು ನೋಟನ್ನು ಕೊಟ್ಟಿದ್ದೆ. ವರ್ಷಕ್ಕೆ ಕೋಟಿ ಮನೆಗಳಲ್ಲಿ ಸ್ಮೋಕ್‌ಲೆಸ್ ಚುಲ್ಲಾ ಹಂಚತಕ್ಕ ಕಾರ್ಯಕ್ರಮ ಈ ದೇಶದಲ್ಲಿ ನಡೆಯಬೇಕೆಂದು ನಾವು ಗುರಿ ಇಟ್ಟುಕೊಂಡಿದ್ದೇವೆ. ಆದರೆ 5 ವರ್ಷಗಳಲ್ಲಿ 5 ಕೋಟಿ ಕುಟುಂಬಗಳಿಗೆ ಸ್ಮೋಕ್‌ಲೆಸ್ ಚುಲ್ಲಾಗಳನ್ನು ಬಿಲೋ ಪಾವರ್ಟಿ ಲೈನ್‌ಇರತಕ್ಕವರನ್ನು ಗುರ್ತಿಸಿ ಕೊಡಬೇಕೆಂದಿದ್ದೇವೆ. ಇಂಥ ಕುಟುಂಬಗಳು 15 ಕೋಟಿ,....

ಶ್ರೀ ಎಂ.ವಿ. ವೆಂಕಟಪ್ಪ:- ಇವತ್ತು ಪತ್ರಿಕೆಯಲ್ಲಿ 30 ಕೋಟಿ ಎಂದು ಬಂದಿದೆ.

ಶ್ರೀ ಎಂ.ವೈ. ಘೋರ್ಪಡೆ:- ಯಾರು ಬಿಲೋ ದಿ ಪಾವರ್ಟಿ ಲೈನ್ ಇದ್ದಾರೆ ಅವರೆಲ್ಲರಿಗೂ ನಾವು ಸ್ಮೋಕ್‌ಲೆಸ್ ಚುಲ್ಲಾಸ್ ಕೊಟ್ಟಂತಾಗುತ್ತದೆ. ಈ ಕಾರ್ಯಕ್ರಮಕ್ಕೆ ನಾವು ನಿರ್ಲಕ್ಷ್ಯ ಮಾಡಬಾರದೆಂದು ಹೇಳಬಯಸುತ್ತೇನೆ. ಸ್ಮೋಕ್‌ಲೆಸ್ ಚುಲ್ಲಾಸ್ ಹೆಣ್ಣುಮಕ್ಕಳಿಗೆ ಆರೋಗ್ಯ ದೃಷ್ಟಿಯಿಂದ ಬಹಳ ಅನುಕೂಲವಾಗುತ್ತದೆ. ಮತ್ತು ಕಾಡು ನಾಶ ಏನಾಗುತ್ತಿದೆ ಅದನ್ನೂ ಕೂಡ ತಪ್ಪಿಸುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಇನ್ನು ರೂರಲ್ ವಾಟರ್ ಸಪ್ಲೈ ಮತ್ತು ಸ್ಯಾನಿಟೇಷನ್‌ಗೆ....

ಛೇರ್ಮನ್:- ತಮಗೆ ಇನ್ನೂ ಎಷ್ಟುಹೊತ್ತು ಬೇಕಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ:- ನನಗೆ ಇನ್ನು 10-15 ನಿಮಿಷ ಸಾಕು.

ಶ್ರೀ ವಾಟಾಳ್ ನಾಗರಾಜ್:- ಕನ್ನಡ ಸಂಸ್ಕೃತಿ ಇಲಾಖೆ ಬಗ್ಗೆ ವಾರ್ತಾ ಇಲಾಖೆ ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೊಡಬೇಕಾದ್ದು ಇನ್ನೂ ಬಹಳ ಇದೆ.

ಛೇರ್ಮನ್:- ಊಟವಾದಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಆದ್ದರಿಂದ....

ಶ್ರೀ ವಾಟಾಳ್ ನಾಗರಾಜ್:- ಕ್ಲಾರಿಫಿಕೇಷನ್ ಕೇಳುವುದು ಇರುತ್ತದೆ. ಇದೆಲ್ಲಾ ಸೇರಿ ಸುಮಾರು 3.30 ಗಂಟೆಯಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ:- ರೂರಲ್ ವಾಟರ್ ಸಪ್ಲೈ ಸ್ಯಾನಿಟೇಷನ್‌ಗೋಸ್ಕರ 35 ಕೋಟಿ ರೂಪಾಯಿ ಬಜೆಟ್‌ನಲ್ಲಿದೆ. ಮಾನ್ಯ ಆರ್ಥಿಕ ಮಂತ್ರಿಗಳು ಇನ್ನೂ 25 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಅವರಿಗೆ ನಾನು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಪೈಪ್‌ವಾಟರ್ ಬೋರ್‌ವೆಲ್ಸ್, ಮಿನಿ ವಾಟರ್ ಬೋರ್‌ವೆಲ್ಸ್ ಹ್ಯಾಂಡ್‌ಪಂಪ್ಸ್....

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಆರ್ಥಿಕ ಸಚಿವರು ಈ ಕಡೆ ಗಮನಹರಿಸಬೇಕು. ಏಕೆಂದರೆ ಅವರು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ:- ಸ್ಯಾನಿಟೇಷನ್ ಲೆಟ್ರಿನ್ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ ಈ ಬಾಬಿಗೆ 5 ಕೋಟಿ ರೂ. ಏನಿದೆ ಆದರ ಜೊತೆಗೆ ಇನ್ನೂ 5 ಕೋಟಿ. ರೂ.ಗಳನ್ನು ನಾನು ಕೇಳಿದ ಕೂಡಲೆ ಮಾನ್ಯ ಅರ್ಥಮಂತ್ರಿಗಳು ಕೊಟ್ಟಿದ್ದಾರೆ. ಇದಕ್ಕೆ ನನ್ನ ಧನ್ಯವಾದಗಳನ್ನು ಅವರಿಗೆ ಅರ್ಪಿಸುತ್ತೇನೆ. ಪ್ರತಿಯೊಂದು ಮಂಡಲದಲ್ಲೂ ಯಾವರೀತಿಯಲ್ಲಿ ಲೆಟ್ರಿನ್ಸ್ ಕಟ್ಟಿದರೆ ಜನರಿಗೆ ಅನುಕೂಲವಾಗುತ್ತದೆಂದು ನಾವು ಶಾಸ್ತ್ರೀಯವಾಗಿ ಯೋಚನೆ ಮಾಡಿ ಜನರಿಗೆ ಒಪ್ಪಿಗೆಯಾಗತಕ್ಕ

ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡು ಯಶಸ್ವಿಗೊಳಿಸುತ್ತೇವೆಂದು ಹೇಳ ಬಯಸುತ್ತೇನೆ. ಇನ್ನು ರೂರಲ್ ಹೌಸಿಂಗ್ ಸ್ಕೀಮ್ ಮತ್ತು ಹೌಸ್‌ಸೈಟ್ಸ್ ಬಹಳ ಮುಖ್ಯವಾದಂಥ ಕಾರ್ಯಕ್ರಮ. ಇದನ್ನು ಹೇಳಬೇಕಾದರೆ ಕರ್ನಾಟಕದಲ್ಲಿ 1972-73ರಲ್ಲಿ ಇದು ಪ್ರಾರಂಭವಾದುದ್ದು. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಇದರ ಬಗ್ಗೆ 1972-73ರಲ್ಲಿ ಪ್ರಯೋಗ ಮಾಡಿದ್ದು. ಶ್ರೀಮತಿ ಇಂದಿರಾಗಾಂಧಿಯವರ ಜೊತೆಯಲ್ಲಿ ಮಾತನಾಡಿದಾಗ ಇಡೀದೇಶದಲ್ಲಿ ಈ ಕಾರ್ಯಕ್ರಮ ಜಾರಿಗೆ ಬರಬೇಕೆಂದು ಅವರು ಹೇಳಿದ್ದರು. 1972-73ರ ನನ್ನ ಬಜೆಟ್ ಭಾಷಣವನ್ನು ನೋಡಿದರೆ ಗೊತ್ತಾಗುತ್ತದೆ. ಮೊದಲನೆಯ ವರ್ಷ ಈ ಕಾರ್ಯಕ್ರಮ ಪ್ರಾರಂಭವಾಯಿತು. 25 ಸಾವಿರ ಮನೆಗಳನ್ನು ಕಟ್ಟಬೇಕೆಂದು ಹೇಳಿ ಕಾರ್ಯಕ್ರಮ ಹಾಕಿಕೊಂಡಿದ್ದೆವು ಮತ್ತು ಎರಡು ಲಕ್ಷ ಐವತ್ತು ಸಾವಿರ ಸೈಟುಗಳನ್ನು 1972-73ರಲ್ಲಿ ಹಂಚಿದ್ದೇವೆ. ಬರೆ ಸೈಟುಗಳನ್ನು ಹಂಚಿದರೆ ಸಾಲದೆಂದು ಮನೆಗಳನ್ನು ಕಟ್ಟುವ ಕಾರ್ಯಕ್ರಮವನ್ನು ಹಾಕಿಕೊಂಡು 25 ಸಾವಿರ ಮನೆಗಳನ್ನು ಕಟ್ಟುವ ಕೆಲಸ ಪ್ರಾರಂಭ ಮಾಡಿದೆವು. 1972-73ರ ಬಜೆಟ್‌ನಲ್ಲಿ 5 ಕೋಟಿ ರೂಪಾಯಿಗಳನ್ನು ಈ ಒಂದು ಕಾರ್ಯಕ್ರಮಕ್ಕೆ ಇಟ್ಟಿದ್ದೆವು. ಆಗಿನ 5 ಕೋಟಿ ಎಂದರೆ ಈಗಿನ 15-20 ಕೋಟಿ ರೂಪಾಯಿಗಳಾಗುತ್ತದೆ. ಆಗ 2 1/2 ಸಾವಿರಕ್ಕೆ ಒಂದು ಮನೆ ಆಗುತ್ತಿತ್ತು. ಈಗ 8 ಸಾವಿರ ಆಗುತ್ತದೆ. ಆಗಿನ ಬಜೆಟ್‌ನಲ್ಲಿ ಏನು ಹೇಳಿದ್ದೆ ಎಂದರೆ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕದಲ್ಲಿ ಪ್ರತಿವರ್ಷಕ್ಕೆ 50 ಸಾವಿರದಿಂದ 1 ಲಕ್ಷ ಮನೆಗಳನ್ನು ಕಟ್ಟುವ ಸಾಮರ್ಥ್ಯ ಬರಲಿ ಎಂದು ಹೇಳಿದ್ದೆ. ಆದರೆ ಇವತ್ತು ಪುನಃ ಅಲ್ಲಿಂದ ಪ್ರಾರಂಭ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ಬಜೆಟ್‌ನಲ್ಲಿರುವುದು 30 ಸಾವಿರ ಮನೆಗಳಿಗೆ ಮಾತ್ರ. ಆದ್ದರಿಂದ ಅದನ್ನು 50 ಸಾವಿರಕ್ಕೆ ಮುಂದೆ ತೆಗೆದುಕೊಂಡು ಹೋಗಬೇಕಾದರೆ ಆ ಮಟ್ಟಕ್ಕೆ ಹೋಗಬೇಕಾಗುತ್ತದೆ. ಆ ಕಾರಣದಿಂದ ಮಾನ್ಯ ಹಣಕಾಸಿನ ಮಂತ್ರಿಗಳು ಬಜೆಟ್‌ನಲ್ಲಿ ಕೊಟ್ಟಿರತಕ್ಕಂಥ 13 ಕೋಟಿ ರೂಪಾಯಿ ಏನಿದೆ ಅದರ ಜೊತೆಗೆ ಇನ್ನೂ 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಸ್ವಾಗತಾರ್ಹ. ಈ ಕಾರ್ಯಕ್ರಮ 20 ವರ್ಷಗಳಿಂದ ಬೆಳೆಯಲಿಲ್ಲ. ಕುಂಠಿತವಾಗಿ ಉಳಿಯಿತು ಅದನ್ನು ಮತ್ತೆ ನಾವು ಹೊಸ ಚೈತನ್ಯ ಅದರಲ್ಲಿ ತುಂಬಲಿಕ್ಕೆ ಸಾಧ್ಯವಾಗುತ್ತದೆ. 20 ವರ್ಷಗಳ ಇತಿಹಾಸ ಸಂಕ್ಷಿಪ್ತವಾಗಿ ಹೇಳಬೇಕಾದರೆ 7 ಲಕ್ಷ ಮನೆಗಳು ಮತ್ತು 14 ಲಕ್ಷ ಸೈಟ್‌ಗಳನ್ನು ಇಲ್ಲಿಯವರೆಗೆ ಹಂಚಿದ್ದೇವೆ. 7 ಲಕ್ಷ ಮನೆಗಳು ಎಂದರೆ ವರ್ಷಕ್ಕೆ 35 ಸಾವಿರ ಆಯಿತು. ಮತ್ತು ಸರಾಸರಿ 70 ಸಾವಿರ ಸೈಟ್‌ಗಳನ್ನು ಪ್ರತಿವರ್ಷ ಹಂಚಿದಂತೆ ಆಯಿತು.

ಶ್ರೀ ಗೋಪಿನಾಥ ಆರ್.ಸಾಂದ್ರ:- 1972-73ರಿಂದ ಇಲ್ಲಿಯವರೆಗೆ ತೆಗೆದುಕೊಂಡ ಈ ಕಾರ್ಯಕ್ರಮದ ಬ್ರೇಕಪ್ ಅನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಎಂ.ವೈ. ಘೋರ್ಪಡೆ:- ಆಗುತ್ತದೆ. ಆಮೇಲೆ ಜವಾಹರ್ ರೋಜ್‌ಗಾರ್ ಯೋಜನೆ ಏನಿದೆ ಇದು 120 ಕೋಟಿ ರೂಪಾಯಿಗಳ ಕೇಂದ್ರದ ಕಾರ್ಯಕ್ರಮ ಆಗಿದೆ. ಈ ಹಣ ನೇರವಾಗಿ ಮಂಡಲ್‌ಗಳಿಗೆ ಹೋಗುತ್ತದೆ. ಇದರಲ್ಲಿ ರಾಜ್ಯದ್ದು 24 ಕೋಟಿ ರೂಪಾಯಿಗಳು ಮಾತ್ರ. ಬಾಕಿ ಹಣ ಕೇಂದ್ರದಿಂದ ಬರುತ್ತಿದೆ. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬಗ್ಗೆ ನನ್ನ ಬಜೆಟ್‌ನಲ್ಲಿ 40 ಕೋಟಿ ಇದ್ದಿದ್ದನ್ನು 50 ಕೋಟಿ ರೂಪಾಯಿಗಳಿಗೆ ಏರಿಸಿದ್ದಾರೆ. ಅದಕ್ಕಾಗಿ ಮಾನ್ಯ ಅರ್ಥಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ 50 ಕೋಟಿ ರೂಪಾಯಿಗಳನ್ನು ಖರ್ಚುಮಾಡುವಾಗ ಯಾವುದಕ್ಕೆ ಆದ್ಯತೆ ಕೊಡಬೇಕು ಎನ್ನುವ ಬಗ್ಗೆ ಚರ್ಚೆ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಕೂಡ. Priority should be given for inter-taluk link roads, school buildings, drinking water, taluk level hospitals, electricity to thandas and minor irrigation worksಗೆ ಕೊಡಬೇಕೆಂದು ಇದೆ.ಆಮೇಲೆ ಇನ್‌ಫರ್‌ಮೇಷನ್ ಮತ್ತು ಪಬ್ಲಿಸಿಟಿ ಬಗ್ಗೆ ಮಾನ್ಯ ವಾಟಾಳ್‌ನಾಗರಾಜ್‌ರವರು ಬಹಳ ಆಸಕ್ತಿ ಹೊಂದಿದ್ದಾರೆ. ಐದು ನಿಮಿಷದಲ್ಲಿ ಇದರ ಬಗ್ಗೆ ಹೇಳುತ್ತೇನೆ. ಇದು ಹಳ್ಳಿಯಮಟ್ಟದಲ್ಲಿ ಬೆಳೆಯಬೇಕೆಂದು ಅವರು ಒಂದು ಮಾತಿನಲ್ಲಿ ಹೇಳಿದರು. ಮತ್ತೆ ಇದಕ್ಕೆ 5 ಕೋಟಿ ರೂಪಾಯಿಗಳನ್ನು ಕೊಡುತ್ತಿರುವುದು ಸಾಲದು ಇದಕ್ಕೆ 25 ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಾಲದೆಂದು ಹೇಳಿರುತ್ತಾರೆ. ಐದು ಕೋಟಿಯಲ್ಲ

ಇಪ್ಪತ್ತೈದು ಕೋಟಿ ರೂಪಾಯಿಗಳನ್ನು ಕೊಟ್ಟರೆ ನನ್ನದೇನು ಆಕ್ಷೇಪಣೆ ಇಲ್ಲ. ಆದರೆ ಇದು ದುಡ್ಡಿನ ಪ್ರಶ್ನೆಯಲ್ಲ. ಹಳ್ಳಿಯ ಮಟ್ಟಕ್ಕೆ ಈ ಕಾರ್ಯಕ್ರಮವನ್ನು ಮುಟ್ಟಿಸಬೇಕೆಂಬುದೇ ನಮ್ಮ ಇಚ್ಛೆಯೂ ಆಗಿದೆ. ಈ ಕಾರ್ಯಕ್ರಮವನ್ನು ಕೇವಲ ದುಡ್ಡಿನಿಂದ ಮುಟ್ಟಿಸುವುದಕ್ಕೆ ಆಗುವುದಿಲ್ಲ. ವರ್ಷೇ ವರ್ಷೇ ಇದರ ಬಜೆಟ್ ಜಾಸ್ತಿ ಆಗಬೇಕು. ಮಾನ್ಯ ಹಣಕಾಸಿನ ಮಂತ್ರಿಗಳು ಹೆಚ್ಚಿನ ಲಕ್ಷ್ಯವನ್ನು ಇದರಕಡೆಗೆ ಕೊಡುತ್ತಾರೆಂದು ನಾನು ನಂಬಿದ್ದೇನೆ. ಆದರೆ ಇದು ಯಾವ ರೀತಿ ನಾವು ಕಾರ್ಯಕ್ರಮ ನಡೆಸುತ್ತೇವೆ ಎಂಬುದು ಮುಖ್ಯ. ಇವತ್ತು ಮೂರು ಮುಖ್ಯವಾದ ಪ್ರಶ್ನೆಗಳು ಕೇಂದ್ರದವರ ಮುಂದಿವೆ. ನಾನು ಕೂಡ ಪತ್ರ ಬರೆದಿದ್ದೆ. ಏನೆಂದರೆ ಎಷ್ಟೋ ಕಡೆ ದೂರದರ್ಶನದ ಎರಡನೇ ಚಾನಲ್ ಇದೆ. ಆದರೆ ನಮ್ಮ ಕರ್ನಾಟಕದಲ್ಲಿ ಇಲ್ಲ. ತಕ್ಷಣ ಸೆಕೆಂಡ್ ಚಾನಲ್ ಅನ್ನು ಮಾಡಬೇಕೆಂದು ಹೇಳಿದ್ದೇವೆ. ಮತ್ತೆ linking of Low Power transmission centres in the State to Bangalore Doordarshan Kendra. ಇದನ್ನು ಮಾಡಿದರೆ ಬೆಂಗಳೂರಿನ ಕನ್ನಡದ ಕಾರ್ಯಕ್ರಮ ಎಲ್ಲಾ ಕಡೆ ತೋರಿಸಲಿಕ್ಕೆ ಸಾಧ್ಯವಾಗುತ್ತದೆ.Greater coverage of Karnataka in the National Programme of Doordarshan and A.I.R. and in the documentary programmes of films division, Coverage of Karnataka must increase.ಈ ಮೂರು ಮುಖ್ಯವಾದ ವಿಷಯಗಳ ಬಗ್ಗೆ ನಾವು ಕೇಂದ್ರಕ್ಕೆ ತಿಳಿಸಿದ್ದೇವೆ. ಅವರು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ನಂಬಿದ್ದೇನೆ. ಈಗ ಫಿಲಂ ಸಬ್ಸಿಡಿ ಬಗ್ಗೆ ಹೇಳುವುದಾದರೆ ಅದನ್ನು ಕೊಡುತ್ತಿದ್ದೇವೆ. ಆ ಕಾರ್ಯಕ್ರಮವನ್ನು ನಾವು ಮುಂದುವರಿಸುತ್ತೇವೆ. ಆದರೆ ಒಂದು ವಿಷಯವನ್ನು ನೀವುಹೇಳಿದಿರಿ. ಒಳ್ಳೆಯ ಫಿಲಂಗಳಿಗೆ ಕೊಡಬೇಕು ಬೇರೆ ಫಿಲಂಗಳಿಗೆ ಕೊಡಕೂಡದು ಎಂದು. ಮೊದಲು ಹಾಗೇ ಇತ್ತು. ಅದನ್ನು ರದ್ದು ಮಾಡಿ ಈಗ ಎಲ್ಲಾ ಫಿಲಂಗಳಿಗೆ ಕೊಡಬೇಕೆಂದು ಮಾಡಿದರು. ಆದ್ದರಿಂದ ಈ ತೊಂದರೆ ಉಂಟಾಗಿದೆ. ಮತ್ತೆ ಕನ್ನಡದ ಫಿಲಂಗಳಲ್ಲಿ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದುಎಂದು ತೀರ್ಮಾನ ಮಾಡಬೇಕೆಂದರೆ ಆದರ ಬಗ್ಗೆ ಸರ್ಕಾರ ಯೋಚಿಸಬೇಕಾಗುತ್ತದೆ. ಆದರೆ ಇವತ್ತು ಆ ರೀತಿ ಮಾಡುವುದಕ್ಕೆ ನಮಗೆ ಅವಕಾಶ ಇಲ್ಲ. ಆದರೆ ಅವರು ಹೇಳಿರತಕ್ಕ ಮಾತಿನಲ್ಲಿ ಬಹಳಷ್ಟು ಅರ್ಥ ಇದೆ ಎಂದು ಹೇಳುತ್ತೇನೆ. ಕನ್ನಡ ಚಲನಚಿತ್ರಕ್ಕೆ ಈಗ ಏನು ಸಬ್ಸಿಡಿ ಕೊಡುತ್ತಿದ್ದೇವೆ ಅದನ್ನು ಮುಂದುವರೆಸುತ್ತೇವೆ. ಆ ಕಾರ್ಯಕ್ರಮಕ್ಕೆ ಯಾವ ಒಂದು ಧಕ್ಕೆ ಬರುವುದಿಲ್ಲ. ಬಡ್ಜೆಟ್ಟಿನಲ್ಲಿ ಏನು 65ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ ಅದಕ್ಕೂ ಜಾಸ್ತಿ ದುಡ್ಡು ಬೇಕಾದರೆ ಕೂಡ ಅದನ್ನು ಕೊಡುವುದಕ್ಕೆ ಏನು ತೊಂದರೆ ಇಲ್ಲ. ಹೋದವರ್ಷ ಕೂಡ ಏನು ತೊಂದರೆ ಬರಲಿಲ್ಲ. ಈ ವರ್ಷವೂ ಬರುವುದಿಲ್ಲ. ಹಣಕಾಸಿನ ಮಂತ್ರಿಗಳು ಇಲ್ಲೇ ಇದ್ದಾರೆ. ಆ ಬಗ್ಗೆ ನನಗೆ ಎಳ್ಳಷ್ಟೂ ಅನುಮಾನ ಇಲ್ಲ. ಸಣ್ಣ ವೃತ್ತ ಪತ್ರಿಕೆಗಳ ಬಗ್ಗೆ ಎಂ.ಬಿ.ಸಿಂಗ್ ಅವರು ಕೊಟ್ಟಿರುವ ವರಧಿ ನಮ್ಮ ಪರಿಶೀಲನೆಯಲ್ಲಿದೆ.ಅವರ ಎಲ್ಲ ಸಲಹೆಗಳನ್ನು ನಾವು ನೋಡುತ್ತೇವೆ. ಹಾಗೂ ಯಾವ ರೀತಿಯಿಂದ ಈ ಸಣ್ಣ ಪತ್ರಿಕೆಗಳನ್ನು ಗುರುತಿಸಬೇಕು ಮತ್ತೆ ಸರ್ಕ್ಯುಲೇಶನ್ ಒಂದೇ ಅಲ್ಲ ಗುಣಮಟ್ಟವನ್ನು ಕೂಡ ನಾವು ನೋಡಬೇಕಾಗುತ್ತದೆ. ಕೆಳಮಟ್ಟದಲ್ಲಿ ಜರ್ನಲಿಸಂ ಮಾಡುತ್ತಿದ್ದರೆ ಅಂಥವನ್ನು ಗುರುತಿಸಿ ಬೇರೆ ಇಡಬೇಕಾಗುತ್ತದೆ. ಚಲೋ ಸಣ್ಣ ಪತ್ರಿಕೆಗಳನ್ನು ಒಳ್ಳೆಯ ಕೆಲಸ ಮಾಡುವಂತಹ ಪತ್ರಿಕೆಗಳನ್ನು ಗುರುತಿಸಬೇಕಾಗುತ್ತದೆ. ಇದು ಸ್ವಲ್ಪ ಕಷ್ಟದ ಕೆಲಸ. ಕನ್ನಡ ಫಿಲಂಗಳನ್ನು ಯಾವ ರೀತಿ ಒಳ್ಳೆಯದು ಕೆಟ್ಟದ್ದು ಎಂದು ತಿಳಿದುಕೊಳ್ಳುವುದು ಕಷ್ಟವಾಗುತ್ತದೋ ಅದೇ ರೀತಿ ಇದೂ ಕೂಡ. ಮೊದಲು ಒಳ್ಳೆಯದು ಕೆಟ್ಟದ್ದು ಎಂದು ನೋಡಿ ಸಬ್ಸಿಡಿ ಕೊಡುತ್ತಿದ್ದರು. ಅದೇ ರೀತಿ ಈ ಸಣ್ಣ ಪತ್ರಿಕೆಗಳು ಕೂಡ. ನನಗೆ ಅವುಗಳ ಬಗ್ಗೆ ಬಹಳಷ್ಟು ಗೌರವ ಇದೆ. ಏಕೆಂದರೆ ಸಣ್ಣ ಪ್ರಮಾಣದಲ್ಲಿ ಜಿಲ್ಲಾ ಮಟ್ಟದಲ್ಲಿ ಎಷ್ಟೇ ಕಷ್ಟಗಳು ಇದ್ದರೂ ಕೂಡ ಅವರು ಸಾಹಸ ತೋರಿಸಿ ಅವರ ಅಭಿಪ್ರಾಯಗಳನ್ನು ಪತ್ರಿಕೆ ಮೂಲಕ ಏನು ಕೊಡುತ್ತಿದ್ದಾರೆ ಆ ಉತ್ಸಾಹ ಏನಿದೆ ಅದನ್ನು ನಾವು ಕಾಪಾಡಿಕೊಂಡು ಹೋಗಬೇಕು. ಅಡ್ವರ್ಟೈಸ್‌ಮೆಂಟ್‌ಗಳನ್ನು ಅವರಿಗೆ ಜಾಸ್ತಿ ಮಾಡುತ್ತೇವೆ. ಅದೇನು ಮುಖ್ಯವಲ್ಲ. ಆದರೆ ಎಷ್ಟರಮಟ್ಟಿಗೆ ಅಡ್ವರ್ಟೈಸಮೆಂಟನ್ನು ಜಾಸ್ತಿ ಮಾಡಬೇಕೆಂಬುದನ್ನು ನೋಡುತ್ತೇನೆ. I want to be generous with the small newspapers - not bad small newspapers. ಇದರ ಬಗ್ಗೆ ನಮ್ಮ ಪಾಲಿಸಿ

ಏನಿರಬೇಕೆಂಬುದರ ಬಗ್ಗೆ ನಾನು ಇಷ್ಟರಲ್ಲಿ ಒಂದು ತೀರ್ಮಾನಕ್ಕೆ ಬರುತ್ತೇನೆ. accredation correspondenceನಲ್ಲಿ ಸಹ 275 ದೊಡ್ಡ ಪತ್ರಿಕೆಗಳವರು ಇದ್ದರೆ 211 ಸಣ್ಣ ಪತ್ರಿಕೆಗಳವರು ಇದ್ದಾರೆ. ಈಗ ಜರ್ನಲಿಸ್ಟ್ ಬಸ್ ಕೂಪನ್ಸ್ 734 ಜನರಿಗೆ ಕೊಟ್ಟಿದ್ದು ಅದರಲ್ಲಿ 632 ಜನರು ಸಣ್ಣ ನ್ಯೂಸ್‌ಪೇಪರ್‌ನವರಿದ್ದಾರೆ. ರಿಟೈರ್ಡ್ ಜರ್ನಲಿಸ್ಟ್ ಬಗ್ಗೆ ಹೇಳಿದ್ದೀರಿ. 250 ರೂಪಾಯಿ ಇರುವುದನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದೀರಿ. ಅದು ಜಾಸ್ತಿ ಮಾಡಬೇಕಾದರೆ ಬಜೆಟ್‌ನಲ್ಲಿ ಮಾಡಬೇಕಾಗುತ್ತದೆ, ಆದ್ದರಿಂದ ಮುಂದಿನ ವರ್ಷಯೋಚನೆ ಮಾಡಬೇಕಾಗುತ್ತದೆ. ತಕ್ಷಣ ಮಾಡುವುದಕ್ಕಾಗುವುದಿಲ್ಲ. ಆದರೆ ಜಾಸ್ತಿ ಮಾಡಬೇಕು ಎಂಬ ವಿಚಾರ ನಮ್ಮ ಮನಸ್ಸಿನಲ್ಲೂ ಇದೆ. Compulsory exhibition of kannada films for 12 weeks in a year. 1987 ಇದನ್ನು ಮಾಡಿದರು, ಕೋರ್ಟ್‌ನಲ್ಲಿ ಯಾರೋ ಇದನ್ನು ಚಾಲೆಂಜ್ ಮಾಡಿದಾಗ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ ಎಂದು ಕೋರ್ಟ್‌ನವರು ತೀರ್ಮಾನ ಕೊಟ್ಟಿದ್ದಾರೆ. 12 weeks in a year was attempted in 1987. This is about 7 (a) of the Karnataka Cinema Regulations rules, but that was struck down in the court. Therefore, that difficulty is there. ಇಷ್ಟು ಹೇಳಿ ಇವತ್ತಿನ ದಿವಸ ಹೌಸ್ ಸೈಟ್ಸ್ ಬಗ್ಗೆ ಮತ್ತು ಸ್ಮಶಾನದ ಬಗ್ಗೆ ಒಂದು ಮಾತು ಹೇಳಿದ್ದಾರೆ. ಸತ್ತವರಿಗೆ ಸ್ಮಶಾಣ ಬೇಕು. ಬದುಕಿರುವವರಿಗೆ ಸೈಟುಗಳು ಬೇಕು. ಅದಕ್ಕೋಸ್ಕರ ಸ್ಮಶಾಣದ ಕಡೆ ಕೂಡ ನಾವು ಗಮನ ಕೊಡುತ್ತೇವೆ. ಜಮೀನು ಅಕ್ವೈರ್ ಮಾಡುವಾಗ ಅದರ ಬಗ್ಗೆ ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಸಮಾಜ ಕಲ್ಯಾಣ ಮಂತ್ರಿಗಳು ಹನುಮಾನ್ ಅವರು ಹನಿಮೂನ್‌ಗೆ ಹೋಗಿ ಬಂದಿದ್ದಾರೆ. ಆದ್ದರಿಂದ ಈ ಸದನದಲ್ಲಿ ಅವರಿಗೆ ನಾನು ಸ್ವಾಗತ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮನ್ನಾದರೂ ಕೇಳುವುದಿಲ್ಲ ನೀವು. ಅವರು ಯಾವ ಹನಿಮೂನ್‌ಗೂ ಹೋಗಿಲ್ಲ. ಅವರಿಗೆ ಮದುವೆ ಆಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಸಮಾಜ ಕಲ್ಯಾಣ ಮಂತ್ರಿಗಳು ಹನುಮಾನ್ ಅವರು ಹನಿಮೂನ್‌ಗೆ ಹೋಗಿದ್ದರು ಅಂತ ಸುದ್ದಿ ಬಂದಿತ್ತು. ಈಗ ವಾಪಸ್ ಬಂದಿದ್ದಾರೆ. ಸಂತೋಷ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್:- ಮದುವೆಯೇ ಆಗಿಲ್ಲ. ಹನಿಮೂನ್‌ಗೆ ಹೇಗೆ ಹೋಗುವುದಕ್ಕಾಗುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ:- ಮದುವೆ ಆಗದೇಹೋದರೆ ಹನಿಮೂನ್‌ಗೆ ಹೋಗಬಾರದು ಎಂದು ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಅವರ ವಾದ ಒಪ್ಪಿಕೊಳ್ಳುತ್ತೀರಾ? ನೀವು ನಾನು ಮಾನ್ಯ ಮಂತ್ರಿಗಳ ರಕ್ಷಣೆಗೆ ಬರುತ್ತಿದ್ದೇನೆ. ನೀವು ನಮ್ಮ ರಕ್ಷಣೆಗೆ ಬರುವುದಿಲ್ಲವಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ವಿಕೇಂದ್ರೀಕೃತ ವ್ಯವಸ್ಥೆ ಬಗ್ಗೆ ವಿಶ್ವಾಸ ಇಟ್ಟಿರತಕ್ಕ ಮಂತ್ರಿಗಳ ಕೈಗೆ ಈ ಒಂದು ಖಾತೆ ಹಸ್ತಾಂತರ ಆಗಿರುವುದನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ.ಖಾರ್ಗೆ:- ಡಿವೈಡ್ ಅಂಡ್ ರೂಲ್ ಪಾಲಿಸಿ ನಿಮ್ಮದು. ಇಬ್ಬರಿಗೂ ಜಗಳ ಹಚ್ಚುವುದು ತಮಾಷೆ ನೋಡುವುದು.

SRI D.B.CHANDRE GOWDA:- It is already divided.

ಶ್ರೀ ಮಲ್ಲಿಕಾರ್ಜುನ ಎಂ.ಖಾರ್ಗೆ:- ಸುದೈವ; ಈಗ ಮಾನ್ಯ ಬಸವಲಿಂಗಪ್ಪನವರಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅವರೂ ಇದ್ದಿದ್ದರೆ ಯುದ್ಧ ಪ್ರಾರಂಭವಾಗುತ್ತಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ:- ಸಿಂಪಲ್ ಮೆಜಾರಿಟಿ 2/3 ಭಾಗದಷ್ಟು ಮೆಜಾರಿಟಿ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಜಿಲ್ಲಾ ಪರಿಷತ್ತಿನಲ್ಲಿ ಈ ಕಾರಣದಿಂದ ಆಡಳಿತದಲ್ಲಿ ಸ್ವಲ್ಪ ಸ್ಥಗಿತವಾಗಿದೆ ಎಂದು ಹೇಳಿದ್ದೀರಿ. ಇದು ಏತಕ್ಕಾಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಜಿಲ್ಲಾ ಪರಿಷತ್ತಿನ ಸದಸ್ಯರಲ್ಲದ ಶಾಸಕರು ಅಲ್ಲಿ ಸದಸ್ಯರಾಗಿರುವುದರಿಂದ ವ್ಯತ್ಯಾಸವಾಗುತ್ತದೆ. ಆದ್ದರಿಂದ ಶಾಸಕರಿಗೆ

ಮತ ಹಾಕುವ ಹಕ್ಕನ್ನು ತೆಗೆದುಹಾಕಿದರೆ ಒಳ್ಳೆಯದು ಎಂದು ನನ್ನ ಸಲಹೆ. ಏಕೆಂದರೆ ತಾವು ಪ್ರಜಾಪ್ರಭುತ್ವ ಪದ್ಧತಿಗೆ ಬದ್ಧರಾಗಿದ್ದೇವೆ ಎಂದು ಹೇಳಿದ್ದೀರಿ.

ಶ್ರೀ ಗೋಪೀನಾಥ ಆರ್.ಸಾಂದ್ರಾ:- ನೀವೇ ಅದನ್ನೆಲ್ಲಾ ಮಾಡಿ ಈಗ ನಮಗೆ ಹೇಳುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಆಗ ನಾನು ಇಲ್ಲಿ ಇರಲಿಲ್ಲ.

ಶ್ರೀ ಗೋಪೀನಾಥ ಆರ್.ಸಾಂದ್ರಾ:- ಮಾಡುವಾಗ ನೀವು ಮಾಡಿ ಈಗ ನಮಗೆ ಹೇಳುತ್ತಿದ್ದೀರಿ. ಶಾಸಕರು ಎಂಪಿ.ಗಳು ಎಲ್ಲರಿಗೂ ಮತ ಹಾಕುವ ಅಧಿಕಾರ ಕೊಟ್ಟಿರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಅನುಭವದಿಂದ ಶಾಸನಗಳ ಬದಲಾವಣೆ ಅಗತ್ಯವೆಂದು ಹೇಳುತ್ತೇನೆ. ಬೇಡ ಅಂದರೆ ಬಿಡಿ. ನಾಮಿನೇಷನ್ಸ್ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು ಎಂದು ಹೇಳಿದ್ದೀರಿ. ಹಾಗಾದರೆ ಯಾವ ಕಾರಣಕ್ಕೆ ಜಿಲ್ಲಾಪರಿಷತ್ತಿಗೆ ಆಯ್ಕೆಆಗಿರುತ್ತಾರೋ ಅವರ ಮೇಲೆ ಆಯ್ಕೆಯಾದ ಶಾಸಕರು ಮತ ಕೊಡುವುದು ಪ್ರಜಾಪ್ರಭುತ್ವದ ನೀತಿಗೆ ವಿರುದ್ಧವಾದುದಲ್ಲವೇ ಏಕೆಂದರೆ ಡೀಸೆಂಟ್ರಲೈಜೇಷನ್ ಪವರ್‌ನಲ್ಲಿ ಜಿಲ್ಲಾಪರಿಷತ್ತಿಗೆ ಆಯ್ಕೆ ಮಾಡಿರುವುದರಿಂದ ಮೂರನೆ ಎರಡರಷ್ಟು ಮೂರನೆ ಒಂದು ಭಾಗದಷ್ಟು ವ್ಯತ್ಯಾಸ ಬರುತ್ತಿರುವುದು. ಈ ಕಾರಣವನ್ನೂ ಸಹ ತಾವು ತಿದ್ದುಪಡಿ ತರುವಾಗ ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳಿ.

ಶ್ರೀ ಎಂ.ವೈ. ಘೋರ್ಪಡೆ: ನಾಮಿನೇಷನ್ ಸದಸ್ಯರಿಗೂ ಎಕ್ಸ್ ಅಫಿಷಿಯೋ ಸದಸ್ಯರಿಗೂ ವ್ಯತ್ಯಾಸ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇದೆ. ಆಮೇಲೆ ತಾಲ್ಲೂಕು ಸಮಿತಿಯನ್ನು ರಾಜ್ಯಾಂಗದ 40 ವಿಧಿಯೊಳಗೆ ತಾವು ಏನು ಪ್ರಸ್ತಾಪ ಮಾಡಿದ್ದೀರಿ; ಇಲ್ಲಿ ವಿಲೇಜ್ ಪಂಚಾಯ್ತಿ ಎನ್ನುವ ಪದವನ್ನು ಬಳಸುತ್ತಾರೆ. ಗ್ರಾಮ ಮಂಡಲಗಳು ಈಗ ಏನು ನಾವು ಮಾಡಿದ್ದೇವೆ. ಇದರ ಮಧ್ಯೆ ತರತಕ್ಕಂಥ ಚತುಸ್ತಂಭ ರಾಷ್ಟ್ರ ಎನ್ನುವಂತಹ ಒಂದು ಥಿಯರಿಗೆ ಇದು ಹೊರತಾಗಿದೆ. ಇದು ಆದ ಮೇಲೆ ವಿಭಾಗ ಮಟ್ಟ ಆಮೇಲೆ ಇಲ್ಲೊಂದು ವಿಭಾಗ ಮಟ್ಟ ಪ್ರಾರಂಭವಾಗುತ್ತದೆ. ಆದ್ದರಿಂದ ಚತುಸ್ತಂಭ ಎನ್ನತಕ್ಕಂತಹ ವಾದ ಏನು ಇದೆ ಇದನ್ನೇ ಸ್ಟ್ರೆಂತನ್ ಮಾಡಿ; ಬೇಡ ಅಂತ ನಾನು ಹೇಳುವುದಿಲ್ಲ. ಆದರೆ ನಿಮ್ಮ ಕಲ್ಪನೆ ಏನು ಇದೆ ಹೊಸದು. ಅದರ ಬಗ್ಗೆ ಚರ್ಚೆಗೆ ಅವಕಾಶ ಬೇಕು ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಮತ್ತೆ ತಾವು 2 ನೇ ಚಾನಲ್ ಬಗ್ಗೆ ತಾವು ಹೇಳಿದ್ದೀರಿ. ನಾನು ಈಗಾಗಲೇ ಕೇಂದ್ರದ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಇನ್ಸಾಟ್ 1 ಡಿ ಅನ್ನು ಲಿಂಕ್ ಮಾಡಿ ಅಂತ. ನಮಗೆ ಎರಡನೆ ಚಾನಲ್ ಕೊಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಈ 2 ನೇ ಚಾನಲ್ ಬಗ್ಗೆ ನಾವು ಹಿಂದೆ ಎಷ್ಟೇ ಕೇಳಿದರೂ ನಿಮ್ಮ ಸರ್ಕಾರ ಅನುಮತಿ ಕೊಡಲಿಲ್ಲ. ಈಗ ಕೇಳುವ ಜಾಗದಲ್ಲಿದ್ದೀರಿ. ಕೇಳಿ ಸಂತೋಷ. ಇನ್ಸಾಟ್ 1 ಡಿ ಲಿಂಕ್ ಮಾಡಿದರೆ ನೇ ಚಾನಲ್‌ನಷ್ಟೇ ಚೆನ್ನಾಗಿ ಬೆಂಗಳೂರಿನ ಕನ್ನಡ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲ ಭಾಗದವರೂ ನೋಡಲು ಅವಕಾಶವಾಗುವುದರಿಂದ ಇದನ್ನೂ ಕೂಡ ಬರೆಯಬೇಕೆಂದು ಕೇಳುತ್ತಿದ್ದೇನೆ. ಮತ್ತೊಂದು ವಿಚಾರವೇದರೆ ತಾಲ್ಲೂಕ್ ಪಂಚಾಯಿತಿ ಅಧ್ಯಕ್ಷರ ಸ್ಥಾನ ಏನು ಇದೆ ಅದು ದ್ವಂದ್ವದಲ್ಲಿದೆ. ಈಗ ಈ ಜಾಗದಲ್ಲಿ ಯಾರು ಇರಬೇಕು ಅಂದರೆ ಶಾಸಕರು ಇರಬೇಕು. ಮಂತ್ರಿಗಳಿದ್ದರೆ ಬೇರೆಯವರನ್ನು ಮಾಡಬೇಕು. ಆದರೆ ಕೆಲವು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರುಗಳ ಸ್ಥಾನಗಳು ಏತಕ್ಕೆ ದ್ವಂದ್ವದಲ್ಲಿವೆ ಎಂದರೆ ಒಂದೇ ತಾಲ್ಲೂಕಿನಲ್ಲಿ ಇಬ್ಬರು ಅಥವಾ ಮೂವರು ಶಾಸಕರಿರುತ್ತಾರೆ. ನಿಮಗೆ ಒಂದು ಉದಾಹರಣೆ ಕೊಡುವುದಾದರೆ ಹುಬ್ಬಳ್ಳಿ ತಾಲ್ಲೂಕು ಪಂಚಾಯ್ತಿ. ಅದರಲ್ಲಿ 8 ಮಂಡಲ್‌ಗಳು ನಮ್ಮ ಪ್ರತಿಪಕ್ಷಕ್ಕೆ ಸೇರಿದಂತಹ ಶ್ರೀಮಾನ್ ಪಿ.ಸಿ.ಸಿದ್ದನಗೌಡರಿಗೆ ಸೇರಿದೆ. 3 ಮಂಡಲ್‌ಗಳು ಶ್ರೀಮಾನ್ ಜಿ.ಆರ್.ಸಾಂದ್ರರವರಿಗೆ ಸೇರಿದೆ. ಹಾಗಾದರೆ ಯಾರು ಅಧ್ಯಕ್ಷರಾಗಿರಬೇಕು?

SRI D.K. SHIVAKUMAR:- The member in whose Constituency the major part of taluk comes will become the President.

ಶ್ರೀ ಗೋಪಿನಾಥ್ ಆರ್.ಸಾಂದ್ರ:- ಶ್ರೀಮಾನ್ ಸಿದ್ದನಗೌಡರು ಕಲಘಟ್ಗಿ ತಾಲ್ಲೂಕಿನಿಂದ ಆರಿಸಿ ಬಂದಿದ್ದಾರೆ. ಈ ಬಗ್ಗೆ ನನ್ನ ವಾದ ಏನೆಂದರೆ.....

ಶ್ರೀ ಡಿ.ಬಿ. ಚಂದ್ರೇಗೌಡ:- ಈ ಬಗ್ಗೆ ಮಂತ್ರಿಗಳು ಏನು ಹೇಳುತ್ತಾರೆಂದು ಕೇಳೋಣ. ಸಿದ್ದನಗೌಡರ್‌ರವರು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾಗಿರುವುದು ಸರಿ ಅಂತ ಹೇಳಿ ತಮಗೆ ರೆಕಮಂಡೇಷನ್ ಸಹ ಬಂದಿದೆ. ಆ ಫೈಲನ್ನು ಏಕೆ ಇಟ್ಟುಕೊಂಡು ಕುಳಿತಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ:- ಇದನ್ನು ಹೇಳಿಬಿಡುತ್ತೇನೆ. ಯಾವ ಫೈಲನ್ನೂ ಡಿಲೇ ಮಾಡುವ ಉದ್ದೇಶ ನನಗಿಲ್ಲ. ರೂಲ್ಸ್ ಪ್ರಕಾರ ಏನು ಇದೆ ಅದನ್ನು ಮಾಡುವವನು ನಾನು. ಕೆಲವು ಕಡೆ ನಿಮ್ಮ ಪಕ್ಷಕ್ಕೆ ಅನುಕೂಲವಾಗಲಿ ಕೆಲವು ಕಡೆ ನಮ್ಮ ಪಕ್ಷಕ್ಕೆ ಅನುಕೂಲವಾಗಲಿ ಅದು ಬೇರೆ ವಿಷಯ. ಆದರೆ ನಾವುಪಕ್ಷ ನೋಡುವುದಿಲ್ಲ. ಆದರೆ ಮೆಜಾರಿಟಿ ಏರಿಯಾ ಯಾರದು ಬರುತ್ತದೋ ಅದನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ:- ಪತ್ರಿಕೆಗಳವರಿಗೆ ದೊಡ್ಡ ಪತ್ರಿಕೆಗಳಿಗೆ ಜಾಹಿರಾತು ಕೊಡುವ ಕಾರ್ಯಕ್ರಮವಿದೆ. ಅದೇ ರೀತಿ ಸಣ್ಣ ಪತ್ರಿಕೆಗಳವರೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳವಾಗಿ ಕೆಲಸ ಮಾಡತಕ್ಕ ಪತ್ರಿಕೆಗಳವರು ಆರ್ಥಿಕ ಸ್ಥಿತಿಯಲ್ಲಿ ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ಸಣ್ಣ ಪತ್ರಿಕೆಗಳವರಿಗೂ ಕೂಡ ಸರಿಯಾದ ರೀತಿಯಲ್ಲಿ ಜಾಹಿರಾತನ್ನು ಕೊಡಬೇಕು. ಅದೇ ರೀತಿ ಪಾಸು ಕೊಡುವುದರಲ್ಲೂ ಕೂಡ ಸಣ್ಣ ಪತ್ರಿಕೆಗಳವರಿಗೂ ಕೂಡ ಬಸ್ಸು ಪಾಸು ಕೊಡುವ ವ್ಯವಸ್ಥೆಯಾಗಬೇಕು. ಈಗ ಅವರಿಗೆ ಇಲ್ಲವೆಂದು ನನ್ನ ನಂಬಿಕೆ ಉಂಟು. ಆದ್ದರಿಂದ ದೊಡ್ಡ ಪತ್ರಿಕೆಗಳವರಿಗೂ ಕೊಡಿ. ಅದೇರೀತಿ ಸಣ್ಣ ಪತ್ರಿಕೆಗಳವರಿಗೂ ಕೊಡಿ. ಅವರೂ ಒಳ್ಳೆಯ ರೀತಿಯಲ್ಲಿ ಕೆಲಸಮಾಡುತ್ತಾರೆ ಇವರು ಚೆನ್ನಾಗಿ ಕೆಲಸ ಮಾಡಿದರೆ ಎಲ್ಲ ಗ್ರಾಮಾಂತರ ಪ್ರದೇಶಗಳಿಗೂ ಒಳ್ಳೆಯದಾಗುತ್ತದೆ. ಎರಡನೆಯದಾಗಿ ಈ ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯಿತ್ ವಿಚಾರದಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ನಮಗೆ ವಿಷಯವನ್ನು ಹೇಳಿದ್ದೀರಿ. ಬಹಳ ಸಂತೋಷವಾಯಿತು. ಆದರೆ ನಾನು ಹೇಳುವಂತಹದ್ದು ಯೋಜನೇತರ ಖರ್ಚು ಜಾಸ್ತಿಯಾಗಿ ಅಭಿವೃದ್ಧಿ ಕೆಲಸಗಳು ಬಹಳ ಕಡಿಮೆ ಆಗುತ್ತಾ ಉಂಟು. ಅದಕ್ಕೋಸ್ಕರ ಒಂದು ಜಿಲ್ಲಾಪರಿಷತ್ತಿನಲ್ಲಿ ಕಾರ್ಯದರ್ಶಿಯವರಿಗೆ ಉಪಕಾರ್ಯದರ್ಶಿಯವರಿಗೆ ಎಂದು ಎಲ್ಲರಿಗೂ ಕಾರು ಈ ರೀತಿಯಾಗಿ ದುಂದು ವೆಚ್ಚವಾಗುತ್ತಿದೆ. ಇದನ್ನು ಕಡಿಮೆ ಮಾಡಬೇಕು. ಅದೇ ರೀತಿಯಲ್ಲಿ ಇವತ್ತು ಎಲ್ಲಾ ರೀತಿಯಲ್ಲಿ ಕೆಲವು ಮಂಡಲ ಪಂಚಾಯಿತಿಗಳಲ್ಲಿ ಕಾಂಟ್ರಾಕ್ಟ್ ಕೊಡುವಾಗ ಸದಸ್ಯರಿಗೇ ಕಂಟ್ರಾಕ್ಟ್ ಕೊಟ್ಟು ಮಾರ್ಗ ಮಾಡುವುದು ಮೋರಿ ಮಾಡುವುದು ಗಲ್ಲಿ ಮಾಡುವುದು ಇದೆಲ್ಲಾ ಕೊಟ್ಟರೆ ಅದು ಸರಿಯಾದ ಕೆಲಸ ಆಗುವುದಿಲ್ಲ ಕಳಪೆ ಕೆಲಸ ಆಗುತ್ತದೆ. ಆದ್ದರಿಂದ ಅದಕ್ಕೆ ಒಂದು ಕಾರ್ಯಕ್ರಮವಿಟ್ಟು ಪ್ರತಿಯೊಂದು ಮಂಡಲಕ್ಕೂ ಆಡಿಟ್ ಮಾಡತಕ್ಕ ಒಂದು ಕಾರ್ಯಕ್ರಮ ಇಟ್ಟರೆ ಎಲ್ಲಾ ಗುಟ್ಟು ಸಿಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ ನನಗೆ ಗೊತ್ತಿರುವ ಪ್ರಕಾರ ಮಂಡಲಪಂಚಾಯಿತಿ ಪ್ರಧಾನರು ಎಲ್ಲಾದರೂ ಅವ್ಯವಹಾರ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಕ್ಟ್‌ನಲ್ಲಿ ಪ್ರಾವಿಷನ್ ಇಲ್ಲ. ಇವತ್ತು ನಿಜವಾಗಿಯೂ ಅಧಿಕಾರ ವಿಕೇಂದ್ರೀಕರಣವಾಗಿ ಅಲ್ಲಿ ಭ್ರಷ್ಟಾಚಾರ ನಡೆಯಬಾರದು ಎಂದಿದ್ದರೆ ತಾವು ಬಿಗಿಯಾದ ಕ್ರಮವನ್ನು ಆಕ್ಟ್‌ನಲ್ಲಿ ತರಬೇಕಾಗುತ್ತದೆ. ಇದೇ ಕಾರಣಕ್ಕೆ ಇವತ್ತು ಸೂಪರ್‌ಸೀಲ್ ಮಾಡಿದರೆ ಇಡೀ ಬಾಡಿಯೇ ಹೋಗುತ್ತದೆ. ಅದು ಸರಿಯಾದ ಕ್ರಮವಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲು ಅವಕಾಶ ಇರುವಂತೆ ಈಗಿನ ಆಕ್ಟ್‌ಗೆ ಬದಲಾವಣೆ ಆಗಬೇಕು. ಇನ್ನು ಬೋರ್ವೆಲ್ ರಿಪೇರಿ ಬಗ್ಗೆ ದೊಡ್ಡ ಹಗರಣವೇ ಆಗಿದೆ. ಮೊದಲು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ (ಅಭಿವೃದ್ಧಿ) ಇದ್ದು ಅವರು ರಿಪೇರಿ ಮಾಡಿಸುತ್ತಿದ್ದರು. ಅಲ್ಲೂ ಕೂಡಾ ವೆಹಿಕಲ್ಸ್ ಹಾಗೂ ಸಿಬ್ಬಂದಿ ಪ್ರಾಬ್ಲಮ್ಸ್ ಇದೆ. ಆ ಬಗ್ಗೆ ಸರ್ಕಾರ ಗಮನಹರಿಸಬೇಕು. ಮತ್ತೆ ಈಗ ಮಂಡಲ್ ಪಂಚಾಯಿತಿಯವರು ರಿಪೇರಿ ಮಾಡಬೇಕು ಎಂದರೆ ಅವರಿಗೂ ಯಂತ್ರೋಪಕರಣಗಳು ಸಾಮಗ್ರಿಗಳು ದೊರಕಿಸಿಕೊಳ್ಳುವುದಕ್ಕೆ ಏನು ಕಟ್ಟುಪಾಡು ಇದೆ ಅದನ್ನು ಸರಿಮಾಡಬೇಕು. ಮತ್ತೆ ಈ ಮಂಡಲಪಂಚಾಯಿತಿ ಜಿಲ್ಲಾಪರಿಷತ್ತುಗಳನ್ನು ತಂದಾಗಲೇ ನಾನು ಒಂದು ಮಾತನ್ನು ಹೇಳಿದ್ದೆ. ನಮ್ಮ

ಶಾಸಕರನ್ನು ಇಲ್ಲಿ ಬಲಿಪಶುಗಳನ್ನಾಗಿ ಮಾಡಿ ಅಧಿಕಾರ ಇಲ್ಲದ ನಾಮಕಾವಸ್ಥೆ ಪಟೇಲರನ್ನಾಗಿ ಮಾಡಬೇಡಿ ಎಂದು ಹೇಳಿದ್ದೆ. ಇವತ್ತು ತಾಲ್ಲೂಕು ಪಂಚಾಯಿತಿಗಳಲ್ಲಿನ ಸಭೆಗಳಲ್ಲಿ ಶಾಸಕರು ಅಧ್ಯಕ್ಷರಾಗಿ ಕೆಲಸ ಮಾಡುವ ಅವಕಾಶ ಸಿಗಬೇಕು. ಇವತ್ತು ಅವರಿಗೆ ಸರಿಯಾದ ಅಧಿಕಾರ ಕೊಡಿ. ಇಲ್ಲವೇ ನಿಜವಾದ ವಿಕೇಂದ್ರೀಕರಣ ಮಾಡಬೇಕೆಂದಿದ್ದರೆ ಅಲ್ಲಿ ಇರುವ ಮಂಡಲ ಪಂಚಾಯಿತಿಯ ಪ್ರಧಾನರುಗಳಲ್ಲಿ ಅವರಿಗೆ ಬೇಕಾದ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳುವಹಾಗೆ ಮಾಡಿ. ಇಲ್ಲದಿದ್ದರೆ ಒಂದು ಚೂರೂ ಅಧಿಕಾರ ಇಲ್ಲದೇ ಅನೇಕ ಸಂದರ್ಭದಲ್ಲಿ ನಮ್ಮ ಒಂದು ಗೌರವಕ್ಕೆ ಚ್ಯುತಿ ಬರುವ ಸಂದರ್ಭ ಇದೆ. ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಈಗಿರುವ ಶಾಸಕರಿಗೆ ಅಧಿಕಾರ ಏನು ಇಲ್ಲದೇ ಇರುವುದರಿಂದ ಮಂಡಲ ಪಂಚಾಯಿತಿ ಪ್ರಧಾನರಲ್ಲೇ ಯಾರನ್ನಾದರೂ ಆರಿಸುವ ಅಧಿಕಾರ ಕೊಡಿ ಇಲ್ಲ ಎಂದರೆ ನಮಗೆ ಅಲ್ಲಿ ಗೌರವದಿಂದ ಕೆಲಸ ಮಾಡುವುದಕ್ಕೆ ಅಧಿಕಾರ ಕೊಡುವ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂದ್ರ:- ಅಧ್ಯಕ್ಷರೇ ನಿನ್ನೆ ನಾನು ಒಂದು ಸಮಸ್ಯೆ ಬಗ್ಗೆ ಕೇಳಿದ್ದೆ. ಜಿಲ್ಲಾಪರಿಷತ್ತಿನ ಕಾನೂನಿನಲ್ಲಿ ಕಾರ್ಪೊರೇಷನ್‌ಗಳು ಮುನಿಸಿಪಾಲಿಟಿಗಳು ಡೀನೋಟಿಫೈಡ್ ಏರಿಯಾಸ್ ಸ್ಯಾನಿಟರಿ ಬೋರ್ಡ್ - ಮುಂತಾದವು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಜಿಲ್ಲಾ ಪರಿಷತ್ ಆಕ್ಟ್ ನಂ. (2) ಸಬ್ ಸೆಕ್ಷನ್ (9)ರ ಪ್ರಕಾರ ಬಂದಿದೆ. ತದನಂತರ ನಿಯಮ 138ರಲ್ಲೂ ಕೂಡಾ ಅದೇ ರೀತಿ ಇದೆ. ಆದರೂ ಕೂಡಾ ದುರ್ದೈವದಿಂದ ನಮ್ಮ ಶಿಕ್ಷಣ ಹಾಗೂ ಆರೋಗ್ಯ ಇಲಾಖೆಗಳ ಎಲ್ಲಾ ಕಂಟ್ರೋಲ್ ಜಿಲ್ಲಾ ಪರಿಷತ್ತಿಗಿದೆ.

(ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಇದನ್ನು ತೆಗೆದು ಹಾಕಿ ಎಂದು ಕಳೆದ 6 ತಿಂಗಳಿಂದ ಬೇರೆ ಬೇರೆ ಖಾತೆಯ ಜನರಿಗೆ ಬರೆದಿದ್ದೇನೆ. ಮುಖ್ಯಮಂತ್ರಿಗಳಿಗೂ ಕೂಡಾ ಬರೆದಿದ್ದೇನೆ. ಮುಖ್ಯಮಂತ್ರಿಗಳೂ ಕೂಡಾ ಇದು ಸರಿಯಿದೆಯಾದ್ದರಿಂದ ನಾನು ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಹೇಳುತ್ತೇನೆ ಎಂದು ಉತ್ತರ ಅವರಿಂದ ಬಂತು. ಇದರ ಬಗ್ಗೆ ನಾನು ಮಾನ್ಯ ಬಸವಲಿಂಗಪ್ಪನವರಿಗೂ ಕೂಡಾ ಪತ್ರವನ್ನು ಬರೆದಿದ್ದೇನೆ. ಅವರೂ ಕೂಡಾ ಈ ವಿಚಾರ ಯೋಗ್ಯವಾಗಿದ್ದು ಇದನ್ನು ವಿಚಾರ ಮಾಡಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದರು. ಇವತ್ತಿನ ದಿವಸ ಜಿಲ್ಲಾಪರಿಷತ್ತಿನವರಿಗಾಗಲೀ ಮುನಿಸಿಪಾಲಿಟಿಯವರಿಗೆ ಕಂಟ್ರೋಲ್ ಮಾಡುವುದಕ್ಕೆ ಅಧಿಕಾರ ಇಲ್ಲ. ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ ಎಂದು ಹೇಳಿದ್ದೆ. ಅದಕ್ಕೆ ಉತ್ತರ ಬರಲಿಲ್ಲ.

ಶ್ರೀ ಎಂ.ವೈ. ಘೋರ್ಪಡೆ:- ಈ ವಿಷಯ ಚರ್ಚೆ ಆಗಬೇಕಾಗಿಲ್ಲ. I am getting it examined.

MADAM DEPUTY SPEAKER: He is getting it examined.

ಶ್ರೀ ಗೋಪೀನಾಥ ಆರ್. ಸಾಂದ್ರ:- ಮತ್ತೆ ಮಾನ್ಯ ಚಂದ್ರೇಗೌಡರು ಒಂದು ಮಾತನ್ನು ಹೇಳಿದರು. ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸಿದ್ದನಗೌಡರ್ ಹಾಗೂ ಗೋಪೀನಾಥ ಸಾಂದ್ರ ಇವರಿಬ್ಬರೂ ಶಾಸಕರು ಇದ್ದಾರೆ ಇವರಲ್ಲಿ ಯಾರಿಗೆ ಅಧ್ಯಕ್ಷ ಪದವಿ ಕೊಡಬೇಕೆಂಬ ಸಮಸ್ಯೆ ಆಕ್ಟ್‌ನಲ್ಲಿ ಇದೆ ಎಂದು ಹೇಳಿದರು. ಆಕ್ಟ್‌ನಲ್ಲಿ ಕ್ಲಿಯರ್ ಇಲ್ಲ ಎಂದು ಹೇಳಿದರು. ಆದರೆ ಇದರ ಬಗ್ಗೆ ನಾನು ಅವರಿಗೆ ಅರ್ಥಮಾಡಿಕೊಡುತ್ತೇನೆ. ಈಗ ಸಿದ್ದನಗೌಡರ್ ಅವರು ಕಲಘಟಗಿ ತಾಲ್ಲೂಕಿನಿಂದ ಆರಿಸಿ ಬಂದಿದ್ದಾರೆ. ಅವರು ಪ್ರೆಸಿಡೆಂಟ್ ಆಗುವುದು ಕಲಘಟಗಿ ತಾಲ್ಲೂಕಿಗೆ ಇಲ್ಲವೇ ಹುಬ್ಬಳ್ಳಿ ತಾಲ್ಲೂಕಿಗಲ್ಲ. ಇದರ ಬಗ್ಗೆ ಆಕ್ಟ್‌ನಲ್ಲಿ ಸರಿಯಾಗಿ ಬರೆದಿಲ್ಲ. ಈ ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಿದರೆ ಸರಿಹೋಗುತ್ತವೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಯೋಗ್ಯ ವಿಚಾರ ಮಾಡಿ ನಿರ್ಣಯ ತೆಗೆದುಕೊಂಡು ತಿದ್ದುಪಡಿಮಾಡುವುದಿದ್ದರೆ ಮಾಡಬೇಕು.

SRI. M.Y. GHORPHADE:- These matters will be taken into consideration while amending the Act. We will examine. I cannot reply now only. ಯಾವ

ವಿಷಯದಲ್ಲಿ ಸರ್ಕಾರದ ತೀರ್ಮಾನ ಇದೇ ರೀತಿ ಇದೆ ಎಂದು ಹೇಳಲು ಪ್ರಯತ್ನ ಮಾಡುತ್ತಿಲ್ಲ. ಇದರ ಬಗ್ಗೆ ವಿಚಾರ ಏನು ಇದೆ ಎಂಬುದನ್ನು ಹೇಳಿದೆ. ಆಕ್ಟ್ ಅಮೆಂಡ್ ಮಾಡುವಾಗ ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ತಾಲ್ಲೂಕುಮಟ್ಟದಲ್ಲಿ ಈ ಸಂಸ್ಥೆಗಳನ್ನು ಬಲಪಡಿಸಬೇಕೆಂದು ಹೇಳಿ ಈಗ 150-160 ಕೋಟಿ ರೂ.ಗಳವರೆಗೆ ಏನು ಹಣ ಕೊಡುತ್ತಿದ್ದೇವೆ ಅದರಲ್ಲಿ ರೂರಲ್ ಡೆವಲಪ್‌ಮೆಂಟ್ ನೀರು ಸರಬರಾಜು ಯೋಜನೆ ಏನಿದೆ......

ಶ್ರೀ ಬಿ.ಎಸ್. ಯಡಿಯೂರಪ್ಪ:- ಪ್ರಧಾನರು ಅವ್ಯವಹಾರ ಮಾಡಿದರೆ ಇಡೀ ಮಂಡಲ್ ಪಂಚಾಯತಿಯನ್ನೇ ಈಗಾಗಲೇ ಕೆಲವು ಸಂದರ್ಭದಲ್ಲೇ ರದ್ದು ಮಾಡಿದ್ದೀರಿ. ಇದು ಸರಿಯಲ್ಲ ಯಾರು ತಪ್ಪು ಮಾಡುತ್ತಾರೆ ಅವರು ಮಾತ್ರ ಮನೆಗೆ ಹೋಗಬೇಕು. ಇಡೀ ಮಂಡಲ್ ಪಂಚಾಯತಿಯನ್ನೇ ರದ್ದು ಮಾಡುವುದು ಸರಿಯಲ್ಲ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ: ನಾನು ಈ ಬಗ್ಗೆ ಹೇಳಿದಾಗ ನೀವು ಈ ಮನೆಯಲ್ಲಿ ಇರಲಿಲ್ಲವೆಂದು ಕಾಣುತ್ತದೆ. ರೋಜ್‌ಗಾರ್ ಯೋಜನೆಯಲ್ಲಿ ಏನು ಅಕ್ರಮ ನಡೆದಾಗ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತದೆಂದು ಶ್ರೀ ಪುಟ್ಟಸ್ವಾಮಿ ಗೌಡರು ಕೇಳಿದರು. ಈ ರೋಜ್‌ಗಾರ್ ಯೋಜನೆಗೆ ಇಟ್ಟಿರುವ 120 ಕೋಟಿಯಲ್ಲಿ ಶೇಕಡ 80 ರಷ್ಟು ಮಂಡಲ್‌ಗೆ ಹೋಗುತ್ತದೆ. ಈ 120 ಕೋಟಿಯಲ್ಲಿ ಶೇಕಡ 6 ರಷ್ಟು ಇಂದಿರಾಆವಾಜ್ ಯೋಜನೆಗೆ ತೆಗೆದಿಟ್ಟು ಶೇಕಡಾ 15 ರಷ್ಟು ಹರಿಜನ ಗಿರಿಜನರಿಗೆ ಖರ್ಚು ಮಾಡಬೇಕು; ಖರ್ಚು ಮಾಡಿದಿದ್ದರೆ ಏನು ಮಾಡಬೇಕೆಂಬ ಪ್ರಶ್ನೆ ಇತ್ತು. ಇಂತಹ ಸಂದರ್ಭದಲ್ಲಿ ಸೂಪರ್‌ಸೀಡ್ ಮಾಡುವ ಹಕ್ಕು ನಮಗೆ ಇದೆ. ಆದರೆ ತಪ್ಪು ಮಾಡಿದ ತಕ್ಷಣ ಸೂಪರ್‌ಸೀಡ್ ಮಾಡಿದರೆ ಅದು ಪ್ರಯೋಜನವಾಗುವುದಿಲ್ಲ. ಅದಕ್ಕೋಸ್ಕರ ಈ ಸಿಸ್ಟಂ ಅನ್ನು ಇಂಪ್ರೂವ್ ಮಾಡಲಿಕ್ಕೆ ಸ್ಕೋಪ್ ಇದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅವರೇ ಎಲ್ಲಾ ಮಾಡಬೇಕಾದರೆ ಕಷ್ಟವಾಗುತ್ತದೆ. ಅದಕ್ಕೆ ಮೇಲ್ವಿಚಾರಣೆ ಮಾಡತಕ್ಕ ವ್ಯವಸ್ಥೆಯನ್ನು ನಾವು ಮಾಡಬೇಕಾಗುತ್ತದೆ. ಮತ್ತೆ ಸ್ಪೆಷಲ್ ಆಡಿಟ್ ಯೂನಿಟ್ಸ್ ಅನ್ನು ಮಾಡಿದ್ದೇವೆ. ಆಡಿಟ್ ಯೂನಿಟ್ಸ್ ಅಲ್ಲದೆ ಬೇರೆಬೇರೆ ಹಂತದಲ್ಲಿ ಅಧಿಕಾರಿಗಳನ್ನು ನೇಮಿಸಿ ಅದನ್ನು ಇನ್ಸ್‌ಪೆಕ್ಟ್ ಮಾಡಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಜನ ಬೇಕಾಗುತ್ತದೆ. ಅದನ್ನೂ ಒಂದು ಪಟ್ಟಿ ಮಾಡಿದ್ದೇವೆ. ಇದರ ಜೊತೆಗೆ ಅಸಿಸ್ಟೆಂಟ್ ಕಮಿಷನ್ನರ್ ಮತ್ತು ತಹಶೀಲ್ದಾರ್‌ರು ಮತ್ತು ಬಿ.ಡಿ.ಓ ಅವರು ಅಲ್ಲೇ ಇರುವುದರಿಂದ ಅವರು ಇಂಥಾದ್ದು ಏನಾದರೆ ಆದರೆ ನೋಡಿ ಬಿಟ್ಟು ಒಂದು ವರದಿಯನ್ನು ಚೀಫ್ ಸೆಕ್ರೆಟರಿಯವರಿಗೆ ಕೊಟ್ಟು ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ತಿಳಿಸಬಹುದು. ಹೀಗೆ ಇದರಲ್ಲಿ ಸುಧಾರಣೆ ಮಾಡಲಿಕ್ಕೆ ಸಾಕಷ್ಟು ಸ್ಕೋಪ್ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗಿನ ಆಕ್ಟ್‌ನಲ್ಲಿ ಪ್ರಾವಿಜನ್ ಇಲ್ಲದೆ ಇರುವುದರಿಂದ ಕ್ರಮ ತೆಗೆದುಕೊಳ್ಳಲು ಆಗುವುದಿಲ್ಲ. ಆದ್ದರಿಂದ ನೀವು ಈ ಕಾನೂನಿಗೆ ತಿದ್ದುಪಡಿ ತರಬೇಕು.

ಶ್ರೀ ಎಂ.ವೈ. ಘೋರ್ಪಡೆ:- ಒಂದೇ ಮಾತಿನಲ್ಲಿ ಹೇಳಬೇಕಾದರೆ ಅವರು ಯಾವುದೇ ನಿರ್ಣಯ ಮಾಡಿದರೂ ಕೂಡ ಆ ನಿರ್ಣಯವನ್ನು ಸಸ್ಪೆಂಡ್ ಮಾಡುವ ಅಧಿಕಾರ ಕೂಡ ಈ ಆಕ್ಟ್‌ನಲ್ಲಿ ಇಲ್ಲ ಅಂದಾಗ ಅದರಲ್ಲಿ ಎಷ್ಟು ಡಿಫೆಕ್ಟ್‌ಗಳು ಇವೆ ಎಂದು ತಾವೇ ಊಹಿಸಬಹುದು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಚಿವರು ನನ್ನ ಭಾಷಣದ ಬಗ್ಗೆ ಒಳ್ಳೆಯಮಾತನ್ನಾಡಿದ್ದಾರೆ ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಅವರು ನನ್ನ ಭಾಷಣದ ಬಗ್ಗೆ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅದಕ್ಕೋಸ್ಕರ ಅವರಿಗೆ ಅಭಿನಂದಿಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:- ಆ ರೀತಿ ಹೇಳಲಿಲ್ಲ. ವೈಶಿಷ್ಟ್ಯ ಪೂರ್ಣವಲ್ಲದ ಭಾಷಣ ನಾನು ನಿರೀಕ್ಷಿಸದ ಮಟ್ಟದ ಭಾಷಣ ಅಲ್ಲವೆಂದು ಹೇಳಿದೆ. ಆದರೂ ಅದನ್ನು ಕಾಂಪ್ಲಿಮೆಂಟರಿ ಎಂದು ತೆಗೆದುಕೊಳ್ಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ನನ್ನ ಅಭಿನಂದನೆಗಳನ್ನು ಹಿಂದಕ್ಕೆ ತೆಗೆದು ಕೊಳ್ಳುತ್ತೇನೆ. ತಾಲ್ಲೂಕು ಸಮಿತಿಯ ಬಗ್ಗೆ ನಮಗೆ ಕಳವಳವಿದೆ. ಈ ತಾಲ್ಲೂಕು ಸಮಿತಿಯ ಅಧ್ಯಕ್ಷತೆಯನ್ನು ಆಯಾ ತಾಲ್ಲೂಕಿನ ಶಾಸಕರು ವಹಿಸುತ್ತಾರೆ. ಆ ಒಂದು ಸಭೆಯಲ್ಲಿ ಪ್ರಧಾನರುಗಳು ಬಂದಿರುತ್ತಾರೆ. ಅಧಿಕಾರಿಗಳು ಬಲಗಡೆ ಕುಳಿತಿರುತ್ತಾರೆ. ನಮಗೆ ಒಂದು ಕಪ್ ಕಾಫಿ ಕೊಡಿಸುವುದಕ್ಕೂ ಅಧಿಕಾರವಿಲ್ಲ. ಆದರೂ ಸಹ ನಾವು ಒಂದು ರೀತಿಯಲ್ಲಿ ಥಳಕು ಮಾಡುತ್ತಿದ್ದೇವೆಯೇ ಹೊರತು ನಮಗೆ ಅಧಿಕಾರದ ಬಲ ಸ್ವಲ್ಪವೂ ಇಲ್ಲ ಇದು ಸ್ಪಷ್ಟ. ಆದ್ದರಿಂದ ದಯವಿಟ್ಟು ನಮ್ಮಗಳನ್ನು ಕಿತ್ತುಹಾಕಿ. ನಿಮ್ಮ ಸಂಬಂಧ ಸರಿಯಿಲ್ಲವೆಂದು ಹೇಳಿಬಿಡಿ. ಇಲ್ಲವೇ ನಮಗೆ ಅಧಿಕಾರ ಏನಾದರು ಕೊಡುವುದಾದರೆ ಸ್ವಲ್ಪ ಅಧಿಕಾರ ಕೊಡಿ. ಸುಮ್ಮನೆ ನಾವು ಅಧ್ಯಕ್ಷರೆಂದು ಹೇಳಿಕೊಳ್ಳುವುದು ಎಲ್ಲರ ಮಧ್ಯೆ ಕುಳಿತುಕೊಳ್ಳುವುದು ಸುಮ್ಮನೆ ಒಣ ಜಂಬ ಮಾಡುವುದಕ್ಕೆ ಅಧಿಕಾರ ಕೊಡಬೇಡಿ.

ಶ್ರೀ ಎಂ.ವೈ. ಘೋರ್ಪಡೆ:- ನೀವು ಅಧಿಕಾರದಲ್ಲಿದ್ದಾಗ ಏತಕ್ಕೆ ಈ ಕೆಲಸ ಮಾಡಲಿಲ್ಲ?

ಶ್ರೀ ವಾಟಾಳ್ ನಾಗರಾಜ್:- ನೀವು ಇದ್ದಾಗ ಏತಕ್ಕೆ ಮಾಡಲಿಲ್ಲ ಎನ್ನುವುದನ್ನು ಬಿಟ್ಟುಬಿಡಿ. ನಾವು ಏನೂ ಮಾಡಲಿಲ್ಲ ತಾವು ಮಾಡಿ. ತಮಗೆ ಸಮಾಜವಾದದ ಬಗ್ಗೆ ಸಮಗ್ರವಾದ ಕಳಕಳಿಯಿದೆ. ಆದ್ದರಿಂದ ದಯಮಾಡಿ ತಾಲ್ಲೂಕು ಸಮಿತಿ ಅಧ್ಯಕ್ಷರಿಗೆ ಒಂದು ವಿಶೇಷವಾದ ಸವಲತ್ತುಗಳನ್ನು ಅಧಿಕಾರಗಳನ್ನು ಕೊಟ್ಟರೆ ನಿಜವಾಗಿಯೂ ನಿಮ್ಮ ಅಧಿಕಾರ ವಿಕೇಂದ್ರಿಕರಣಕ್ಕೆ ಒಂದು ಬೆಲೆ ಬರುತ್ತದೆ. ಏಕೆಂದರೆ ನಾನು ಮಾತನಾಡುವಾಗ ಜಿಲ್ಲಾಪರಿಷತ್‌ನ್ನು ಕಿತ್ತುಹಾಕಿ ಮಂಡಲಪಂಚಾಯತಿಗಳನ್ನು ಕಿತ್ತುಹಾಕಿಯೆಂದು ಹೇಳಿಲ್ಲ. ಶಾಸಕರ ಪರಿಸ್ಥಿತಿ ಏನು ಅನ್ನುವುದು ತಮಗೂ ಅರ್ಥವಾಗಿದೆ. ಎರಡನೆಯದಾಗಿ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಹೇಳುವಾಗ ಪೀತ ಪತ್ರಿಕೆಗಳ ಬಗ್ಗೆ ಹೇಳಿದ್ದೀರಿ. ಇದನ್ನು ಯಾವರೀತಿ ನಿರ್ಧಾರ ಮಾಡುತ್ತೀರಿ ಪೀತ ಪತ್ರಿಕೆಯೆಂದು ಹೆಸರು ಇದೆಯೇ ಹೊರತು ಈ ಪೀತ ಪತ್ರಿಕೆ ಯಾವುದು ಇದರ ಬರವಣಿಗೆ ಏನು ಎಂದು ನಿರ್ಧಾರ ಮಾಡತಕ್ಕವರು ಯಾರು ತಾವು ಆ ಗೋಜಿಗೆ ಹೋಗಬೇಡಿ. ಏಕೆಂದರೆ ಕೆಲವು ನಮ್ಮ ಬಗ್ಗೆ ಚೆನ್ನಾಗಿ ಬರೆದಾಗ ಚೆನ್ನಾಗಿದೆ ಎಂದು ಹೇಳುತ್ತೇವೆ. ನಮ್ಮ ಆಗುಹೋಗುಗಳನ್ನು ತಿದ್ದಿ ಬರೆದಾಗ ಸರಿಯಾಗಿ ಬರೆದಿಲ್ಲವೆಂದು ಹೇಳುತ್ತೇವೆ. ಆದ್ದರಿಂದ ಈ ಪೀತ ಪತ್ರಿಕೆ ಎಂದು ನಿರ್ಧಾರ ಮಾಡುವವರು ಯಾರೂ ಇಲ್ಲ. ಆದ್ದರಿಂದ ಎಲ್ಲ ವರ್ಗದ ಪತ್ರಿಕೆಗಳಿಗೂ ಸಣ್ಣ ಪತ್ರಿಕೆಗಳಿಗೂ ಮತ್ತು ಟೀಕೆ ಮಾಡತಕ್ಕಂಥ ಪತ್ರಿಕೆಗಳಿಗೆಲ್ಲಾ ಜಾಹಿರಾತು ಕೊಡತಕ್ಕ ನಿರ್ಧಾರವನ್ನು ತಾವು ಕೈಗೊಳ್ಳಬೇಕು. ಇನ್ನು ಕನ್ನಡ ಚಿತ್ರಗಳ ಬಗ್ಗೆ ತಾವು ಕಡ್ಡಾಯ ಪ್ರದರ್ಶನ ಮಾಡಬೇಕೆಂದು ಹೇಳಿದರೆ ಅವರು ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತರುತ್ತಾರೆ. ಅದಕ್ಕಾಗಿ ಈ ಸಭೆಯಲ್ಲಿ ಸಮಗ್ರವಾಗಿ ಒಂದು ಕಾಯಿದೆಯನ್ನು ಮಾಡಿ. ನಮ್ಮ ಸಂಸದೀಯ ಸಚಿವರು ಅನೇಕಬಾರಿ ಈ ವಿಚಾರವನ್ನು ಹೇಳಿದ್ದಾರೆ. ಕಡ್ಡಾಯವಾಗಿ ಕನ್ನಡ ಚಲನಚಿತ್ರ ಪ್ರದರ್ಶನ ಮಾಡಲೇಬೇಕು ಎನ್ನುವ ಬಗ್ಗೆ ಒಂದು ಕಾಯಿದೆಯನ್ನು ತರುತ್ತೇವೆ ಎನ್ನುವ ಮಾತು ಹೇಳಿದ್ದಾರೆ. ಮತ್ತೊಂದು ರೋಗ ಏನೆಂದರೆ ಪರಭಾಷೆ ಚಿತ್ರಗಳು ತಮಿಳುನಾಡಿ ನಲ್ಲಿ ಕನ್ನಡ ಚಿತ್ರ ಓಡುವುದಿಲ್ಲ. ಆಂಧ್ರಪ್ರದೇಶದಲ್ಲಿ ಓಡುವುದಿಲ್ಲ. ಅಲ್ಲಿ ಓಡಿದರೂ ಸಹ ಅವರು ಓಡಿಸುವುದಕ್ಕೆ ತಯಾರಾಗಿಲ್ಲ. ತಮಿಳುನಾಡಿನವರು ತಯಾರಾಗಿಲ್ಲ ಆಂಧ್ರಪ್ರದೇಶದವರು ತಯಾರಾ ಗಿಲ್ಲ ಕೇರಳದವರು ತಯಾರಾಗಿಲ್ಲ. ಆದರೆ ಕರ್ನಾಟಕರಾಜ್ಯದಲ್ಲಿ ಮಾತ್ರ ಎಲ್ಲ ಭಾಷೆಗಳ ಚಿತ್ರಗಳು ಬರುತ್ತವೆ. ಆದ್ದರಿಂದ ಯಾವ್ಯಾವ ಪರಭಾಷೆಯ ಚಿತ್ರಗಳು ಕರ್ನಾಟಕದಲ್ಲಿ ಪ್ರದರ್ಶನಕ್ಕೆ ಬರುತ್ತವೆ ಆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡದಿದ್ದರೆ ಕರ್ನಾಟಕದಲ್ಲಿ ಬೇರೆ ಭಾಷೆಯ ಚಿತ್ರಗಳು ಪ್ರದರ್ಶನವಾಗುವುದು ಬೇಡ ಎನ್ನುವುದು ಒಂದು ಸಲಹೆ. ಮತ್ತೊಂದು ವಿಚಾರವೆಂದರೆ ಪರಭಾಷೆಯ ಚಿತ್ರಗಳಿಗೆ ಮನರಂಜನಾ ತೆರಿಗೆಯನ್ನು ಮನ್ನಾ ಮಾಡುವುದು ಸರಿಯಲ್ಲ. ದಯಮಾಡಿ ಈ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ತಮ್ಮ ನಿರ್ಧಾರ ಹೇಳಬೇಕು. ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಣ್ಣ ಪತ್ರಿಕೆಗಳ ಬಗ್ಗೆ ಎಂ.ಬಿ.ಸಿಂಗ್‌ರವರು

ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿಯನ್ನು ಎಷ್ಟು ದಿವಸಗಳೊಳಗಾಗಿ ಇದನ್ನು ಕಾರ್ಯಗತ ಮಾಡುತ್ತೀರೆಂಬುದನ್ನು ತಾವು ದಯಮಾಡಿ ಹೇಳಬೇಕು.

ಶ್ರೀಮತಿ ದಮಯಂತಿ ಬೋರೇಗೌಡ:- ಮಹಿಳೆಯರು ಪ್ರತಿಭಾವಂತರಾಗಿದ್ದರೂ ಸಹ ರಾಜ್ಯದ ಒಂದು ಜಿಲ್ಲಾಪರಿಷತ್‌ನಲ್ಲಿ ಸಹ ಅವರಿಗೆ ಅಧ್ಯಕ್ಷಸ್ಥಾನ ಸಿಕ್ಕಿಲ್ಲ. ಉಪಾಧ್ಯಕ್ಷರ ಸ್ಥಾನವನ್ನು ಮಂಗಳೂರಿನಲ್ಲಿ ಮಾತ್ರ ಕೊಟ್ಟಿದ್ದರು. ಆದ್ದರಿಂದ ಜಿಲ್ಲಾಪರಿಷತ್ ಕಾನೂನಿಗೆ ಸಮಗ್ರ ತಿದ್ದುಪಡಿ ತರುವಾಗ ದಯವಿಟ್ಟು ಮಹಿಳೆಯರಿಗೆ ಮೀಸಲಾತಿ ಕೊಡುತ್ತೀರಾ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ. 10 ಸಾವಿರ ಜನ ಸರ್ಕಾರದ ನೌಕರರನ್ನು ರಾಜ್ಯ ದಲ್ಲಿ ಮಂಡಲ ಪಂಚಾಯತಿಗಳಿಗೆ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಹಳ್ಳಿಗಳಲ್ಲಿ ಬೀದಿ ದೀಪಗಳು ಹೋದರೆ ಯಾರು ಹಾಕಬೇಕು ಮಂಡಲ ಪಂಚಾಯತ್ ಪ್ರಧಾನರು ಹಾಕಬೇಕಾ? ಲೈನ್‌ಮ್ಯಾನ್ ಬಂದು ಹಾಕಬೇಕಾ? ಮಂಡಲ ಪಂಚಾಯತಿ ಕಾರ್ಯದರ್ಶಿ ಹಾಕಬೇಕಾ ಅಥವಾ ಅದನ್ನು ಕೆಇಬಿಗೆ ಅಟ್ಯಾಚ್ ಮಾಡಿದ್ದೀರಾ? ನಲ್ಲಿಗಳನ್ನು ರಿಪೇರಿ ಮಾಡುವುದು ಮತ್ತೊಂದು ರಿಪೇರಿ ಮಾಡುವುದು ಅದು ಬೇರೆ. ಹಳ್ಳಿಗಳಲ್ಲಿ ಬೀದಿದೀಪ ಹೋದರೆ ಯಾರು ಹಾಕಬೇಕು. ಕೋಟಿ ರೂಪಾಯಿಗಳನ್ನು ಜಿಲ್ಲಾಪರಿಷತ್‌ನವರ ಸಂಬಳಕ್ಕೆ ಕೊಟ್ಟಿದ್ದೇವೆಂದು ಹೇಳುತ್ತೀರಿ. ಆದರೆ ಕೋಟಿ ರೂಪಾಯಿಗಳಲ್ಲಿ ಜಿಲ್ಲಾ ಪರಿಷತ್ ಸದಸ್ಯರಿಗೆ ಏನಾದರೂ ಗೌರವಧನವನ್ನೋ ಅಥವಾ ಸಂಬಳವನ್ನೋ ಪ್ರವಾಸಭತ್ಯವನ್ನೋ ಕೊಡಲಿಕ್ಕೆ ಹೊಸ ಕಾಯಿದೆಯನ್ನು ತರುವುದಕ್ಕೆ ಆಗುತ್ತದೆಯೇ ಇದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ಹಿಂದೆ ನಡೆದಂಥ ಜಿಲ್ಲಾಪರಿಷತ್ತುಗಳ ಸಭೆಯಲ್ಲಿ ಇದಕ್ಕೆ ಒಂದು ಅವಕಾಶ ಮಾಡಿಕೊಡುತ್ತೇವೆಂಬ ಕೂಗು ಭಾಷಣಗಳಲ್ಲಿ ಬಂದಿದ್ದನ್ನು ನಾವು ನೋಡಿದ್ದೇವೆ. ಈಗ 30 ರೂಪಾಯಿ ಸಿಟ್ಟಿಂಗ್‌ಫೀ ಎಂದು ಕೊಡುತ್ತಿದ್ದಾರೆ. ಈ 7 ಕೋಟಿಯಲ್ಲಿ ಸಂಬಳ ಕೊಡುವುದಕ್ಕೆ ವ್ಯವಸ್ಥೆ ಏನಾದರು ಇದೆಯೇ? ಸರ್ಕಾರ ಏನಾದರೂ ಈ ಬಗ್ಗೆ ಚಿಂತೆ ಮಾಡಿದೆಯೇ? ಏಕೆಂದರೆ ಪ್ರಧಾನರಿಗೆ 300 ರೂಪಾಯಿ ಮತ್ತು ಉಪಪ್ರಧಾನರಿಗೆ 150 ರೂಪಾಯಿ ಕೊಡಲು ಈಗ ಅವಕಾಶ ಮಾಡಿಕೊಟ್ಟಿದೆ. ಮತ್ತೆ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ 26 ಇಲಾಖೆಗಳಿವೆ. ಒಬ್ಬನೇ ಒಬ್ಬ ಕಾರ್ಯದರ್ಶಿ ಮಂಡಲ ಕಾರ್ಯದರ್ಶಿ ಯಾಗಿಯೂ ನೋಡಬೇಕಾಗುತ್ತದೆ. ಅವರಿಗೆ ಸಹಾಯ ಮಾಡಲಿಕ್ಕೆ ಬೇರೆ ವ್ಯವಸ್ಥೆ ಮಾಡಬೇಕು. ಬೇರೆ ಇಲಾಖೆಯಿಂದ ಅಂದರೆ ರೆವಿನ್ಯೂ ಡಿಪಾರ್ಟಮೆಂಟಿನಿಂದ ಬೇರೆಯವರನ್ನು ಹಾಕಿ ಅವರಿಗೆ ಸಹಾಯ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು:- ಈಗ ಎರಡು ಗಂಟೆಗೆ ಮುಕ್ತಾಯ ಮಾಡಿ ಪುನಃ ಮೂರು ಗಂಟೆಗೆ ಸೇರೋಣವೋ ಅಥವಾ ಕಂಟಿನ್ಯೂಯಸ್ ಆಗಿ ಕುಳಿತುಕೊಳ್ಳೋಣವೋ.

ಶ್ರೀ ವಾಟಾಳ್ ನಾಗಾರಾಜ್:- ಹಾಗೆ ಕುಳಿತುಕೊಳ್ಳುವುದು ಬೇಡ.

ಉಪಾಧ್ಯಕ್ಷರು:- ಹಾಗಾದರೆ ಮಂತ್ರಿಗಳು ಮುಗಿಸಿದ ತಕ್ಷಣ ಸಭೆಯನ್ನು ಮುಂದಕ್ಕೆ ಹಾಕಿ ಮತ್ತೆ ಸೇರೋಣ.

ಶ್ರೀ ಪಿ.ಸಿ. ಸಿದ್ದಣ್ಣಗೌಡರು:- ಚಿಕ್ಕಗ್ರಾಮಗಳಿಗೆ ಬೋರ್‌ವೆಲ್ ಹಾಕಿದರೆ ನೀರು ಸಿಕ್ಕುತ್ತಿಲ್ಲ. ಮಿನಿ ವಾಟರ್ ಸಪ್ಲೈ ಸ್ಕೀಮು ಜಾರಿ ಮಾಡಲು ಕೆಲವು ರೂಲ್ಸ್ ಅಡ್ಡಬರುತ್ತವೆ. ಜನಸಂಖ್ಯೆ ಪರಿಮಿತಿ ಇರುತ್ತದೆ. ಇಂತಹ ಗ್ರಾಮಗಳಿಗೆ ಮಿನಿ ವಾಟರ್ ಸಪ್ಲೈ ಸ್ಕೀಮು ಜಾರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಮತ್ತೆ ಗ್ರಾಮ ಪಂಚಾಯತಿ ಇದ್ದಾಗ ಕೆಲವರು ನೌಕರರು ಇದ್ದರು. ಅವರನ್ನು ಇನ್ನೂ ಖಾಯಂ ಮಾಡಿಲ್ಲ. 50 ರೂಪಾಯಿ ತೆಗೆದುಕೊಂಡು ಕೆಲಸ ಮಾಡತಕ್ಕಂಥವರು ಇದ್ದಾರೆ. ಇಂತಹವರ ಬಗ್ಗೆ ಏನು ನಿರ್ಣಯ ಮಾಡಿದ್ದೀರಿ.

ಶ್ರೀ ಜಿ. ರಾಜುಗೌಡ:- ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಳವೆಬಾವಿ ಮಾಡುವುದಕ್ಕೆ ತಾಲ್ಲೂಕು ಪಂಚಾಯಿತಿ ಸಮಿತಿಗೆ ಅಧಿಕಾರ ಕೊಡತಕ್ಕದ್ದು ಒಂದು. ತಾಲ್ಲೂಕು ಪಂಚಾಯಿತಿ ಸಮಿತಿಗಳಲ್ಲಿ ಸ್ವಲ್ಪ ಹಣ ಇಟ್ಟು ಕೊಳವೆ ಬಾವಿಗಳನ್ನು ದುರಸ್ತಿ ಮಾಡುವ ವ್ಯವಸ್ಥೆ ಮಾಡಬೇಕು. ದಯವಿಟ್ಟು 150 ಕೋಟಿ ಏನು ಕೊಡುತ್ತಿದ್ದೀರಿ ಅದರಲ್ಲಿ ಸ್ವಲ್ಪ ಹಣವನ್ನು ತಾಲ್ಲೂಕು ಪಂಚಾಯಿತಿ

ಸಮಿತಿಗಾಗಿ ಮೀಸಲಿಟ್ಟು ಕೊಳವೆ ಬಾವಿಗಳನ್ನು ದುರಸ್ತಿ ಮಾಡತಕ್ಕದ್ದು ಮತ್ತು ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಹೊಸ ಕೊಳವೆ ಬಾವಿಗಳನ್ನು ಹಾಕತಕ್ಕದ್ದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಗಡಿಪ್ರದೇಶಗಳಲ್ಲಿ ಕನ್ನಡ ಪತ್ರಿಕೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಎರಡನೆಯದಾಗಿ ಈಗ ಜಿಲ್ಲಾ ಪರಿಷತ್ ಶಿಕ್ಷಣ ಇಲಾಖೆಯನ್ನು ವಹಿಸಿಕೊಟ್ಟಿದ್ದಾರೆ. ಹೊಸದಾಗಿ ಶಾಲೆಯನ್ನು ತೆಗೆಯಬೇಕಾದರೆ ಸರ್ಕಾರವನ್ನು ಕೇಳಬೇಕು ಎಂದು ಹೇಳುತ್ತಾರೆ. ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಶಿಕ್ಷಣ ಇಲಾಖೆ ಇದೆಯೇ ಎಂಬ ಅನುಮಾನ ಬರುತ್ತದೆ. ಏಕೆಂದರೆ ಇವತ್ತು ಟ್ರಾನ್ಸ್‌ಫರ್ ಸಲುವಾಗಿ ಜಿಲ್ಲಾ ಪರಿಷತ್ತಿನಲ್ಲಿ ಕೇಳಿದರೆ ಅದನ್ನು ಸರ್ಕಾರ ಮಾಡಬೇಕೆಂದು ಹೇಳುತ್ತಾರೆ. ಸರ್ಕಾರವನ್ನು ಕೇಳಿದ ಕೂಡಲೇ ಜಿಲ್ಲಾಪರಿಷತ್ತಿನವರು ಮಾಡಬೇಕೆಂದು ಹೇಳುತ್ತಾರೆ. ಹೊಸ ಹೈಸ್ಕೂಲುಗಳನ್ನು ಮಾಡುವ ಸಲುವಾಗಿ ಬಹಳ ಸಮಸ್ಯೆಯಾಗಿದೆ. ಇದರ ಬಗ್ಗೆ ಏನು ಮಾಡುತ್ತೀರಿ

ಶ್ರೀ ಶಿವಶೇಖರಪ್ಪಗೌಡ ಶಿರವಾಲ:- ಈಗ ಮಂಡಲ ಪಂಚಾಯತ್ ಆಕ್ಟ್‌ನಲ್ಲಿ ಏನಾಗಿದೆ ಎಂದರೆ ಪ್ರಧಾನರು ಈಗ ಯಾರನ್ನಾದರೂ ತೆಗೆಯುತ್ತೇನೆ ಎಂದರೆ ಯಾರಿಗೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಕೋರ್ಟಿಗೆ ಹೋದರೂ ಏನೂ ಆಗುವುದಿಲ್ಲ. ಅದಕ್ಕಾಗಿ ಮಂಡಲ ಪಂಚಾಯತ್ ಪ್ರಧಾನರಿಗೆ ಏನು ಅಧಿಕಾರ ಇದೆ ಸದಸ್ಯರು ರಾಜೀನಾಮೆ ಕೊಡಲಾರದಿದ್ದರೂ ಅವರಿಂದ ಅರ್ಜಿಗಳನ್ನು ತೆಗೆದುಕೊಂಡು ಅವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ಅವರನ್ನು ಎಕ್ಸಪಲ್ ಮಾಡಿದರೆ ಅದನ್ನು ಪರಿವರ್ತನೆ ಮಾಡಲಿಕ್ಕೆ ಡೆಪ್ಯುಟಿ ಕಮಿಷನರ್ ಅವರಿಗೂ ಅಧಿಕಾರ ಇಲ್ಲ. ನಮ್ಮಲ್ಲಿ ಒಡ್ಡಗೆರೆ ಮಂಡಲ ಪಂಚಾಯತಿಯಲ್ಲಿ ಇದೇರೀತಿ ಆಗಿತ್ತು. ಮೂರು ಮಂದಿ ಸದಸ್ಯರನ್ನು ತೆಗೆದುಹಾಕಬೇಕೆಂದು ಕೂಡ ಮಾಡಿದ್ದರು. ಆದರೆ ಅದು ಆಗಲಿಲ್ಲ. ಇದು ಬಹಳ ಸೂಕ್ಷ್ಮವಾದಂಥ ವಿಚಾರ ಇದೆ. ಆದ್ದರಿಂದ ಇದಕ್ಕೆ ನಿಯಮಗಳ ಪ್ರಕಾರ ತಿದ್ದುಪಡಿಯನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಜಿ. ನಾಯಕ್:- ಸನ್ಮಾನ್ಯ ಅಧ್ಯಕ್ಷರೇ ಜಿಲ್ಲಾಪರಿಷತ್ತುಗಳಲ್ಲಿ ಸದಸ್ಯರಾಗಿ ಬಂದಿರುವವರು ಸುಮಾರು 20-30 ಸಾವಿರ ಓಟುಗಳನ್ನು ತೆಗೆದುಕೊಂಡು ಬಂದಿರುತ್ತಾರೆ. ಅದೇ ಮಂಡಲ್ ಪಂಚಾಯ್ತಿ ಪ್ರಧಾನರು 250 ಓಟು ತೆಗೆದುಕೊಂಡು ಬಂದಿರುತ್ತಾರೆ. ಅವರಿಗೆ ಮುನ್ನೂರು ರೂಪಾಯಿಗಳ ಅನುದಾನ ಕೊಡುತ್ತಿದ್ದಾರೆ. ಆದರೆ ಜಿಲ್ಲಾಪರಿಷತ್ ಸದಸ್ಯರಿಗೆ ಏನೂ ಕೊಡುತ್ತಾ ಇಲ್ಲ. ಆಮೇಲೆ ಮಂಡಲ ಪಂಚಾಯ್ತಿ ಪ್ರಧಾನರಿಗೆ ಈಗ ಏನು ಚೆಕ್ ಕೊಡುತ್ತಿದ್ದೀರಿ ಅದನ್ನು ನಿಲ್ಲಿಸಬೇಕು. ಯಾವುದಾದರೂ ಕೆಲಸಕ್ಕೆ 20 ಸಾವಿರ ಎಸ್ಟಿಮೇಟ್ ಇದ್ದರೆ 2-2 ಸಾವಿರ ಡಿಲೀಟ್ ಮಾಡಿಕೊಂಡು ಚೆಕ್ ಕೊಡುತ್ತಾರೆ ಇದು ಮೊದಲು ತಪ್ಪಿಸಬೇಕು. ಈ ಚೆಕ್‌ಗಳನ್ನು ಕೊಡುವ ಅಧಿಕಾರವನ್ನು ಅಧಿಕಾರಿವರ್ಗದವರಿಗೆ ಕೊಟ್ಟರೆ ಒಳ್ಳೆಯದು. ಮಂಡಲ್ ಪಂಚಾಯ್ತಿ ಪ್ರಧಾನರಿಗೆ ಯಾವುದೇ ರೀತಿಯ ಅಧಿಕಾರ ಕೊಡಬಾರದು. ನಮ್ಮದು ಬಹಳ ಹಿಂದುಳಿದ ಕ್ಷೇತ್ರ ಅಲ್ಲಿಯ ವಿದ್ಯಮಾನಗಳನ್ನು ಹೇಳುತ್ತೇನೆ. ಎಸ್.ಸಿ.ಎಸ್.ಟಿ.ಯವರಿಗೆ ಆದ್ಯತೆ ಕೊಡುತ್ತೇವೆ ಅನುಕೂಲ ಮಾಡುತ್ತೇವೆಂದು ನಾಮಕಾವಸ್ತೆಗೆ ಹೇಳುತ್ತಾರೆ. ಆದರೆ ಅಲ್ಲಿ ಅನುಕೂಲಸ್ಥರೇ ಪ್ರಧಾನರಾಗಿದ್ದಾರೆ. ಅಧಿಕಾರಿಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ಮಂಡಲ್ ಪಂಚಾಯ್ತಿ ಪ್ರಧಾನರು ಹಣ ಹೊಡೆಯು ತ್ತಾರೆ. ಇದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ:- ಜನತಾ ಮನೆಗಳನ್ನು ಕಟ್ಟತಕ್ಕ ಯೋಜನೆ ಒಳ್ಳೆಯ ಯೋಜನೆ. ಇದು ಶ್ರೀಮತಿ ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮಗಳಲ್ಲಿ ಇದು ಸಹ ಸೇರಿದೆ. ಈ ಮನೆಗಳನ್ನು ಕಟ್ಟತಕ್ಕ ಯೋಜನೆ ಯಾವ ರೀತಿಯಾಗಿದೆ ಎಂದರೆ 1983ರಲ್ಲಿ ಸ್ಯಾಂಕ್ಷನ್ ಆಗಿರತಕ್ಕ ಮನೆಗಳಿಗೆ ಈಗ ಬಿಲ್‌ಗಳನ್ನು ಕೊಡುತ್ತಿದ್ದಾರೆ. 1983ರಲ್ಲಿ ಸ್ಯಾಂಕ್ಷನ್ ಆದ ಮನೆಗಳನ್ನು 1988-89ರಲ್ಲಿ ಕಟ್ಟತಕ್ಕ ವ್ಯವಸ್ಥೆ ಇದೆ. ಇದನ್ನು ನಿಲ್ಲಿಸಿ ಇದರ ಬಗ್ಗೆ ಟೈಮ್‌ಬೌಂಡ್ ಪ್ರೋಗ್ರಾಂ ಹಾಕಿ ಈ ವರ್ಷದಲ್ಲಿ ಸ್ಯಾಂಕ್ಷನ್ ಆದ ಮನೆಗಳನ್ನು ಈ ವರ್ಷದಲ್ಲಿಯೇ ಕಟ್ಟಿ ಮುಗಿಸಬೇಕು. 1983-84ರಲ್ಲಿ ಕಟ್ಟಿರತಕ್ಕ ಮನೆಗಳಿಗೆ ಈಗ ಬಿಲ್ ಕೊಡುತ್ತಿದ್ದಾರೆ ಈ ಮನೆಗಳಿಗೆ

ಉಪಯೋಗಿಸಿರುವ ಇಟ್ಟಿಗೆಗಳೆಲ್ಲಾ ಮಳೆ ಹೊಡೆತಕ್ಕೆ ಸಿಕ್ಕಿ ಏನಾಗಿವೆಯೋ ಗೊತ್ತಿಲ್ಲ. ಆದರೆ ಬುಕ್ಕಿನಲ್ಲಿ ಮಾತ್ರ ಲೆಕ್ಕಪತ್ರಗಳು ದಾಖಲೆ ಇರುತ್ತವೆ. ಆದ್ದರಿಂದ ಇಂತಹ ಒಳ್ಳೆಯ ಯೋಜನೆಯನ್ನು ಬಡವರಿಗಾಗಿ ಹಾಕಿರತಕ್ಕ ಯೋಜನೆಯನ್ನು ಆಯಾ ವರ್ಷದಲ್ಲಿಯೇ ಕಟ್ಟಿ ಮುಗಿಸತಕ್ಕ ವ್ಯವಸ್ಥೆ ಮಾಡಬೇಕು ಮತ್ತು ಆಯಾ ವರ್ಷದಲ್ಲಿಯೇ ಅವುಗಳ ಪೇಮೆಂಟ್ ಅನ್ನು ಸಹ ಮಾಡಬೇಕು. ಮತ್ತೆ ಮಂಡಲ ಪಂಚಾಯಿತಿ ಪ್ರಧಾನರಾಗಿರುವವರು ಜಿಲ್ಲಾಪರಿಷತ್ತಿನ ಸದಸ್ಯರೂ ಆಗಿರುತ್ತಾರೆ. ಇದು ಸರಿಯಲ್ಲ ಅವರು ಏನಿದ್ದರೂ ಅವರು ಮಂಡಲ ಪಂಚಾಯಿತಿ ಪ್ರಧಾನರಾಗಿರಬೇಕು ಇಲ್ಲವೇ ಜಿಲ್ಲಾಪರಿಷತ್ ಸದಸ್ಯರಾಗಿರಬೇಕು. ಇಲ್ಲದಿದ್ದರೆ ಇದು ಯಾವ ರೀತಿ ಸರಿಯಾಗುತ್ತದೆ ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು.

ಶ್ರೀ ಎ.ಎಸ್. ನಾಡಗೌಡ:- ಸನ್ಮಾನ್ಯ ಅಧ್ಯಕ್ಷರೇ ಈ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತಿ ವ್ಯವಹಾರ ಮಾಡುವ ಕಾಲಕ್ಕೆ ಬಿಸಿನೆಸ್ ಆಫ್ ದಿ ಹೌಸ್ ಈಗ ಅಸೆಂಬ್ಲಿಯಲ್ಲಿ ನಡೆಯತಕ್ಕ ವ್ಯವಹಾರಗಳ ಬಗ್ಗೆ ಕೆಲವೊಂದು ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಇವೆ. ಈ ರೀತಿಯಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳಲ್ಲೂ ಕೂಡ ತಾವು ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡಬೇಕೆಂದು ನನ್ನ ವಿನಂತಿ. ಇದರ ಬಗ್ಗೆ ಸರ್ಕಾರದ ನಿಲವು ಏನು ಎನ್ನುವುದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಅದಲ್ಲದೆ ಡೀಲಿಮಿಟೇಷನ್ ಆಫ್ ಕಾನ್ಸ್‌ಸ್ಟಿಟ್ಯುಯೆನ್ಸಿ ಅನ್ನು 1971ನೇ ಇಸವಿಯ ಸೆನ್ಸಸ್ ಪ್ರಕಾರ ಮಾಡಿದ್ದಾರೆ. ಹಿಂದೆ ಇದ್ದ ಸರಕಾರ ಇದನ್ನು ಮಾಡಿತು. ನನ್ನ ಕ್ಷೇತ್ರದ್ದೇ ಒಂದು ಉದಾಹರಣೆ ಹೇಳಬೇಕೆಂದರೆ ಒಂದು ಮಂಡಲ್ ಪಂಚಾಯತಿ ವ್ಯಾಪ್ತಿಗೆ ಬರುವ ವೋಟರ್ಸ್ 15 ಸಾವಿರ. ಅದರಲ್ಲಿ ಎಂಟೂವರೆಯಿಂದ ಹತ್ತು ಸಾವಿರ ವೋಟರ್ಸ್‌ಗೆ 13 ಜನ ಸದಸ್ಯರು ಆರಿಸಿ ಬಂದರೆ ಉಳಿದಂಥ 1500 ಜನಕ್ಕೆ 13 ಜನ ಮೆಂಬರ್ಸ್ ಆರಿಸಿ ಬರುತ್ತಾರೆ. 110 ಜನ ಸಂಖ್ಯೆ ಗೆಲ್ಲಾ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಿ 110 ಜನಕ್ಕೆ ಒಬ್ಬ ರೆಪ್ರೆಸೆಂಟೆಟೀವ್‌ನಂತೆ ಮಾಡಿದ್ದಾರೆ. ಇಂತಹ ಹಲವಾರು ಕೇಸಸ್ ಇದೆ. ಇದನ್ನೆಲ್ಲಾ ಸರಿಪಡಿಸಲು ಈ ಡೀಲಿಮಿಟೇಷನ್ ತಾವು ಸರಿಪಡಿಸುತ್ತೀರಾ ಎಂಬ ಬಗ್ಗೆ ಸ್ಪಷ್ಟೀಕರಣಕೊಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಸಭಾಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಶಾಸಕರುಗಳು ಜಿಲ್ಲಾ ಪರಿಷತ್ತಿನಲ್ಲಿ ಮತದಾನ ನೀಡುವ ವಿಚಾರದಲ್ಲಿ ಸ್ವಲ್ಪ ಗೊಂದಲ ಉಂಟಾಗಿದೆ ಎಂದು ಹೇಳಿದರು. ಈಗ ಕೆಲವು ಶಾಸಕರು ಮೂರು ಕಡೆ ತಾವು ಹೋಗಿ ಓಟು ಮಾಡಬಹುದು. ಇನ್ನು ಕೆಲವು ಎಂ.ಎಲ್.ಸಿ.ಗಳಿಗೆ ವೋಟು ಮಾಡತಕ್ಕಂಥ ಹಕ್ಕೇ ಇಲ್ಲ. ಅದಕ್ಕಾಗಿ ಒಂದು ಮಾಡಿ ಶಾಸಕರುಗಳು ವೋಟು ಮಾಡತಕ್ಕಂಥಾದ್ದನ್ನು ಸಂಪೂರ್ಣವಾಗಿ ನಿಷೇಧ ಮಾಡಿ. ಇಲ್ಲವೇ ಎಲ್ಲಾ ಶಾಸಕರುಗಳಿಗೂ ವೋಟು ಮಾಡತಕ್ಕಂಥ ಹಕ್ಕನ್ನು ನೀಡಲು ಅವಶ್ಯಕವಾಗಿರತಕ್ಕಂಥ ತಿದ್ದುಪಡಿಯನ್ನು ಮಾಡಿ. ಇನ್ನು ಜಿಲ್ಲಾಪರಿಷತ್ತಿನ ಉಪಾಧ್ಯಕ್ಷರ ಹುದ್ದೆ ನಿರರ್ಥಕವಾಗಿದೆ. ಇವು ಸರಕಾರಕ್ಕೆ ಮರಿಯಾನೆಗಳು ಇದ್ದ ಹಾಗೆ. ಇದನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕು. ನನಗೂ ಜಿಲ್ಲಾ ಪರಿಷತ್ ಸದಸ್ಯನಾಗಿ ಕೆಲಸ ಮಾಡಿರತಕ್ಕ ಅನುಭವ ಇದೆ. ಈ ಇಲಾಖೆಯ ಬಗ್ಗೆ ಚರ್ಚೆ ಆಗತಕ್ಕ ಸಂದರ್ಭದಲ್ಲಿ ನಾನು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಂಡಿದ್ದೆ. ಏನೆಂದರೆ ಜಿಲ್ಲಾ ಪರಿಷತ್ ಸದಸ್ಯರಾಗಿದ್ದಂಥವರಿಗೆ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಮೇಲೆ ಮಾತನಾಡುವುದಕ್ಕೆ ಹೆಚ್ಚಿನ ಅವಕಾಶ ಕೊಡಿ ಎಂದು ಹೇಳಿದ್ದೆ. ಆದರೆ ನಮಗೆ ಹತ್ತು ನಿಮಿಷ ಮಾತನಾಡುವುದಕ್ಕೆ ಅವಕಾಶ ಆಗಲಿಲ್ಲ. ಕ್ಲಾರಿಫಿಕೇಷನ್ ಕೇಳತಕ್ಕ ಸಂದರ್ಭದಲ್ಲಿ ಹೆಚ್ಚು ಸಮಯ ಕೊಡುತ್ತೇನೆ ಎಂಬ ಮಾತನ್ನು ಮಾನ್ಯ ಅಧ್ಯಕ್ಷರು ಹೇಳಿದ್ದರು. ಆದುದರಿಂದ ನಾಲ್ಕಾರು ಕ್ಲಾರಿಫಿಕೇಷನ್ ಕೇಳುವುದಕ್ಕೆ ತಾವು ಅವಕಾಶ ಕೊಡಬೇಕು. ಈ ಉಪಾಧ್ಯಕ್ಷರುಗಳ ಹುದ್ದೆ ನಿರರ್ಥಕ ಎಂಬ ಮಾತನ್ನು ಈ ಮುಂಚೆ ಸಹಿತ ಈ ಸದನದಲ್ಲಿ ಚರ್ಚೆ ಮಾಡಿದ್ದೆವು. ಇದರಿಂದ ಏನೂ ಪ್ರಯೋಜನ ಇಲ್ಲ. ಈ ಹುದ್ದೆಯನ್ನು ತೆಗೆಯಬೇಕೆಂಬ ತಿದ್ದುಪಡಿಯನ್ನು ಮುಂದೆ ತರುವ ತಿದ್ದುಪಡಿಯಲ್ಲೇ ತರುತ್ತೀರಾ ಅದರ ಬಗ್ಗೆ ಯೋಚನೆ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು. ಮತ್ತೆ ರಾಜ್ಯ ಸರಕಾರದ ಮಟ್ಟದಲ್ಲಿ ಒಬ್ಬರು ಚೀಫ್ ಸೆಕ್ರೆಟರಿ ಅಂದರೆ ಮುಖ್ಯಕಾರ್ಯದರ್ಶಿ

ಇರುವುದನ್ನು ನಾವು ನೋಡಿದ್ದೇವೆ. ಆದರೆ ಈಗ ಪ್ರತಿ ಜಿಲ್ಲೆಗೆ ಒಬ್ಬೊಬ್ಬರು ಮುಖ್ಯಕಾರ್ಯದರ್ಶಿ ಎಂದು ಹಾಕಿದ್ದಾರೆ. ಮುಂದೆ ಸಮಗ್ರವಾದ ತಿದ್ದುಪಡಿಯನ್ನು ನೀವು ತರತಕ್ಕ ಸಂದರ್ಭದಲ್ಲಿ ಈ ಚೀಫ್ ಸೆಕ್ರೆಟರಿ ಹುದ್ದೆಯನ್ನು ತೆಗೆದು ಬೇರೆ ಏನಾದರೂ ಮಾಡುತ್ತೀರಾ ಇದನ್ನು ತೆಗೆಯುವುದಕ್ಕೆ ಸಾಧ್ಯ ಇಲ್ಲದೆ ಹೋದರೆ CHIEF ಎಂಬುದಕ್ಕೆ ಬದಲು CHEAP ಎಂದು ಆದರೂ ಮಾಡಿ ಎಂದು ತಿಳಿಸುತ್ತೇನೆ. ಕರ್ನಾಟಕ ರಾಜ್ಯ ಸರಕಾರದ ಮಟ್ಟದಲ್ಲಿ ಒಬ್ಬರು ಚೀಫ್ ಸೆಕ್ರೆಟರಿ ಇದ್ದಾರೆಲ್ಲ ಆ ಹುದ್ದೆಯ ಹೆಸರು ಇದಕ್ಕೆ ಬೇಡ. ಚೀಫ್ ಸೆಕ್ರೆಟರಿ ಎಂಬುದನ್ನು ಚೀಫ್ ಸೆಕ್ರೆಟರಿ ಎಂದು ಮಾಡಿ. ಮತ್ತೆ ಸಮಸ್ಯಾತ್ಮಕ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಮಿನಿ ವಾಟರ್ ಸಪ್ಲೈ ಸ್ಕೀಮ್ ಮತ್ತು ಬೋರ್‌ವೆಲ್ಸ್ ಸ್ಕೀಮುಗಳನ್ನು ಜಾರಿ ಮಾಡಿರುತ್ತೀರಿ. ಈಗ ಯಾವುದು ಸಮಸ್ಯಾತ್ಮಕ ಹಳ್ಳಿಗಳು ಎಂಬುದಕ್ಕೆ ಕೆಲವು ನಾರ್ಮ್ಸ್ ಮಾಡಿದ್ದೀರಿ. ಆ ನಾರ್ಮ್ಸ್ ಪ್ರಕಾರ ಹೋದರೆ ನಿಜವಾಗಿ ಸಮಸ್ಯೆ ಇರತಕ್ಕಂಥ ಹಳ್ಳಿಗಳಿಗೆ ಕುಡಿಯುವುದಕ್ಕೆ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ. ಕಳೆದ ಹತ್ತಾರು ವರ್ಷಗಳಿಂದ ಬಗೆಹರಿಯದ ಪ್ರಶ್ನೆ ಇದಾಗಿದ್ದು ಈ ಸ್ಕೀಮ್‌ನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಿಲ್ಲ. ಆದಕಾರಣ ಸಮಸ್ಯಾತ್ಮಕ ಹಳ್ಳಿಗಳಿಗೆ ಕುಡಿಯುವ ನೀರನ್ನು ವ್ಯವಸ್ಥೆ ಮಾಡುವಾಗ ಯಾವುದೇ ನಾರ್ಮ್ಸ್ ಹಾಕಿಕೊಳ್ಳದೇ ಕೊಡುವ ವ್ಯವಸ್ಥೆ ಹಾಕಿಕೊಳ್ಳಬೇಕು. ಮಾನ್ಯ ಯಡಿಯೂರಪ್ಪನವರು ಬೋರ್‌ವೆಲ್‌ಗಳ ರಿಪೇರಿ ವಿಚಾರ ಹೇಳಿದರು. ಈಗ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವ ಕೆಲಸವನ್ನು ಮಂಡಲ್ ಪಂಚಾಯತ್‌ಗೆ ವಹಿಸಿದ್ದೀರಿ. ನಾನೂ ಸಹಿತ ತಾಲ್ಲೂಕಾ ಪಂಚಾಯತ್ ಸಮಿತಿ ಅಧ್ಯಕ್ಷನಾಗಿ ಈ ಪಂಚಾಯತ್ ಕೆಲಸಕಾರ್ಯಗಳ ಬಗ್ಗೆ ವಿಚಾರ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಸಹಿತ ಈಗಿರತಕ್ಕಂಥ ಮಂಡಲ್ ಪಂಚಾಯತ್‌ಗಳಿಗೆ ಈ ವ್ಯವಸ್ಥೆ ಕೊಡಬಾರದು. ಅವುಗಳಿಂದ ಬೋರ್‌ವೆಲ್ ರಿಪೇರಿ ಮಾಡತಕ್ಕ ಕೆಲಸ ಆಗುವುದಿಲ್ಲ. ಈ ಮುಂಚೆ ಏನು ಜಿಲ್ಲಾ ಪರಿಷತ್ ಎಂಜಿನಿಯರಿಂಗ್ ವಿಭಾಗದಿಂದ ಈ ಬೋರ್‌ವೆಲ್ ರಿಪೇರಿ ಕಾರ್ಯ ಮಾಡುತ್ತಿದ್ದರು. ಅದರ ವ್ಯಾಪ್ತಿಗೇ ಈ ಕುಡಿಯುವ ನೀರಿನ ಬೋರ್‌ವೆಲ್‌ಗಳನ್ನು ರಿಪೇರಿ ಮಾಡತಕ್ಕ ವ್ಯವಸ್ಥೆ ಕೊಡಬೇಕು. ಕೊನೆಯದಾಗಿ ಕನ್ನಡ ಚಲನಚಿತ್ರಗಳನ್ನು ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದ ಎಲ್ಲೆಡೆಯಲ್ಲಿ ಕಡ್ಡಾಯವಾಗಿ ಪ್ರದರ್ಶಿತ ಆಗಬೇಕೆಂಬ ಬಗ್ಗೆ ತಿದ್ದುಪಡಿ ತರುವ ಯೋಚನೆ ಏನಾದರು ಮಾಡಿದ್ದೀರಾ ಏತಕ್ಕೆಂದರೆ ಹೊರರಾಜ್ಯಗಳಲ್ಲಿ ಬೇರೆ ಭಾಷೆಯ ಜನರು ಇದ್ದರೂ ಸಹಿತ ಬೇರೆ ಭಾಷೆ ಚಿತ್ರಗಳು ಬಂದರೂ ಸಹಿತ ಅವರು ಅದನ್ನು ಹಾಕುವುದಕ್ಕೆ ಪ್ರಯತ್ನ ಪಡುವುದಿಲ್ಲ. ಅಲ್ಲಿ ಬೇರೆ ಭಾಷೆಯನ್ನು ಮಾತನಾಡುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ಈ ಬಗ್ಗೆ ತಾವು ಏನಾದರು ಆಲೋಚನೆ ಮಾಡಿದ್ದೀರಾ?

ಶ್ರೀ ವಾಟಾಳ್ ನಾಗರಾಜ್:- ನೋಡಿ ಕನ್ನಡದ ಬಗ್ಗೆ ಇದ್ದಕ್ಕಿದ್ದಹಾಗೆ ಎಷ್ಟು ಅಭಿಮಾನ ಬಂದಿದೆ. ಹೊರಗಡೆ ಕನ್ನಡದ ವಿರುದ್ಧ ಮಾತನಾಡಿದವರ ಮೇಲೆ ಕತ್ತೆ ಮೆರವಣಿಗೆ ಆಗುತ್ತಿದೆ. ಆದುದರಿಂದ ಇಷ್ಟು ಅಭಿಮಾನ ಬಂದಿದೆ. ಇಲ್ಲದೇ ಹೋದರೆ ಬರುತ್ತಿರಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಏತಕ್ಕೆಂದರೆ ನನಗೆ ಸಾಕಷ್ಟು ಅನುಭವವಾಗಿದೆ. ಜನ ಬಹಳ ಎಚ್ಚೆತ್ತಿದ್ದಾರೆ. ಯಾರು ಶಾಸಕರು ವಿಧಾನಸೌಧದಲ್ಲಿ ಕನ್ನಡದ ವಿರುದ್ಧ ಮಾತನಾಡುತ್ತಾರೆ ಎಂಬ ಬಗ್ಗೆ ಜಾಗೃತಿ ಹೊರಗಡೆ ಬಂದಿದೆ. ಜಾಗ್ರತೆಯಿಂದ ನೋಡುವವರು ಹೊರಗಡೆ ಇದ್ದಾರೆ. ಆದಕ್ಕೆ ಈ ಒಂದು ತಿದ್ದುಪಾಟು ಆಗಬೇಕು. ಎಲ್ಲಾ ಗೊಂದಲಮಯವಾದಂಥ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆ ಏನಿದೆ ಇದರ ಬಗ್ಗೆ ನಿಮ್ಮ ಸಮಗ್ರ ತಿದ್ದುಪಡಿಯನ್ನು ಯಾವಾಗ ತಾವು ತರುತ್ತೀರಿ ಎಂಬುದನ್ನು ಈ ಸದನದಲ್ಲಿ ತಾವು ತಿಳಿಸಬೇಕು.

ಶ್ರೀ ಗುರುದೇವ್:- ಮಾನ್ಯ ಅಧ್ಯಕ್ಷಿಣೀಯವರೇ ನಾನು ಬೇಡಿಕೆಗಳ ಮೇಲೆ ಮಾತನಾಡುವಾಗ ಕೆಲವು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಈ ಜಿಲ್ಲಾ ಪರಿಷತ್ತು ಸದಸ್ಯರು ಮಂಡಳಗಳ ಮೀಟಿಂಗ್‌ಗಳಿಗೆ ಕಡ್ಡಾಯವಾಗಿ ಹೋಗುವಂತಹ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ನಾನು ಕೇಳಿದ್ದೆ ಮತ್ತು ಸರ್ಕಾರ ಏನು ಸುತ್ತೋಲೆಗಳನ್ನು ಹೊರಡಿಸುತ್ತದೆ ಆ ಎಲ್ಲಾ ಸುತ್ತೋಲೆಗಳು ಜಿಲ್ಲಾ ಪರಿಷತ್ತು ಮೆಂಬರ್ಸ್‌ಗೆ

ತಲುಪಬೇಕು ಮತ್ತು ಜನತಾಮನೆಗಳನ್ನು ಏನು ತಾಲ್ಲೂಕ್‌ವಾರು ಕೊಡುತ್ತಾರೆ ಆ ಜನತಾ ಮನೆಗಳನ್ನು ಜಾಸ್ತಿ ಮಾಡಬೇಕು ಮತ್ತು ನಮ್ಮ ಮಲೆನಾಡು ಪ್ರದೇಶದಲ್ಲಿ ಭೂ ಸೇನಾ ನಿಗಮದಿಂದ ಕಟ್ಟಿಸುತ್ತಿರುವ ಈ ಜನತಾ ಮನೆಗಳು ಸೂಟ್ ಆಗುವುದಿಲ್ಲ. ಅದಕ್ಕೆ ಡಿಜೈನ್ ಬದಲಾವಣೆ ಮಾಡಿ ಎಂದು ನಾನು ಹೇಳಿದ್ದೆ ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಈಗ ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಂದ ಉತ್ತರ ನಿರೀಕ್ಷೆ ಮಾಡುತ್ತೇನೆ.

ಡಾ.ಎನ್.ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷಿಣೀಯವರೇ ಆಡಳಿತ ವಿಕೇಂದ್ರೀಕರಣದ ಪ್ರಶ್ನೆ ಬಂದಾಗ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ರಚನೆ ಆದವು. ಇವುಗಳ ಸಮಸ್ಯೆಗಳು ಏನು ತೊಂದರೆಗಳು ಏನು ಎಂಬ ಬಗ್ಗೆ ಈಗಾಗಲೇ ವಿಷದವಾಗಿ ಎಲ್ಲರೂ ಕೂಡ ಹೇಳಿದ್ದಾರೆ. ಮುಖ್ಯವಾಗಿ ಆಹಾರ ಪದಾರ್ಥಗಳ ವಿತರಣೆ ಮಾಡುವ ಬಗ್ಗೆ ಹೇಳುವುದಾದರೆ ಈ ಪ್ರಪಂಚದ ಯಾವ ರಾಷ್ಟ್ರದಲ್ಲಿ ಕೂಡ subsidised essential food articles ಅನ್ನು ಪ್ರೈವೇಟ್ ಏಜೆನ್ಸಿಗಳ ಮೂಲಕ ಮಾರಾಟ ಮಾಡಿಸಿರುವುದನ್ನು ನಾನು ನೋಡಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ತೆಗೆದು ಹಾಕಿಸಿ ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ಮತ್ತು ಟಿ ಎ ಪಿ ಸಿ ಎಂ ಎಸ್ ಮುಖಾಂತರ ಅಥವಾ ಸಂಚಾರಿ ವಾಹನಗಳನ್ನಿಟ್ಟು ಮಂಡಲ ಪಂಚಾಯಿತಿಗಳಿಗೆ ಆಹಾರ ಪದಾರ್ಥಗಳ ವಿತರಣೆ ಮಾಡತಕ್ಕಂಥ ವ್ಯವಸ್ಥೆ ಆಗಬೇಕು. ಹಾಗೂ ಈಗಿನ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಈಗ ಉದಾಹರಣೆಗೆ ಹೇಳುವುದಾದರೆ ಸುಮಾರು 12 ಕೋ ಆಪರೇಟೀವ್ ಸೊಸೈಟಿಗಳ ಮುಖಾಂತರ ಆಹಾರ ಧಾನ್ಯಗಳನ್ನು ವಿತರಣೆ ಮಾಡಿಸುತ್ತಿದ್ದೇವೆ. ಆಮೇಲೆ ಟಿಎಪಿಸಿಎಂಎಸ್ ಮುಖಾಂತರ ಕೆಲವು ಹಳ್ಳಿಗಳಿಗೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡಿಸುತ್ತಿದ್ದೇವೆ. ಈ ಹಿಂದೆ ಖಾಸಗಿ ಏಜೆನ್ಸಿಗೆ ಕೊಟ್ಟಿದ್ದರು. ಅದೂ ಎಲ್ಲಾ ಅವರ ಪಾರ್ಟಿ ವರ್ಕರ್ಸ್‌ಗೆ ಕೊಟ್ಟು ಮಾರಾಟ ಮಾಡಿಸುತ್ತಿದ್ದರು. ಆದರೆ ಆಹಾರಪದಾರ್ಥ ಹಳ್ಳಿಗಳಿಗೆ ತಲುಪುತ್ತಲೇ ಇರಲಿಲ್ಲ. ಇದು ಎಲ್ಲರಿಗೂ ಗೊತ್ತಿದೆ.

ಉಪಾಧ್ಯಕ್ಷರು:- ತಾವು ಕ್ಲಾರಿಫಿಕೇಷನ್ ಕೇಳಿ ಭಾಷಣ ಮಾಡಬೇಡಿ.

ಡಾ: ಎನ್.ಬಿ. ನಂಜಪ್ಪ:- ಒಬ್ಬ ಖಾಸಗಿ ಏಜೆನ್ಸಿ ತಿಂಗಳಿಗೆ 10-15 ಸಾವಿರ ರೂಪಾಯಿ ಹಣ ಮಾಡತಕ್ಕಂಥ ವ್ಯವಸ್ಥೆ ಏನಿದೆ ಇದು ತಪ್ಪಬೇಕು. Essential commodities must be distributed through co-operative institutions.

ಉಪಾಧ್ಯಕ್ಷರು:- ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳಬಹುದು.

ಶ್ರೀ ಎಂ.ವೈ. ಘೋರ್ಪಡೆ:- ಅದು ನನ್ನ ಖಾತೆಗೆ ಸಂಬಂಧಪಟ್ಟಿದ್ದು ಅಲ್ಲ. ಅದನ್ನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದು ಒಳ್ಳೆಯದು.

ಡಾ: ಎನ್.ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷಣೀಯವರೇ ಈಗ ಜಿಲ್ಲಾ ಪರಷತ್ತುಗಳಿಗೆ ರಸ್ತೆಗಳನ್ನು ಮತ್ತು ಮೇಜರ್ ಟ್ಯಾಂಕ್‌ಗಳನ್ನು ವಹಿಸಿ ಕೊಟ್ಟಿದ್ದೀರಿ. ಆದರೆ ಅವರಿಗೆ ನೋಡಿಕೊಳ್ಳತಕ್ಕಂಥ ಶಕ್ತಿ ಇಲ್ಲ. ಅವರಲ್ಲಿ ಜನ ಇಲ್ಲ. ಅದಕ್ಕೆ ಕಳೆದ 5-6 ವರ್ಷಗಳಲ್ಲಿ ರಸ್ತೆಗಳೆಲ್ಲಾ ಹಾಳಾಗಿ ಹೊಸದಾಗಿ ರಸ್ತೆಗಳನ್ನು ಮಾಡಿಸತಕ್ಕಂಥ ಪರಿಸ್ಥಿತಿ ಇವತ್ತು ಬಂದಿದೆ. ಆದ್ದರಿಂದ ಈ ರಸ್ತೆಗಳ ಕೆಲಸವನ್ನು ಲೋಕೋಪಯೋಗಿ ಇಲಾಖೆಯವರಿಗೆ ವಹಿಸಿ ಕೊಟ್ಟು ಸ್ಮಾಲ್ ಟ್ಯಾಂಕ್‌ಗಳನ್ನು ಮಾತ್ರ ಇವರಿಗೆ ವಹಿಸಿಕೊಡಬೇಕು. ಮತ್ತೆ ಆಸ್ಪತ್ರೆಗಳನ್ನು ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಅನ್ನು ತಾವು ವಾಪಸ್ ತೆಗೆದುಕೊಂಡು ಅವರಿಗೆ ಕೊಟ್ಟಿರತಕ್ಕಂಥ ಪವರ್ಸ್ ಅನ್ನು ವಾಪಸ್ ತೆಗೆದುಕೊಂಡು ತಾವೇ ಈ ಕೆಲಸ ಮಾಡಿದರೆ ವ್ಯವಸ್ಥಿತವಾಗಿ ಕೆಲಸಕಾರ್ಯಗಳು ನಡೆಯುತ್ತವೆ. ಈಗ ಉದಾಹರಣೆಗೆ ಸೋಷಿಯಲ್ ಫಾರೆಸ್ಟ್ರಿಯಲ್ಲಿ ಸುಮಾರು 71 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಎಲ್ಲೂ ಸಹ ಒಂದು ಗಿಡ ಕಾಣುತ್ತಿಲ್ಲ. ಆದ್ದರಿಂದ ಆಯಾ ಇಲಾಖೆಯವರೇ ಈ ಕೆಲಸಗಳನ್ನು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಉಪಾಧ್ಯಕ್ಷರು:- ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಎಂ.ಸಿ. ಕುನ್ನೂರು:- ಮಾನ್ಯ ಅಧ್ಯಕ್ಷರೇ ಧಾರವಾಡ ಜಿಲ್ಲಾ ಪರಿಷತ್ತಿನಲ್ಲಿ ಆರೋಗ್ಯಸ್ಥಾಯಿ ಸಮಿತಿ ಮತ್ತು ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಮಾಡಿದ್ದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ದಿನಾಂಕ 18-6-90ರಂದು ಜಿಲ್ಲಾ ಪರಿಷತ್ತು ಅಧ್ಯಕ್ಷರು ಆ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಆಮೇಲೆ ಆ ಸ್ಥಾಯಿ ಸಮಿತಿ ಅಧ್ಯಕ್ಷರು ರಾಜೀನಾಮೆ ಕೊಟ್ಟರು. ಆದರೆ ಅಲ್ಲಿ ಕೇವಲ ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಮಾತ್ರ ಸಸ್‌ಪೆಂಡ್ ಮಾಡಿದರು. ಇಂತಹ ಒಂದು ಸಮಯದಲ್ಲಿ ಅಲ್ಲಿ ಕೆಲಸ ಮಾಡುವ ಸ್ಥಾಯಿ ಸಮಿತಿ ಛೇರ್ಮನ್‌ರ ಮೇಲೆ ಜಿಲ್ಲಾ ಪರಿಷತ್ತು ಅಧ್ಯಕ್ಷರ ಮೇಲೆ ಮತ್ತು ಮುಖ್ಯಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುವಂತೆ ಈಗಿನ ಕಾನೂನನ್ನು ಸಮಗ್ರವಾಗಿ ಒಂದು ತಿದ್ದುಪಡಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೇ ಪ್ರಥಮವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಟೂಥರ್ಡ್ ಮೆಜಾರಿಟಿ ಬಗ್ಗೆ ಪ್ರಸ್ತಾಪ ಮಾಡಿ ಹೊರಟು ಹೋದರು. ನಾನು ಆಗಲೇ ಹೇಳಿದ್ದೇನೆ. ಇದರ ಬಗ್ಗೆ ಸಿಂಪಲ್ ಮೆಜಾರಿಟಿ ಮತ್ತು ಟೂಥರ್ಡ್ ಮೆಜಾರಿಟಿಯಿಂದ ಆಗುವಂಥ ತೊಂದರೆ ಬಗ್ಗೆ ಏನೆಂದು ಹೇಳಿದ್ದೇನೆ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಅಮೆಂಡ್‌ಮೆಂಟ್ ತಂದಾಗ ಹೆಚ್ಚಿಗೆ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ನಾನು ಇಷ್ಟೇ ಹೇಳುತ್ತೇನೆ. ಯಾವ ಅಧ್ಯಕ್ಷರು ಮೆಜಾರಿಟಿ ಕಳೆದುಕೊಂಡಿರುತ್ತಾರೋ ಅವರು ಆ ಜಿಲ್ಲಾಪರಿಷತ್ತನ್ನು ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಮತ್ತೆ ಆ ಚೀಫ್ ಸೆಕ್ರೆಟರಿಗೆ ಯಾರ ಮಾತು ಕೇಳಬೇಕೆಂದು ಗೊತ್ತಾಗುವುದಿಲ್ಲ. ಮೆಜಾರಿಟಿ ರೆಸಲ್ಯೂಷನ್ ಪ್ರಕಾರ ಹೋಗಬೇಕೋ ಅಥವಾ ಅಧ್ಯಕ್ಷರ ವಿಚಾರದ ಪ್ರಕಾರ ಹೋಗಬೇಕೋ ಎಂಬ ಗೊಂದಲಕ್ಕೆ ಅವರು ಗುರಿಯಾಗಿ ನಮ್ಮ ಡೆವಲಪ್‌ಮೆಂಟ್ ಕೆಲಸ ಸಫರ್ ಆಗುತ್ತದೆ. ನಾನು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಸ್ಮಾಲ್ ನ್ಯೂಸ್ ಪೇಪರ್ಸ್ ಬಗ್ಗೆ ಒಂದು ತಾಸು ಹೊತ್ತು ಹೇಳಬಹುದಾಗಿತ್ತು. ಆದರೆ ಕಾಲದ ಅಭಾವದಿಂದ ನಾನು ಎಲ್ಲಾ ಹೇಳುವುದಕ್ಕೆ ಹೋಗಲಿಲ್ಲ. ಇದರಲ್ಲಿರತಕ್ಕಂಥಾ ಪ್ರಶ್ನೆ ಇಷ್ಟೇ ಈ ಅಕ್ರೆಡೀಷನ್ ಮತ್ತು ಮೀಡಿಯಾ-ಲಿಸ್ಟ್‌ಗೆ ಯಾವ ರೀತಿ ಸೇರಿಸಬೇಕು? ಇದು ಮುಖ್ಯ ಮತ್ತೆ ಯಾವ ಸ್ಮಾಲ್ ನ್ಯೂಸ್ ಪೇಪರ್ಸ್ ನಾವು ಸೇರಿಸಿದ್ದೇವೆಯೋ ಮೀಡಿಯಾ ಲಿಸ್ಟ್‌ಗೆ; ಅದರಲ್ಲಿ ಕೆಲವನ್ನು ಸೇರಿಸದೆ ಇರತಕ್ಕಂಥ ಪರಿಸ್ಥಿತಿ ಇರಬಹುದು. ಅಂಥವರಿಗೆ ಎಷ್ಟು ಅಡ್ವರ್ಟೈಸ್‌ಮೆಂಟ್ ಕೊಟ್ಟರೆ ನ್ಯಾಯವಾದುದು ಎಂಬ ಪ್ರಶ್ನೆ ಇದೆ. ಎಂ.ಬಿ.ಸಿಂಗ್ ರಿಪೋರ್ಟ್ ಏನಿದೆ ಇದರ ಬಗ್ಗೆ ಸಾಕಷ್ಟು ಲಕ್ಷ್ಯ ಕೊಡಲಿಲ್ಲ. ಈ ಪಂಚಾಯತ್ ರಾಜ್ಯದ ಬಗ್ಗೆ ಇಷ್ಟೆಲ್ಲಾ ಚರ್ಚೆ ರಾಜ್ಯದಲ್ಲಿ ಏನು ನಡೆಯುತ್ತಿದೆ. ಅದೇ ಒಂದು ಕಾರಣದ ಮೇಲೆ ಇದರ ಬಗ್ಗೆ ಪ್ರಯಾರಿಟಿ ಕೊಡಲಿಲ್ಲ ಮತ್ತು ಲಕ್ಷ್ಯ ಕೊಡಲಿಲ್ಲ. ಆದರೆ ಅದು ನಮ್ಮ ತೀವ್ರ ಪರಿಶೀಲನೆಯಲ್ಲಿದೆ. ಎಷ್ಟು ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ we will take very soon, expeditiously and decide. ಆದಷ್ಟು ಬೇಗ ಇದರ ಬಗ್ಗೆ ಒಂದು ಸ್ಪಷ್ಟವಾದ ನಿಲುವು ತಾಳಿ ಸ್ಮಾಲ್ ನ್ಯೂಸ್ ಪೇಪರ್‌ಗಳಿಗೆ ಅಡ್ವರ್ಟೈಸ್‌ಮೆಂಟ್ ಜಾಸ್ತಿ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆ. ಮತ್ತೆ ಸ್ಮಾಲ್ ನ್ಯೂಸ್‌ಪೇಪರ್ಸ್ ಬಗ್ಗೆ ಇನ್ನೂ ಒಂದು ಮುಖ್ಯವಾದ ಮಾತನ್ನು ಹೇಳಿದ್ದೀರಿ. ಏನೆಂದರೆ ಕೆಲವು Yellow ಜರ್ನಲಿಸಮ್ ಬಗ್ಗೆ ಪ್ರಸ್ತಾಪ ಮಾಡುವುದು ಬೇಡ. ನಾನೂ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹಿಂಜರಿಯುತ್ತಿದ್ದೇನೆ. ಕನ್ನಡ ಫಿಲ್ಮ್ ಬಗ್ಗೆ ನೀವೇ ಹೇಳಿದ್ದೀರಾ; ಕೆಲವು ಬಿಲೋ ಸ್ಟ್ಯಾಂಡರ್ಡ್‌ನಲ್ಲಿ ಇದ್ದರೂ ಕೂಡ ಸಬ್ಸಿಡಿ ಕೊಟ್ಟರೆ ಹೇಗೆಂದು ಹೇಳಿದ್ದೀರಿ. ಆದರೆ ಅದನ್ನೂ ಕೂಡ ನೋಡಿಸುವುದು ಕಷ್ಟವಾಗುತ್ತದೆ. ಇದು ಏನಾಗುತ್ತದೆ? ಮೊದಲು ಇದರ ಬಗ್ಗೆ ಒಂದು ವ್ಯವಸ್ಥೆ ಇತ್ತು. ಈಗ ಅದನ್ನು ನಾವು ತೆಗೆದುಹಾಕಿದ್ದೇವೆ. I am not anxious. ಅದರ ಬಗ್ಗೆ ತೀರ್ಮಾನ ಮಾಡಲು ಗೌರ್ನಮೆಂಟಿಗೂ ಕೂಡಾ ಆಸಕ್ತಿ ಇಲ್ಲ. ಏಕೆಂದರೆ ಇದು ಬಹಳ ಕಷ್ಟದ ಕೆಲಸ. ಏನು ಮಾಡಿದರೂ ಕೂಡಾ ನಾವು ಟೀಕೆಗೆ ಗುರಿಯಾಗುತ್ತೇವೆ. ಮತ್ತು ಭಿನ್ನಾಭಿಪ್ರಾಯ ಬರುತ್ತದೆ. ಆದರೆ ಈ ತರಹದ ಕೆಳಮಟ್ಟದ ಫಿಲ್ಮಂಗಳಾಗಲೀ ಅಥವಾ ಕೆಳಮಟ್ಟದ ಬರವಣಿಗೆಯಾಗಲೀ ನ್ಯೂಸ್

ಪೇಪರ್ಸ್ ಜರ್ನಲಿಜಮ್ ಅದನ್ನು ತಡೆಗಟ್ಟಲಿಕ್ಕೆ ಸ್ವಯಂ ಪ್ರಯತ್ನವಾದರೂ ಅವರು ಮಾಡತಕ್ಕದ್ದು ಒಳ್ಳೆಯದು. ಏಕೆಂದರೆ ಟೀಕೆ ಮಾಡುವುದನ್ನು ನಾವು ಆಕ್ಷೇಪ ಮಾಡುವುದಿಲ್ಲ. ನಮ್ಮ ಪರವಾಗಿ ಅವರು ಬರೆಯಲಿ ಅಥವಾ ನಮ್ಮ ವಿರುದ್ಧವಾಗಿಯಾದರೂ ಬರೆಯಲಿ ಆದರೆ ಬರೆಯುವಾಗ ಒಂದು ಮರ್ಯಾದೆ ಒಂದು ಸ್ಟ್ಯಾಂಡರ್ಡ್ ಏನು ಇದೆ ಅದನ್ನು ಕಾಪಾಡಿಕೊಂಡು ಹೋಗುವುದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಬಹಳ ಮುಖ್ಯ. ಇಲ್ಲದಿದ್ದರೆ ಘರ್ಷಣೆಯಾಗುತ್ತದೆ ಮತ್ತೆ ಕಮ್ಯೂನಲ್ ಏನಾದರೂ ಆದರೆ ಆಗ ಇವರು ಸರಿಯಾಗಿ ಬರೆಯದೇ ಹೋದರೂ ಕಮ್ಯೂನಲ್ ಘರ್ಷಣೆಯಾಗುತ್ತದೆ. ಆ ಕಾರಣದಿಂದ ಒಂದು ಮಿತಿಯನ್ನು ಕಾಪಾಡಿಕೊಂಡು ಬರಬೇಕಾಗುತ್ತದೆ. ಆ ಕಾರಣದಿಂದ ಎಲ್ಲಿ ಎಕ್ಸೆಸ್ ಆಗಿದೆ ಅದನ್ನು ತೀರ್ಮಾನ ಮಾಡುವಂಥ ಒಂದು ವ್ಯವಸ್ಥೆ ನ್ಯೂಸ್ ಪೇಪರ್ಸ್‌ನವರೇ ಮಾಡಿದರೆ ನಮಗೆ ಬಹಳ ಅನುಕೂಲ. ಆ ವ್ಯವಸ್ಥೆ ಅಂತೂ ಆಗಬೇಕು. ಅವರು ನಮಗೆ ಈ ರೀತಿ ಬರೆದರೆ ಇದರಿಂದ ಅಪಾಯವಾಗುತ್ತದೆಂದು ಹೇಳಬೇಕು. ಇಷ್ಟೆಲ್ಲಾ ತೊಂದರೆಗಳು ಇದ್ದರೂ ಕೂಡ ಕನ್ನಡ ಫಿಲ್ಮ್ ಆಗಲೀ ಸ್ಮಾಲ್ ನ್ಯೂಸ್ ಪೇಪರ್ಸ್ ಆಗಲೀ ಆದಷ್ಟು ಮಟ್ಟಿಗೆ ಜನರಸ್ ಆಗಿ ಅವರಿಗೆ ಸಹಾಯ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಆದರಲ್ಲಿ ಅನುಮಾನ ಬೇಡ. ಮತ್ತೆ ಮಂಡಲ ಪ್ರಧಾನರ ಆಕ್ಷನ್ ಬಗ್ಗೆ ಮಾನ್ಯ ಯಡಿಯೂರಪ್ಪನವರು ಪ್ರಶ್ನೆ ಕೇಳಿ ಈಗ ಹೊರಟು ಹೋದರು. ಆದರೂ ಕೂಡ ಆ ಬಗ್ಗೆ ನಾನು ಉತ್ತರವನ್ನು ಹೇಳಲೇ ಬೇಕಾಗುತ್ತದೆ. ಕ್ರಮಬದ್ಧವಾಗಿ ಅವರು ಯಾವರೀತಿಯಲ್ಲಿ ಕೆಲಸ ಮಾಡಲಿಕ್ಕೆ ಕಾನೂನಿನಲ್ಲಿ ಏನೇನು ಮಾರ್ಪಾಡುಗಳನ್ನು ಮಾಡಬೇಕೋ ಅದನ್ನು ಮಾಡುತ್ತೇವೆ. ಇಷ್ಟು ಮಾತ್ರ ಹೇಳಿದರೆ ಸಾಕು. ಅಂತೆಯೇ ತಾಲ್ಲೂಕು ಸಮಿತಿಗಳನ್ನು ಬಲಪಡಿಸಬೇಕು...

ಶ್ರೀ ಎಲ್.ಆರ್. ಶಿವರಾಮೇಗೌಡ:- ತಾವುಗಳು ತರುವ ತಿದ್ದುಪಡಿಯಲ್ಲಿ ಮಂಡಳ ಪ್ರಧಾನರುಗಳಿಗೆ ಕಡಿವಾಣ ಹಾಕಬೇಕು.

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ:- ಅವರುಗಳು ತಪ್ಪು ಮಾಡಿದಾಗ ಮಾತ್ರ ಆ ದಿಸೆಯಲ್ಲಿ ಹೇಗೆ ಕಡಿವಾಣ ಹಾಕಬೇಕೆಂದು ಗೊತ್ತಾಗುವುದು. ಇನ್ನು ಮಾನ್ಯ ಸದಸ್ಯರಾದ ಸಾಂದ್ರಾರವರು ಹೇಳಿದ ವಿಚಾರಗಳನ್ನು ಎಕ್ಸಾಮಿನ್ ಮಾಡಿಸುತ್ತೇನೆ. ಮಹಿಳೆಯರಿಗಾಗಿ ರಿಸರ್ವೇಷನ್ ಕೊಡುವ ಬಗ್ಗೆ ಈಗಾಗಲೇ ಹೇಳಿದ್ದೇನೆ. ಜಿಲ್ಲಾ ಪರಿಷತ್‌ಗಳಿಗೆ ನಾವು ಈಗ ಏನು ಏಳು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ಆದರಲ್ಲಿ ಟಿಎಡಿಎಗೆ ಎಷ್ಟು ಹೋಗುತ್ತದೆ ಎಂದು ಕೇಳಿದ್ದಾರೆ; ಆದಕ್ಕೆ ಒಂದು ಕೋಟಿ ರೂ.ಗಳು ಹೋಗುತ್ತಿದೆ. ಆದರಲ್ಲಿ 50ಲಕ್ಷ ಅಧ್ಯಕ್ಷರುಗಳಿಗೆ ಮತ್ತೆ 50ಲಕ್ಷ ಉಪಾಧ್ಯಕ್ಷರುಗಳಿಗೆ ಹೋಗುತ್ತಾ ಇದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ಹೀಗೆ ಕೊಡುವ ಬದಲು ಆದರಲ್ಲಿ ಜಿಲ್ಲಾಪರಿಷತ್ ಸದಸ್ಯರಿಗೂ ಸ್ವಲ್ಪ ಹೆಚ್ಚಿನ ಹಣವನ್ನು ಕೊಡಬಹುದಲ್ಲ. ಮುಖ್ಯವಾಗಿ ಉಪಾಧ್ಯಕ್ಷರುಗಳ ಸ್ಥಾನದ ಅವಶ್ಯಕತೆ ಈಗ ಇದೆಯೆ ಅದು ನಿರರ್ಥಕವಲ್ಲವೇ?

ಶ್ರೀ ಎಂ.ವೈ. ಘೋರ್ಪಡೆ:- ನೀವು ಉಪಾಧ್ಯಕ್ಷರ ಸ್ಥಾನ ರದ್ದು ಮಾಡಿ ಎಂದು ಹೇಳಿ ನಿಮ್ಮ ಅಭಿಪ್ರಾಯವನ್ನು ಗಮನಿಸಿದ್ದೇವೆ. ನೀವು ಹೇಳಿದ ತತ್‌ಕ್ಷಣವೇ ರದ್ದು ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಲ್.ಆರ್. ಶಿವರಾಮೇಗೌಡ:- ಅವರಿಗಾಗಿ ಎಷ್ಟೊಂದು ಹಣ ವೆಚ್ಚವಾಗುತ್ತಿದೆ ಅದು ನಿಜಕ್ಕೂ ನಿರರ್ಥಕವಲ್ಲವೇ? ಉಪಾಧ್ಯಕ್ಷರುಗಳು ಅಲ್ಲಿ ಏನು ಕೆಲಸ ಮಾಡುತ್ತಿದ್ದಾರೆ? ಅದನ್ನು ವಿಚಾರ ಮಾಡಿ ತನಿಖೆ ಮಾಡಿಸಿ ನೋಡಿ? ಎರಡು ತಿಂಗಳ ಹಿಂದೆ ನಾನು ಈ ಬಗ್ಗೆ ಪ್ರಶ್ನೆ ಕೂಡ ಕೇಳಿದ್ದೇನೆ. ಆದ್ದರಿಂದ ತಿದ್ದುಪಡಿಯಲ್ಲಿ ಈ ವಿಚಾರವನ್ನು ಸಹ ಸೇರಿಸಿ...

ಶ್ರೀ ಜಿ. ರಾಜೂಗೌಡ:- ಈ ಏಳು ಕೋಟಿ ರೂಖಪಾಯಿಗಳಲ್ಲಿ ಜಿಲ್ಲಾ ಪರಿಷತ್ ಸದಸ್ಯರಿಗೂ ಸಹ ಗೌರವ ಧನದ ರೂಪದಲ್ಲಿ ಏನಾದರು ಕೊಡಲು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ:- ನಾವು ಈ ವಿಚಾರದಲ್ಲಿ ಏನು ಮಾಡಬೇಕು ಅದನ್ನು ಮಾಡುತ್ತೇವೆ. ಆದರೆ ತಾವು ಪದೇ ಪದೇ ಅದನ್ನೇ ಹೇಳುತ್ತಿದ್ದೀರಿ. ಮಾನ್ಯ ಸದಸ್ಯರುಗಳು ಅರ್ಥ ಮಾಡಿಕೊಳ್ಳಬೇಕು ಜನರಲ್ ಡಿಬೇಟ್‌ಗೆ ಉತ್ತರ ಕೊಡುವಾಗ ಇಂಥ ಪ್ರಶ್ನೆಗಳಿಗೆ ಉತ್ತರ ಕೊಡುವುದು ಬಹಳ ಕಷ್ಟವಾಗುತ್ತದೆ. ಪ್ರತಿಯೊಂದೂ ಪ್ರಶ್ನೆಗೂ ಉತ್ತರ ಕೊಡುವುದು ಕಷ್ಟವಾಗುತ್ತದೆ. ಆದರೆ ತಾವುಗಳು ಹೇಳಿದ್ದನ್ನು ನಾನು ಗಮನಕ್ಕೆ ತೆಗೆದುಕೊಂಡಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಸಮಗ್ರವಾದ ತಿದ್ದುಪಡಿಯನ್ನು ತರುವಾಗ ಇದನ್ನೆಲ್ಲಾ ಪರಿಶೀಲನೆ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷಿಣೀಯವರು:- ಈಗ ಸಭೆಯನ್ನು ಮುಂದೂಡಿದ್ದೇನೆ. ಸಭೆಯು ಪುನಃ ಮಧ್ಯಾಹ್ನ 3-30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಪುನಃ 3-35ಕ್ಕೆ ಸಮಾವೇಶಗೊಂಡಿತು) (ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ ನಾನು ಮತ್ತು ನನ್ನ ಸಹೋದ್ಯೋಗಿಗಳ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರುಗಳು ಭಾಗವಹಿಸಿ ತಮ್ಮ ಅಮೂಲ್ಯವಾದ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಕೆಲವು ರಚನಾತ್ಮಕವಾದ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಆದಕ್ಕಾಗಿ ಪ್ರಪಥಮವಾಗಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ನನ್ನ ಅಭಿನಂದನೆಗಳನ್ನು ಸೂಚಿಸುತ್ತಿದ್ದೇನೆ. ಮೊನ್ನೆ ಮೊನ್ನೆ ನಡೆದಂತಹ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದ ಜನತೆ ನಮ್ಮ ಪಕ್ಷದ ಮೇಲೆ ಹಿಂದೆಂದೂ ಇಡಲಾರದಷ್ಟು ಪ್ರಮಾಣದಲ್ಲಿ ವಿಶ್ವಾಸವನ್ನು ಇಟ್ಟು ನಮ್ಮನ್ನು ಈ ಸದನಕ್ಕೆ ಆರಿಸಿ ಕಳುಹಿಸಿಕೊಟ್ಟಿದ್ದಾರೆ. ಅವರು ಎಷ್ಟು ದೊಡ್ಡ ಸಂಖ್ಯೆಯಲ್ಲಿ ನಮ್ಮ ಪಕ್ಷದ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿಕೊಟ್ಟಿದ್ದಾರೋ ನಮ್ಮ ಪಕ್ಷದ್ದು ನನ್ನದು ಮತ್ತು ಸರ್ಕಾರದ ಜವಾಬ್ದಾರಿ ಕೂಡ ಅಷ್ಟೇ ದೊಡ್ಡದಾಗಿದೆ. ಮತ್ತು ಏನು ಜನರಿಗೆ ನಾವು ಭರವಸೆಗಳನ್ನು ಕೊಟ್ಟಿದ್ದೇವೆ ಅದನ್ನು ಈಡೇರಿಸುವುದಕ್ಕೆ ನಮ್ಮಿಂದ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಅಷ್ಟರಮಟ್ಟಿಗೆ ಮಿತಿಮೀರಿ ಪ್ರಯತ್ನ ಮಾಡುತ್ತೇವೆ. ಮತ್ತು ಜನರ ಆಶೋತ್ತರಗಳಿಗೆ ನಾವು ಮುಟ್ಟುವಂತೆ ಶ್ರಮಿಸುತ್ತೇವೆ ಎನ್ನುವ ಭರವಸೆಯನ್ನು ತಮ್ಮ ಮುಖಾಂತರ ಈ ಸದನಕ್ಕೆ ಮತ್ತು ಕರ್ನಾಟಕ ಜನತೆಗೆ ಕೊಡುವುದಕ್ಕೆ ನಾನು ಸಂತೋಷ ಪಡುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಬರುತ್ತವೆ ಚುನಾವಣೆ ಆದಮೇಲೆ ನಾವೆಲ್ಲರೂ ಈ ಸದನಕ್ಕೆ ಜನರ ಪ್ರತಿನಿಧಿಗಳಾಗಿ ಆರಿಸಿ ಬಂದ ಮೇಲೆ ನಮ್ಮ ಪಕ್ಷದ ದೃಷ್ಟಿಯಿಂದ ನಾವು ಕೆಲಸ ಕಾರ್ಯಗಳನ್ನು ಮಾಡದೇ ಪಕ್ಷ ಭೇದ ಮರೆತು ಕೇವಲ ರಾಜ್ಯ ಹಿತದೃಷ್ಟಿಯಿಂದ ರಾಜ್ಯದ ಯೋಗಕ್ಷೇಮಕ್ಕಾಗಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಮತ್ತು ಉನ್ನತಿಗಾಗಿ ದುಡಿಯಬೇಕಾದುದು ಬಹಳ ಅವಶ್ಯವೆಂದು ನಾನು ಒತ್ತಿ ಹೇಳಬೇಕಾಗಿಲ್ಲ. ಅನೇಕ ಈ ಸದನದ ಮಾನ್ಯ ಸದಸ್ಯರುಗಳು ಬಹಳ ದಿವಸಗಳಿಂದ ಈ ಸದನದಲ್ಲಿ ಕೆಲಸಮಾಡುತ್ತಿದ್ದಾರೆ. ಅಪಾರವಾದ ಅನುಭವ ಅವರಿಗೆ ಇದೆ. ಮತ್ತು ಅಷ್ಟೇ ಒಂದು ದೊಡ್ಡ ಸಂಖ್ಯೆಯಲ್ಲಿ ಈ ಸದನದಲ್ಲಿ ಮೊದಲನೆಯ ಸಲ ಯುವಕರು ಆರಿಸಿ ಬಂದಿದ್ದಾರೆ. ಮತ್ತು ಅವರು ಸದನದ ಕಾರ್ಯಕಲಾಪಗಳ ಬಗ್ಗೆ ಆದಷ್ಟು ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ಇಲ್ಲಿ ನಡೆಯುವ ಕೆಲಸಕಾರ್ಯಗಳನ್ನು ಅವರು ಭಾಗಿಗಳಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅನೇಕ ಮಾನ್ಯ ಸದಸ್ಯರು ಮತ್ತು ವಿಶೇಷವಾಗಿ ವಿರೋಧ ಪಕ್ಷದ ನಾಯಕರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಟೀಕೆಗಳನ್ನು ಸಹ ಮಾಡಿದ್ದಾರೆ; ಅದನ್ನು ನಾನು ಸ್ವಾಗತ ಮಾಡುತ್ತೇನೆ. ಟೀಕೆಗಳನ್ನು ಕೂಡ ಸ್ವಾಗತ ಮಾಡುತ್ತೇವೆ. ಏಕೆಂದರೆ ನನಗೆ ಗೊತ್ತಿದೆ ಅವರ ಟೀಕೆ ಅವರ ಅಂತರಾತ್ಮದಿಂದ ಬಂದಿರತಕ್ಕ ಟೀಕೆ ಅಲ್ಲ ಅದು ಬರುವುದೂ ಇಲ್ಲ ಆದರೆ ವಿರೋಧ ಪಕ್ಷದ ನಾಯಕರಾಗಿ ಟೀಕೆಮಾಡುವುದು ತಮ್ಮ ಕರ್ತವ್ಯವೆಂದು ತಿಳಿದು ಟೀಕೆ ಮಾಡುತ್ತಾರೆ. ಆದಕ್ಕಾಗಿ ಟೀಕೆಯೂ ಸಹ.

ಶ್ರೀ ವಾಟಾಳ್ ನಾಗರಾಜ್:- ಒಳ್ಳೆಯ ಲೇಪನವನ್ನು ಅವರಿಗೆ ಹಚ್ಚುತ್ತಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್:- ಅದಕ್ಕಾಗಿ ಟೀಕೆಯೂ ಸಹ ರಚನಾತ್ಮಕ ಸಲಹೆಯಂತೆ ನಾನು ಪರಿಗಣಿಸುತ್ತಿದ್ದೇನೆ. ಯಾವುದೇ ಒಂದು ರಾಷ್ಟ್ರದ ಮತ್ತು ಒಂದು ರಾಜ್ಯದ ಪ್ರಗತಿಯಾಗಬೇಕಾದರೆ ಎರಡು ಅಂಶಗಳು ಬಹಳ ಮುಖ್ಯ. ಮೊದಲನೆಯದು ಹಣಕಾಸಿನ ವ್ಯವಸ್ಥೆ ಚೆನ್ನಾಗಿರಬೇಕು. ಮತ್ತು ಅದರ ಜೊತೆಗೆ ಆಡಳಿತ ಯಂತ್ರ ಕೂಡ ಅಷ್ಟೆ ಚುರುಕಾಗಿ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸಮಾಡುವಂತಹ ಆಡಳಿತ ಯಂತ್ರ ಇರಬೇಕು. ಇವೆರಡರಲ್ಲಿ ಒಂದು ಇದ್ದು ಒಂದು ಇಲ್ಲದಿದ್ದರೆ ಅದರಿಂದ ಯಾವ ಗುರಿಯನ್ನು ಮುಟ್ಟಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೇವೆಯೋ ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ನನ್ನ ಅಧಿಕಾರದ ಅವಧಿಯಲ್ಲಿ ಹೆಚ್ಚು ಮಹತ್ವ ಕೊಟ್ಟಿದ್ದು ಕಳೆದ ಆರು ತಿಂಗಳಿನಲ್ಲಿ ಕರ್ನಾಟಕರಾಜ್ಯದ ಹಣಕಾಸಿನ ಪರಿಸ್ಥಿತಿ ಉತ್ತಮಗೊಳಿಸುವ ಕಡೆಗೆ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ ನಮ್ಮ ಪಕ್ಷ ಮತ್ತು ನಾನು ಅಧಿಕಾರ ವಹಿಸಿಕೊಂಡಾಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನಿತ್ತು ಎಂಬುದನ್ನು ನಾನು ಮತ್ತೊಮ್ಮೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಆಗಲೇ ಹೇಳಿದ್ದೇನೆ. ಇದು ತಮಗೆಲ್ಲರಿಗೂ ಗೊತ್ತಿದೆ. ತಮ್ಮೆಲ್ಲರ ಅನುಭವಕ್ಕೆ ಬಂದಿದೆ. ನಮ್ಮರಾಜ್ಯದ ಹಣಕಾಸಿನ ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತು ಎಂಬುದು ತಮಗೆಲ್ಲಾ ಗೊತ್ತಿದೆ. ಅದನ್ನು ನಾನು ಒತ್ತಿ ಒತ್ತಿ ಹೇಳಿದರೆ ಅದರ ಮಹತ್ವ ಕಡಿಮೆಯಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಅಂಕಿಅಂಶಗಳ ಆಧಾರದ ಮೇಲೆ ನನ್ನ ಸಹೋದ್ಯೋಗಿಗಳಾದ ಮಾನ್ಯ ಹಣಕಾಸಿನ ಸಚಿವರು ಸವಿಸ್ತಾರವಾಗಿ ಅವರ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಹೇಳಿದ್ದಾರೆ. ಒಟ್ಟಿನಲ್ಲಿ ನಾನು ಇವತ್ತು ಈ ಸಂದರ್ಭವನ್ನು ಉಪಯೋಗಿಸಿಕೊಂಡು ನಮ್ಮ ಹಣಕಾಸಿನ ಮಂತ್ರಿಗಳಿಗೆ ಹಣಕಾಸಿನ ಡಿಪಾರ್ಟ್‌ಮೆಂಟ್‌ನಲ್ಲಿರುವ ಸಿಬ್ಬಂದಿಯವರಿಗೆ ಅದರಲ್ಲೂ ವಿಶೇಷವಾಗಿ ಎಕ್ಸೈಜ್ ಡಿಪಾರ್ಟ್‌ಮೆಂಟ್ ಮತ್ತು ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಮುಂತಾದ ರೆವಿನ್ಯೂ ಈಲ್ಡಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿರುವಂತಹ ನಮ್ಮ ಅಧಿಕಾರಿವರ್ಗದವರಿಗೆ ನಾನು ಹಾರ್ಧಿಕ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ ಮತ್ತು ಅಭಿಮಾನವಾಗುತ್ತದೆ. ಮತ್ತು ಅವರ ಪ್ರಯತ್ನದಿಂದ ಇವತ್ತು ಏನು ಹಣಕಾಸಿನಲ್ಲಿ ಸ್ವಲ್ಪಮಟ್ಟಿಗೆ ನಾವು ಪ್ರಗತಿಯನ್ನು ಸಾದಿಸಿದ್ದೇವೆ ಇದರ ಹೆಚ್ಚಿನ ಶ್ರೇಯಸ್ಸು ಅವರಿಗೆ ಹೋಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಾವು ಏನೋ ಒಂದು ಸ್ಟ್ಯಾಂಡ್ ಒಂದು ಐಡಿಯಾಲಜಿ ಒಂದು ಫರ್ಮ್‌ನೆಸ್ ಅವರಿಗೆ ತೋರಿಸಿರಬಹುದು. ಆದರೆ ಅದನ್ನು ಕಾರ್ಯಗತ ಮಾಡಿ ಇವತ್ತು ಹಣಕಾಸಿನ ಪರಿಸ್ಥಿತಿ ಸುಧಾರಿಸುವಲ್ಲಿ ಅವರು ಎಷ್ಟು ಪ್ರಯತ್ನ ಮಾಡಿದ್ದಾರೆ ಅದರಿಂದ ಎಷ್ಟರಮಟ್ಟಿಗೆ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗಿದೆ ಎನ್ನುವ ಬಗ್ಗೆ ಇವೊತ್ತು ಅವರು ಮಾಡಿರುವಂತಹ ಸೇವೆಯನ್ನು ಕರ್ನಾಟಕದ ಜನತೆ ಸ್ಮರಿಸಿಕೊಳ್ಳಬೇಕಾಗುತ್ತದೆ. ನಾವು ಅಧಿಕಾರ ವಹಿಸಿಕೊಂಡಾಗ ಹಣಕಾಸಿನ ಪರಿಸ್ಥಿತಿ ಏನಿತ್ತು ಅದು ಬಹಳಮಟ್ಟಿಗೆ ಈಗ ಸುಧಾರಣೆಯಾಗುತ್ತಿದೆ. ಸುಧಾರಣೆಯತ್ತ ನಾವು ನಮ್ಮರಾಜ್ಯ ಇವತ್ತು ಹೋಗುತ್ತಿದೆ ಎಂದು ನಾನು ಬಹಳ ಸಮಾಧಾನದಿಂದ ಹೇಳಬೇಕಾಗಿದೆ. ಆದರೆ ಇದು ಸಾಲದು ನಾವು ಇಲ್ಲಿಯವರೆಗೆ ಹಣಕಾಸಿನ ಸುಧಾರಣೆ ಮಾಡುವುದರಲ್ಲಿಯೇ ಏನೋ ಒಂದು ಸಾಧಿಸಿದ್ದೇವೆ ಇದರಿಂದ ನಮಗೆ ಸಮಾಧಾನ ಬಂದಿದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಆದರೆ ಆ ಹಾದಿಯಲ್ಲಿ ನಾವು ಹೆಜ್ಜೆ ಇಡುತ್ತಿದ್ದೇವೆ. ಬಹುಶಃ ಮುಂದಿನ ಕೆಲವು ತಿಂಗಳುಗಳಲ್ಲಿ ಹೆಚ್ಚಿನ ಮೈಲುಗಲ್ಲು ದಾಟುವುದಕ್ಕೆ ಸಾಧ್ಯವಿದೆ ಎನ್ನುವ ವಾತಾವರಣವನ್ನು ನೋಡುತ್ತಿದ್ದೇನೆ ಎಂದು ಈ ಸಂದರ್ಭದಲ್ಲಿ ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಅದು ಅಲ್ಲದೆ ಸ್ವಲ್ಪಮಟ್ಟಿಗೆ ಹೊಸ ತೆರಿಗೆಯನ್ನು ಹಾಕಬೇಕಾದುದು ಅನಿವಾರ್ಯವಾದುದು. ಇದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಹೋದಸಲ ಓಟ್ ಆನ್ ಅಕೌಂಟ್ ಪಾಸ್ ಮಾಡುವ ಮುನ್ನ ಇದೆಲ್ಲ ಬಂತು. ಆದಾದ ಮೇಲೆ ಬಸ್‌ಫೇರ್‌ನಲ್ಲಿ ಮತ್ತೊಂದರಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚು ಮಾಡಿದ್ದೇವೆ. ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಅದನ್ನು ಏತಕ್ಕೆ ಇಂದು ಪ್ರಸ್ತಾಪ ಮಾಡುತ್ತಿದ್ದೇನೆ ಅಂದರೆ ಯಾವುದೇ ಸರ್ಕಾರವಾಗಲೀ ನನ್ನ ಸರ್ಕಾರವೆಂದು ನಾನು ಹೇಳುವುದಿಲ್ಲ. ನಮ್ಮ ಪಕ್ಷದ ಸರ್ಕಾರದ ಬಗ್ಗೆ ಎಂದು ನಾನು ಹೇಳುತ್ತಿಲ್ಲ.

ತೆರಿಗೆ ಇಲ್ಲದೆ ಹಣಕಾಸಿನ ವ್ಯವಸ್ಥೆಯನ್ನು ಸುಧಾರಣೆ ಮಾಡಿಕೊಳ್ಳದೆ ಸಂಪನ್ಮೂಲಗಳನ್ನು ವೃದ್ಧಿ ಮಾಡಿಕೊಳ್ಳದೆ ಆಡಳಿತ ನಡೆಸುತ್ತೇವೆ ಅಭಿವೃದ್ಧಿಕಾರ್ಯಗಳನ್ನು ಮಾಡುತ್ತೇವೆ ಮತ್ತು ರಾಜ್ಯದ ಉನ್ನತಿ ಮತ್ತು ಅಭಿವೃದ್ಧಿಗಾಗಿ ದುಡಿಯುತ್ತೇವೆಂದು ಹೇಳುವುದು ಸಾಧ್ಯವಿಲ್ಲ. ಅದು ಅವಶ್ಯಕವಾಗುತ್ತದೆ. ಈ ಬಸ್‌ದರ ಏರಿಸಿದ್ದು ನನಗೆ ಗೊತ್ತಿದೆ ಸ್ವಲ್ಪಮಟ್ಟಿಗೆ ಜನರಿಗೆ ಅದರಿಂದ ಪೆಟ್ಟುಬಿದ್ದಿದೆ ಅಸಮಾಧಾನ ಆಗಿದೆ. ಆದರೆ ನಮಗೆ ಗತ್ಯಂತರ ಇರಲಿಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಯಾವುದೇ ಒಂದು ರಾಜ್ಯದಲ್ಲಿ ಒಂದು ಆಡಳಿತದಲ್ಲಿ ಟ್ಯಾಕ್ಸ್ ಹಾಕುವಂಥಾದ್ದು ಸ್ವಾಭಾವಿಕ. ಟ್ಯಾಕ್ಸ್ ಇಲ್ಲದೆ ಟ್ಯಾಕ್ಸ್ ಹಾಕಲಾರದೆ ಆಡಳಿತ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಹೇಳುವುದಕ್ಕೆ ನನಗೆ ಧೈರ್ಯ ಏಕೆ ಇದೆಯೆಂದರೆ ಬರೇ ಟ್ಯಾಕ್ಸ್ ಹಾಕಿ ಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ಅದಕ್ಕೆ ಫೈನಾನ್ಸಿಯಲ್ ವಿಜಾರ್ಡ್‌ದ್ದು ಅವಶ್ಯಕತೆ ಇಲ್ಲ. ನಮಗೆ ನೂರು ಕೋಟಿ ಕಡಿಮೆಯಾಗಿದೆ ನೂರು ಕೋಟಿ ಟ್ಯಾಕ್ಸ್ ಹಾಕಿಬಿಡುವುದು. ಯಾರ ಮೇಲೆ ಹಾಕುತ್ತೀರಿ? ಇವರ ಮೇಲೆ ಹಾಕಿ ಎಂದು ಹೇಳುವುದಕ್ಕೆ ಯಾರೂ ಎಕ್ಸ್‌ಪರ್ಟ್ಸ್ ಬೇಕಾಗಿಲ್ಲ. ಆದರೆ ಇವತ್ತು ಒಂದುಕಡೆ ಏನು ನಮ್ಮ ಹಣಕಾಸು ಮತ್ತು ನಮ್ಮ ರೆವಿನ್ಯೂ ಸೋರಿ ಹೋಗುತ್ತಿದೆ ಸರ್ಕಾರಕ್ಕೆ ಬರಲಾರದೆ ಯಾರದ್ದೋ ಬೊಕ್ಕಸಕ್ಕೆ ಹೋಗುತ್ತಿದೆ ಅದು ಸೋರಿಹೋಗುವಂಥಾದ್ದು ಬಹಳ ಪ್ರಮಾಣದಲ್ಲಿ ನಿಂತಿದೆ. ಇದು ಪೂರ್ತಿಯಾಗಿ ನಿಂತಿದೆ ಎಂದು ನಾನು ಎದೆತಟ್ಟಿ ಹೇಳುತ್ತಿಲ್ಲ. ಅದು ಎಲ್ಲ ನಿಂತುಹೋಗಿದೆ ಒಂದು ನಯಾಪೈಸೆ ಕೂಡ ಸೋರುತ್ತಿಲ್ಲ ಪ್ರತಿಯೊಂದು ಪೈಸಾ ಕೂಡ ಟ್ರೆಜರಿಗೆ ಬರುತ್ತಿದೆ ಎನ್ನುವಂಥ ಪರಿಸ್ಥಿತಿಗೆ ಇನ್ನೂ ಬಂದಿಲ್ಲ. ಸೋರಿಹೋಗುತ್ತಿದೆ. ಆದರೆ ಬಹಳಮಟ್ಟಿಗೆ ಸೋರಿಹೋಗುವಂಥಾದ್ದು ಏನು ರಿಸೋರ್ಸಸ್‌ನಲ್ಲಿ ರೆವಿನ್ಯೂನಲ್ಲಿ ಲೀಕೇಜ್ ಇತ್ತು ಅದನ್ನು ಬಹಳ ಮಟ್ಟಿಗೆ ಪ್ಲಗ್ ಮಾಡುವುದರಲ್ಲಿ ನಾವು ಒಂದುಕಡೆ ಯಶಸ್ವಿಯಾಗಿದ್ದೇವೆ. ಸ್ವಲ್ಪಮಟ್ಟಿಗೆ ನಾವು ಟ್ಯಾಕ್ಸ್ ಹಾಕಬೇಕಾದ ಅವಶ್ಯಕತೆ ಇತ್ತು. ಅದನ್ನು ಕೂಡ ಹಾಕಿದ್ದೇವೆ ಎಂಬ ಮಾತನ್ನು ಹೇಳುತ್ತಿದ್ದೇನೆ. ನಾವೇ ಅಲ್ಲ ಬಹುಶಃ ಕೇಂದ್ರ ಸರ್ಕಾರ ಎಷ್ಟರಮಟ್ಟಿಗೆ ಟ್ಯಾಕ್ಸ್ ಹಾಕಿದ್ದಾರೆ ಎನ್ನುವ ವಿವರ ನನ್ನ ಹತ್ತಿರ ವಿವರಗಳಿವೆ ಅದನ್ನೆಲ್ಲಾ ಹೇಳಿ ಎಂದರೆ ಹೇಳುತ್ತೇನೆ. ಆದರೆ ಈ ಸದನದ ಸಮಯವನ್ನು ಹಾಳುಮಾಡುವುದಕ್ಕೆ ನಾನು ಹೋಗುವುದಿಲ್ಲ. ಕೇಂದ್ರಸರ್ಕಾರದವರು ಮೂರು ಸಾವಿರ ಕೋಟಿ ರೂಪಾಯಿಗೂ ಮೀರಿ ಟ್ಯಾಕ್ಸ್ ಹಾಕಿದ್ದಾರೆ. ಟೆಲಿಫೋನ್ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಟೆಲಿಗ್ರಾಫ್ ಮೇಲೆ ಪೋಸ್ಟಲ್ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಪೆಟ್ರೋಲ್ ಮೇಲೆ ಡೀಸಲ್ ಮೇಲೆ ರೈಲ್ವೆ ಫ್ರೈಟ್‌ಮೇಲೆ ರೈಲ್ವೇ ಪ್ಯಾಸೆಂಜರ್ ಫೇರ್ ಮೇಲೆ ಟ್ಯಾಕ್ಸ್ ಹಾಕಿದ್ದಾರೆ ಕಸ್ಟಮ್ಸ್ ಮೇಲೆ ಎಕ್ಸೈಸ್ ಮೇಲೆ ಟ್ಯಾಕ್ಸ್‌ನ್ನು ಹೆಚ್ಚಿಗೆ ಮಾಡಿದ್ದಾರೆ. ಇದು ಒಟ್ಟಿನಲ್ಲಿ ಮಾಡಬೇಕಾದ ಅವಶ್ಯಕತೆ ಇದೆ. ನಾನು ಏಕೆ ಹೇಳುತ್ತೇನೆಂದರೆ ಸಂಪನ್ಮೂಲಗಳನ್ನು ಹೆಚ್ಚು ಮಾಡಲಾರದೆ ಕೇಂದ್ರಸರ್ಕಾರದವರು ನಾಸಿಕ್‌ನಲ್ಲಿ ಪ್ರಿಂಟಿಂಗ್ ಪ್ರೆಸ್ ಇದೆಯೆಂದು ಆ ಪ್ರೆಸ್‌ನಲ್ಲಿ ಬರೇ ನೋಟುಗಳನ್ನು ಪ್ರಿಂಟ್ ಮಾಡಿಕೊಂಡು ಮಾರ್ಕೆಟ್‌ನಲ್ಲಿ ತಂದು ಹಾಕಿದರೆ ಆ ನೋಟಿಗೆ ಕಿಮ್ಮತ್ತು ಇರುವುದಿಲ್ಲ. ಅದಕ್ಕಾಗಿ ಇವತ್ತು ನಾವು ಏನು ನೋಡುತ್ತಿದ್ದೇವೆ ಎಂದರೆ ಬೆಲೆಗಳು ಗಗನಕ್ಕೆ ಹೋಗುತ್ತಲಿವೆ. ಹಣದುಬ್ಬರ ಮಿತಿಮೀರಿ ಕೈಮೀರಿ ಹೋಗುವುದನ್ನು ನೋಡುತ್ತಿದ್ದೇವೆ. ಅದಕ್ಕಾಗಿ ಈ ಸಂದರ್ಭದಲ್ಲಿ ಸದನದ ಮುಖಾಂತರ ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಕರ್ನಾಟಕದ ಜನತೆಗೆ ಹೇಳುವಂಥಾದ್ದು ಇವತ್ತು ಏನು ಅವಶ್ಯಕವಾಗುತ್ತದೋ ಆ ವೇಳೆಗೆ ಮಾತ್ರ ಟ್ಯಾಕ್ಸ್ ಹಾಕುವುದಕ್ಕೆ ವಿಚಾರ ಮಾಡುತ್ತೇವೆಯೇ ಹೊರತಾಗಿ ಕೇವಲ ಕರ್ನಾಟಕ ಜನತೆಯ ಬೆನ್ನುಮುರಿದು ತೆರಿಗೆ ವಸೂಲು ಮಾಡಿಕೊಂಡು ಖಜಾನೆ ತುಂಬ ಬೇಕು ಎಂಬ ಮನೋಭಾವನೆ ನಮ್ಮ ಸರ್ಕಾರಕ್ಕೆ ಇಲ್ಲವೆಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಹಣಕಾಸಿನ ಸಂಪನ್ಮೂಲಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ ಮೇಲೆ ಇನ್ನು ಆಡಳಿತ ಯಂತ್ರ. ಅದನ್ನು ಸರಿಮಾಡುವುದಕ್ಕೆ ನಾವು ಏನು ಮಾಡಿದ್ದೇವೆ? ಮತ್ತು ಏನು ಮಾಡಬೇಕು ಎಂದು ವಿಚಾರ ಮಾಡಿದ್ದೇವೆ ಎನ್ನುವುದನ್ನು ತಮ್ಮಮುಂದೆ ಹೇಳುತ್ತೇನೆ. ಈ ಸಂದರ್ಭದಲ್ಲಿ ನನಗೆ ಗೊತ್ತಿದೆ ತಮ್ಮ ಮನಸ್ಸಿನಲ್ಲಿ ಏನು ಒಂದು ಪ್ರಶ್ನೆ ಕುದಿಯುತ್ತಾ ಇದೆ ಎನ್ನುವಂಥಾದ್ದು. ನಾವು ಬಹಳ ಮಟ್ಟಿಗೆ

ಸಾವಿರಾರು ಟ್ರಾನ್ಸ್‌ಫರ್‌ಗಳನ್ನು ಮಾಡಿಬಿಟ್ಟಿದ್ದೇವೆ ವರ್ಗಾವರ್ಗಿ ಒಂದು ದೊಡ್ಡ ಹಗರಣವಾಗಿ ಹೋಯಿತು ಕರ್ನಾಟಕದ ಇತಿಹಾಸದಲ್ಲಿ ಕರ್ನಾಟಕ ಸರ್ಕಾರದಲ್ಲಿ ಎಂದು. ಈ ಪ್ರಶೆ ಏನಿದೆ ಮೊದಲಿಗೆ ಇದರ ಬಗ್ಗೆ ನನ್ನ ವಿಚಾರಗಳನ್ನು ಹೇಳಿ ಅನಂತರ ಆಡಳಿತ ಸುಧಾರಣೆ ಮತ್ತು ಆಡಳಿತ ಯಂತ್ರಕ್ಕೆ ಯಾವ ರೀತಿಯಿಂದ ಹೊಸ ಸ್ವರೂಪವನ್ನು ಕೊಡುವುದಕ್ಕೆ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ ಎಂದು ಅನಂತರ ಹೇಳುತ್ತೇನೆ. ಒಂದು ವಿಚಾರವನ್ನು ನಾವು ಮರೆಯಬಾರದು. ಬಹುಶ: ನಾವು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಲಾರರಿ ಎಂದು ನಾನು ತಿಳಿದುಕೊಂಡಿದ್ದೇನೆ. ಜನತಾಪಕ್ಷ ಜನತಾದಳ ಸರ್ಕಾರ ಇದ್ದಾಗ ನನಗೆ ಗೊತ್ತಿದೆ ನಾವು ಎರಡನೇ ವಿರೋಧ ಪಕ್ಷವಾಗಿದ್ದರೂ ಕೂಡ ಆ ಸರ್ಕಾರದಲ್ಲಿ ವ್ಯವಹಾರಗಳು ಯಾವ ರೀತಿ ನಡೆಯುತ್ತಿದ್ದವು ಆ ಪಕ್ಷದ ಪ್ರಮುಖರು ಪುಢಾರಿಗಳು ಪ್ರತಿನಿಧಿಗಳು ಯಾವ ರೀತಿಯಿಂದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದರು ಎನ್ನತಕ್ಕದ್ದು ನಮಗೆ ಗೊತ್ತಿದೆ. ಇದು ಎಲ್ಲರಿಗೂ ಗೊತ್ತಿರುವಂಥ ವಿಚಾರವೇ. ಅದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ.

ಮತ್ತು ಆರು ಆರೂವರೆ ವರ್ಷದವರೆಗೆ ಒಂದು ಪಕ್ಷದ ಸರ್ಕಾರ ಇತ್ತು. ಆ ಪಕ್ಷದ ಸರ್ಕಾರ ಹೋದ ಮೇಲೆ ಇನ್ನೊಂದು ಪಕ್ಷದ ಕೈಗೆ ಸರ್ಕಾರ ಬಂದಾಗ ಆಡಳಿತದ ಎಲ್ಲಾ ಹಂತಗಳಲ್ಲೂ ಅದರಲ್ಲಯೂ ಕೆಳಗಡೆ ಇರುವಂತಹ ಹಂತದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಆಗುವಂತಾದ್ದು ಅವಶ್ಯ ಮತ್ತು ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಇದನ್ನು ನಾವು ತಿಳಿದುಕೊಳ್ಳಬೇಕು. ಏಕೆಂದರೆ ಒಂದೇ ಪಕ್ಷದ ಸರ್ಕಾರ ಇದ್ದು ಬರೇ ಮಂತ್ರಿಗಳು ಮಂತ್ರಿಮಂಡಲ ಬದಲಾಯಿಸುವುದಾದರೆ ಪಕ್ಷದ ಸರ್ಕಾರ ಬದಲಾಯಿಸಿಲ್ಲ ಎನ್ನುವ ಮಾತು ಇದ್ದರೆ ಆ ಮಾತು ಬೇರೆ. ಇವತ್ತು ಅನೇಕ ಕಡೆ ನಾವು ನೋಡುತ್ತಿದ್ದೇವೆ. ಒಂದೇ ಪಕ್ಷದ ಸರ್ಕಾರ ಇದ್ದು ಮಂತ್ರಿಗಳು- ಮುಖ್ಯಮಂತ್ರಿಗಳು ಬದಲಾಯಿಸಿದ್ದಾರೆ. ಆದರೆ ಇಲ್ಲಿ ಆರು ಆರುವರೆ ವರ್ಷದವರೆಗೆ ಜನತಾ ದಳ ಜನತಾ ಪಕ್ಷದ ಸರ್ಕಾರ ಇತ್ತು. ನಾವು ವಿರೋಧ ಪಕ್ಷವಾಗಿದ್ದೆವು. ಆರೂವರೆ ವರ್ಷದ ನಂತರ ನಮ್ಮ ಪಕ್ಷದ ಕೈಗೆ ಸರ್ಕಾರ ಬಂದಾಗ ಆ ವೇಳೆಗೆ ಆಡಳಿತ ಯಂತ್ರದಲ್ಲಿ ಕೆಲವು ಹಂತದಲ್ಲಿ ಬದಲಾವಣೆ ಮಾಡಬೇಕಾದ ಅವಶ್ಯಕತೆ ಇದೆ ಎನ್ನುವುದನ್ನು ಒತ್ತಿ ಹೇಳುತ್ತಿದ್ದೇನೆ. ಜನತಾಪಕ್ಷ ಜನತಾ ದಳದ ಸರ್ಕಾರ ಇದ್ದಾಗ ಏನು ನಡೆಯುತ್ತಿತ್ತು ಎನ್ನುವ ಮಾತನ್ನು ತಮ್ಮ ನೆನಪಿಗೆ ತಂದುಕೊಡುತ್ತೇನೆ. ಏಕೆದರೆ ಅನೇಕ ಸಲ ನಾನು ಹೊರಗಡೆಯೂ ಹೇಳಿದ್ದೇನೆ. ನಮ್ಮ ಪಕ್ಷದ ಸದಸ್ಯರಿಗೂ ಹೇಳಿದ್ದೇನೆ. ಆಡಳಿತದಲ್ಲಿ ಸಿಕ್ಕಾಪಟ್ಟೆ ಜನತಾ ಪಕ್ಷ ಮತ್ತು ಜನತಾ ದಳದ ಮುಖಂಡರು ಪ್ರಮುಖರು ಪ್ರತಿನಿಧಿಗಳು ಹಸ್ತಕ್ಷೇಪದಿಂದ ಜನತಾದಳಕ್ಕೆ ಎಷ್ಟು ಕೆಟ್ಟ ಹೆಸರು ಬಂತೋ ಬಹುಶ: ಅಷ್ಟು ಕೆಟ್ಟ ಹೆಸರು ಎರಡನೆಯ ಯಾವುದರಿಂದಲೂ ಬಂದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಜನತಾ ಪಕ್ಷ ಮತ್ತು ಜನತಾ ದಳದ ದೊಡ್ಡ ಸೋಲಿಗೆ ಇದು ಮೆಯಿನ್ ಫ್ಯಾಕ್ಟರ್ ಎನ್ನುವ ಮಾತನ್ನು ಹೇಳುತ್ತೇನೆ. ಆಗ ಪರಿಸ್ಥಿತಿ ಹೇಗಿತ್ತು ಎಂದರೆ ಸುದೈವದಿಂದ ಅಂತಹ ಜನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತದ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ ಅದರಲ್ಲಿ ಅನೇಕ ಜನ ಲಕ್ಷಾವಧಿ ರೂಪಾಯಿ ಗಳಿಸಿ ಏನೋ ಒಂದು ರೀತಿ ಬೆಳೆದುಕೊಂಡು ಬಂದಂಥ ಆವಾಗಿನ ಶಾಸಕರು ಇವತ್ತು ನನಗೆ ಬಹಳ ಕಡಿಮೆಯಲ್ಲಿ ಕಾಣಿಸುತ್ತಿದ್ದಾರೆ. ಜನ ಅವರಿಗೆ ಪಾಠ ಕಲಿಸಿದ್ದಾರೆ. ಪರಿಸ್ಥಿತಿ ಎಲ್ಲಿಯವರೆಗೆ ಬರುತ್ತಿತ್ತು ಎಂದರೆ ಮಂತ್ರಿಗಳ ಹತ್ತಿರ ಮುಖ್ಯಮಂತ್ರಿಗಳ ಹತ್ತಿರ ಪುಢಾರಿಗಳು ಬಂದು ಏನ್ ಸ್ವಾಮಿ ಇವತ್ತು ಈ ಕೆಲಸ ಆಗಬೇಕು. ಸಂಜೆ ವೇಳೆಗೆ ಆರ್ಡರ್ ಆಗಬೇಕು. ಎಂದು ಹೇಳಿ ಸಂಜೆಯೊಳಗೆ ಆರ್ಡರ್ ತೆಗೆದುಕೊಂಡೇ ಹೋಗುತ್ತಿದ್ದರು. ಒಂದು ವೇಳೆ ಇಲ್ಲ ಇದು ಆಗುವುದಿಲ್ಲ ಆಗುವುದಕ್ಕೆ ಬಹಳ ಕಷ್ಟವಿದೆ ಎಂದು ಹೇಳಿದರೆ ನಾವು ಇರುವುದರಿಂದ ನೀವು ಆ ಕುರ್ಚಿ ಮೇಲೆ ಕುಳಿತಿದ್ದೀರಿ ಇಲ್ಲದೆ ಹೋದರೆ ನಾಳೆ ನಿಮ್ಮನ್ನು ಕಿತ್ತು ಬಿಸಾಕಬಹುದು. ದಯಮಾಡಿ ಆರ್ಡರ್ ಮಾಡಿಕೊಡಿ ನಾವು ಆರ್ಡರ್ ತೆಗೆದುಕೊಂಡು ಹೋಗುವುದಕ್ಕೆ ಬಂದಿದ್ದೇವೆ ಎನ್ನುವಷ್ಟರ ಮಟ್ಟಿಗೆ ಆ ವೇಳೆಗೆ ಹಸ್ತಕ್ಷೇಪ ಇತ್ತು. ಬಹುಶ: ನೀವು ಇದು ಸುಳ್ಳು ಎಂದು ಹೇಳಬಹುದು. ಆದರೆ ಇದು ಎಲ್ಲರಿಗೂ ಗೊತ್ತಿದೆ ಎಲ್ಲಿಯವರೆಗೆ ಪರಿಸ್ಥಿತಿ ಬಂದಿತ್ತು ಎಂದರೆ every legislator of the

Janata Dal and Janata Party was treating his constituency as an empire. No Tahsildar should be appointed without his approval; no Sub-Inspector should be posted without his approval, no Circle Inspector should be posted without his approval, no Medical Officer can go and take charge without his approval, as if it was his empire. ಸ್ವಾಭಾವಿಕ. ಎಲ್ಲಾ ಅವರಿಗೆ ಬೇಕಾಗಿರುವಂಥ ಬಹಳ ಮಟ್ಟಿಗೆ ಎಲ್ಲರೂ ಎಂದು ನಾನು ಹೇಳುತ್ತಿಲ್ಲ. ಯಾರು ಮಾಡಿಲ್ಲವ್ರೋ ಅವರೇ ಇಲ್ಲಿ ಕುಳಿತ ಹಾಗೆ ಕಾಣುತ್ತದೆ. ನೀವು ಹೇಳಬಹುದು ಇದು ಆಗಿಲ್ಲವೆಂದು. ಅದು ಬೇರೆ ಮಾತು ನಿಮಗೆ ಬಿಡುತ್ತೇನೆ ನಿಮ್ಮ ಆತ್ಮಸಾಕ್ಷಿಯಾಗಿ ಇದನ್ನು ವಿಚಾರ ಮಾಡಿಕೊಳ್ಳಿ. ಇಂತಹ ಒಂದು ಪರಿಸ್ಥಿತಿಯಲ್ಲಿ....ನಾನು ಎಲ್ಲಾ ಎಂದು ಹೇಳಿಲ್ಲ.

SRI C. BYREGOWDA:- " Every Legislator of Janata Party-Janata Dal" ಎನ್ನುವಂತಾದ್ದು ಕಡತದಲ್ಲಿ ಹೋಗಿದೆ. ಇಲ್ಲ ಎಂದು ವಾಪಸ್ ಪಡೆಯುವುದಾದರೆ ಸಂತೋಷ. ತಾವು ಸಾರಾಸಗಟಾಗಿ ಎಲ್ಲರೂ ಎಂದು ಹೇಳಿದ್ದೀರಿ. ತಾವು ಆ ಭಾಷೆಯನ್ನು ಉಪಯೋಗಿಸಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್:- ನಾನು ಅದನ್ನೇ ಹೇಳುತ್ತಿದ್ದೇನೆ. ಜನತಾ ಪಕ್ಷ ಮತ್ತು ಜನತಾ ದಳ ಈ ಎರಡೂ ಪದ ಏಕೆ ಉಪಯೋಗ ಮಾಡುತ್ತೀದ್ದೇನೆ ಎಂಬುದನ್ನು ತಾವು ತಿಳಿದು ಕೊಳ್ಳಬೇಕು. 1983ರಿಂದ 1988 ಡಿಸೆಂಬರ್ ಅಥವಾ 1989 ಜನವರಿ ವರೆಗೆ ಜನತಾ ಪಾರ್ಟಿ ಇತ್ತು. 1989 ಜನವರಿಯಿಂದ ಬಹುಶ: ಒಂದು 8 ತಿಂಗಳು ಮಾತ್ರ ಜನತಾದಳ ಇತ್ತು. ಅದಕ್ಕೆ ಎರಡಕ್ಕೂ ನಾನು ಸೇರಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:- ಅದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ every Legislator was treating his Constitutency as his Empire. Any Medical Officer, any Sub-Inspector, any Circle-Inspector without the permission of the Legislator without the approval of the Legislator - he cannot take charge - ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು. ಅದನ್ನು ತಾವು ದಯವಿಟ್ಟು ಎಲ್ಲರಿಗೂ ಸಾರಾಸಗಟಾಗಿ ಹೇಳಬೇಡಿ. ನೂರಕ್ಕೆ ನೂರು ಭಾಗ ಆ ರೀತಿ ನಡೆದೇ ಇಲ್ಲ ಎಂದು ಹೇಳುವವನು ನಾನಲ್ಲ. ನಿಮ್ಮ ಪಕ್ಷದ ಸರಕಾರ ಈ ಹಿಂದೆ ಏನಿತ್ತು ಆಗಲೂ ಸಹ ಇದಕ್ಕಿಂತ ಹೆಚ್ಚು ನಡೆದಿದೆ. ಆ ಪ್ರಶ್ನೆ ಬೇರೆ. ಆದರೆ ಎಲ್ಲರನ್ನೂ ಕೂಡ ಜನರಲೈಸ್ ಮಾಡುವುದಕ್ಕೆ ದಯವಿಟ್ಟು ಹೋಗಬೇಡಿ.

ಶ್ರೀ ವೀರೇಂದ್ರ ಪಾಟೀಲ್:- ನಾನು ಎವ್ವೆರಿ ಲೆಜಿಸ್ಲೇಟರ್ ಎಂದು ಹೇಳಲಿಲ್ಲ. ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಉದ್ಯೋಗ ಮಾಡಿಕೊಂಡಿದ್ದರು; ಅಂತಹ ಜನ ಇವತ್ತು ಇಲ್ಲಿ ಕಾಣುತ್ತಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಎಲ್ಲರೂ ಇದೇ ಮಾಡಿದ್ದಾರೆ ಎಂದು ಹೇಳುವ ಹಾಗೆ ಇಲ್ಲ ಹೇಳಿಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಹೇಳಿದ್ದರೂ ಅದನ್ನು ವಾಪಸ್ ತೆಗೆದುಕೊಳ್ಳುತೇನೆ. ಬಹಳ ಜನ ಇದನ್ನು ಮಾಡಿ ಪರಿಸ್ಥಿತಿ ಏನಾಯಿತು ಚುನಾವಣೆ ಬಂದಾಗ ಅವರಿಗೆ ಬೇಕಾದ ಎಲ್ಲ ಆಫೀಸರ್ ಇದ್ದರು ಮತ್ತು ಎಲ್ಲ ರೀತಿಯಿಂದಲೂ ಕೂಡಾ ಅವರು ಹೇಳಿದಂತೆ ಅವರ ಸನ್ನೆ ಮೇಲೆ ಕೆಲಸ ಮಾಡುವಂತಹ ಅಧಿಕಾರಿಗಳು ಇದ್ದರು. ಮತ್ತು ಎಂ.ಎಲ್.ಎ.ಗಳಾಗಿ ಅಧಿಕಾರ ರೂಢ ಪಕ್ಷ ಆದಾಗ ಅವರ ಹತ್ತಿರ ಸಾಕಷ್ಟು ದುಡ್ಡು ಅಧಿಕಾರ ವ್ಯವಸ್ಥೆ ಎಲ್ಲಾ ಇದ್ದೂ ಕೂಡಾ ಅನೇಕ ಜನ ಪುಢಾರಿಗಳು ಜನತಾ ದಳದ್ದು ಏನು ಸಾಕಷ್ಟು ಖರ್ಚು ಮಾಡಿಕೊಂಡರು. ಆದರೆ ಕೆಲಸ ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಪುಢಾರಿಗಳು ಎಂದರೆ ಕೆಟ್ಟ ಅರ್ಥ ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್:- ಹಾಗಿದ್ದರೆ ಕನ್ನಡದಲ್ಲಿ ಇನ್ನೊಂದು ಹೆಸರು ಇದ್ದರೆ ಹೇಳಿ ಆ ಪದವನ್ನೇ ಉಪಯೋಗ ಮಾಡುತ್ತೇನೆ. ಈಗ ನನಗೆ ಏನು ತಿಳಿದಿದೆ ಅದನ್ನು ಹೇಳುತ್ತಿದ್ದೇನೆ. ಮುಖಂಡರು ಎಂದು ಹೇಳೋಣವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಹೇಳುತ್ತಿರುವುದು ಹೇಗಿದೆ ಎಂದರೆ ನಾವೆಲ್ಲಾ ಜನತಾ ದಳದ ಶಾಸಕರು ನಮ್ಮ ನಮ್ಮ ಕಾನ್ಸ್ಟಿಟ್ಯುಯೆನ್ಸಿಗೆ ಯಾವ ಆಫೀಸರ್ ಹಾಕಬೇಕಾದರೂ ಇವರನ್ನೇ ಹಾಕಬೇಕೆಂದು ಹೇಳಿ ಗೌರ್ನಮೆಂಟ್ ಆರ್ಡರ್ ಮಾಡಿದ್ದರು. ಆ ಗೌರ್ನಮೆಂಟ್ ಆರ್ಡರನ್ನು ಫೈಲ್‌ನಲ್ಲಿ ನೀವು ನೋಡಿಬಿಟ್ಟ ಹಾಗೆ ಇಲ್ಲಿ ಬಂದು ನಿಂತು ಕೊಂಡು ಮಾತನಾಡುತ್ತಿದ್ದೀರಿ. ತಾವೇ ಯೋಚನೆ ಮಾಡಿ. ತಮ್ಮ ಸ್ಥಾನಕ್ಕೆ ತಾವು ಇದನ್ನು ಹೇಳಬಹುದೇ ಯೋಚನೆ ಮಾಡಿ. ಮಹಾರಾಷ್ಟ್ರದಲ್ಲಿ ಗುಜರಾತ್‌ನಲ್ಲಿ ಪುಢಾರಿಗಳು ಎಂಬ ಶಬ್ದಕ್ಕೆ ಏನು ಅರ್ಥ ಇದೆ ಎಂದು ನನಗೆ ಅರ್ಥವಾಗುತ್ತದೆ. ಆದರೆ ತಾವು ಇಲ್ಲಿ ಯಾವ ಅರ್ಥದಲ್ಲಿ ಅದನ್ನು ಹೇಳುತ್ತಿದ್ದೀರೋ ಹೇಳಿ. ತಾವು ಮಾತನಾಡಬಹುದು. ಆದರೆ ನಾವು ಕೇಳಬೇಕಾಗುತ್ತದೆ. ತಾವು ಸಭಾನಾಯಕರಿದ್ದೀರಿ. ತಾವು ಮಾತನಾಡಬೇಕಾದ ಸಂದರ್ಭದಲ್ಲಿ ತಾವು ಸಭಾನಾಯಕರಿದ್ದೀರಿ ಮುಖ್ಯಮಂತ್ರಿಗಳೂ ಇದ್ದೀರಿ ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಸಮಾಧಾನದಿಂದ ಕೇಳಬೇಕೆಂದು ಬಂದಿರತಕ್ಕಂಥದ್ದು. ಆದರೆ ತಮ್ಮ ಪ್ರಚೋದನೆ ಏನಿದೆ ಅದರ ಬಗ್ಗೆ ನಾನು ಹೇಳಬೇಕಾಗುತ್ತದೆ. ಯಾವ ಯಾವ ಇಲಾಖೆಗಳಲ್ಲಿ ನಿಮ್ಮ ಸರಕಾರ 82ರಲ್ಲಿ ಅಧಿಕಾರದಲ್ಲಿದ್ದಾಗ ವರ್ಗಾವಣೆಗಳು ಆದವು 83ರಲ್ಲಿ ನಮ್ಮ ಸರಕಾರ ಬಂದಾಗ ಎಷ್ಟೆಷ್ಟು ವರ್ಗಾವಣೆಗಳನ್ನು ನಾವು ಮಾಡಿದ್ದೇವೆ ಮತ್ತು ಮುಂದಿನ ಐದು ವರ್ಷಗಳಲ್ಲಿ ಏನೇನು ನಡೆಯುತ್ತದೆಂದು ನಾವು ಕಾದು ನೋಡುತ್ತೇವೆ. 82ರಲ್ಲಿ ನಿಮ್ಮ ಸರಕಾರ ಹೋಗಿ 83ರಲ್ಲಿ ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗ ನಾವು ಎಷ್ಟು ಟ್ರಾನ್ಸ್‌ಫರ್ ಮಾಡಿದ್ದೇವೆ. ಈಗ ನೀವು ಎಷ್ಟು ಟ್ರಾನ್ಸ್‌ಫರ್ ಮಾಡಿದ್ದೀರಿ ಎಂಬ ಸ್ಟ್ಯಾಟಿಸ್ಟಿಕ್ಸ್ ಅನ್ನು ನಾವು ಕೇಳಬಹುದಲ್ಲ; ಹೇಳಿ ಅದನ್ನೆಲ್ಲಾ ವಿವರವಾಗಿ.

ಶ್ರೀ ವೀರೇಂದ್ರ ಪಾಟೀಲ್:- ಕೇಳಬಹುದು.

ಶ್ರೀ ಹೆಚ್. ಏಕಾಂತಯ್ಯ:- ಕಾಂಗ್ರೆಸ್ ಸರಕಾರ 1947ನೇ ಇಸವಿಯಿಂದ 83ನೇ ಇಸವಿಯವರೆಗೆ ಇತ್ತಲ್ಲ ಆಗ ಎಷ್ಟು ಪ್ರಮಾಣದಲ್ಲಿ ಟ್ರಾನ್ಸ್‌ಫರ್ಸ್ ಆಗಿದೆ?

ಶ್ರೀ ವೀರೇಂದ್ರ ಪಾಟೀಲ್:- ಅದನ್ನೆಲ್ಲಾ ಹೇಳೋಣ. ಅದನ್ನೆಲ್ಲಾ ಕೇಳಿ. ಆದರೆ ಪ್ರಚೋದನೆ ಮಾಡುವ ಪ್ರಶ್ನೆ ಇಲ್ಲ. ನಾನು ಏನು ಹೇಳಿದೆ ಸ್ಪಷ್ಟವಾಗಿ ಹೇಳಿದೆ. ಶ್ರೀಮಾನ್ ಭೈರೇಗೌಡರು ಕೇಳಿದಾಗ. ಇದನ್ನು ನಾನು ಎಲ್ಲರ ಬಗ್ಗೆ ಹೇಳುತ್ತಿಲ್ಲ ಎಂದು ಹೇಳಿದೆ. ನಾನು ಇದನ್ನು ಹೇಳುತ್ತಿದ್ದೇನೆ. ಕೆಲವು ಜನ ಇದನ್ನೇ ಉದ್ಯೋಗಮಾಡಿಕೊಂಡಿದ್ದರು ಎಂಬುದು ನಿಮಗೂ ಗೊತ್ತಿದೆ.

ಶ್ರೀ ಹೆಚ್. ಏಕಾಂತಯ್ಯ:- ಸಮಾಜದಲ್ಲಿ ಎಲ್ಲಾ ಕಾಲದಲ್ಲೂ ಅವರು ಇದ್ದೇ ಇದ್ದಾರೆ. ಈಗ ನಿಮ್ಮ ಸರಕಾರದಲ್ಲಿ ಯಾರೂ ಇಲ್ಲವೇ?

ಶ್ರೀ ವೀರೇಂದ್ರ ಪಾಟೀಲ್:- ನಾನು ಇನ್ನೂ ಹೇಳಿ ಮುಗಿಸಿಲ್ಲ.

ಅಧ್ಯಕ್ಷರು:- ಅದನ್ನೇ ಅವರು ಹೇಳುತ್ತಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:- ನಮ್ಮದನ್ನು ಹೇಳುವುದಕ್ಕೆ ಮೊದಲು ಅವರದ್ದು ಮೊದಲು ಹೇಳಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ ಒಂದು ನಿಮಿಷ..

ಅಧ್ಯಕ್ಷರು:- ಅವರು ನಿಂತೇ ಇದ್ದಾರೆ...unless he yields....

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಅವರು ಪುಢಾರಿ ಎಂಬ ಮಾತು ಉಪಯೋಗಿಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಈಗ ಒಂದು ನಿಮಿಷ. ಪುಢಾರಿಗಳು ಎನ್ನತಕ್ಕಂಥದ್ದಕ್ಕೆ ನಾನಾ ಅರ್ಥಗಳನ್ನು ಕೊಡುತ್ತದೆ. ನೀವು ಉದ್ದೇಶಪೂರ್ವಕವಾಗಿ ಇದನ್ನು ಬಳಸಿದ್ದೀರಿ ಎಂದು ನಾನು ತಿಳಿದುಕೊಂಡಿಲ್ಲ. ಆದರೆ ಹಿಂದೆ ಗುಲ್ಬರ್ಗದಲ್ಲಿ ಸತ್ತವರ ಬಗ್ಗೆ ಕೂಡ ತಾವು ಪುಢಾರಿಗಳೆಂದು ಹೇಳಿದಿರಿ. ತಾವು ಗುಲ್ಬರ್ಗ ಭಾಷೆಯಲ್ಲಿ ಮಾತನಾಡುವಾಗ ಸ್ವಲ್ಪ ವ್ಯತ್ಯಾಸ ಇರಬೇಕೆಂದು ನನಗನಿಸುತ್ತದೆ. ಆದರೆ ಇಲ್ಲಿ ಶಾಸಕರನ್ನು ಪುಢಾರಿಗಳು ಎಂದು ಕರೆದರೆ ಅವರು ದಳ್ಳಾಳಿಗಳು ಎಂದು ಅರ್ಥವಾಗುತ್ತದೆ. ಶಾಸಕರನ್ನು ಪುಢಾರಿಗಳು ಎಂದು ಕರೆದರೆ ಆ ಪದ ಅಷ್ಟು ಸರಿಯಾಗಿ ಇಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ. ತಾವು ಯಾರ ಮೇಲೋ ನೋವು ಆಗಬೇಕೆಂದು

ಹೇಳಿದ್ದೀರಿ ಎಂದು ನಾನು ತಿಳಿದಿಲ್ಲ. ಆದರೆ ಇಂದು ತಮ್ಮ ಭಾಷಣ ಸ್ಫೂರ್ತಿಯಾಗಿ ತಿಳಿಯಾಗಿ ಹೋಗಬೇಕಾಗಿತ್ತು. ಆದರೆ ಏಕೋ ಸ್ವಲ್ಪ ಒರಟು ಒರಟಾಗಿ ಹೋಗುತ್ತಿದೆ. ಅದು ಅಷ್ಟು ಸರಿ ಅಲ್ಲವೆಂದು ನನ್ನ ಭಾವನೆ.

ಶ್ರೀ ವೀರೇಂದ್ರ ಪಾಟೀಲ್:- ಈಗ ಹೈದ್ರಾಬಾದ್ ಕರ್ನಾಟಕದಲ್ಲಿ ಯಾವ ಪದ ಉಪಯೋಗ ಮಾಡುತ್ತಾರೋ ಆ ಪದವನ್ನು ನಾನು ಉಪಯೋಗ ಮಾಡಿದ್ದೇನೆ. ಇಲ್ಲಿ ಆ ಪದ ತಪ್ಪು ಅರ್ಥವಾಗುವುದಾದರೆ ಅದರ ಬದಲು ಯಾವುದಾದರೂ ಒಂದು ಪದ ಇದ್ದರೆ ಹೇಳಿ ನಾನು ಆ ಪದ ಊಪಯೋಗ ಮಾಡುತ್ತೇನೆಂದು ಹೇಳಿದ್ದೇನೆ; ಇನ್ನೇನು ಹೇಳಬೇಕು ನನಗೆ ಅರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಪುಢಾರಿಗಳು ಎಂದು ಹೇಳುವುದು ಕೆಟ್ಟ ಪದ ಇಲ್ಲಿ. ಅದು ಸರಿ ಇಲ್ಲ ಬೇರೆ ಪದ ಉಪಯೋಗ ಮಾಡಿ.

(ಗೊಂದಲ)

SRI QAMARUL ISLAM :- I want to request the Hon.Minister

MRw SPEAKER :- He is the Chief Minister and not the Minister.

SRI QAMARUL ISLAM :- Yes, I want to request the Chief Minister. Let us withdraw that kannada work and use an appropriate English word. That will solve the problem.

ಶ್ರೀ ವಾಟಾಳ್ ನಾಗರಾಜ್:- ಈಗ ಕನ್ನಡ ಭಾಷೆಗೆ ಪದಗಳು ಉರ್ದುವಿನಿಂದ ಪದಗಳು ಬಂದಿವೆ. ಇಂಗ್ಲೀಷ್‌ನಿಂದ ಪದಗಳು ಬಂದಿವೆ. ಹೀಗೆ ಕನ್ನಡ ಸಂಪತ್‌ಭರಿತವಾಗಿ ಬೆಳೆದಿದೆ. ತ್ಯಾಗ ಮಾಡಿ ಗುಂಡೇಟಿನಿಂದ ಸತ್ತ ವ್ಯಕ್ತಿಯನ್ನು ತಾವು ಪುಢಾರಿಗಳು ಎಂದು ಆ ದಿನ ಹೇಳಿದಿರಿ. ಈ ದಿನ ಕೆಲವು ಜನ ಶಾಸಕರ ಮೇಲೆ ಒಂದು ಕೆಟ್ಟ ಭಾವನೆ ಇಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೀರಿ ಎಂದು ನಾನು ಅಂದುಕೊಂಡಿಲ್ಲ. ಆದರೆ ನಮ್ಮ ಭಾಗದಲ್ಲಿ ಪುಢಾರಿಗಳು ಎಂದರೆ ದಳ್ಳಾಳಿಗಳು ಎಂದು ಅರ್ಥ ಬರುತ್ತದೆ ಹಾಗೂ ಕೆಟ್ಟ ಮನುಷ್ಯ ಎನ್ನತಕ್ಕಂಥ ಭಾವನೆ ಬರುತ್ತದೆ. ಅದಕ್ಕೆ ಬೇರೆ ಪದ ಪುಢಾರಿಗಳು ಎನ್ನುವುದಕ್ಕೆ ಶಬ್ದಕೋಶದಲ್ಲಿ ಇಲ್ಲ. ಆದ್ದರಿಂದ ನೀವು ಪುಢಾರಿಗಳು ಎನ್ನುವ ಪದವನ್ನು ಬಿಟ್ಟುಬಿಡಿ. ಬೇರೆಯಾವುದಾದರೂ ಪದವನ್ನು ಉಪಯೋಗಿಸಿ.

ಅಧ್ಯಕ್ಷರು:- ಮಿಸ್ಟರ್ ಸಿಂಧ್ಯಾ ಅವರೇ, ನೀವು ಹೇಳಿದಿರಿ ಮಹಾರಾಷ್ಟ್ರದಲ್ಲಿ ಪುಢಾರಿಗಳೆಂದರೆ ಏನು ಎಂದು so it is in the same spirit that he has used it.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:- ತಮ್ಮ ಮಾತೃಭಾಷೆಯಾವುದು

ಶ್ರೀ ಪಿ.ಜಿ.ಆರ್. ಸಿಂಧ್ಯ:- ನನ್ನ ಮಾತೃಭಾಷೆ ಕನ್ನಡ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:- ಮಾನ್ಯ ಸದಸ್ಯರಾದ ಸಿಂಧ್ಯಾರವರಿಗೆ ಗೊತ್ತು ಪುಢಾರಿ ಎಂದರೆ ಲೀಡರ್ ಎಂದು ಅವರಿಗೆ ಗೊತ್ತಿದೆ.

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್:- ಇನ್ನು ಮುಂದೆ ಈ ಸದನದಲ್ಲಿ ನಾವು ಕೂಡ ಪುಢಾರಿಗಳು ಎನ್ನುವ ಶಬ್ದವನ್ನು ಉಪಯೋಗ ಮಾಡಬಹುದೇ

(ಗೊಂದಲ)

ಶ್ರೀ ಎಚ್. ಏಕಾಂತಯ್ಯ:- ನಿಮ್ಮ ಬಾಯಿಂದ ಇಂತಹ ಪದ ಬರುತ್ತದೆಂದು ನಾವು ತಿಳಿದುಕೊಂಡಿರಲಿಲ್ಲ. ನೀವು ನಮಗೆ ಒಳ್ಳೆಯ ಪಾಠ ಹೇಳಿಕೊಡುತ್ತಿದ್ದೀರಿ ಅದು ಒಳ್ಳೆಯದೇ ಆಯಿತು ಬಿಡಿ.

(ಗೊಂದಲ)

ಶ್ರೀ ವೀರೇಂದ್ರಪಾಟೀಲ್:- ಪುಢಾರಿ ಎನ್ನುವ ಪದ ಕೆಟ್ಟ ಭಾಷೆ ಕೆಟ್ಟ ಅರ್ಥ ಅಂದರೆ...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ಈ ಸಮಸ್ಯೆಗೆ ನನ್ನದು ಒಂದು ಪರಿಹಾರ ಏನೆಂದರೆ, ಏಕೆಂದರೆ ಈ ಜಗಳದ ಮಧ್ಯೆ ನಾವು ಒಂದು ರೀತಿ ಸಮಾಧಾನ ಪಟ್ಟುಕೊಂಡು ಹೋಗಬೇಕಾದರೆ ಇಂತಹ ಪುಢಾರಿಗಳು ನಮ್ಮ ಪಕ್ಷದಲ್ಲೂ ಇದ್ದಾರೆ ಎಂದು ಹೇಳಿ ಬಿಡಿ.

ಶ್ರೀ ವೀರೇಂದ್ರಪಾಟೀಲ್:- ಮಾನ್ಯ ಅಧ್ಯಕ್ಷರೇ ಪುಢಾರಿಗಳು ಎನ್ನುವ ಶಬ್ದದ ಮೇಲೆ...

ಪ್ರೊ.ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೇ ಯಾವುದೋ ಒಂದು ಪದದ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಅದು ಯಾವ ಭಾಷೆಯ ಪದ ಎಂದು ನನಗೆ ಗೊತ್ತಿದೆ. ಅದು ನಮ್ಮ ರಾಷ್ಟ್ರಭಾಷೆಯಾದ ಹಿಂದಿ ಪದ ಎಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲಿ ಪುಢಾರಿ ಉಪ ಪುಢಾರಿ ಎಲ್ಲಾ ಬರುತ್ತವೆ. ಪುಢಾರಿ ಎಂದರೆ ನಾಯಕ ಉಪ ಪುಢಾರಿ ಎಂದರೆ ಉಪನಾಯಕ ಎಂದು. ಅದನ್ನು ಹೇಳಿದರೆ ಇವರಿಗೆ ಏತಕ್ಕೆ ಬೇಜಾರು ಆಗುತ್ತದೆಯೋ ನನಗಂತೂ ಗೊತ್ತಾಗುತ್ತಿಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್:- ಹಾಗಾದರೆ ಇದು ಸಂಸದೀಯ ಪದವಾಗಿದ್ದರೆ ಇವತ್ತು ಈ ಸಭೆಯ ಸಭಾನಾಯಕರು ಮೊದಲ ಪುಢಾರಿ ಅನಂತರ ನಾವೆಲ್ಲರೂ ಪುಢಾರಿಗಳು ಎನ್ನುವ ಅರ್ಥ ಬರುತ್ತದೆ ಅಲ್ಲವೇ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾಯಕರು ಎಂದು ಯಾರ್ಯಾರು ಕರೆಸಿಕೊಳ್ಳುತ್ತಾರೋ ಅವರೆಲ್ಲರೂ ಪುಢಾರಿಗಳು ಎಂದು ಆದರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ ಪುಢಾರಿಗಳು ಎನ್ನುವ ಒಂದು ಶಬ್ದದಮೇಲೆ ಏನು ಈ ಸದನದಲ್ಲಿ ಚರ್ಚೆ ಆಯಿತು ಅದರಿಂದ ನಾವು ಒಂದು ಪಾಠ ಕಲಿಯಬೇಕಾಗುತ್ತದೆ ಎಂದು ನಾನು ಒಬ್ಬ ಮುಖ್ಯಮಂತ್ರಿಯಾಗಿ ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಕರ್ನಾಟಕದ ಐದು ಭಾಗಗಳು ಒಂದಾಗಿದ್ದರೂ ಕೂಡ ಐದು ಭಾಗಗಳಲ್ಲಿ ಆಡುವಂತಹ ಕನ್ನಡ ಉಪಯೋಗ ಮಾಡತಕ್ಕ ಪದಗಳಲ್ಲಿ ಬಹಳ ವ್ಯತ್ಯಾಸ ಇದೆ. ಬಹುಷಃ ನಾವು ಹೈದ್ರಾಬಾದ್ ಕರ್ನಾಟಕ ಭಾಗದವರು ಪುಢಾರಿಗಳು ಅಂದಕೂಡಲೇ ಬೈದುಬಿಟ್ಟಿರಿ ಎಂದು ನಮ್ಮನ್ನು ನೀವು ಹೊಡೆಯಲಿಕ್ಕೆ ಹೊರಟರೆ ಬಹುಶಃ ಮತ್ತೇನೂ ಇಲ್ಲ. ಇದನ್ನು ಏಕೆ ಉದಾಹರಣೆಗೆ ಹೇಳುತ್ತಿದ್ದೇನೆಂದರೆ ಇವತ್ತು ಅನೇಕ ಜನ

೪.೦೫ ಪಿ.ಎಂ.

ಕರ್ನಾಟಕದಲ್ಲಿ ಫೀಲ್ ಮಾಡುತ್ತಿದ್ದಾರೆ. ಕರ್ನಾಟಕ ಅಸ್ತಿತ್ವಕ್ಕೆ ಬಂದು ಸುಮಾರು 35 ವರ್ಷಗಳಾದರೂ ಕೂಡಾ ಕರ್ನಾಟಕದ ಎಮೋಷನಲ್ ಇಂಟಿಗ್ರೇಷನ್ ಇನ್ನೂ ಆಗಿಲ್ಲ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಹಳೇ ಮೈಸೂರಿನ ಕಡೆ ನಮ್ಮ ಹೆಂಗಸರು ನಮ್ಮ ಹೆಂಗಸರು ಎನ್ನುತ್ತಾರೆ. ಅದೇ ಹೈದರಾಬಾದ್ ಕರ್ನಾಟಕದ ಕಡೆ ಹೋಗಿ ನಿಮ್ಮ ಹೆಂಗಸರು ಎನ್ನಿರಿ ಏನು ಮಾತನಾಡುತ್ತೀರಿ ನಾಲಿಗೆ ಶುದ್ಧಿ ಇಲ್ಲೇನು ಎಂದು ಬಯ್ಯುತ್ತಾರೆ. ಇದು ಇನ್ನೂ ಕಲಿಯಬೇಕಾಗಿದೆ. ನಾನು ಹೇಳುತ್ತಿದ್ದೇನೆ. ನಾನು ದುರುದ್ದೇಶದಿಂದ ಹೇಳುತ್ತಿಲ್ಲ. ಕ್ಷಮಿಸಬೇಕು ಮಿಸ್ಟರ್ ಸಿಂಧ್ಯಾರವರೇ ಪುಢಾರಿ ಎನ್ನುವ ಮಾತನ್ನು ಉಪಯೋಗ ಮಾಡಿದ್ದು ದುರುದ್ದೇಶದಿಂದ ಅಲ್ಲ. ನಾನು ಯಾರಿಗಾದರೂ ಬಯ್ಯಬೇಕೆಂದಲ್ಲ. ಯಾರಿಗಾದರೂ ಇದರಿಂದ ಮನಸ್ಸಿಗೆ ನೋವಾಗಿದ್ದರೆ ನಾನು ಉಪಯೋಗ ಮಾಡಿರುವಂಥ ಪದವನ್ನು ವಾಪಸ್ ತೆಗೆದುಕೊಳ್ಳುತ್ತೇನೆಂದು ಹೇಳಿದಮೇಲೂ ಕೂಡ ನೀವು ನನ್ನ ಮೇಲೆ ಒಂದು ದೊಡ್ಡ ಆರೋಪಣೆ ಹೊರಿಸುವಷ್ಟು ಪರಿಸ್ಥಿತಿಗೆ ಬಂದಾಗ ಇನ್ನು ನಾವು ಏನು ಮಾಡಬೇಕು ಇನ್ನು ಮುಂದೆ ಶಬ್ದಕೋಶ ಇಟ್ಟುಕೊಂಡು ಭಾಷಣ ಮಾಡಲಿಕ್ಕೆ ಪ್ರಾರಂಭ ಮಾಡಬೇಕು. ಇಲ್ಲವೆಂದರೆ ಗತ್ಯಂತರವೇ ಇಲ್ಲ. ಡಿಕ್ಷನರಿ ಹೇಗೆಂದರೆ ಹೈದರಾಬಾದ್ ಕರ್ನಾಟಕದ

ಕನ್ನಡ ಪದದ ಡಿಕ್ಷನರಿಯಲ್ಲಿ ಓಲ್ಡ್ ಮೈಸೂರಿನದ್ದು ಏನು ಸಿಗುತ್ತದೆ ಓಲ್ಡ್ ಮೈಸೂರಿನ ಡಿಕ್ಷನರಿಯಲ್ಲಿ ಬಾಂಬೆ ಕರ್ನಾಟಕದ್ದು ಏನು ಸಿಗುತ್ತದೆ ಇಂತಹ ಒಂದು ಕನ್ನಡದ ಡಿಕ್ಷನರಿ ಮಾಡಬೇಕಾದುದು ಕರ್ನಾಟಕದಲ್ಲಿ ಅವಶ್ಯಕತೆ ಬೀಳುತ್ತದೆಯೇನೋ ಎಂದು ನನಗೆ ಅನಿಸುತ್ತದೆ. ನಾನು ಈ ಸ್ಥಾನದಿಂದ ಏನು ಹೇಳುತ್ತಿದ್ದೇನೆ ಆ ಬಗ್ಗೆ ನನಗೆ ದುರುದ್ದೇಶ ಇಲ್ಲ. ಏನೋ ಒಂದು ವಿಚಾರವನ್ನು ಹೇಳಬೇಕೆಂದು ಆ ಪದವನ್ನು ಹೇಳಿದೆ. ನಮ್ಮಲ್ಲಿ ಆ ಪದವನ್ನು ಮೇಲಿಂದ ಮೇಲೆ ಉಪಯೋಗ ಮಾಡುತ್ತಾರೆಂದು ಹೇಳಿದ್ದೇನೆಯೇ ಹೊರತಾಗಿ ನಿಮ್ಮನ್ನು ಏನಾದರೂ ಬಯ್ಯಬೇಕು ನಿಮ್ಮನ್ನು ದೋಷಾರೋಪಣೆ ಮಾಡಬೇಕು ನಿಮ್ಮನ್ನು ಕಂಡೆಮ್ ಮಾಡಬೇಕೆನ್ನುವ ದೃಷ್ಟಿಯಿಂದ ಆ ಪದವನ್ನು ನಾನು ಉಪಯೋಗ ಮಾಡಿಲ್ಲವೆಂದು ಹೇಳಿದ ಮೇಲೂ ನೀವು ಸುಮ್ಮನೆ ಇರುವುದಿಲ್ಲ. ಇನ್ನು ಯಾವ ರೀತಿಯಿಂದ ನಿಮಗೆ ಕನ್‌ವಿನ್ಸ್ ಮಾಡಬೇಕೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಈಗ ನೀವು ಒಪ್ಪಿಕೊಂಡುಬಿಟ್ಟಿರಿ. ನೀವು ದೊಡ್ಡ ಪುಢಾರಿ ಇನ್ನುಳಿದವರೆಲ್ಲಾ ಸಣ್ಣ ಪುಢಾರಿಗಳು.

ಶ್ರೀ ವೀರೇಂದ್ರ ಪಾಟೀಲ್:- ಅಂತೂ ಆ ಪುಢಾರಿ ಪದದ ಮೇಲೆ ನಿಮಗೆ ಕಣ್ಣು ಇದೆ ಎಂದಾಯಿತಲ್ಲಾ ಆ ಪುಢಾರಿ ಶಬ್ದದ ಮೇಲೆ ಇನ್ನೂ ನಿಮಗೆ ವಕ್ರ ದೃಷ್ಟಿ ಇದೆ ಎನ್ನುವುದು ನನಗೆ ಅರ್ಥವಾಯಿತು. ಈಗ ಪುಢಾರಿ ಅನ್ನುವುದನ್ನು ಬಿಟ್ಟುಬಿಡೋಣ. ಮುಖಂಡರು ಎಂದು ಹೇಳೋಣವೇ ಇದು ಸರಿಹೋಗುತ್ತದೆಯೋ ಅಥವಾ ಇದರಲ್ಲೇನಾದರೂ ತಪ್ಪು ಇದೆಯೋ ಏಕೆಂದರೆ ಎಲ್ಲಾ ತಿಳಿದುಕೊಂಡು ಮಾತನಾಡಬೇಕು ನಿಮ್ಮ ಜೊತೆಯಲ್ಲಿ.

ಶ್ರೀ ವಾಟಾಳ್ ನಾಗರಾಜ್:- ನೀವು ದುರುದ್ದೇಶ ಇಟ್ಟುಕೊಂಡು ಹೇಳಿಲ್ಲ. ನಾನು ಅದನ್ನು ಸ್ಪಷ್ಟಪಡಿಸಿದ್ದೇನೆ. ಅವತ್ತೂ ನೀವು ಹೇಳಿದ್ದೀರಿ. ತೆರೆಯಮರೆಯಲ್ಲಿ ಉದ್ದೇಶ ಇದೆಯೆಂದು ನಾನು ಹೇಳುತ್ತಿಲ್ಲ.

ಶ್ರೀ ವೀರೇಂದ್ರ ಪಾಟೀಲ್:- ಒಟ್ಟಿನಲ್ಲಿ ನಾನು ಏನು ಹೇಳುತ್ತಿದ್ದೇನೆಂದರೆ ನಾವು ಎಲೆಕ್ಷನ್ ಮಾಡಿ ಹೊರಗೆ ಬರುವ ಮುನ್ನಾ ಪ್ರತಿ ತಾಲ್ಲೂಕು ಲೆವೆಲ್‌ನಲ್ಲಿ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಒಂದು ಸೆಟಪ್ ಇತ್ತು. ಯಾವುದು ಹಿಂದಿನ ಶಾಸಕರಿಗೆ ಹಿಂದಿನ ಮುಖಂಡರಿಗೆ ಹಿಂದಿನ ಪಕ್ಷದ ನೇತಾ ಗಣಕ್ಕೆ ಅನುಕೂಲವಾದಂಥ ಒಂದು ಸೆಟಪ್ ಸ್ವಲ್ಪಮಟ್ಟಿಗೆ ಇತ್ತು. ಇದು ಪೂರ್ತಿ ಅಂದರೆ ನೂರು ಪರ್‌ಸೆಂಟ್ ಇತ್ತು ಎಂದು ನಾನು ಹೇಳುತ್ತಿಲ್ಲ. ಅಂಥಾ ಪರಿಸ್ಥಿತಿ ಒಂದು ಇದ್ದಾಗ ಅಂಥಾ ಸೆಟಪ್ ಇದ್ದರೂ ಕೂಡಾ ನಾವು ಇಷ್ಟು ಜನ ಆರಿಸಿ ಬಂದಿದ್ದೇವೆ ಆ ಅಧಿಕಾರಿಗಳು ನಮಗೆ ಏನೂ ಮಾಡುವುದಕ್ಕಾಗಲಿಲ್ಲ. ಇದನ್ನು ನಮ್ಮ ಪಕ್ಷದ ಧುರೀಣರಿಗೂ ನಾನು ಹೇಳುತ್ತಿದ್ದೇನೆ. ಅಧಿಕಾರಿಗಳಿಂದ ನಾವು ಗೆಲ್ಲುವ ಹಾಗೂ ಇಲ್ಲ ಮತ್ತು ಅವರಿಂದ ಸೋಲಲಿಕ್ಕೂ ಆಗುವಹಾಗಿಲ್ಲ ಏನಾದರೂ ನಾವು ಗೆದೆಯಬೇಕಾದರೆ ಇಲ್ಲ ಸೋಲಬೇಕಾದರೆ ನಮ್ಮ ಶಕ್ತಿ ಮೇಲೆ ನಾವು ಗೆಲ್ಲುತ್ತೇವೆಯೋ ಹೊರತು ನಮ್ಮ ನಿಶಕ್ತಿ ಮೇಲೆ ನಮ್ಮ ವೀಕ್‌ನೆಸ್ ಮೇಲೆ ನಾವು ಸೋಲುತ್ತೇವೆಯೋ ಹೊರತಾಗಿ ಈ ಅಧಿಕಾರಿಗಳ ಪಾತ್ರ ನಾವು ಗೆಲ್ಲುವುದರಲ್ಲಾಗಲೀ, ನಮ್ಮ ಕ್ಷೇತ್ರದಲ್ಲಿ ಸರ್ವ್ ಮಾಡುವುದರಲ್ಲಾಗಲೀ ಯಾವ ರೀತಿಯಿಂದಲೂ ಅವರ ಪಾತ್ರ ಇಲ್ಲ. ಆದರೇ ಈ ಒಂದು ಸೆಟ್‌ಪ್ ಇತ್ತು. ಒಂದು ಪಕ್ಷಕ್ಕೆ ಅನುಕೂಲವಾದಂಥ ಒಂದು ಸೆಟಪ್ ತಾಲ್ಲೂಕು ಲೆವೆಲ್‌ನಲ್ಲಿ ಮತ್ತು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಇತ್ತು. ಆ ಪಕ್ಷ ಅಧಿಕಾರ ಕಳೆದುಕೊಂಡು ಇನ್ನೊಂದು ಪಕ್ಷ ಅಧಿಕಾರಕ್ಕೆ ಬಂದಾಗ ಸ್ವಾಭಾವಿಕವಾಗಿ ಆ ಸೆಟಪ್‌ನ್ನು ಶೇಕಡಾ ನೂರರಷ್ಟು ಹಾಗೇ ಇಡುವುದಕ್ಕಾಗುವುದಿಲ್ಲ. ಆದರೆ ಒಂದು ಮಾತನ್ನು ತಾವು ಮರೆಯಬಾರದು; ನಾನು ಅಧಿಕಾರಕ್ಕೆ ಬಂದ ಕೂಡಲೇ ಆ ಸೆಟ್‌ಪ್‌ನ್ನು ಶೇಕ್ ಮಾಡಲಿಲ್ಲ. ನಾನು ಅಧಿಕಾರಕ್ಕೆ ಬಂದ ತಕ್ಷಣ ಒಂದು ಘೋಷಣೆ ಮಾಡಿದೆ ನೋ ಮೋರ್ ಅಡಾಪ್ಟ್ ಟ್ರಾನ್ಸ್‌ಫರ್ ಎಂದು ಏಕೆಂದರೆ ನನಗೆ ಗೊತ್ತಿತ್ತು. ದಿನಾಲೂ ಟ್ರಾನ್ಸ್‌ಫರ್ ಆಗುತ್ತಿತ್ತು. ಟ್ರಾನ್ಸ್‌ಫರ್ ಸೀಸನ್‌ನಲ್ಲೇ ಟ್ರಾನ್ಸ್‌ಫರ್ ಆಗಬೇಕೆನ್ನುವುದು ಇರಲೇ ಇಲ್ಲ. ಇವತ್ತು ಯಾರೋ ಮುಖ್ಯಸ್ಥರು ಬಂದರು; ಇವತ್ತು ಇದು ಆಗಲೇ ಬೇಕೆಂದರೆ ಅದು ಆಗುತ್ತಿತ್ತು ಅವತ್ತು ಆಗದೇ ಇದ್ದರೆ ಮರುದಿವಸ ಆಗುತ್ತಿತ್ತು. ಇದು ದಿನಂಪ್ರತಿ ನಡೆಯುತ್ತಿತ್ತು. 12 ತಿಂಗಳೂ ಇದೇ ರೀತಿಯಾದ

ಪರಿಸ್ಥಿತಿ ಇದ್ದಾಗ ಅದನ್ನು ನಾನು ತಡೆದಿದ್ದೇನೆ. ಇವತ್ತು ಅಧಿಕಾರಿಗಳನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಕಾಂಗ್ರೆಸ್‌ನವರು ಬಂದಿದ್ದೇವೆಂದು ಕಾಂಗ್ರೆಸ್‌ನ ಅಧಿಕಾರಿಗಳನ್ನು ತಂದು ನೇಮಕ ಮಾಡಿ ಕೂರಿಸುವುದಕ್ಕಾಗುವುದಿಲ್ಲ. ಅಡ್ಮಿನಿಸ್ಟ್ರೆಟಿವ್ ಮೆಷಿನರಿ ವಿಲ್ ಕಂಟಿನ್ಯೂ ಯಾವುದೋ ಸರ್ಕಾರ ಬರುತ್ತದೆ ಯಾವುದೋ ಸರ್ಕಾರ ಹೋಗುತ್ತದೆ ಆದರೆ ಅವರಿಗೆ ಸೆಕ್ಯುರಿಟಿ ಆಫ್ ಸರ್ವೀಸ್ ಇದೆ: ಅವರು ಅಧಿಕಾರದಲ್ಲಿ ಇರುತ್ತಾರೆ ಅಧಿಕಾರದಲ್ಲಿ ಮುಂದುವರಿಯುತ್ತಾರೆ. ಮತ್ತು ರೂಲ್ಸ್ ರೆಗ್ಯುಲೇಷನ್ಸ್ ಪ್ರಕಾರ ಏನು ಪ್ರಮೋಷನ್ ಮುಂತಾದ್ದು ಬರಬೇಕು ಅದೆಲ್ಲಾ ರಿಟೈರ್‌ಮೆಂಟ್ ತನಕ ಬರುತ್ತದೆ. ಕೆಲಸ ಮಾಡಿ ಹೊರಟು ಹೋಗುತ್ತಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ ಒಂದು ಪಕ್ಷಕ್ಕೆ ಒಲುವು ತೋರಿಸತಕ್ಕಂಥ ಅಧಿಕಾರಿ ವರ್ಗದವರು ತಾಲ್ಲೂಕು ಲೆವೆಲ್‌ನಲ್ಲಿ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಇರತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ. ಇದೇ ವಿಚಾರವನ್ನು ಅನೇಕ ನನ್ನ ಸ್ನೇಹಿತರು ಕೂಡ ನನ್ನ ಗಮನಕ್ಕೆ ತಂದರು. ಅದಕ್ಕೆ ನಾನು ಹೇಳಿದೆ ಆ ಸೆಟ್‌ಅಪ್ ಏನಿದೆ ಅದಕ್ಕೆ ನಾನು ಕೈ ಹಚ್ಚುವುದಕ್ಕೆ ಹೋಗುವುದಿಲ್ಲ ಎಲ್ಲಿಯವರೆಗೆ ಇದು ಪರಿಣಾಮವಾಯಿತು ಅಂದರೆ ನಮ್ಮ ಪಕ್ಷದಲ್ಲಿರತಕ್ಕಂಥವರು ನಮ್ಮ ಪಕ್ಷದ ಅನೇಕ ಗಣ್ಯರಿಗೆ ನನ್ನ ಮೇಲೆ ಈ ವಿಚಾರದಲ್ಲಿ ಸಂಶಯ ಪಡುವಂಥಾ ಪರಿಸ್ಥಿತಿ ಬಂತು. ಅದು ಏನೆಂದರೆ he is continuing his old friends regime in Karnataka. ಹೆಗಡೆಯವರ ರೆಜೀಮೇ ಕಂಟಿನ್ಯೂ ಮಾಡುತ್ತಾ ಇದ್ದಾರೆ ಹೆಗಡೆಯವರ ಕಾಲಕ್ಕೆ ಇದ್ದ ಅಧಿಕಾರಿಗಳನ್ನು ಇವರು ಟಚ್ ಮಾಡುವುದಕ್ಕೆ ತಯಾರಾಗಿಲ್ಲ; ಒಳಗಡೆ ಇವರೂ ಹೆಗಡೆಯವರೂ ಒಂದೇ ಇದ್ದಾರೆ ಎನ್ನುವಂಥ ಅಪಪ್ರಚಾರಕ್ಕೂ ಕೂಡ ಅವಕಾಶ ಆಯಿತು. ಅದಕ್ಕೆ ನಾನು ಧೈರ್ಯವಾಗಿ ಕೇಳಿದೆ ಇದನ್ನು ನಾನು ಟಚ್ ಮಾಡುವ ಹಾಗಿಲ್ಲ; ಅಧಿಕಾರಿಗಳಿಗೆ ಏನಾದರೂ ಟಚ್ ಮಾಡುವುದಿದ್ದರೆ ಜನರಲ್ ಟ್ರಾನ್ಸ್‌ಫರ್ ಮಾತ್ರ. ಅದನ್ನು ಏಪ್ರಿಲ್ ತಿಂಗಳಿಂದ ಪ್ರಾರಂಭ ಮಾಡಿ ಮೇ ತನಕ ಅದನ್ನು ಮುಗಿಸಬೇಕು. ಮೊದಲೇ ಮಾಡಿದರೆ ಆ ಸಿಬ್ಬಂದಿವರ್ಗ ಎಲ್ಲಿಗೆ ಹೋಗಬೇಕು ಏಕೆಂದರೆ ಅವರ ಮಕ್ಕಳ ವಿದ್ಯಾಭ್ಯಾಸ ಮುಂತಾದವುಗಳನ್ನು ನೋಡಿಕೊಂಡು ಮುಂದಿನ ಕಡೆಗೆ ಪೋಸ್ಟಿಂಗ್ ಆಗಿ ಅವರು ಹೋದಾಗ ಅವರು ಸುರಕ್ಷಿತವಾಗಿ ಎರಡು ಎರಡೂವರೆ ಮೂರು ವರ್ಷಗಳವರೆಗೆ ಕೆಲಸ ಮಾಡುವಂಥ ಒಂದು ವಾತಾವರಣವನ್ನು ಬೆಳೆಸಬೇಕು ಎಂಬ ಒಂದು ಉದ್ದೇಶದಿಂದ ಇದನ್ನು ಮಾಡಿದ್ದು. ಆ ವೇಳೆಗೆ ಅನೇಕ ಜನರು ನನ್ನ ಹತ್ತಿರ ಬರುತ್ತಾ ಇದ್ದರು. ನಮ್ಮ ಪ್ರತಿನಿಧಿಗಳು ಬರುತ್ತಾ ಇದ್ದರು ಹಳೆಯ ಜನರು ಆ ಕಾಲದ ಪಕ್ಷದ ಜನರ ಜೊತೆಯಲ್ಲಿ ಒಲುವು ಇರುವಂಥ ಅಧಿಕಾರಿಗಳನ್ನು ಕಟ್ಟಿಕೊಂಡು ನಾವು ಯಾವ ರೀತಿಯಲ್ಲಿ ನಮ್ಮ ಮತಕ್ಷೇತ್ರದ ಸೇವೆ ಮಾಡಬೇಕೆಂದು ತಿಳಿಯುತ್ತಿಲ್ಲ ಎಂದಾಗ ನಾನು ಸ್ವಾಭಾವಿಕವಾಗಿ ಹೇಳಿದೆ ಅಂಥಾದ್ದು ಏನಾದರೂ ಇದ್ದರೆ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡೋಣ ಆದರೆ only during transfer season. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದರ ಪರಿಸ್ಥಿತಿಯು ಏನಾಯಿತು ನನ್ನ ಕ್ಯಾಲ್ಕುಲೇಶನ್ ಈ ವಿಚಾರದಲ್ಲಿ ಏನಿತ್ತು ಅದು ಬುಡಮೇಲಾಯಿತು. ಇದರಿಂದ ಅನೇಕ ಜನ ಅಧಿಕಾರಿಗಳಿಗೆ ಏನು ಅನ್ನಿಸಿತು ಅಂದರೆ ಇದೊಂದು ಛಾನ್ಸ್ ಸಿಕ್ಕಿತು ಎಂದು ಟ್ರಾನ್ಸ್‌ಫರ್ ಆರ್ಡರ್ ತರುವುದಕ್ಕೆ ಹೊರಟರು. ಮತ್ತು ನನ್ನು ಏನೊಂದು ಅಂಟಿಸಿಫೇಟ್ ಮಾಡುತ್ತಾ ಇದ್ದೆ ಸ್ವಲ್ಪಮಟ್ಟಿಗೆ ಹೆಚ್ಚು ಕಡಿಮೆ ಮಾಡಬಹುದು ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳಬಹುದು ಎಂದು ನಾನೇನು ಎಣಿಸಿದ್ದೆ ಅದು ಬಹಳ ಮಟ್ಟಿಗೆ ಬುಡಮೇಲಾಯಿತು.

ಇದರಿಂದ ಬಹಳ ಜನರು ಅದರಲ್ಲಿಯೂ ಕೆಲವು ಕರಪ್ಟ್ ಅಧಿಕಾರಿಗಳು ಇದರ ಲಾಭ ತೆಗೆದುಕೊಂಡಿದ್ದಾರೆ. ಕೆಲವು ಇಲಾಖೆಗಳಲ್ಲಿ ಯಾರ್‍ಯಾರು ಮೂಲೆಗಳಲ್ಲಿ ಬಿದ್ದಿದ್ದರೋ ಅವರು ಮೇಲೆದ್ದರು. ಕೆಲವು ಇಲಾಖೆಗಳಲ್ಲಿ ಪ್ರೈಸ್‌ಪೋಸ್ಟ್ ಎಂದು ಇರುತ್ತವೆ. ಕೆಲವರು ಅಲ್ಲಿಗೆ ಬರುವುದಕ್ಕೆ ಪ್ರಯತ್ನ ಮಾಡಿದರು. ಆ ಪ್ರಕಾರ ಬಹಳಮಟ್ಟಿಗೆ ಅದರಲ್ಲಿ ಯಶಸ್ವಿಯೂ ಆದರು. ಇದರಲ್ಲಿ ಯಾರಿಗೆ ಯಾರು ಗಾಡ್‌ಫಾದರ್ ಇಲ್ಲ; ಅವರುಗಳು ಮೂಲೆಗೆ ಬಿದ್ದರು. ಇದು ಹೆಚ್ಚಿಗೆ ಆಯಿತು ಎಂದು ನಾನು ಹೇಳುವುದಿಲ್ಲ. ಇದರಿಂದಾಗಿ ಸ್ವಲ್ಪಮಟ್ಟಿಗೆ ಕೆಲವರಿಗೆ ಅನ್ಯಾಯ ಆಗಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ತಮಗೆ ದೊಡ್ಡ ಪ್ರಮಾಣದಲ್ಲಿ ಆಗಿದೆ ಎಂದು ಕಾಣಿಸುವುದಕ್ಕೂ

ಒಂದು ಕಾರಣ ಇದೆ. ಅದೇನೆಂದರೆ ಒಂದೇ ಸಲ ಟ್ರಾನ್ಸ್‌ಫರ್ ಮಾಡುತ್ತೇವೆ ಎನ್ನುವಂಥ ಒಂದು ವಾತಾವರಣ ಏನು ನಾವು ಸೃಷ್ಟಿ ಆಯಿತು ಆ ಸಮಯದಲ್ಲಿ ಎಲ್ಲರೂ ಒಮ್ಮೆಗೇ ಬಂದು ಸೇರಿದ್ದರಿಂದಾಗಿ ರಶ್ ಕಾಣಿಸಿತು. ಹೆಚ್ಚು ಟ್ರಾನ್ಸ್‌ಫರ್ಸ್ ಆಗಿದೆ. ಆದರೆ ತಾವುಗಳು ಹೇಳುವಂಥ ರೀತಿಯಲ್ಲಿ ಬಹಳಷ್ಟು ಅನಾಹುತಗಳೂ ಆಗಿರಲಿಲ್ಲ. ಅಲ್ಲಲ್ಲಿ ಇಂಜಸ್ಟೀಸ್ ಆಗಿದೆ ಎನ್ನುವಂಥದ್ದನ್ನು ನಾವು ನೋಡುತ್ತಾ ಇದ್ದೇವೆ ಕೆಲವು ಕಡೆ ಅಧಿಕಾರಿಗಳು ಜೋರು ಇದ್ದಾಗ ಅವರಿಗೆ ಬೇಕಾದಂಥ ಪೋಸ್ಟ್ ತೆಗೆದುಕೊಂಡು ಹೋಗಿರಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಈ ಆಡಳಿತ ಯಂತ್ರವನ್ನು 3-6ತಿಂಗಳುಗಳಲ್ಲಿ ಇಲ್ಲವೇ ವರ್ಷದಲ್ಲಿ ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಆತ್ಮಸಾಕ್ಷಿಯಾಗಿ ನಾನು ಹೇಳಬೇಕಾಗಿದ್ದರೆ ಕೆಲವು ಪೋಸ್ಟ್‌ಗಳು ಏನಿವೆ ಅಲ್ಲಿಗೆ ಪೋಸ್ಟಿಂಗ್ ಆರ್ಡರ್ ತಂದರೆ ನಾಲ್ಕು ಲಕ್ಷ ರೂ.ಗಳನ್ನು ಕೊಡುತ್ತಾರೆ. ಮಾಮೂಲಾಗಿ 50ಸಾವಿರ ರೂ.ಗಳನ್ನು ಪ್ರತಿ ತಿಂಗಳೂ ಕೊಡುವುದಕ್ಕೆ ತಯಾರಾಗಿದ್ದಾರೆ. ಅಂಥ ಪೋಸ್ಟ್‌ಗಳಲ್ಲಿನ ಅಧಿಕಾರಿಗಳು ಇಂಥ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದು ಹಿಂದಿನ ಸರಕಾರಗಳ ಅವಧಿಯಲ್ಲಿಯೂ ಆಗಿದೆ ಈಗಲೂ ಪ್ರಯತ್ನಗಳು ಸಾಗಿವೆ; ಇಂಥ ಒಂದು ಟೆಂಪ್ಟೇಷನ್ ಇವೊತ್ತಿನ ದಿವಸ ಇದೆ. ಇದನ್ನು ನಾವೆಲ್ಲರೂ ಸೇರಿ ಯಾವ ರೀತಿಯಲ್ಲಿ ಸರಿಪಡಿಸಬೇಕೆಂಬುದನ್ನು ಆಲೋಚನೆ ಮಾಡಬೇಕು. ಆ ಬಗ್ಗೆ ನಾವೆಲ್ಲರೂ ಕೂಡಿ ಚಿಂತನೆ ಮಾಡಬೇಕು. ಇವೊತ್ತು ಕರಪ್ಶನ್ ಆಡಳಿತದಲ್ಲಿ ನಡೆಯುತ್ತಾ ಇದೆ. ಬಹುಶಃ ಬಹಳಮಟ್ಟಿಗೆ ಇದು ಹೆಚ್ಚಾಗಿ ಬೆಳೆಯುತ್ತಿದೆ. ಕಳೆದ 18ವರ್ಷಗಳಲ್ಲಿ ಕರಪ್ಷನ್ ಎಷ್ಟರಮಟ್ಟಿಗೆ ಅಧಿಕಾರಿಗಳ ಮಟ್ಟದಲ್ಲಿ ಬೆಳೆದಿದೆ ಎಂದರೆ ಒಂದೇ ವರ್ಷದಲ್ಲಿ ಇದನ್ನೆಲ್ಲಾ ತೊಳೆದು ಸ್ವಚ್ಛ ಮಾಡುವುದಕ್ಕಾಗುವುದಿಲ್ಲ. ಹಾಗೂ ಯಾವ ಮುಖ್ಯಮಂತ್ರಿಯೂ ಇದನ್ನು ಮಾಡಲಾಗುವುದೆಂದು ಎದೆ ತಟ್ಟಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ನಾವು ಸುಮ್ಮನೆ ಕುಳಿತುಕೊಳ್ಳುವಂತಿಲ್ಲ ಈ ದಿಶೆಯಲ್ಲಿ ನಾವು ಇಡಬೇಕಾದಂಥ ಹೆಜ್ಜೆ ಏನಿದೆ ಅದು ನಿರ್ದಿಷ್ಟವಾಗಿರಬೇಕು ಮತ್ತು ಅದರ ಅವಶ್ಯಕತೆಯನ್ನು ಮನಗಂಡು ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಪ್ರಾರಂಭ ಮಾಡಬೇಕಾಗಿದೆ; ಅದನ್ನು ಮಾಡೋಣ. ತಮಗೆ ಹೇಳಬೇಕೆಂದರೆ ಈ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ಮಾತನ್ನು ಬಹಳ ದುಃಖದಿಂದ ನಾನು ಹೇಳಬೇಕಾಗಿದೆ. ನಮ್ಮಲ್ಲಿ ಇರುವ ಅನೇಕ ಜನ ಆಫೀಸರ್‌ಗಳು ಬೆಂಗಳೂರು ಬಿಟ್ಟು ಹೊರಗೆ ಹೋಗಲು ತಯಾರಿಲ್ಲ. ನಾವು ಈ ಬಗ್ಗೆ ದೃಢ ನಿಲುವನ್ನು ತೆಗೆದುಕೊಳ್ಳದೇಹೋದರೆ ಇದನ್ನು ಸರಿಮಾಡಲು ಆಗುವುದಿಲ್ಲ. ಐದು ವರ್ಷಗಳ ಮೇಲೆ ಬೆಂಗಳೂರಿನಲ್ಲಿ ಆಫೀಸರ್ಸ್ ಏನಿದ್ದಾರೆ ಅವರ ಸಂಖ್ಯೆಯ ಬಗ್ಗೆ ವಿವರ ನನಗೆ ಬರುವುದು ಕಷ್ಟ ಇದೆ. ಕಾರ್ಪೋರೇಷನ್‌ನಿಂದ ಪ್ರಾಧಿಕಾರಕ್ಕೆ ಮತ್ತೆ ಅಲ್ಲಿಂದ ಇನ್ನೊಂದು ಕಡೆಗೆ ಹೋಗಿ ಇಲ್ಲೇ ಸುತ್ತುತ್ತಾರೆ ಹೊರತು ಬೆಂಗಳೂರು ಬಿಟ್ಟು ಹೊರಗೆ ಹೋಗಲು ತಯಾರಿಲ್ಲ. ಕರ್ನಾಟಕ ಅಂದರೆ ಬೆಂಗಳೂರು ಅಷ್ಟೇ ಏನು ಎಂದು ನಾನು ಕೇಳುತ್ತೇನೆ. ನಮ್ಮ ಅಧಿಕಾರಿಗಳು ಬ್ಯಾಕ್‌ವರ್ಡ್ ಏರಿಯಕ್ಕೆ ಹೋಗಲು ತಯಾರಿಲ್ಲ. ಅಪ್ಪರ್‌ಕೃಷ್ಣದಲ್ಲಿ ಹೋಗಿ ಕೆಲಸ ಮಾಡಲು ನಮ್ಮ ಎಂಜಿನಿಯರುಗಳು ಸಿದ್ಧರಿಲ್ಲ. ಅಂದರೆ ಅದೇನು ಕರ್ನಾಟಕದ ಭಾಗವಲ್ಲವೇ ಆ ಕೆಲಸ ಮುಗಿದು ಅಲ್ಲಿ ಲಕ್ಷಾವಧಿ ಎಕರೆಗೆ ನೀರಾವರಿಯಾಗಿ ಧಾನ್ಯದ ಉತ್ಪನ್ನ ಹೆಚ್ಚಿದರೆ ನಾಲ್ಕು ಕೋಟಿ ಜನರಿಗೆ ಹೊಟ್ಟೆ ತುಂಬುವುದಿಲ್ಲವೇ ಬರೀ ತಮ್ಮ ಜಿಲ್ಲೆ ತಮ್ಮ ತಾಲ್ಲೂಕಿನಲ್ಲಿ ಕೆಲಸ ಮಾಡುವುದನ್ನು ನಮ್ಮ ಅಧಿಕಾರಿಗಳು ಅಭ್ಯಾಸ ಮಾಡಿಕೊಂಡಿದ್ದಾರೆಯೇ ಹೊರತು ಅದು ಬಿಟ್ಟು ಕರ್ನಾಟಕದ ಸರ್ಕಾರದ ಮಂತ್ರಿಮಂಡಲದವರು ಏನು ಯೋಜನೆ ಮಾಡುತ್ತಿದ್ದಾರೆ ಅದನ್ನು ಕಾರ್ಯಗತಗೊಳಿಸಲು ಎಲ್ಲಿಗೆ ಬೇಕಾದರೂ ಹೋಗಲು ಸಿದ್ಧ ಎಂದು ಹೇಳುವ ವಾತಾವರಣ ಇಂದು ನನಗೆ ಕಂಡುಬರುತ್ತಿಲ್ಲ. ಒಂದು ಟ್ರಾನ್ಸ್‌ಫರ್ ಮಾಡಿದರೆ ಅದನ್ನು ಕ್ಯಾನ್ಸಲ್‌ಮಾಡುವ ಪ್ರಯತ್ನಗಳು ನಡೆಯುತ್ತಿವೆಯೇ ಹೊರತು ಸರ್ಕಾರದ ಆಜ್ಞೆಯನ್ನು ಒಪ್ಪಿಕೊಳ್ಳೋಣ ಎನ್ನುವ ಪ್ರವೃತ್ತಿ ಇಂದು ಕಾಣುತ್ತಿಲ್ಲ. ಅಷ್ಟೇ ಅಲ್ಲ ನಿಮಗೆ ಹೇಳಬೇಕಾದರೆ ಅನೇಕ ಜನ ಆಫೀಸರ್ಸ್ ಸಿಕ್ಕಾಪಟ್ಟೆ ಪ್ರಾಪರ್ಟಿ ಮಾಡಿದ್ದಾರೆ. ಲ್ಯಾಂಡ್ ರೀಫಾರ್ಮ್ಸ್ ಬಂದ ಮೇಲೆ ಆಫೀಸರ್ಸ್ ಭೂಮಿ ಕೊಂಡುಕೊಂಡು ಒಕ್ಕಲುತನ ಮಾಡುವುದರ ಜೊತೆಗೆ ಸರ್ಕಾರಿ ಕೆಲಸದಲ್ಲೂ ಮುಂದುವರಿದಿದ್ದಾರೆ. ತುಂಗಭದ್ರಾ ಏರಿಯಾದಲ್ಲಿ ಅನೇಕ ಇಂಜಿನಿಯರ್‌ಗಳು ಬೆಳಿಗ್ಗೆ ಎದ್ದು ಆ ಭಾಗದ ನಾಲಾದಲ್ಲಿ ನೀರು ಬಿಡಲು

ಹೋಗುವದೋ ಅಥವಾ ತಮ್ಮ ಗದ್ದೆಗಳಿಗೆ ನೀರು ಬಿಡಲು ಹೋಗುತ್ತಾರೋ ಎಂದು ನನಗೆ ಸಂಶಯ ಬರುತ್ತಿದೆ. ಅನೇಕ ಜನ ಆಫೀಸರ್ಸ್ ಬೇನಾಮಿ ಹೆಸರಿನಲ್ಲಿ ಸೈಟ್ಸ್ ಮಾಡಿಕೊಂಡಿದ್ದಾರೆ. ದೂರದ ಸಂಬಂಧಿಕರ ಹೆಸರಿನಲ್ಲಿ ಆಸ್ತಿ ಮಾಡಿರುವುದನ್ನು ನಾವು ಪತ್ತೆ ಹಚ್ಚಬೇಕಾಗಿದೆ. ಈ ಬಗ್ಗೆ ನಾನು ಚೀಫ್ ಸೆಕ್ರೆಟರಿಯವರಿಗೆ ಹೇಳಿದ್ದೇನೆ. ಈಗ ನಮ್ಮ ಮುಂದಿರುವ ಪ್ರಶ್ನೆ ಸಣ್ಣ ಮೀನು ಹಿಡಿಯುವುದೋ ಅಥವಾ ದೊಡ್ಡ ಶಾರ್ಕ್ ಮೀನು ಹಿಡಿಯಬೇಕೋ ಎಂದು ನಾನು ಪೇಪರ್‌ನಲ್ಲಿ ಓದುತ್ತೇನೆ ಒಬ್ಬ ಕ್ಲರ್ಕ್ ಒಬ್ಬ ಹೆಡ್ ಕಾನ್‌ಸ್ಟೇಬಲ್ 100 ರೂ ಲಂಚ ತೆಗೆದುಕೊಳ್ಳುವಾಗ ಲೋಕಾಯುಕ್ತದ ಕೈಗೆ ಸಿಕ್ಕಿಬಿದ್ದು ಸಸ್ಪೆಂಡ್ ಆದ ಎಂದು. ಕೇವಲ ಇಂಥವರನ್ನು ಹಿಡಿಯುತ್ತಿದ್ದಾರೆಯೇ ಹೊರತು ಕೋಟ್ಯಾವಧಿ ರೂಪಾಯಿ ಮಾಡಿಕೊಂಡು ಜೇಬು ತುಂಬಿಕೊಂಡು ಇವತ್ತು ಲೀಡರ್ ಆಗಬೇಕೆಂದು ಮೆರೆಯುತ್ತಿರುವವರನ್ನು ಬಿಡುತ್ತಿದ್ದೀರಲ್ಲ ಎಂಬ ಭಾವನೆ ಜನರಲ್ಲಿ ಇದೆ. ಅದಕ್ಕಾಗಿ ನಾನು ಎದೆತಟ್ಟಿ ಹೇಳುತ್ತೇನೆ ಮತ್ತು ಅಭಿಮಾನದಿಂದ ಹಾಗೂ ಗರ್ವದಿಂದ ಹೇಳುತ್ತಿದ್ದೇನೆ. I have started this elimination of the corruption process from the top. ಮೊದಲ ಸಲ ಕರ್ನಾಟಕದ ಇತಿಹಾಸದಲ್ಲಿ ಸೀನಿಯರ್ ಐಎಎಸ್ ಮತ್ತು ಐಪಿಎಸ್ ಆಫೀಸರ್ಸ್ ಸಸ್ಪೆಂಡ್ ಆಗಿರುವಂಥಾದ್ದನ್ನು ಇದೇ ಕಾಲದಲ್ಲಿ ನೀವು ನೋಡುತ್ತೀರೇ ಹೊರತಾಗಿ ಮತ್ಯಾವ ಕಾಲದಲ್ಲೂ ಇಲ್ಲ. Let us start from there. ಅಂದರೆ ಮೇಲುಗಡೆ ಇರುವವನು ಕರಪ್ಟ್ ಇಲ್ಲದಿರಬಹುದು. ನಾನು ಒಪ್ಪುತ್ತೇನೆ. ಅಧಿಕಾರದಲ್ಲಿ ಕೂತ ಮುಖ್ಯ ಮಂತ್ರಿಯೇ ಕರ್‌ಪ್ಟ್ ಆದರೆ What moral authority he has to advise the people to be honest? ನಾನೋ ಈ ವಿಧಾನಸೌಧದಲ್ಲಿ ಕೂತು ಬೆಳಗಿನಿಂದ ಸಂಜೆಯವರೆಗೆ ಸ್ಕಾಂಡಲ್ಸ್ ಮಾಡಿ ಜೇಬಲ್ಲಿ ದುಡ್ಡು ತುಂಬಿಕೊಳ್ಳುವ ಕೆಲಸ ಮಾಡಿದರೆ ನಮ್ಮ ಮಾತಿಗೆ ಬೆಲೆ ಇರುತ್ತದೆಯೇ ನನ್ನ ಮಾತನ್ನು ಅಧಿಕಾರಿಗಳು ಕೇಳುತ್ತಾರೆಯೇ ನಾನು ಏನಾದರೂ ಹೇಳಿದರೆ ಆಗಬಹುದು ಎಂದು ಹೇಳಿ ಎದ್ದುಹೋಗುತ್ತಾರೆ. ಆದರೆ ಮನಸ್ಸಿನಲ್ಲಿ ಏನು ಅಂದುಕೊಳ್ಳುತ್ತಾರೆಂದರೆ ಮಾರಾಯ ನಾವೇನೋ ತಿನ್ನುತ್ತಿರಬಹುದು ಆದರೆ ನೀನು ಅದರ ನೂರು ಪಟ್ಟು ತಿನ್ನುತ್ತಿದ್ದೀಯಾ ಎಂದು ಮಾತನಾಡಿಕೊಳ್ಳಬಹುದು. ಅದರ ಸಲುವಾಗಿ ನಾನು ಇವತ್ತು ಎಷ್ಟು ಜನ ನಮ್ಮ ಸೀನಿಯರ್ಸ್ ಆಫೀಸರ್ಸ್‌ಗಳು ಇದ್ದಾರೆ ಅವರು ಸರ್ವೀಸ್‌ಗೆ ಜಾಯಿನ್ ಆಗುವಾಗ ಏನು ರಿಟರ್ನ್ ಕೊಟ್ಟಿದ್ದರು ಇವತ್ತು ಏನು ರಿಟರ್ನ್ ಕೊಟ್ಟಿದ್ದಾರೆ ಸರ್ವೀಸ್‌ಗೆ ಜಾಯಿನ್ ಆಗುವ ಮುನ್ನ ಅವರ ಹತ್ತಿರ ಏನು ಆಸ್ತಿ ಇತ್ತು ಇವತ್ತು ಏನು ಆಸ್ತಿ ಇದೆ ಇದನ್ನು ಪೂರ್ತಿಯಾಗಿ ನಾವು ಸರಿಯಾಗಿ ತಪಾಸಣೆ ಮಾಡಬೇಕು ಎಂದು ನಮ್ಮ ಚೀಫ್ ಸೆಕ್ರೆಟರಿಯವರಿಗೆ ಹೇಳಿದ್ದೇನೆ ಆ ಕೆಲಸವನ್ನು ಅವರು ಮಾಡುತ್ತಾರೆ. ಅದೇ ರೀತಿಯಿಂದ ಇನ್ನು ಕೆಲವು ಆಡಳಿತದಲ್ಲಿ ಸುಧಾರಣೆ ಮಾಡುವ ಬಗ್ಗೆ ಹೇಳಬೇಕಾಗಿದೆ. ಒಂದು ಮಾತನ್ನು ಹೇಳುವುದು ಬಿಟ್ಟೆ ಮುಂದೆ ಹೊರಟುಹೋದೆ. ಈ ಒಂದು ವರ್ಗಾವರ್ಗಿಯಲ್ಲಿ ನನ್ನ ಕ್ಯಾಲ್‌ಕ್ಯುಲೇಷನ್ ತಪ್ಪಾಗಿದೆ ಸ್ವಲ್ಪಮಟ್ಟಿಗೆ ಜಾರಿದ್ದೇನೆ; ಇದನ್ನೂ ಸಹ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನಗೆ ಈ ಮಟ್ಟಕ್ಕೆ ಬರುತ್ತದೆ ಎಂದು ನನಗೆ ಅನಿಸಿರಲಿಲ್ಲ. ಎಲ್ಲಾ ನಮ್ಮ ಸಹೋದ್ಯೋಗಿಗಳು ನಾನು ಕೂತು ಇದಕ್ಕೆ ನಾವು ಏನಾದರೂ ಒಂದು ಇತಿಶ್ರೀಯನ್ನು ಆಡಬೇಕು ಇದಕ್ಕೆ ಪರದೆಯನ್ನು ಎಳೆಯಬೇಕು ಎಂದು ನಿರ್ಣಯ ಮಾಡಿಕೊಂಡು 31ನೇ ಮೇ 1990ಕ್ಕೆ ನಾವು ನಿರ್ಣಯವನ್ನು ಮಾಡಿದ್ದೇವೆ. ಇನ್ನು ಮುಂದೆ ಯಾವ ತರಹದ ಟ್ರಾನ್ಸ್‌ಫರ್ ಕೂಡಾ ಈಗ ಏನು ಮಾಡಿದ್ದೇವೆ ಅದರಲ್ಲಿ ಬದಲಾವಣೆ ಮಾಡಬಾರದು ಮತ್ತು ಇನ್ನೇನಾದರೂ ಇದರಲ್ಲಿ ಅನ್ಯಾಯಗಳಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಮುಂದೆ ಪ್ರಯತ್ನ ಮಾಡಬೇಕು ಎನ್ನುವಂಥದ್ದು. ಅದು ಯಾವಾಗ ಮಾಡಬೇಕು ಎನ್ನತಕ್ಕಂತದ್ದು ಇಲ್ಲ. ಏಕೆಂದರೆ ಇದನ್ನು ಏನಾದರೂ ಯಾವಾಗ ಮಾಡುತ್ತೇವೆ ಎಂದು ಇವತ್ತು ಘೋಷಣೆಯನ್ನು ಮಾಡಿದರೆ ಇನ್ನೊಂದು ಫ್ಲಡ್ ಗೇಟ್ ಓಪನ್ ಮಾಡಿದ ಹಾಗೆ ಆಗುತ್ತದೆ. ನನಗೆ ಗೊತ್ತಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ತಾವು ಏನು ಬಹಳ ಬೇಜಾರಿನಿಂದ ಹೇಳುತ್ತಿದ್ದೀರಿ; ಈ ಬಗ್ಗೆ Openly ನಾನು ಹೇಳುತ್ತಿದ್ದೇನೆ ಇದರಲ್ಲಿ ನಾನು ತಪ್ಪು ಮಾಡಿದ್ದೇನೆ. ಇದರಲ್ಲಿ ನನ್ನ ಕ್ಯಾಲ್‌ಕ್ಯುಲೇಷನ್ ತಪ್ಪಾಗಿದೆ. ಅದಕ್ಕಾಗಿ ಇನ್ನು

ಮುಂದೆ ಇಂಥ ಒಂದು ತಪ್ಪು ಮಾಡಲಾರದಂತೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ನಾನು ವಿಚಾರ ಮಾಡುತ್ತಿದ್ದೇನೆ. ಸ್ವಲ್ಪಮಟ್ಟಿಗೆ ವರ್ಗಾವರ್ಗಿಯಲ್ಲಿ ಜಾರಿ ಬಿದ್ದುದಕ್ಕಾಗಿ ಇವತ್ತು ಈ ಸದನದಿಂದ ಈ ಒಂದು ಕುರ್ಚಿಯಿಂದ ಈ ಒಂದು ಸ್ಥಳದಿಂದ ಕರ್ನಾಟಕದ ನಾಲ್ಕು ಕೋಟಿ ಜನತೆಗೆ ನಾನು ಕ್ಷಮೆ ಕೇಳುತ್ತೇನೆ. ಅದನ್ನೂ ನಾನು ಇವತ್ತು ಮಾಡುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ಇಷ್ಟು ಹೇಳಿದ ಮೇಲೆ ಇನ್ನು ಅಡ್ಮಿನಿಸ್ಟ್ರೇಷನ್‌ನಲ್ಲಿ ಸುಧಾರಣೆಯನ್ನು ತರುವ ಸಲುವಾಗಿ ಒಂದು ಹೊಸ ಆರ್ಗನೈಜೇಷನನ್ನು ಮಾಡಿದ್ದೇವೆ. ಇತ್ತೀಚೆಗೆ ಅದು ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದೆ. 'Bureau of Efficiency Audit and Vigilance' ಅದನ್ನು ನಾವು ಸ್ಥಾಪನೆ ಮಾಡಿದ್ದು 21-5-1990ಕ್ಕೆ. ಅದು 1-6-1990 ರಿಂದ ಕೆಲಸ ಪ್ರಾರಂಭ ಮಾಡಿದೆ. ಇದೇನು ಹೊಸ ವಿಚಾರ ಅಲ್ಲ. ಹೈದರಾಬಾದ್‌ನಲ್ಲಿ ಇಂಥ ಒಂದು ಆರ್ಗನೈಜೇಷನ್ ಇತ್ತು. ಮತ್ತು ಅವರ ಕೆಲಸ ಏನೆಂದರೆ ಅವರು ಎಲ್ಲಿಯಾದರೂ ಹೋಗಿ ಯಾವುದೋ ಡಿಪಾರ್ಟ್‌ಮೆಂಟ್‌ನಲ್ಲಿ ಸರಿಯಾಗಿ ವ್ಯವಹಾರ ನಡೆಯುತ್ತಿಲ್ಲ ಸರಿಯಾಗಿ ಕೆಲಸಕಾರ್ಯಗಳು ನಡೆಯುತ್ತಿಲ್ಲ ಎಂದು ತಿಳಿದರೆ ಯಾರು ಹೇಳಬೇಕಾದಂಥ ಅವಶ್ಯಕತೆ ಇಲ್ಲ. ಇದು ಒಂದು ಗೌರ್ನಮೆಂಟ್‌ನಲ್ಲಿ 'ವಾಚ್ ಡಾಗ್' ಇದ್ದಹಾಗೆ. ಎಲ್ಲಿಗೆ ಬೇಕಾದರೂ ಹೋಗಬಹುದು ನೋಡಬಹುದು ಯಾವುದು ಬೇಕಾದರೆ ಫೈಲ್ ತರಿಸಬಹುದು ನೋಡಬಹುದು ಏನಾದರೂ ಅವ್ಯವಹಾರ ಆಗಿದೆ ಎನ್ನುವುದನ್ನು ತಿಳಿದುಕೊಳ್ಳಬಹುದು ಅಥವಾ ಫೈಲ್ ವಿಲೇವಾರಿ ಸರಿಯಾಗಿ ಆಗುತ್ತಿದೆಯೇ ಇಲ್ಲವೇ ಏನು ಎಂದು ಹೈದರಾಬಾದ್‌ನಲ್ಲಿ ಎಫಿಸಿಯೆನ್ಸಿ ಆಡಿಟ್ ವ್ಯಾನ್ ಹೋಗಿದೆ ಎಂದು ಹೇಳಿದರೆ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂದು ಜನರು ಹುಡುಕುತ್ತಿದ್ದರು ಮತ್ತು ಜನರು ನಡುಗುತ್ತಿದ್ದರು. ನಮ್ಮಲ್ಲಿ ಯಾವಾಗ ಬರುತ್ತಾರೋ ನಿಮ್ಮಲ್ಲಿ ಯಾವಾಗ ಬರುತ್ತಾರೋ ಎನ್ನುವಂಥ ಭಯ ಇತ್ತು. ಆದರೆ ಇವತ್ತು ಆ ಭಯ ಇಲ್ಲ. ರೂಲ್ಸ್ ಏನು ಹೇಳುತ್ತದೆ ಮೇಲಿನ ಅಧಿಕಾರಿಗಳು ಇಷ್ಟು ದಿವಸ ಇನ್ಸ್‌ಪೆಕ್ಷನ್ ಮಾಡಬೇಕು ಎಂದು ಇದೆ. ಪಾಪ ಅವನು ಏನು ಮಾಡುತ್ತಾನೆ ಎಂದರೆ ಪ್ರೋಗ್ರಾಮನ್ನು ಕಳುಹಿಸಿ ಇನ್ಸ್‌ಪೆಕ್ಷನ್‌ಗೆ ಹೋಗುತ್ತಾನೆ. ಅಲ್ಲಿ ಒಳ್ಳೆಯ ಸರಬರಾಜು ಆಯಿತು ಎಂದು ಹೇಳಿದರೆ 'Everything is alright.' ಎಂದು ಬರೆದು ಹೊರಟು ಹೋಗುತ್ತಾನೆ. ಆದಕ್ಕಾಗಿ ಇದು ಹೋಗಬೇಕು. ಪ್ರತಿಯೊಂದು ನಮ್ಮ ಇಲಾಖೆಯಲ್ಲಿ ಸರಿಯಾಗಿ ಕೆಲಸಕಾರ್ಯಗಳು ಆಗುವುದಕ್ಕೆ ಒಂದು ಭಯದ ವಾತಾವರಣ ಇರಬೇಕು ಎನ್ನುವ ದೃಷ್ಟಿಯಿಂದ ಇದು ಒಂದು ಎಫಿಸಿಯೆನ್ಸಿ ಆರ್ಗನೈಜೇಷನನ್ನು ಮಾಡಿದ್ದೇವೆ. ನೋಡೋಣ. ಯಾವರೀತಿ ಕೆಲಸ ಮಾಡುತ್ತದೆಂದು ನೋಡೋಣ. ಇದರಿಂದ ಏನಾದರೂ ನಮ್ಮ ಅಡ್ಮಿನಿಸ್ಟ್ರೇಷನ್‌ನಲ್ಲಿ ಎಫಿಸಿಯೆನ್ಸಿ ಬರುವುದಕ್ಕೆ ಸಾಧ್ಯ ಇದೆಯೇ ಎನ್ನತಕ್ಕಂಥ ಒಂದು ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಇದನ್ನು ಈಗಾಗಲೇ ಅಸ್ತಿತ್ವದಲ್ಲಿ ತಂದಾಗಿದೆ. ಒಳ್ಳೆಯ ಸೀನಿಯರ್ಸ್ ಆಫೀಸರ್ಸ್‌ಗೆ ನಾನು ಇದರಲ್ಲಿ ಜವಾಬ್ದಾರಿಯನ್ನು ಕೊಟ್ಟಿದ್ದೇನೆ. ಅವರು ಕೆಲಸ ಮಾಡುವುದಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಮತ್ತು ಇದಲ್ಲದೇ ಈ ಹಿಂದೆ ನಾನು ಏನು ಹೇಳಿದೆ ಅದನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಸ್ಕ್ರೀನಿಂಗ್ ಕಮಿಟಿ ಮಾಡುತ್ತೇನೆ ಎಂದು ಹೇಳಿದ್ದೆ. ಸ್ಕ್ರೀನಿಂಗ್ ಕಮಿಟಿಯನ್ನು ಮಾಡಿ ಯಾರು ಅಧ್ಯಕ್ಷರು ಯಾರು ಇದ್ದಾರೆ ಯಾರು ಅಪ್ರಮಾಣಿಕರು ಇದ್ದಾರೆ ಯಾರು ಇವತ್ತು ಅಡ್ಮಿನಿಸ್ಟ್ರೇಷನ್‌ಗೆ ಹೊರೆ ಆಗಿದ್ದಾರೆ ಸ್ವತ್ತಾಗಿಲ್ಲ ಅಂಥವರನ್ನು ನಮಸ್ಕಾರ ಅಪ್ಪ ನಮ್ಮದು ನಿಮ್ಮದು ಸಹವಾಸ ಸಾಕು ಮನೆಗೆ ಹೋಗಿ ಎಂದು ಕಂಪಲ್‌ಸರಿಯಾಗಿ ರಿಟೈರ್‌ಮೆಂಟ್ ಮಾಡುವುದಕ್ಕೆ ರೂಲ್ಸ್‌ನಲ್ಲಿ ಏನು ಒಂದು ಅವಕಾಶ ಇದೆ ಅದನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಸ್ಕ್ರೀನಿಂಗ್ ಕಮಿಟಿಯನ್ನು ಪೂರ್ತಿಯಾಗಿ ಮಾಡಿಲ್ಲ. ಆದರೆ ಇವತ್ತಿನ ದಿವಸ ಈ ಸದನದಲ್ಲಿ ಘೋಷಣೆಯನ್ನು ಮಾಡುತ್ತಿದ್ದೇನೆ ಏಕೆಂದರೆ ಈ ಸ್ಕ್ರೀನಿಂಗ್ ಕಮಿಟಿಯು ಬಗ್ಗೆ ಕೂಡಾ ಯಾರಿಗೂ ಸಂಶಯ ಬರಬಾರದು. ಏನೋ ತನಗೆ ಬೇಕಾದಂತಹ ಅಧಿಕಾರಿಗಳನ್ನು ಹಾಕಿಕೊಂಡಿದ್ದಾರೆ. ಆಗಲಾರದವರ ಕುತ್ತಿಗೆ ಒತ್ತುತ್ತಿದ್ದಾರೆಂಬ ಭಾವನೆ ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಬರಬಾರದು. ನಿಷ್ಪಕ್ಷಪಾತವಾಗಿ ಈ ಒಂದು ಸ್ಕ್ರೀನಿಂಗ್ ಕಮಿಟಿಯು

ಕೆಲಸಕಾರ್ಯಗಳನ್ನು ಮಾಡಬೇಕು ಎನ್ನುವ ಉದ್ದೇಶದಿಂದ ನಾನು ನಿವೃತ್ತರಾದ ಜಸ್ಟೀಸ್ ಬೋಪಣ್ಣ ಅವರಿಗೆ ಒಂದು ಸೌಂಡ್ ಮಾಡಿದ್ದೇನೆ. ನಮ್ಮ ಚೀಫ್ ಸೆಕ್ರೆಟರಿಯವರಿಗೆ ಹೇಳಿದ್ದೇನೆ. ತಾವು ಈ ಜವಾಬ್ದಾರಿಯನ್ನು ಒಪ್ಪಿಕೊಳ್ಳಬೇಕು ಎಂದು ಅವರಿಗೆ ಹೇಳಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ. ಶ್ರೀ ಬೋಪಣ್ಣ ಅವರ ಅಧ್ಯಕ್ಷತೆಯಲ್ಲಿ ಒಂದು ಸ್ಕ್ರೀನಿಂಗ್ ಕಮಿಟಿ ಇದೆ ಅದಕ್ಕೆ ಇನ್ನಿಬ್ಬರು ಸೀನಿಯರ್ ಮೆಂಬರ್ಸ್ ಬೇಕಾಗಿದೆ. ನಮ್ಮ ಸಮಾಜದಲ್ಲಿ ಒಂದು ಸ್ಥಾನಮಾನವನ್ನು ಪಡೆದುಕೊಂಡಂತಹ ಇಬ್ಬರು ವ್ಯಕ್ತಿಗಳನ್ನು ನಾನು ಐಡಂಟಿಫೈ ಮಾಡಿದ್ದೇನೆ. ಆದರೆ ದುರ್ದೈವ ಅವರು ಊರಿನಲ್ಲಿಲ್ಲ. ಆದಕ್ಕಾಗಿ ಅವರನ್ನು ಕೇಳಿಕೊಳ್ಳಲಾರದೆ ನಾನು ಅವರ ಹೆಸರುಗಳನ್ನು ಅನೌನ್ಸ್ ಮಾಡುವುದು ಸರಿಯಲ್ಲ ಎಂದು ಭಾವಿಸಿದ್ದೇನೆ. ಇನ್ನು ಕೆಲವೇ ದಿವಸಗಳಲ್ಲಿ ಒಂದು ಸ್ಕ್ರೀನಿಂಗ್ ಕಮಿಟಿ ಜಸ್ಟೀಸ್ ಬೋಪಣ್ಣನವರ ನಾಯಕತ್ವದಲ್ಲಿ ಇಲ್ಲಿ ಕೆಲಸ ಮಾಡುತ್ತದೆ. ಅನೇಕ ಅಧ್ಯಕ್ಷರು ಮತ್ತು ಅವರ ರೆಕಾಡ್ಸ್ ಸರಿಯಾಗಿ ಇರಲಾರದಂತಹಕ ಅಧಿಕಾರಿಗಳ ಕೇಸ್‌ಗಳನ್ನು ಅವರ ಮುಂದೆ ತೆಗೆದುಕೊಂಡು ಹೋಗಿ ಅವರು ಹೇಳಿದ ಹಾಗೆ ಅವರ ರೆಕಮೆಂಡೇಷನ್ಸ್ ಅನ್ನು ಸರ್ಕಾರ ಜಾರಿಗೆ ತರಬೇಕು ಎನ್ನುವ ಉದ್ದೇಶದಿಂದ ಈ ಒಂದು ಕಮಿಟಿಯನ್ನು ಕೂಡ ನಾವು ಮಾಡುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮೆಂಬರ್ಸ್ ಯಾರು ಎಂದು ಹೇಳಲಿಲ್ಲ.

ಶ್ರೀ ವೀರೇಂದ್ರಪಾಟೀಲ್:- ನಾನು ಮೆಂಬರ್ಸ್ ಬಗ್ಗೆ ವಿಚಾರ ಮಾಡಿದ್ದೇನೆ. ಆದರೆ ಅವರ ಒಪ್ಪಿಗೆ ತಿಳಿದುಕೊಳ್ಳಲಾರದೇ ಅನೌನ್ಸ್ ಮಾಡುವುದು ಕಷ್ಟ ಆಗುತ್ತದೆ. ಆದಕ್ಕಾಗಿ ಸಾಧ್ಯವಾದರೆ ಅವರ ಒಪ್ಪಿಗೆಯನ್ನು ತೆಗೆದುಕೊಂಡೇ ಇವತ್ತು ಅನೌನ್ಸ್ ಮಾಡೋಣ ಎನ್ನುವ ದೃಷ್ಟಿಯಿಂದ ಇಟ್ಟುಕೊಂಡಿದ್ದೆ. ಆದರೆ ಅವರು ಊರಿನಲ್ಲಿ ಇಲ್ಲ. 'They are out of town.' ಎಂದು ಹೇಳಿದ್ದಾರೆ. ಅದರ ಸಲುವಾಗಿ ಅನೌನ್ಸ್ ಮಾಡುವುದರಲ್ಲಿ ಸ್ವಲ್ಪ ನಿಧಾನ ಆಗುತ್ತಿದೆ. ಆದರೆ ಇದನ್ನು ಅಸ್ತಿತ್ವದಲ್ಲಿ ಆದಷ್ಟು ಜಾಗ್ರತೆಯಾಗಿ ತರುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನು ತಮಗೆ ಗೊತ್ತಿದೆ; ಸರ್ಕಾರದ ಹತ್ತಿರ ಸಾಕಷ್ಟು ವೆಹಿಕಲ್ಸ್ ಇವೆ. ವಿರೋಧ ಪಕ್ಷದ ನಾಯಕರು ಹೇಳಿದರು ಒಬ್ಬ ಡೆಪ್ಯುಟಿ ಸೆಕ್ರೆಟರಿ ಅಂಡರ್‌ಸೆಕ್ರೆಟರಿ ಎಲ್ಲರ ಹತ್ತಿರ ಸಹ ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಕೂಡ ವೆಹಿಕಲ್ಸ್ ಇವೆ. ಅನಾವಶ್ಯಕವಾದಂತಹ ವೆಹಿಕಲ್ಸ್ ಅನ್ನು ಇನ್ನುಮುಂದೆ ವಿತ್‌ಡ್ರಾ ಮಾಡಿ ಅದಕ್ಕೆ ಚೀಫ್ ಸೆಕ್ರೆಟರಿ ಅವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿತ್ತು. ಅವರು ಶಿಫಾರಸ್ಸುಗಳನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಬಂದು ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಈಗ ಯಾರ್ಯಾರು ಟೂರ್ ಮಾಡುತ್ತಾರೆ ಅವರಿಗೆ ಒಂದೊಂದು ವೆಹಿಕಲ್ಸ್ ಕೊಡುವುದರ ಬದಲು ಟ್ರಾವೆಲಿಂಗ್ ಅಲೋಯೆನ್ಸ್ ಕೊಡುವಂತಹ ದೃಷ್ಟಿಯನ್ನು ಇಟ್ಟುಕೊಂಡಿದ್ದೇವೆ. ಇದರಲ್ಲಿ ಪೆಟ್ರೋಲ್, ಡೀಸಲ್ ಉಳಿತಾಯ ಆಗುವುದಲ್ಲದೆ ವಿನಾ ಕಾರಣ ಏನು ಖರ್ಚು ಈ ವೆಹಿಕಲ್ಸ್‌ಗಳಿಗೆ ಆಗುತ್ತಿತ್ತು. ಅದನ್ನು ತಡೆಹಿಡಿಯಲು ಸ್ವಲ್ಪ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ 14 ಡಿಪಾರ್ಟ್‌ಮೆಂಟ್‌ಗಳಲ್ಲಿ ಕಂಪ್ಯೂಟರೈಸೇಷನ್ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಆ ಕೆಲಸ ಯಾವ ರೀತಿ ಮಾಡಬೇಕು ಎಂದು ಈಗಾಗಲೇ ಸರ್ಕಾರದ ಗಮನದಲ್ಲಿದೆ. ಅಲ್ಲಿಂದ ಇನ್ನು ಒಂದು ವಿಷಯ ಅಂದರೆ Delegation of powers to officers at different levels. ಈಗ ಏನು ಆಗಿದೆ ಅಂದರೆ ತಮ್ಮ ಕಾಲಕ್ಕೂ ಇದು ಶುರು ಆಯಿತು. ನಾನು ದೋಷಾರೋಪಣೆ ಮಾಡಬೇಕೆಂದಲ್ಲ. ಸಬ್ ಇನ್ಸ್‌ಪೆಕ್ಟರ್ ಟ್ರಾನ್ಸ್‌ಫರ್ ಬಗ್ಗೆ ಸೆಕ್ರೆಟರಿಯೇಟ್‌ನಿಂದ ಆರ್ಡರ್ ಆಗುತ್ತಿತ್ತು. ಅಸಿಸ್ಟೆಂಟ್ ಇಂಜಿನಿಯರ್ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್, ಟ್ರಾನ್ಸ್‌ಫರ್ ಕೂಡ ಮಂತ್ರಿಗಳೇಮಾಡಬೇಕಾಗಿತ್ತು. ನನಗೆ ಅನಿಸುತ್ತದೆ ಈ ಅಧಿಕಾರ ನಮಗೆ ಬೇಡ. ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆಯನ್ನು ಎಸ್‌ಪಿ ತನ್ನ ಜಿಲ್ಲೆಯಲ್ಲಿ ಟ್ರಾನ್ಸ್‌ಫರ್ ಮಾಡಿಕೊಳ್ಳಲಿ. ಅವರಿಗೆ ಯಾರು ಬೇಕು. ಯಾರನ್ನು ಇಟ್ಟುಕೊಳ್ಳಬೇಕು. ಯಾರನ್ನು ಎಲ್ಲಿಡಬೇಕು ಯಾರನ್ನು ತೆಗೆಯಬೇಕು ಎಂಬುದನ್ನು ಅವರೇ ನಿರ್ಧಾರಮಾಡಲಿ ಏಕೆಂದರೆ ಆ ಜಿಲ್ಲೆಯ ಜವಾಬ್ದಾರಿ ಅವರ ಮೇಲಿರುತ್ತದೆ. ಅದೇ ರೀತಿ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದರೆ ಅಲ್ಲಿರುವಂತಹ

ಡಿ.ಐ.ಜಿ ಅಥವಾ ಐ.ಜಿ.ಪಿ ಮಾಡಿಕೊಳ್ಳಲಿ. ಎಸ್‌ಪಿ ಮತ್ತು ಮೇಲ್ಪಟ್ಟು ಇರುವ ಅಧಿಕಾರಿಗಳ ಟ್ರಾನ್ಸ್‌ಫರ್ ಬಗ್ಗೆ ಮಾತ್ರ ಸರ್ಕಾರಕ್ಕೆ ಬರಬೇಕು. ಇದನ್ನು ಉದಾಹರಣೆಗೆ ಹೇಳುತ್ತಿದ್ದೇನೆ. ಅದೇ ರೀತಿ ಎಕ್ಸಿಕ್ಯೂಟೀವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರನ್ನು ಚೀಫ್ ಇಂಜಿನಿಯರ್ ತನ್ನ ಜೋನ್‌ನಲ್ಲಿ ಯಾರನ್ನು ಇಟ್ಟುಕೊಳ್ಳಬೇಕು ಯಾರನ್ನು ತೆಗೆಯಬೇಕು ಎನ್ನುವುದನ್ನು ಅವರೇ ನಿರ್ಣಯ ಮಾಡಿಕೊಳ್ಳಲಿ. ಆದರೆ ನಾವು ಗೈಡ್‌ಲೈನ್ಸ್ ಕೊಡುತ್ತೇವೆ. ಒಬ್ಬರನ್ನು ಬದಲಾಯಿಸಬೇಕಾಗಿದ್ದರೆ ಈ ಕಂಡೀಷನ್ಸ್‌ನಲ್ಲಿಯೇ ಬದಲಾಯಿಸಬೇಕು. ಅವನಿಗೆ ಮನಸ್ಸಿಗೆ ಬಂದಹಾಗೆ ಬದಲಾಯಿಸಲು ಶುರುವಾದರೆ ಮತ್ತು ಅಲ್ಲೂ ಕೂಡ ಮಾಮುಲು ವಸೂಲಿ ಮಾಡಲು ಶುರು ಆದರೆ ಮತ್ತಷ್ಟು ಅದು ಹೊಲಸಾಗುತ್ತದೆ. ಆದ್ದರಿಂದ ಗೈಡ್‌ಲೈನ್ಸ್ ಹಾಕಿ ಅದಕ್ಕೆ ತಪ್ಪಿತಸ್ಥರು ಆದರೆ ಅವರನ್ನು ಶಿಕ್ಷೆ ಮಾಡುವಂತಹ ಅವಕಾಶ ನಾವು ಇಟ್ಟುಕೊಂಡು ಈ ರೀತಿ ಅಧಿಕಾರ ವಿಕೇಂದ್ರೀಕರಣ ಟ್ರಾನ್ಸ್‌ಫರ್ಸ್ ಬಗ್ಗೆ ಮಾಡಬೇಕು ಎನ್ನುವ ವಿಚಾರ ಮಾಡಿದ್ದೇನೆ. ಇದರ ಸಲುವಾಗಿ ಈಗಾಗಲೇ ಮುಖ್ಯ ಕಾರ್ಯದರ್ಶಿಗಳಿಗೆ ಹೇಳಿದ್ದೇನೆ. ಈ ಕೆಲಸ ಯಾವರೀತಿ ಮಾಡಬೇಕು ಎನ್ನುವುದನ್ನು ಕೂಡ ಅವರು ಮಾಡುತ್ತಿದ್ದಾರೆ. ಅಲ್ಲಿಂದ ಕೆಲವು ಡಿಪಾರ್ಟ್‌ಮೆಂಟ್‌ಗಳನ್ನು ನಾನು ಆರಿಸಿಕೊಂಡು ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿಯನ್ನು ಪ್ರೈವೇಟ್‌ನವರಿಗೆ ವಹಿಸಿ ಆ ಡಿಪಾರ್ಟ್‌ಮೆಂಟ್ ಅನ್ನು ಯಾವ ರೀತಿಯಿಂದ ಸುಧಾರಿಸಬೇಕು ಎನ್ನುವುದಕ್ಕೆ ಅವರಿಗೆ ಆ ಜವಾಬ್ದಾರಿ ಹೊರಿಸಿದ್ದೇನೆ. ಏಕೆಂದರೆ ಈಗ ಉದಾಹರಣೆಗೆ ಹೇಳಬೇಕೆಂದರೆ ಒಂದೊಂದು ಹಾಸ್ಪಟಲ್‌ಗೆ ಹೋದರೆ ನನಗನ್ನಿಸುತ್ತದೆ ನಾನು ಮುಖ್ಯಮಂತ್ರಿಯಾಗಿ ಅಲ್ಲಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ಒಪ್ಪುತ್ತಾ ಇದ್ದೇನೆ. ವಿಕ್ಟೋರಿಯಾ ಆಸ್ಪತ್ರೆಯಾಗಲಿ ಡಿಸ್ಟ್ರಿಕ್ಟ್ ಹಾಸ್ಪಿಟಲ್ ಆಗಲಿ ಹುಬ್ಬಳ್ಳಿ-ಧಾರವಾಡದ ಕೆ.ಎಂ.ಸಿ. ಹಾಸ್ಪಿಟಲ್ ಆಗಲಿ ಯಾವುದೇ ಹಾಸ್ಪಿಟಲ್ ಒಳಗೆ ಹೋದಾಗ ನನ್ನ ಮನಸ್ಸಿಗೆ ಒಂದು ವಿಚಾರಬರುತ್ತದೆ. ಇವತ್ತು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಒಳಗಡೆ ಹೋದಾಗ ದೇವರನ್ನು ನೆನೆಸಿಕೊಂಡು ಹೊರಗಡೆ ಬರುತ್ತೇನೆ. ದೇವರೆ ಒಂದು ದಿವಸ ಅಲ್ಲ ಒಂದು ದಿವಸ ಸಾಯಬೇಕು ಆದರೆ ಇಂತಹ ಹಾಸ್ಪಿಟಲ್‌ಗೆ ಕರೆದುಕೊಂಡು ಹೋಗದೆ ನನ್ನನ್ನು ತೆಗೆದುಕೊಂಡು ಹೋಗು ಎನ್ನುವಂಥ ರೀತಿಯಲ್ಲಿ ಇಂದು ಹಾಸ್ಪಿಟಲ್‌ಗಳು ನಡೆಯುತ್ತಾ ಇವೆ. ಇಂದು ಹಾಸ್ಪಿಟಲ್ಸ್ ಸರಿಯಿಲ್ಲ. ಬಹುಶಃ ಹಾಸ್ಪಿಟಲ್‌ಗೆ ಹೋದರೆ ಅರ್ಧರೋಗ ಹೆಚ್ಚಾಗುತ್ತದೊ ಎನ್ನುವಂಥ ವಾತಾವರಣ ಈ ಹಾಸ್ಪಿಟಲ್‌ನಲ್ಲಿ ನಾವು ನೋಡುತ್ತಾ ಇದ್ದೇವೆ. ಆದಕ್ಕಾಗಿ ಈ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್‌ನ್ನು ಯಾವ ರೀತಿಯಿಂದ ಸರಿ ಮಾಡಬೇಕು ಯಾವರೀತಿ ಕೆಲಸ ಕಾರ್ಯಗಳು ಸರಿಯಾಗಿ ಆಗಬೇಕು ಎನ್ನುವುದಕ್ಕಾಗಿ ಒಂದು ವಿಚಾರ ಮಾಡಿದ್ದೇವೆ. ಮ್ಯಾನೇಜ್‌ಮೆಂಟ್ ಕನ್ಸಲ್‌ಟೆನ್ಸಿ ಇದೆ ಎ.ಎಫ್.ಫರ್ಗೂಸನ್ ಅಂಡ್ ಕಂಪೆನಿ ಎನ್ನತಕ್ಕಂಥ ಒಂದು ದೊಡ್ಡ ಕಂಪೆನಿ ಇದೆ. ನಾವು ಕ್ವೊಟೇಷನ್ ತರಿಸಿದ್ದೇವೆ. ಅದರಲ್ಲಿ ಈ ಕಂಪೆನಿಯನ್ನು ಸೆಲೆಕ್ಟ್ ಮಾಡಿ. ಈ ಒಂದು ಮ್ಯಾನೇಜ್‌ಮೆಂಟ್ ಕನ್ಸಲ್‌ಟ್‌ನ್ಸಿ ಫರ್ಗೂಸನ್ ಕಂಪೆನಿಯವರು ನಮ್ಮ ಮೇಜರ್‌ಹಾಸ್ಪಿಟಲ್ಸ್ ಯಾವ ರೀತಿಯಿಂದ ಸುಧಾರಣೆ ಆಗಬೇಕು. ಅವುಗಳ ಆಡಳಿತದಲ್ಲಿ ಯಾವ ರೀತಿ ಸುಧಾರಣೆ ಆಗಬೇಕು ಅದರ ಮೇಂಟೆನೆನ್ಸ್‌ನಲ್ಲಿ ಯಾವರೀತಿ ಸುಧಾರಣೆ ಆಗಬೇಕು ಅಲ್ಲಿನ ಅಡ್ಮಿನಿಸ್ಟ್ರೇಷನ್‌ನಲ್ಲಿ ಯಾವರೀತಿ ಸುಧಾರಣೆ ಆಗಬೇಕು ಔಷಧಿ ಮತ್ತೊಂದು ಮಗದೊಂದು ಯಾವರೀತಿ ಆಗಬೇಕು ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ನಮಗೆ ಒಂದು ವರದಿ ಸಲ್ಲಿಸಬೇಕು. ಬಹುಶಃ 4-5 ತಿಂಗಳಲ್ಲಿ ಅವರು ವರದಿ ಸಲ್ಲಿಸುತ್ತಾರೆ ಎಂದು ನಾನು ಭರವಸೆ ಮಾಡಿಕೊಂಡಿದ್ದೇನೆ. ಅದು ಬಂದಮೇಲೆ ಅದೇ ರೀತಿ ಎರಡನೇ ಡಿಪಾರ್ಟ್‌ಮೆಂಟಿಗೂ ಮ್ಯಾನೇಜ್‌ಮೆಂಟ್ ಕನ್ಸಲ್ಟ್‌ನ್ಸಿಯಿಂದ ಮಾಡಿಸಬಹುದು. ಟಾಟಾ ಕನ್ಸಲ್ಟೆನ್ಸಿ ಇದೆ. ಅವರೂ ನಮ್ಮ ಹತ್ತಿರ ಬಂದಿದ್ದರು. ಆದರೆ ನನಗೆ ಯಾರೊ ಹೇಳಿದರು. ಫರ್ಗೂಸನ್ ಕನ್ಸಲ್ಟ್‌ನ್ಸಿ ಟಾಪ್ ಕನ್ಸಲ್ಟ್‌ನ್ಸಿ ಇದೆ ಎಂದು ಹೇಳಿದರು.

ಆದ್ದರಿಂದ ಇವರಿಗೆ ಮೊದಲು ಕೊಟ್ಟು ನೋಡೋಣ. ಮಿಕ್ಕಿದ್ದು ಏನಾದರೂ ಉಳಿದ ಕೆಲಸ ಇದ್ದರೆ ಎರಡನೆ ಕನ್ಸಲ್ಟ್‌ನ್ಸಿಗೆ ಕೊಡೋಣ ಎನ್ನತಕ್ಕಂಥ ವಿಚಾರ ನಮಗೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ಹಿಂದಿನ ಎರಡು ಸರ್ಕಾರಗಳಲ್ಲೂ ಸಹಿತ ಪ್ರೈವೇಟ್ ಕನ್ಸಲ್ಟೆನ್ಸಿ ಸರ್ವೀಸನ್ನು ವೇರಿಯಸ್ ಡಿಪಾರ್ಟ್‌ಮೆಂಟಿನಲ್ಲಿ ಎಫಿಷಿಯನ್ಸಿ ಇಂಪ್ರೂವ್ ಮಾಡಬೇಕು ಎಂದು ಕಿರ್ಲೋಸ್ಕರ್‌ರವರಿಗೆ ವಹಿಸಿಕೊಡಲಾಯಿತು. ಅವರು ಕೊಟ್ಟ ರಿಪೋರ್ಟ್ಸ್ ಮತ್ತು ಬೇರೆಯವರು ಕೊಟ್ಟ ರಿಪೋರ್ಟ್ಸ್ ಹಾಗೆಯೆ ಇವೆ. ಅದನ್ನು ಒಂದು ಸಾರಿ ತೆಗೆಸಿನೋಡಿ. ಅದರಲ್ಲಿ ಏನಾದರೂ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುತ್ತದೋ ನೋಡಿ. ಬಹಳಷ್ಟು ಕನ್ಸಲ್ಟೆನ್ಸಿ ರಿಪೋರ್ಟ್ಸ್ ಇವೆ.

ಶ್ರೀ ವೀರೇಂದ್ರಪಾಟೀಲ್:- ಅದು ಸರಿ. ಈಗ ಒಂದು ವಿಚಾರ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಕನ್ಸಲ್ಟೆನ್ಸಿ ರಿಪೋರ್ಟ್ ತಂದು ಸೆಲ್‌ನಲ್ಲಿ ಇರಬೇಕು ಎನ್ನುವಂಥ ದೃಷ್ಟಿಯಿಂದ ಮಾಡುತ್ತಾ ಇಲ್ಲ. ತಾವು ಈಗ ಹೇಳಿದಿರಿ ಹಿಂದೆ ಯಾವ ಕನ್ಸಲ್ಟೆನ್ಸಿ ರಿಪೋರ್ಟ್ಸ್ ಬಂದಿದೆ ಎಂದು ನನಗೆ ಹೇಳಿದರೆ ಅದನ್ನು ಹೊರಗೆ ತೆಗೆಸುತ್ತೇನೆ. ಕಿರ್ಲೋಸ್ಕರದು ಯಾವ ಡಿಪಾರ್ಟ್ ಮೇಲೆ ಯಾವಾಗ ಕೊಟ್ಟಿದ್ದಾರೆ ಎನ್ನುವುದು ಗೊತ್ತಾದರೆ ಅದನ್ನೂ ನೋಡೋಣ. ಇದನ್ನು ಮತ್ತೊಮ್ಮೆ ಮಾಡಬೇಕು ಎಂದು ಇಲ್ಲ. ಏನೊ ಒಂದುರೀತಿಯಿಂದ ಸಮಾಧಾನಪಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಪ್ರಯತ್ನ ನಾನು ಮಾಡುತ್ತಾ ಇಲ್ಲ. ಯಾರಾದರೂ ಮಾಡಿದ್ದರೆ ಅದನ್ನೂ ಸಹ ಇವತ್ತೂ ಕೂಡ ಗಮನದಲ್ಲಿಟ್ಟುಕೊಂಡು ಅದರ ಮೇಲೆ ಏನು ಕಾರ್ಯಕ್ರಮ ಮಾಡಬೇಕೋ ಅದನ್ನು ಮಾಡೋಣ.

ಶ್ರೀ. ಪಿ.ಜಿ.ಆರ್.ಸಿಂಧ್ಯ:- ನಿಮ್ಮ ಪ್ರಾಮಾಣಿಕತನವನ್ನು ನಾನು ಪ್ರಶ್ನೆ ಮಾಡುತ್ತಾ ಇಲ್ಲ. ಸರ್ಕಾರದಲ್ಲಿ ಈಗಾಗಲೇ ಹಲವಾರು ಇಲಾಖೆಗಳ ಬಗ್ಗೆ ನನಗೆ ಗೊತ್ತಿರುವ ಹಾಗೆ 8-10 ಇಲಾಖೆಗಳ ಬಗ್ಗೆ ಕಿರ್ಲೋಸ್ಕರ್ ಕನ್ಸಲ್ಟೆನ್ಸಿ ಮತ್ತು ಬೇರೆಯವರಿಗೆ ಯಾವರೀತಿ ಎಫಿಷಿಯನ್ಸಿ ಇಂಪ್ರುವ್ ಮಾಡಬೇಕು ಎಂದು ರಿಪೋರ್ಟ್ ಕೇಳಿದ್ದಾರೆ. ಆ ಕನ್ಸಲ್ಟೆನ್ಸಿಯವರು ಫೀಸನ್ನು ತೆಗೆದುಕೊಂಡು ಹೋಗಿದ್ದಾರೆ. ಆ ರಿಪೋರ್ಟನ್ನು ಇಂಪ್ಲಿಮೆಂಟ್‌ಮಾಡಿಲ್ಲ ಅಷ್ಟೆ. ಅದನ್ನು ತೆಗೆಸಿನೋಡಿ.

ಶ್ರೀ ವೀರೇಂದ್ರ ಪಾಟೀಲ್:- ಆ ಸಲಹೆಯನ್ನು ನಾನು ಸ್ವಾಗತಮಾಡುತ್ತೇನೆ. ಆ ಕನ್ಸಲ್ಟೆನ್ಸಿ ಯಾವ ಡಿಪಾರ್ಟ್‌ಮೆಂಟ್ ಬಗ್ಗೆ ವರದಿ ಕೊಟ್ಟಿದ್ದಾರೆ ಅಂದರೆ ಅಲ್ಲಿ ಮತ್ತೊಂದು ಕನ್ಸಲ್ಟೆನ್ಸಿ ಅಪಾಯಿಂಟ್ ಮಾಡಲಿಕ್ಕೆ ಹೋಗುವುದಿಲ್ಲ. ಅದನ್ನು ನಾನು ನೋಡುತ್ತೇನೆ. ಅದೇ ಸರಿಯಾಗಿ ಮಾಡಿದ್ದರೆ ಅದನ್ನೇ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದನ್ನೆ ನಾನು ಹೇಳುತ್ತಾ ಇದ್ದೇನೆ. ಇವತ್ತು ತಾವು ಹೇಳಿದಿರಿ ನನಗೆ ಗೊತ್ತಿಲ್ಲ. ಮೊದಲಿನಿಂದಲೂ ಅನೇಕಸಾರಿ ಹೇಳುತ್ತಾ ಇದ್ದೇನೆ. 18 ವರ್ಷಗಳ ಈ ಗ್ಯಾಪ್‌ನಿಂದ ಅನೇಕ ವಿಚಾರಗಳ ಬಗ್ಗೆ ಸರ್ಕಾರದಲ್ಲಿ ಹಿಂದೆ ಏನು ನಡೆದಿದೆ ಎನ್ನುವುದು ಗೊತ್ತಿಲ್ಲ. ಆದರೆ ಏನಾದರೂ ಗೊತ್ತಿದ್ದರೆ ಮತ್ತೊಮ್ಮೆ ರಿಪೀಟ್ ಮಾಡಬೇಕು ಎನ್ನುವಂಥ ದೃಷ್ಟಿಯಿಂದ ಮಾಡುತ್ತಾ ಇಲ್ಲ. ಆದರೆ ನನ್ನ ತಲೆಗೆ ಬಂದಿರತಕ್ಕ ವಿಚಾರವನ್ನು ಮಾಡಿದ್ದೇನೆ ಎಂದು ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ಅಲ್ಲಿಂದ ಮೂರು ಡಿಪಾರ್ಟ್ ಮೆಂಟ್ಸ್‌ನ್ನು ನಾನು ಆರಿಸಿಕೊಂಡಿದ್ದೇನೆ. ಆ ಡಿಪಾರ್ಟ್‌ಮೆಂಟ್‌ನಲ್ಲಿ ಆಫೀಸರ್ ಓರಿಯಂಟೆಡ್ ವರ್ಕ್ ಆಗಬೇಕು. ಸ್ವಲ್ಪಮಟ್ಟಿಗೆ ತಮಗೆ ಹೇಳಿದರೆ ಅರ್ಥವಾಗುತ್ತದೆ. ಯಾವ ಯಾವ ಡಿಪಾರ್ಟ್ ಮೆಂಟ್ಸ್ ಅಂದರೆ ರಿಹ್ಯಾಬಿಟೇಷನ್ ವಿಂಗ್ ಇನ್ ದಿ ರೆವಿನ್ಯು ಡಿಪಾರ್ಟ್‌ಮೆಂಟ್ ಎನರ್ಜಿ ಡಿಪಾರ್ಟ್‌ಮೆಂಟ್ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್. ಆಫೀಸರ್ ಓರಿಯಂಟೆಡ್ ಅಂದರೆ ಅಲ್ಲಿ ಕ್ಲಾರ್ಕ್ ಮತ್ತೊಬ್ಬರು ಇರುವಹಾಗಿಲ್ಲ. ಬರೀ ಮೇಲಿನ ಆಫೀಸರ್ ಇರುತ್ತಾರೆ. ಅವರಿಗೆ ಸ್ಟೆನೋ ಇರುತ್ತಾರೆ. ಅವರ ಕೆಳಗೆ ಒಬ್ಬರೋ ಇಬ್ಬರೋ ಅಸಿಸ್ಟೆಂಟ್ಸ್ ಇರುತ್ತಾರೆ. ಈಗ ಸರ್ಕಾರದಲ್ಲಿ ಏನಾಗುತ್ತಿದೆಯೆಂದರೆ ಒಬ್ಬರು ಶಾಸಕರು ಏನಾದರೂ ಬರೆದು ಕೊಟ್ಟರೆ ನಾನು ಇನಿಷಿಯಲ್ ಹಾಕುತ್ತೇನೆ. ನಾನು ಇನಿಷಿಯಲ್ ಹಾಕಿದ ಮೇಲೆ ನನ್ನ ಸೆಕ್ರೆಟರಿ ಹತ್ತಿರ ಹೋಗುತ್ತದೆ. ನನ್ನ ಸೆಕ್ರೆಟರಿಯಿಂದ ಸಂಬಂಧಪಟ್ಟ ಸೆಕ್ರೆಟರಿ ಹತ್ತಿರ ಹೋಗುತ್ತದೆ. ಅವನು ಜಾಯಿಂಟ್ ಸೆಕ್ರೆಟರಿಗೆ ಕಳಿಸುತ್ತಾನೆ. ಜಾಯಿಂಟ್ ಸೆಕ್ರೆಟರಿ ಡೆಪ್ಯುಟಿ ಸೆಕ್ರೆಟರಿಗೆ ಕಳಿಸುತ್ತಾನೆ. ಡೆಪ್ಯುಟಿ ಸೆಕ್ರೆಟರಿ ಅಂದರೆ ಸೆಕ್ರೆಟರಿಗೆ ಕಳಿಸುತ್ತಾನೆ. ಅಂಡರ್ ಸೆಕ್ರೆಟರಿ ಸೆಕ್ಷನ್ ಆಫೀಸರ್‌ಗೆ ಕಳಿಸುತ್ತಾನೆ. ಸೆಕ್ಷನ್ ಆಫೀಸರ್

ಕ್ಲಾರ್ಕ್‌ಗೆ ಕಳಿಸುತ್ತಾನೆ. ಅಷ್ಟು ನಡೆದುಕೊಂಡು ಕೆಳಗೆ ಹೋಗಿ ಮತ್ತೆ ನನ್ನ ಹತ್ತಿರ ಬರಲಿಕ್ಕೆ 6 ತಿಂಗಳಾಗುತ್ತದೆ. ಆದರೆ ಇಲ್ಲಿ ಆಫೀಸರ್ ಓರಿಯಂಟೆಡ್ ಅಂದರೆ ಅಲ್ಲಿ ಯಾರೂ ಇರುವಂತಿಲ್ಲ. ಕೆಳಗಡೆ ಕಳುಹಿಸುವ ಪ್ರಶ್ನೆಯೇ ಇಲ್ಲ. ಸಂಬಂಧಪಟ್ಟ ಅಧಿಕಾರಿ ನೋಡುತ್ತಾನೆ. ಫೈಲು ತರಿಸಿಕೊಳ್ಳುತ್ತಾನೆ ಸ್ಟೆನೋ ಇರುತ್ತಾನೆ. ಆಗಿಂದಾಗ್ಗೆ ಬರೆಸುತ್ತಾನೆ. ಇದರಿಂದ ಕೆಲಸ ಬೇಗ ಆಗುತ್ತೆ ಡಿಲೆ ಕಡಿಮೆಯಾಗುತ್ತದೆ. ಇದನ್ನು ಪ್ರಾಯೋಗಿಕವಾಗಿ ಮೂರು ಇಲಾಖೆಗಳಲ್ಲಿ ಮಾಡಬೇಕೆಂದು ತೀರ್ಮಾನಮಾಡಿದ್ದೇವೆ. ಈ ರೀತಿಯಿಂದ ಅಡ್ಮಿನಿಸ್ಟ್ರೇಷನ್‌ನಲ್ಲಿ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಇದು ಒಂದು ಸಣ್ಣ ಹೆಜ್ಜೆ. ನಾನು ಮೊದಲೇ ಹೇಳಿದಂತೆ ಬಹಳಷ್ಟು ಆಡಳಿತದಲ್ಲಿ ಬಿಗಿ ತಪ್ಪಿರುವುದರಿಂದ ಇದನ್ನು ಸುಧಾರಣೆ ಮಾಡುವುದಕ್ಕೆ ಸ್ವಲ್ಪ ದಿವಸ ಹಿಡಿಯುತ್ತದೆ. ಒಂದು ವಿಚಾರ ಹೇಳುತ್ತೇನೆ. ನಾವು ಅಧಿಕಾರಕ್ಕೆ ಬಂದಮೇಲೆ ಎಂಪ್ಲಾಯಿಸ್ ಅಸೋಷಿಯೇಷನ್‌ನವರು ಸ್ಟ್ರೈಕ್‌ನೋಟೀಸ್ ಕೊಟ್ಟರು. ಆ ವೇಳೆಗೆ ಕಾರ್ಪೊರೇಷನ್ ಮುನಿಸಿಪಾಲಿಟಿಗಳ ಎಲೆಕ್ಷನ್ ಮಾಡಬೇಕಾಗಿತ್ತು. ನಾವು ಹೇಗೋ ಪಾರಾಗಿ ಎಲೆಕ್ಷನ್ ಮಾಡಿಕೊಂಡೆವು. ಇವತ್ತು ಕರ್ನಾಟಕದಲ್ಲಿ ಎಲೆಕ್ಷನ್‌ಗಳು ಉಳಿದಿದ್ದರೆ ಅದು ಕೋಆಪರೇಟೀವ್ ಎಲೆಕ್ಷನ್‌ಗಳು ಮಾತ್ರ. ಈ ಸದನದ ಎಲ್ಲ ಸದಸ್ಯರುಗಳು ಅದನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದ್ದರಿಂದ ಮುಂದಕ್ಕೆ ಹಾಕಿದೆವು. ಇಲ್ಲದಿದ್ದರೆ ಅದನ್ನು ಮಾಡುವುದಕ್ಕೂ ನಾವು ತಯಾರಾಗಿದ್ದೆವು. ಆ ಟೈಂನಲ್ಲಿ ಎಂಪ್ಲಾಯಿಸ್ ಥ್ರೆಟ್‌ಕೊಟ್ಟರು. ಆ ವೇಳೆಗೆ ನನಗೆ ಒಂದು ವಿಚಾರ ಬಂತು.ಅಡ್ಮಿನಿಸ್ಟ್ರೇಷನ್‌ನಲ್ಲಿ ಏನಾದರೂ ಒಂದು ಬಿಗುವು ತರಬೇಕಾದರೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ಇದ್ದುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನಗೆ ಅವರ ಮೇಲೆ ದ್ವೇಷ ಇಲ್ಲ ಅವರ ಮೇಲೆ ಸಿಟ್ಟು. ಇಲ್ಲ. ಆ ವೇಳೆಗೆ ಈ ರೀತಿಯಾಗಿ ನನ್ನನ್ನು ಹೆದರಿಸಲಿಕ್ಕೆ ಹೊರಟರೆ ಎಲೆಕ್ಷನ್ನೇ ಮಾಡುವಂತಿಲ್ಲ ಎಂದು ಹೇಳಿದೆ ಆದರೆ ಎಲ್ಲರ ಸಹಕಾರದಿಂದ ಪಬ್ಲಿಕ್ ಸಿಂಪತಿಯಿಂದ ಎಂಪ್ಲಾಯಸ್ ಅಸೋಷಿಯನ್‌ನವರು ಕೊಟ್ಟಂತ ಥ್ರೆಟನ್ನು ಯಶಸ್ವಿಯಾಗಿ ಎದುರಿಸಿದೆ. ಆದರೆ ಅವರ ನಿಜವಾದಂಥ ಜೆನಿಯನ್ ಡಿಮ್ಯಾಂಡ್‌ಗಳು ಏನಿದ್ದವೋ ಅವುಗಳನ್ನು ಕಡೆಗಣಿಸಲಿಕ್ಕೆ ಹೋಗಲಿಲ್ಲ. ಅವರು ಹೆಚ್.ಆರ್.ಎ. ಬೇಡಿದ್ದರು. ಕೊಟ್ಟಿದ್ದೇವೆ ಸಿ.ಸಿ.ಎ. ಬೇಡಿದ್ದರು ಕೊಟ್ಟಿದ್ದೇವೆ. ಮೊನ್ನೆ ಒಂದು ಡಿ.ಎ.ಕೊಡಬೇಕಾದ ಪ್ರಸಂಗ ಬಂತು. ನನ್ನ ಅನೇಕ ಸಹದ್ಯೋಗಿಗಳು ಡಿ.ಎ. ಹೆಚ್ಚು ಕೊಟ್ಟರೆ ನಾವು ಉಳಿಯುವಂತಿಲ್ಲ ಅಭಿವೃದ್ಧಿ ಕೆಲಸಕಾರ್ಯಗಳಿಗೆ ತೊಂದರೆಯಾಗುತ್ತದೆಂದು ಹೇಳಿದರೂ ಸಹ ಕೇಂದ್ರ ಸರ್ಕಾರ ಕೊಟ್ಟಾಗ ನಾವು ಸಹ ಕೊಡಲು ಬದ್ಧರಾಗಿದ್ದೇವೆ ಕೊಡಲೇಬೇಕು ಎಂದು ನನ್ನ ಸಹೋದ್ಯೋಗಿಗಳ ಮೇಲೆ ಒತ್ತಾಯ ತಂದು ಕೊಟ್ಟಿದ್ದೇವೆ. ಈ ಸಂದರ್ಭದಲ್ಲಿ ಈ ವಿಚಾರ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಇವೊತ್ತು ಆಡಳಿತದಲ್ಲಿರತಕ್ಕ ನಮ್ಮ ಸಿಬ್ಬಂದಿವರ್ಗದವರನ್ನು ಕೂಡ ಸಮಾಧಾನದಲ್ಲಿ ಇಟ್ಟುಕೊಳ್ಳುವಂಥಾದ್ದು ನಮ್ಮ ಧರ್ಮ ಹಾಗೂ ನಮ್ಮ ಕರ್ತವ್ಯ ಆಗಿದೆ. ಎಲ್ಲಿ ಅವರು ಹೇಳಿದಂತೆ ನಡೆಯಲಾರದಷ್ಟಂತೆ ಅವರ ಒತ್ತಡಕ್ಕೆ ಒಳಗಾಗದಂತಹ ಪರಿಸ್ಥಿತಿ ಇರುತ್ತದೆ ಅಲ್ಲಿ ನಾನು ತಪ್ಪಾಗಿರುತ್ತೇನೆ. ಆದರೆ ಎಲ್ಲಿ ನಿಜವಾಗಿಯೂ ಜೆನಿಯನ್ ಬೇಡಿಕೆಗಳು ಇರುತ್ತವೆಯೋ ಅದನ್ನು ಸಮಾಧಾನದಿಂದ ಅಷ್ಟೇ ಸಹಾನುಭೂತಿಯಿಂದ ವಿಚಾರ ಮಾಡುವುದಕ್ಕೆ ಹಿಂದುಮುಂದು ನೋಡುವುದಿಲ್ಲ. ಹಿಂದೆ ನನ್ನ ಕಾಲಕ್ಕೆ ಎನ್.ಜಿ.ಓ. ಅಸೋಷಿಯೇಷನ್ ಎಂದು ಇತ್ತು. ಇವತ್ತು ಅದನ್ನು ಬದಲಾಯಿಸಿ ಸ್ಟೇಟ್ ಗೌರ್ನಮೆಂಟ್ ಎಂಪ್ಲಾಯಿಸ್ ಅಸೋಷಿಯೇಷನ್ ಎಂದು ಮಾಡಿಕೊಂಡಿದ್ದಾರೆ. ಅದರಲ್ಲಿ ಎನ್.ಜಿ.ಓ.ಗಳು ಬರುತ್ತಾರೆ ಗೆಜೆಟ್ ಅಧಿಕಾರಿಗಳು ಬರುತ್ತಾರೆ ಎಲ್ಲರೂ ಬರುತ್ತಾರೆ. ಆದ್ದರಿಂದ ಇವೊತ್ತು ಈ ಸಂದರ್ಭದಲ್ಲಿ ನಾನು ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾವು ಮುಂದೆ ನಾಲ್ಕು ನಾಲ್ಕೂವರೆ ವರ್ಷದಲ್ಲಿ ಏನು ಅನೇಕ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ ಆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತರುವುದಕ್ಕೆ ಕಾರ್ಯಗತ ಮಾಡುವುದಕ್ಕೆ ಅವರೇ ನಮಗೆ ಟೂಲ್ಸ್. ಅದಕ್ಕಾಗಿ ಅವರ ಸಹಕಾರವನ್ನು ನಾನು ಈ ಸಂದರ್ಭದಲ್ಲಿ ಕೋರುತ್ತೇನೆ. ಈ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಅವರು ತಮ್ಮ ಸಹಕಾರವನ್ನು ನೀಡುತ್ತಾರೆ. ಮತ್ತು ಅವರಿಂದ ಏನು ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಅವರಿಂದ ಅಪೇಕ್ಷೆ

ಮಾಡುತ್ತಿದ್ದೇನೆ ಆ ದಕ್ಷತೆ ಮತ್ತು ಪ್ರಾಮಾಣಿಕತೆಯ ಮಟ್ಟಕ್ಕೆ ಅವರು ಬರಬೇಕೆಂದು ನಾನು ಅಪೀಲು ಮಾಡಿಕೊಳ್ಳುತ್ತಿದ್ದೇನೆ. ಇನ್ನು ವಿರೋಧಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಒಂದು ವಿಚಾರ ಕೇಳಿದರು. ಅದನ್ನು ನಾನು ಹೇಳುತ್ತೇನೆ. ಮೂರು ಜನ ಆಫೀಸರ್ಸ್ ಬಗ್ಗೆ ಅಂದರೆ ಚೀಫ್ ಸೆಕ್ರೆಟರಿ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಮತ್ತು ಅಡ್ವೋಕೇಟ್ ಜನರಲ್ ಬಗ್ಗೆ ಬಹುಶಃ ವಿರೋಧಪಕ್ಷದ ನಾಯಕರ ಮನಸ್ಸಿನಲ್ಲಿ ಏನು ಒಂದು ಶಂಕೆ ಉತ್ಪನ್ನ ಆದಂತೆ ಕಾಣಿಸುತ್ತದೆ. ಆದರೆ ನಾವು ಯಾವುದೇ ಹಾದಿಯನ್ನು ತಪ್ಪಿ ಹೋಗಿಲ್ಲ ಸ್ಪಷ್ಟವಾಗಿ ತಮಗೆ ಹೇಳುತ್ತಿದ್ದೇನೆ. ನಮ್ಮ ಚೀಫ್ ಸೆಕ್ರೆಟರಿಯವರಾದ ಶ್ರೀ ಕೆ.ಎಸ್.ಎನ್‌ಮೂರ್ತಿ ಅವರು ನಾನು ಅಧಿಕಾರಕ್ಕೆ ಬಂದ ಮೇಲೆ ಮೂರುವರೆ ನಾಲ್ಕು ತಿಂಗಳು ನನ್ನ ಜೊತೆಯಲ್ಲಿ ಕೆಲಸ ಮಾಡಿದ್ದಾರೆ. ಅವರು ಒಳ್ಳೆಯ ಆಫೀಸರ್ ದಕ್ಷ ಆಫೀಸರ್ ಪ್ರಾಮಾಣಿಕ ಆಫೀಸರ್ ಮತ್ತೆ ಕೊನೆಗೆ ಇನ್ನು 21-25 ದಿವಸಗಳು ಇದ್ದಾಗ ಅವರು ರಜೆ ಹಾಕಿ ಹೋಗುವಂಥ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದಾಗ ಅವರ ಜಾಗದಲ್ಲಿ ಮುಂದೆ ಯಾರು ಆಗಬೇಕು ಎನ್ನುವಂಥ ನಿರ್ಣಯ ಮಾಡಿದ್ದೇವೆ ಹೊರತಾಗಿ ಮತ್ತೆ ಯಾವುದೇ ರೀತಿಯಿಂದ ನಾನು ಇವೊತ್ತು ಈ ಜಾಗದಿಂದ ನಾನು ಅವರ ಮೇಲೆ ಯಾವುದೇ ಆಕ್ಷೇಪಣೆ ಮಾಡುತ್ತಿಲ್ಲ. ನಾನು ಇವೊತ್ತು ಸರ್ಟಿಫೈ ಮಾಡುತ್ತಿದ್ದೇನೆ; ಅವರು ಒಬ್ಬ ದಕ್ಷ ಆಡಳಿತಗಾರರಿದ್ದರು ಪ್ರಾಮಾಣಿಕ ಆಡಳಿತಗಾರರು ಇದ್ದರು; ಆದರೆ ಅವರು ಮೆಡಿಕಲ್ ಗ್ರೌಂಡ್‌ನಲ್ಲಿ ಒಂದು ಲೀವ್ ಅಪ್ಲಿಕೇಷನ್ ಹಾಕಿ ಹೋಗತಕ್ಕಂಥ ಪರಿಸ್ಥಿತಿ ಬಂದಾಗ ಅವರ ಜಾಗಕ್ಕೆ ಇನ್ನೊಬ್ಬ ಚೀಫ್ ಸೆಕ್ರೆಟರಿ ಅನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇನೆ ಹೊರತಾಗಿ ಮತ್ತೆ ಏನು ತಪ್ಪು ಮಾಡಿಲ್ಲ. ಮತ್ತು ನಾನು ಏನು ನಿರ್ಣಯ ಮಾಡಿದ್ದೇನೆ ಅದು ತಪ್ಪು ನಿರ್ಣಯ ಎಂದು ಯಾರೂ ಸಹ ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ಇವೊತ್ತು ನಾನು ಧೈರ್ಯದಿಂದ ತಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನೊಂದು ಡೈರೆಕ್ಟರ್ ಜನರಲ್ ಆಫ್ ಪೋಲೀಸ್...

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ನಿರ್ಣಯ ಮಾಡಿದ್ದು ತಪ್ಪು ಎಂದು ಹೇಳಿಲ್ಲ. ಆದರೆ ಒಂದು ಸಂಶಯ ನಮ್ಮ ಮನಸ್ಸಿನಲ್ಲಿ ಏನು ನಿಲ್ಲುತ್ತದೆ ಅಂದರೆ ಇನ್ನು 25ದಿವಸ ರಿಟೈರ್ ಆಗುವುದಕ್ಕೆ ಮುಂಚೆ ಏಕಾಏಕಿ ಅವರು ಹೋಗುತ್ತಾರೆ ಅಂದರೆ ಇದರ ರಹಸ್ಯ ಏನು ಬಹಿರಂಗಪಡಿಸಿ ಎಂದು ಕೇಳಿದ್ದೆ ಅಷ್ಟೆ.

ಶ್ರೀ ವೀರೇಂದ್ರಪಾಟೀಲ್:- ನಿಮ್ಮ ಶಂಕೆ ಸಮಾಧಾನ ಮಾಡಲಿಕ್ಕೆ ಅದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಇಲ್ಲದಿದ್ದರೆ ಅದೇನು ಅಂತಹ ದೊಡ್ಡ ವಿಚಾರ ಅಲ್ಲ ಪ್ರಸ್ತಾಪ ಮಾಡಲಿಕ್ಕೆ. ಆದರೆ ವಿರೋಧಪಕ್ಷದ ನಾಯಕರಿಂದ ಈ ಮಾತು ಬಂತಲ್ಲ ಎಂದು ಈ ಶಂಕೆಯನ್ನು ಸಮಾಧಾನ ಮಾಡಬೇಕೆಂದು ಇದನ್ನು ಹೇಳುತ್ತಿದ್ದೇನೆ. ಇನ್ನು ಎರಡನೆಯ ಉದ್ದೇಶ ಯಾವುದೂ ಇಲ್ಲ. ಇನ್ನು ಎರಡನೆಯದು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಇದು ನಿಜ. ನಮ್ಮ ಒಬ್ಬ ಸೀನಿಯರ್ ಆಫೀಸರ್ ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದಾರೆ ಅವರು ಹರ್ಲಂಕರ್ ಅವರನ್ನು ತರಬೇಕೆಂದು ನಾನು ಪ್ರಯತ್ನ ಮಾಡಿದ್ದೆ ಇಲ್ಲ ಅಂತ ನಾನು ಹೇಳುವುದಿಲ್ಲ. ಏಕೆಂದರೆ ಅವರು ಬಹಳ ವರ್ಷಗಳಿಂದ ಇಲ್ಲಿ ಕೆಲಸ ಮಾಡಿದ್ದಾರೆ. ಮತ್ತು ನಮ್ಮ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಅವರು ಒಬ್ಬ ಒಳ್ಳೆಯ ದಕ್ಷ ಪ್ರಾಮಾಣಿಕ ಅಧಿಕಾರಿ ಎಂದು ಹೆಸರು ವಾಸಿಯಾಗಿದ್ದಾರೆ. ಇನ್ನು ಅವರು ರಿಟೈರ್ ಆಗುವ ಸ್ಟೇಜಿನಲ್ಲಿ ಅವರು ರಾಜ್ಯಕ್ಕೆ ಬಂದುಬಿಡಲಿ ಇಲ್ಲಿ ಕೆಲಸಮಾಡಲಿ 6-8 ತಿಂಗಳಿನಲ್ಲಿ ಸ್ವಲ್ಪಮಟ್ಟಿಗಾದರೂ ಈ ಡಿಪಾರ್ಟ್‌ಮೆಂಟಿನಲ್ಲಿ ಏನಾದರೂ ಲೋಪದೋಷಗಳಿದ್ದರೆ ಕಲ್ಮಶಗಳು ಇದ್ದರೆ ಅದನ್ನು ದೂರ ಮಾಡಿ ಮುಂದೆ ಬರತಕ್ಕಂಥ ಸಕ್ಸೆಸರ್‌ಗೆ ಅನುಕೂಲ ಮಾಡಿಕೊಡುತ್ತಾರೆಂಬ ಉದ್ದೇಶದಿಂದ ಮಾಡಿದ್ದು. ಇವೊತ್ತು ಸರ್ಕಾರದ ನೀತಿ ಸರ್ಕಾರದ ಧೋರಣೆ ಸರ್ಕಾರದ ಆಟಿಟ್ಯೂಡ್ ಇದು reflected in the selection of officers. ಇದನ್ನು ನಾನು ಹೇಳಬೇಕಾಗಿಲ್ಲ. ನಾನು ಹರ್ಲಂಕರ್‌ರವರನ್ನು ತರಬೇಕು ಎನ್ನುವುದು ನನ್ನದು ವೈಯಕ್ತಿಕವಾದ ಸ್ವಾರ್ಥ ಇರಲಿಲ್ಲ. ಆದರೆ ಅವರು ಒಳ್ಳೆಯ ಆಫೀಸರ್ ಇದ್ದಾರೆ. ಅವರು ಬರಲಿ ಎಂದು ಮಾಡಿದ್ದು. ನಾನು ನಿಮಗೆ ಹೇಳುತ್ತೇನೆ ಆ ಪೇಪರ್ಸ್ ಎಲ್ಲಿಯವರೆಗೆ ಅಂದರೆ ಪೂರ್ತಿ ಹೋಮ್

ಸೆಕ್ರೆಟರಿಯವರಿಗೂ ನಮ್ಮ ಅಧಿಕಾರಿಗಳು ಡೆಲ್ಲಿಯಲ್ಲಿರುವವರು ಚೇಂಜ್ ಮಾಡಿ ಎಲ್ಲರೂ ಒಪ್ಪಿಕೊಂಡರೂ ಎಲ್ಲರೂ ಒಪ್ಪಿಕೊಂಡಾಗ ಹೋಮ್ ಮಿನಿಸ್ಟರ್ ಬರೀ ಇನಿಷಿಯಲ್ ಹಾಕುವುದು ಅಷ್ಟೇ ಉಳಿದಿತ್ತು. ಸ್ವಾಭಾವಿಕವಾಗಿ ಇನ್ನು ಬಂದೇಬಿಡುತ್ತಾರೆ ಎನ್ನುವ ಲೆಕ್ಕದಿಂದ ಇಲ್ಲಿ ಬಹುಶಃ ಅದು ಗೊತ್ತಾಗಿದೆ ಎಂದು ಕಾಣುತ್ತದೆ ಅಥವಾ ಪತ್ರಿಕೆಯವರು ಯಾರಾದರೂ ಕೇಳಿದಾಗ ಹರ್ಲಂಕರ್ ತರಲಿಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ ಎಂದು ಹೇಳಿರಬಹುದು. ಆದರೆ ದುರ್ದೈವ ಏನಾಯಿತು ಅಂದರೆ ಎಲ್ಲರೂ ಒಪ್ಪಿದರೂ ಕೂಡ ಹೋಮ್ ಮಿನಿಸ್ಟರ್ ಒಪ್ಪಲಿಲ್ಲ. ಇಟ್ ಈಸ್ ರಿಜೆಕ್ಟೆಡ್ ಎಂದು ಬರೆದರು. ಏತಕ್ಕೆ ಬರೆದರೋ ಅದು ಅವರಿಗೆ ಗೊತ್ತಿರಬೇಕು. ಅದರ ಮೇಲೆ ನಾನು ಏನು ಹೇಳಲಿಕ್ಕೆ ಹೋಗುವ ಹಾಗೆ ಇಲ್ಲ. ಅವರ ಉದ್ದೇಶ ಏನಿತ್ತು ಏತಕ್ಕೆ ಮಾಡಿದರು ಏನು ಎಂದು ಗೊತ್ತಿಲ್ಲ. ಆದರೂ ನನಗೆ ಸಮಾಧಾನ ಆಗಲಿಲ್ಲ. ನಾನು ಸ್ವತಃ ಟೆಲಿಫೋನ್‌ನಲ್ಲಿ ಹೇಳಿದೆ ಇವರು ನನ್ನ ಆಫೀಸರ್ ನಿಮ್ಮ ಹತ್ತಿರ ಕಳುಹಿಸಿಕೊಟ್ಟಿದ್ದೇವೆ. ಈಗ ನಮಗೆ ಅವರ ಅವಶ್ಯಕತೆ ಇದೆ ನಾನು ಹೊಸದಾಗಿ ಅಧಿಕಾರಕ್ಕೆ ಬಂದಿದ್ದೇನೆ ಈ ಡಿಪಾರ್ಟ್‌ಮೆಂಟ್ ಏನಿದೆ ಇದನ್ನು ಬಹಳಮಟ್ಟಿಗೆ ಸರಿಮಾಡಬೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೇನೆ ಅದರ ಮೇಲೆ ಅವರು ರಿಟೈರ್ ಆಗುವುದು ಇನ್ನು 7-8ತಿಂಗಳು ಇದೆ ಅವರು ಸಹ ಬರುವುದಕ್ಕೆ ಒಪ್ಪಿದ್ದಾರೆ ಆದ್ದರಿಂದ ದಯಮಾಡಿ ಅವರಿಗೆ ರಿಲೀವ್‌ಮಾಡಬೇಕು ಅಂದಾಗ ಅವರು ಹೇಳಿದರು "Nothing doing. I cannot relieve him because, his services are more important to the country than to your State." ಹೀಗೆ ಹೇಳಿದರು. ನಾನು ಸುಮ್ಮನಾದೆ. ಇದಕ್ಕಾಗಿ ಅವರು ಬರುವುದು ತಪ್ಪಿದೆಯೇ ಹೊರತಾಗಿ ಮತ್ತೆ ಯಾವುದೇ ರಾಜಕಾರಣ ಇಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅವರು ಬಿಡಲಾರದೇ ಹೋದಾಗ ಅವರು ಬರುವುದಾದರೂ ಹೇಗೆ ಈಗ ಅವರು ಸೆಂಟ್ರಲ್ ರಿಸರ್ವ್‌ಪೋಲೀಸ್ ಫೋರ್ಸ್ ಡೈರೆಕ್ಟರ್ ಜನರಲ್ ಇದ್ದಾರೆ. ಈ ಪರಿಸ್ಥಿತಿಯಲ್ಲಿ ನಾನು ಅವರನ್ನು ಬಿಡುವ ಹಾಗೆ ಇಲ್ಲ ಎಂದು ಹೇಳಿದಮೇಲೆ ಅದು ಅಲ್ಲಿಗೆ ನಿಂತುಹೋಯಿತು. ಇನ್ನು ಮೂರನೆಯದು ಅಡ್ವೊಕೇಟ್ ಜನರಲ್ ತಮಗೆ ಗೊತ್ತಿರಬಹುದು. ತಾವು ಸಹ ಮಂತ್ರಿಗಳಾಗಿದ್ದವರು ಕ್ಯಾಬಿನೆಟ್ ಅಪ್ರೂವಲ್ ಮಾಡಿಕೊಂಡು ಅಡ್ವೊಕೇಟ್ ಜನರಲ್ ಅವರನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಮತ್ತು ಇವತ್ತು ಅಡ್ವೊಕೇಟ್ ಜನರಲ್ he is a few among the top. There is no doubt about that. ಅದರಲ್ಲಿ ನಮ್ಮದೇನೂ ರಾಜಕಾರಣ ಇಲ್ಲ. ಇದನ್ನು ಏತಕ್ಕೆ ನಾನು ಇಲ್ಲಿ ಹೇಳುತ್ತಿದ್ದೇನೆ ಎಂದರೆ ಅಪಾಯಿಂಟ್‌ಮೆಂಟ್‌ನಲ್ಲಿ ದೊಡ್ಡ ದೊಡ್ಡ ಅಧಿಕಾರದ ಅಪಾಯಿಂಟ್‌ಮೆಂಟ್‌ನಲ್ಲಿ ರಾಜಕೀಯ ಮಾಡುತ್ತಿದ್ದಾರೆನ್ನುವಂತಹ ಯಾವುದೇ ದೋಷಕ್ಕೆ ಗುರಿಯಾಗಬಾರದೆನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇವೊತ್ತು ತಾವು ಬಾರ್‌ನಲ್ಲಿ ಯಾರಿಗಾದರೂ ಕೇಳಬಹುದು ಇಲ್ಲವೇ ಹೊರಗಡೆ ಯಾರಿಗಾದರೂ ಕೇಳಬಹುದು ಪಬ್ಲಿಕ್ ಒಪೀನಿಯನ್ ಅನ್ನಾದರೂ ನೀವು ಕೇಳಬಹುದು. ಒಳ್ಳೆಯವನು ಟಾಪ್‌ಮ್ಯಾನ್ ಒಳ್ಳೆಯವನನ್ನು ನೇಮಕ ಮಾಡಿದ್ದೀರಿ ಎಂದು ಜನರು ಹೇಳುತ್ತಾರೆ. ಅದಕ್ಕಾಗಿ ಈ ಮೂರರಲ್ಲೂ ಯಾವ ರಾಜಕೀಯವೂ ಇಲ್ಲ. ಅದಕ್ಕೆ ಶಂಕೆಗೆ ಸಂಶಯಕ್ಕೆ ಯಾವ ರೀತಿಯಾದ ಅವಕಾಶ ಇಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮತ್ತೊಂದು ಸಾರಿ ಕೇಳಬಾರದೆಂದು ಕ್ಲಾರಿಫೈ ಮಾಡುತ್ತೇನೆ. ಚಂದ್ರೇಗೌಡರು ಏನಾದರೂ ಈ ಅಡ್ವೊಕೇಟ್ ಜನರಲ್ ಬಗ್ಗೆ ಸಂಶಯ ವ್ಯಕ್ತ ಮಾಡಿದ್ದಾರಾ ಎಂಬ ಅರ್ಥ ತಾವು ಹೇಳುವಂತಹ ಉತ್ತರದಿಂದ ಬರುತ್ತದೆ. ಆದರೆ ನಾನು ಸಂಶಯ ವ್ಯಕ್ತ ಮಾಡಲಿಲ್ಲ. ಅಷ್ಟು ಒಳ್ಳೆಯ ಅಡ್ವೊಕೇಟ್ ಜನರಲ್ ಅನ್ನು ನೇಮಕ ಮಾಡಿದಾಗಲೂ ಕೂಡ ನಿಮ್ಮ ಪಕ್ಷದಲ್ಲಿಯೇ ಇದರ ಬಗ್ಗೆ ಪ್ರತಿರೋಧ ಬಂತು ಎನ್ನುವುದನ್ನು ತಮ್ಮ ಗಮನಕ್ಕೆ ತಂದೆ. ಈ ಅರ್ಥ ಹೊರಗೆ ಹೋಗುವುದು ಬೇಡವೆಂದು ಕ್ಲಾರಿಫೈ ಮಾಡಿದೆ.

ಶ್ರೀ ವೀರೇಂದ್ರ ಪಾಟೀಲ್:- ನಮ್ಮ ಪಕ್ಷದಲ್ಲಿ ಅಂತಹ ಪ್ರಶ್ನೆ ಇರಲಿಲ್ಲ. ಸ್ವಾಭಾವಿಕವಾಗಿ ನಮ್ಮಲ್ಲೂ ಕೂಡ ಅವರಿಗಿಂತ ಇನ್ನೊಬ್ಬರು ಇನ್ನೂ ಚೆನ್ನಾಗಿದ್ದಾರೆ ಎನ್ನುವ ರೀತಿಯಿಂದ ಸರಕಾರದ

ಹಿತದೃಷ್ಟಿಯಿಂದ ಏನಾದರೂ ವಿಚಾರಗಳು ಸಲಹೆಗಳು ಬಂದರೆ ಅದು ತಪ್ಪು ಎಂದು ಅರ್ಥ ಮಾಡಿಕೊಳ್ಳಬೇಕಾದ ಆವಶ್ಯಕತೆ ಇಲ್ಲ. ನಾನು ಬಹಳ ಸಂತೋಷದಿಂದ ಅಭಿಮಾನದಿಂದ ಒಂದು ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ಹೈದರಾಬಾದ್ ಕರ್ನಾಟಕ ಏರಿಯಾ ಎಂದು ಏನು ಇದೆ ಅದು ಇವತ್ತು ಎಲ್ಲಾ ಪ್ರದೇಶಕ್ಕಿಂತಲೂ ಹಿಂದೆ ಬಿದ್ದಿರುವಂತಹ ಪ್ರದೇಶ. ಇದನ್ನು ನಾನು ಒಪ್ಪಿಕೊಂಡಿದ್ದಷ್ಟೇ ಅಲ್ಲ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಅವರು ಸ್ವತಃ ಹೈದರಾಬಾದ್ ಡೆವಲಪ್‌ಮೆಂಟ್ ಸಲುವಾಗಿ ಒಂದು ಕ್ರಾಷ್ ಪ್ರೋಗ್ರಾಂ ಮಾಡಿ ಪ್ಲಾನಿಂಗ್ ಕಮಿಷನ್ನಿಗೆ ಕಳಿಸಿದ್ದರು ಮತ್ತು ಪದೇ ಪದೇ ಇದರ ಬಗ್ಗೆ ಹೇಳುತ್ತಿದ್ದರು. ಅನೇಕ ದಿವಸಗಳಿಂದ ಆ ಭಾಗದ ಪ್ರಗತಿಯಾಗಬೇಕು ಆ ಭಾಗ ಬಹಳ ಹಿಂದೆ ಬಿದ್ದಿದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅಂಕಿ ಅಂಶಗಳ ಆಧಾರದ ಮೇಲೂ ಕೂಡ ಇದು ಹಿಂದೆ ಬಿದ್ದಿದೆ. ಎಲ್ಲಾ ದೃಷ್ಟಿಯಿಂದ ಅದು ಹಿಂದೆ ಬಿದ್ದಿದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಂಡಿರುವಂತಹ ಪರಿಸ್ಥಿತಿಯಿದ್ದಾಗ ಈ ಸಲ ನಮ್ಮ ಸ್ನೇಹಿತರು ಇದೇ ಸದನದ ಸದಸ್ಯರಾದ ಶ್ರೀಮಾನ್ ಹೆಗಡೆ ಯವರನ್ನು ನಾನು ಇಂದು ನೆನೆಸಿಕೊಳ್ಳಬೇಕಾಗಿದೆ. ಏಕೆಂದರೆ ಈ ಪ್ರಶ್ನೆ ಬಂದಾಗ ಅವರು ಸ್ವತಃ ಒಪ್ಪಿಕೊಂಡು ಮುಂದೆ ಬಂದು ಹೈದರಾಬಾದ್ ಕರ್ನಾಟಕ ಏರಿಯಾಕ್ಕೆ ಸ್ಪೆಷಲ್ ಪ್ರಾವಿಜನ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. 40 ಕೋಟಿ ರೂಪಾಯಿಯನ್ನು ಪ್ಲಾನ್‌ನಲ್ಲಿ ಪ್ರತ್ಯೇಕ ವಾಗಿ ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಸಲುವಾಗಿ ತೆಗೆದು ಇಡಿ ಎನ್ನುವಂತಹ ಮಾತನ್ನು ಅವರು ಹೇಳಿದರು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಈ ಪ್ರದೇಶ ಹೇಗೆ ಇದೆ ಏನು ಎಂಬುದರ ಬಗ್ಗೆ ಅನೇಕರಿಗೆ ಸಂಶಯ ಇರಬಹುದು. ಆ ವೇಳೆಗೆ ಹಿಂದಿನ ಸರ್ಕಾರ ಏನು ಒಂದು ಆರ್ಥಿಕವಾಗಿ ಹಿಂದುಳಿದ ಪ್ರದೇಶ ಎಂದು ಗುರುತು ಮಾಡಿದ್ದರು ಅದರ ಪ್ರಕಾರ ನಾನು ಇಲ್ಲಿ ಹೇಳುತ್ತಿದ್ದೇನೆ. ಇದರ ಬಗ್ಗೆ ತಕರಾರು ಇದೆ ಎಂದು ನಾನು ಹೇಳಲಿಲ್ಲ. ಮಾನ್ಯ ಬೈರೇಗೌಡರು ಒಂದು ವಿಚಾರವನ್ನು ಹೇಳಿದರು. ಆದ್ದರಿಂದ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಬೈರೇಗೌಡರು ಹೇಳುತ್ತಿದ್ದರು ಹೈದರಾಬಾದ್ ಕರ್ನಾಟಕ ಈ ಮೂರು ಜಿಲ್ಲೆಗಳದ್ದನ್ನೇ ಏಕೆ ಹೇಳುತ್ತೀರಿ ನಮ್ಮ ಕೋಲಾರ ಜಿಲ್ಲೆ ಬಾಟಮ್‌ನಲ್ಲಿ ಇದೆ ಎಂದು ಹೇಳಿದರು. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಹಿಂದಕ್ಕೆ ಮಂಡಲ ಪಂಚಾಯತಿ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ಯಾವ ರೀತಿಯಿಂದ ಫೈನಾನ್ಸ್ ಮಾಡಬೇಕೆಂಬ ಬಗ್ಗೆ ಒಂದು ಕಮಿಷನ್ ಮಾಡಿದ್ದರು. ಅವರು ಕೊಟ್ಟ ಆ ವರದಿಯ ಪ್ರಕಾರ ಕೋಲಾರ ಜಿಲ್ಲೆ ಎಕನಾಮಿಕ್ ಬ್ಯಾಕವರ್ಡ್ ನೆಸ್ಸ್‌ನಲ್ಲಿ ಕೋಲಾರ ಜಿಲ್ಲೆ ನಂ. 8ರಲ್ಲಿ ಬರುತ್ತದೆ. ಇದು ನಮ್ಮ ಕಾಲದ್ದೇನೂ ಅಲ್ಲ ನಿಮ್ಮ ಕಾಲದ್ದೇ. ಗುಲ್ಬರ್ಗ 19 ರಲ್ಲಿ ಅಂದರೆ ಕೊನೆಯಲ್ಲಿ ಇದೆ. 1960-61ರಿಂದ ಬೀದರ್ ಜಿಲ್ಲೆ ಸಹ ಎಕನಾಮಿಕಲಿ ಬ್ಯಾಕ್‌ವರ್ಡ್ ಎಂದು ಇಂಡಿಕೇಷನ್ ರ‍್ಯಾಂಕ್ ನಂಬರನ್ನು ತೋರಿಸಿದ್ದಾರೆ. ನಾನು ಎಲ್ಲವನ್ನೂ ಕೂಡ ಇಲ್ಲಿ ಓದಲಿಕ್ಕೆ ಹೋಗುವುದಿಲ್ಲ. ಬೇಕಾದರೆ ಮಾನ್ಯ ಸದಸ್ಯರ ಅವಗಾಹನೆಗಾಗಿ ಸದನದ ಮುಂದಿರುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ಬೀದರ್ ನಂಬರ್ 16, ರಾಯಚೂರು ನಂಬರ್ 18, ಬಳ್ಳಾರಿ ನಂಬರ್ 12, ಬಿಜಾಪುರ 17ನೇ ನಂಬರ್‌ಗೆ ಬರುತ್ತದೆ. ಅಂದರೆ ಬೀದರ್‌ಗಿಂತ ಬಿಜಾಪುರ ಬ್ಯಾಕ್‌ವರ್ಡ್ ಇದೆ ಎಂದು 85-86ರ ಎಕಾನಾಮಿಕ್ ಇಂಡಿಕೇಟರ್‌ನಲ್ಲಿ ಬಂದಿದೆ. ಅದಕ್ಕಾಗಿ ಕೋಲಾರದಲ್ಲಿ ಏನನ್ನೂ ಮಾಡಬಾರದೆಂದು ಅಲ್ಲ. ಈ 3-4 ಜಿಲ್ಲೆಗಳಲ್ಲಿ ಸ್ಪೆಷಲ್ ಪ್ರೋಗ್ರಾಂ ಎಂದು ಮಾಡಿಕೊಂಡು ಇದನ್ನು ಪ್ರಗತಿ ಮಾಡಬೇಕೆಂದು ಅನೇಕ ವರ್ಷಗಳಿಂದ ಏನು ವಿಚಾರ ಇತ್ತೋ ಅದು ಇವತ್ತು ಇದರಿಂದ ಸಹಾಯಕಾರಿಯಾಗಿದೆ ಎಂಬುದನ್ನು ಅಭಿಮಾನದಿಂದ ನಾನು ಹೇಳುತ್ತಿದ್ದೇನೆ. ಇದನ್ನು ಕೇಂದ್ರ ಸರ್ಕಾರದವರೂ ಒಪ್ಪಿಕೊಂಡಿದ್ದಾರೆ ಪ್ಲಾನಿಂಗ್ ಕಮಿಷನ್‌ನವರೂ ಒಪ್ಪಿಕೊಂಡಿದ್ದಾರೆ.

ಶ್ರೀ ಕೆ. ಲಕ್ಕಪ್ಪ:- ಹೈದರಾಬಾದ್ ಏರಿಯ ಬಹಳ ಹಿಂದೆ ಬಿದ್ದಿದೆಯೆಂದು ತಾವು ಹೇಳಿದ್ದೀರಿ. ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸ್ಪೆಷಲ್ ಗ್ರ್ಯಾಂಟ್ ಕೊಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಹಳೇ ಮೈಸೂರಿನ ಕೆಲವು ಭಾಗಗಳೂ ಕೂಡ ಅಷ್ಟೇ ಹಿಂದುಳಿದಿರುವುದರಿಂದ

ಸಮಗ್ರವಾದಒಂದು ಯೋಜನೆಯನ್ನು ಕಲ್ಪಿಸಿ ಆ ಒಂದು ಹಿಂದುಳಿದ ಜಿಲ್ಲೆಗಳಿಗೆ ಏನು ಆದ್ಯತೆಯನ್ನು ಕೊಡುತ್ತೀರೋ ಅಷ್ಟೇ ಆದ್ಯತೆಯನ್ನು ನಮ್ಮ ಈ ಹಳೇ ಮೈಸೂರು ಭಾಗಕ್ಕೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಕೃಷ್ಣಾ ವಾಟರ್ ಬೆಲ್ಟ್ ಏರಿಯಾದಲ್ಲಿ ಹೆಚ್ಚಿಗೆ ಹಣವನ್ನೂ ನೀವು ಹಾಕಿದ್ದೀರಿ. ಏಕೆಂದರೆ ಕೃಷ್ಣಾ ನದಿ ಅಲ್ಲೇ ಹರಿಯುತ್ತಿದೆ. ನೀವು ಅಲ್ಲಿ ಹಣವನ್ನು ಹಾಕಿರುವುದರಲ್ಲಿ ತಪ್ಪೇನು ಇಲ್ಲ. ಆದರೆ ನಾಗಮಂಗಲವಾಗಲಿ ಚಿತ್ರದುರ್ಗವಾಗಲಿ ತುಮಕೂರು ಆಗಲಿ ಕೋಲಾರ ಆಗಲಿ ಅದಕ್ಕಿಂತ ಹೆಚ್ಚಿಗೆ ಹಿಂದುಳಿದಿವೆ. ಆದ್ದರಿಂದ ಇವುಗಳ ಬೆಳವಣಿಗೆಗೂ ಕೂಡ ವಿಶಿಷ್ಟವಾದ ಅವಕಾಶವನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ.ಹೆಚ್ ಬನ್ನಿಕೋಡ್:- ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಎಂದು ಮಾಡಿರುವಂತೆಯೇ ಧಾರವಾಡ ಬಿಜಾಪುರ ಬೆಳಗಾಂ ಮತ್ತು ಕಾರವಾರಗಳಲ್ಲೂ ಕೂಡ ಅಭಿವೃದ್ಧಿ ಮಂಡಲಿ ಎಂದು ಮಾಡತಕ್ಕದ್ದು ಅವಶ್ಯಕತೆ ಇದೆ. ಬಿಜಾಪುರ ಜಿಲ್ಲೆ ಹಿಂದುಳಿದಿದೆ ಎಂದು ತಾವೇ ಹೇಳಿದ್ದರಿಂದ ಈ ಭಾಗಕ್ಕೂ ಅಭಿವೃದ್ಧಿ ಮಂಡಳಿ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಮಂಡ್ಯ ಜಿಲ್ಲೆಯನ್ನು ತೆಗೆದುಕೊಂಡಂತೆ ಅಲ್ಲಿ ವಿಶ್ವೇಶ್ವರಯ್ಯ ನಾಲೆ ಬಂದಿದ್ದರಿಂದ ಮಂಡ್ಯ ಜಿಲ್ಲೆ ಬಹಳ ಸಂಪದ್ಭರಿತವಾಗಿದೆಯೆಂದು ಗೊತ್ತಾಗುತ್ತದೆ. ಆದರೆ ನಾಗಮಂಗಲ ತಾಲ್ಲೂಕು ಹಾಗೆ ಹೈದರಾಬಾದ್ ಕರ್ನಾಟಕಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಎಲ್ಲ ವಿಧದಿಂದಲೂ ಕೆಳಮಟ್ಟದಲ್ಲಿದೆಯೆಂಬುದು ಸ್ಥಳೀಯವಾಗಿ ನಮಗೆ ಅರ್ಥವಾಗುತ್ತದೆ. ಆದ್ದರಿಂದ ಮಾನ್ಯ ಲಕ್ಕಪ್ಪನವರು ಹೇಳಿದಂತೆ ಇದಕ್ಕೂ ಕೂಡ ಒಂದು ಸಮಗ್ರ ಚಿಂತನೆಯನ್ನೂ ಸರ್ಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ವೀರೇಂದ್ರಪಾಟೀಲ್: ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಮಾಡಬಾರದೆಂತು ನಾನು ಹೇಳುತ್ತಿಲ್ಲ. ನಾನು ಮುಖ್ಯ ಮಂತ್ರಿಯಾಗಿರತಕ್ಕದ್ದು ಕೇವಲ ಹೈದರಾಬಾದ್, ಕರ್ನಾಟಕಕ್ಕೆ ಮಾತ್ರವಲ್ಲ. ಇಡೀ ಕರ್ನಾಟಕ ರಾಜ್ಯಕ್ಕೇ ನಾನು ಮುಖ್ಯ ಮಂತ್ರಿಯಾಗಿದ್ದೇನೆ. ಇಡೀ ಕರ್ನಾಟಕ ರಾಜ್ಯದ ಅಭಿವೃದ್ಧಿಗಾಗಿ ನಾನು ಶ್ರಮಿಸಬೇಕಾದ್ದು ನನ್ನ ಧರ್ಮ ಮತ್ತು ಕರ್ತವ್ಯ. ಆದರೆ ನಾನು ಇದನ್ನು ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ ಇದಕ್ಕೆ ಒಂದು ಹಿಸ್ಟಾರಿಕಲ್ ಬ್ಯಾಕ್‌ಗ್ರೌಂಡ್ ಇದೆ. ಮತ್ತು ಇದು ಬಹಳ ದಿವಸಗಳಿಂದ ಈ ಬೇಡಿಕೆ ಇತ್ತು. ಅದು ಇವತ್ತು ಸಹಕಾರಿಯಾಗಿದೆ ಎಂದು ನಾನು ಹೇಳಿದೆ. ಮಾನ್ಯ ಶಿವರಾಮೇಗೌಡರು ಹೇಳಿದಂತೆ, ಮಾನ್ಯ ಲಕ್ಕಪ್ಪನವರು ಹೇಳಿದಂತೆ ಬ್ಯಾಕ್‌ವರ್ಡ್ ಪಾಕೆಟ್ಸ್ ಎಲ್ಲ ಕಡೆಯಲ್ಲೂ ಇವೆ. ಇಲ್ಲ ಎಂದು ನಾನು ಹೇಳುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾನು ಮಾನ್ಯ ಮುಖ್ಯ ಮಂತ್ರಿಗಳ ಕಛೇರಿಗೆ ಹೋದಾಗ ನಾಗಮಂಗಲ ನನಗೆ ಚೆನ್ನಾಗಿ ಗೊತ್ತಿದೆ. ಅದು ಬಹಳ ಹಿಂದುಳಿದಿದೆ ಎಂದು ಇವತ್ತಿಗೂ ಕೂಡ ಹೇಳುತ್ತಿರುತ್ತಾರೆ ಬೇಕಾದರೆ ನೀವೇ ಕೇಳಿನೋಡಿ.

ಶ್ರೀ ಡಿ. ಹಲಗೇಗೌಡ:- ಕರ್ನಾಟಕ ಆಗುವುದಕ್ಕಿಂತ ಮೊದಲು ಹಳೇ ಮೈಸೂರಿನ ಜನರು ಕರ್ನಾಟಕ ಆಗುವುದು ಬೇಡವೆಂದು ವಿರೋಧ ವ್ಯಕ್ತ ಮಾಡಿದರು. ಏಕೆಂದರೆ ಹಳೇ ಮೈಸೂರು ಭಾಗವನ್ನು ಕಡೆಗಣಿಸುತ್ತಾರೆ ಎನ್ನತಕ್ಕ ಭಾವನೆಯಿಂದ ಅಷ್ಟೆ. ಈಗ ಅದನ್ನು ಬಿಟ್ಟು ಬೇರೆ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದಾದರೆ ನಮ್ಮ ಕರ್ನಾಟಕ ಏಕೀಕರಣ ಏತಕ್ಕಾದರೂ ಆಯಿತೋ ಎಂಬ ಭಾವನೆ ಅವರ ಮನಸ್ಸಿನಲ್ಲಿ ಬರುವುದು ಬೇಡ.

ಶ್ರೀ ವಾಟಾಳ್‌ನಾಗರಾಜ್: ಕರ್ನಾಟಕ ಏಕೀಕರಣ ಒಂದೇ. ಅದರಲ್ಲಿ ಅಪಸ್ವರ ಬೇಡ. ಕರ್ನಾಟಕ ಒಂದೇ ಕನ್ನಡ ನೆಲ ಒಂದೇ ಇದರಲ್ಲಿ ಹೊಸ ಮೈಸೂರು ಹಳೇ ಮೈಸೂರು ಎಂದು ಏನೂ ಇಲ್ಲ. ನಾವು ಇದನ್ನು ಒಪ್ಪುವುದಿಲ್ಲ. ಕರ್ನಾಟಕ ಏಕೀಕರಣಕ್ಕೆ ಅನೇಕ ಜನರು ಶ್ರಮಿಸಿದ್ದಾರೆ. ಆದ್ದರಿಂದ ಹೈದರಾಬಾದ್ ಕರ್ನಾಟಕಕ್ಕೆ ದುಡ್ಡು ಕೊಟ್ಟಿದ್ದಾರೆ ಸಂತೋಷ. ಅದೇ ರೀತಿ ನಮ್ಮ ಚಾಮರಾಜ ನಗರಕ್ಕೂ ದುಡ್ಡು ಕೊಟ್ಟುಬಿಟ್ಟರೆ ನನಗೂ ಸಂತೋಷ.

ಶ್ರೀ ವೀರೇಂದ್ರಪಾಟೀಲ್:- ನಾನು ಅದನ್ನೇ ಹೇಳುತ್ತಿದ್ದೆ. ಇವತ್ತು ಯಾವುದಾದರೂ ಒಂದು ಏರಿಯಾಕ್ಕೆ ಅಥವಾ ಒಂದು ಪ್ರದೇಶಕ್ಕೆ ನಿರ್ಲಕ್ಷ್ಯಮಾಡಿ ಇನ್ನೊಂದು ಪ್ರದೇಶದ ಬೆಳವಣಿಗೆ ಮಾಡಬೇಕೆನ್ನುವ ಪ್ರವೃತ್ತಿ ಸರ್ಕಾರಕ್ಕೆ ಇಲ್ಲ ನನ್ನದೂ ಇಲ್ಲ. ಆದರೆ ಸ್ವಲ್ಪಮಟ್ಟಿಗೆ ಹೇಳುವುದಾದರೆ ಮನೆಯಲ್ಲಿ 2-3 ಮಕ್ಕಳಿದ್ದು ಅದರಲ್ಲಿ ಒಂದಕ್ಕೆ ಏನಾದರೂ ಟಿ.ಬಿ ಆಗಿದ್ದರೆ ಅದಕ್ಕೆ ಹೆಚ್ಚಿನ ಗಮನವನ್ನು ಕೊಡುತ್ತೇವೆ. ಇಲ್ಲವೇ ಬಹಳ ವೀಕ್ ಇದ್ದರೆ ಅದಕ್ಕೆ ಹೆಚ್ಚು ವಿಟಮಿನ್ ಕೊಡ ಬೇಕಾಗುತ್ತದೆ. ಅಂದರೆ ಇದರ ಅರ್ಥ ಎಲ್ಲ ಅವರಿಗೇನೇ ಕೊಟ್ಟು ಬಿಡುತ್ತೇವೆಂದಲ್ಲ.

ಶ್ರೀ ವಾಟಾಳ್‌ನಾಗರಾಜ್:- ನೀವು ಆರೋಗ್ಯವಾಗಿರುವುದರಿಂದಲೇ ಮುಖ್ಯಮಂತ್ರಿಗಳಾಗಿರುವುದು.

ಶ್ರೀ ವಿರೇಂದ್ರ ಪಾಟೀಲ್:-ನನ್ನ ಆರೋಗ್ಯ ಮಾತ್ರವಲ್ಲ ಕರ್ನಾಟಕದ ಜನತೆಯ ಆರೋಗ್ಯವನ್ನು ಸಹನೋಡಿಕೊಳ್ಳಬೇಕಾದ ಜವಾಬ್ದಾರಿ ನನ್ನ ಮೇಲೆ ಇದೆ. ಆದ್ದರಿಂದ ಯಾವುದೇ ಪ್ರದೇಶಕ್ಕೆ ನಿರ್ಲಕ್ಷ್ಯ ಮಾಡಿ ಇನ್ನೊಂದು ಪ್ರದೇಶಕ್ಕೆ ಬೆಳವಣಿಗೆ ಮಾಡಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಪರಿಸ್ಥಿತಿಯ ಬಗ್ಗೆ ಸರ್ಕಾರದ ಧೋರಣೆಯನ್ನು ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡುತ್ತೇನೆ. ಸರ್ವೆಸಾಮಾನ್ಯವಾಗಿ ನಮ್ಮ ಕರ್ನಾಟಕದಲ್ಲಿ ಕಾನೂನಿನ ವ್ಯವಸ್ಥೆ ಲಾ ಅಂಡ್ ಆರ್ಡರ್ ಸಮಾಧಾನಕಾರಕವಾಗಿಯೇ ಇದೆ ಎಂದು ತಮ್ಮ ಮುಂದೆ ಸ್ಪಷ್ಟಪಡಿಸುತ್ತೇನೆ. ಆದರೆ ದೊಡ್ಡ ರಾಜ್ಯ ಬಹುಶಃ ನಾಲ್ಕು ಕೋಟಿ ಜನಸಂಖ್ಯೆ 27 ಸಾವಿರ ಹಳ್ಳಿಗಳು ನೂರಾರು ಪಟ್ಟಣಗಳು ಇರುವಾಗ ಅಲ್ಲಿ ಇಲ್ಲಿ ಘರ್ಷಣೆ ಆಗುತ್ತದೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಸಮಗ್ರದೃಷ್ಟಿಯಿಂದ ನೋಡಿದರೆ ಕರ್ನಾಟಕದಲ್ಲಿ ಕಳೆದ 6 ತಿಂಗಳಿಂದ ಲಾ ಅಂಡ್ ಆರ್ಡರ್ ಬಹಳ ನೆಮ್ಮದಿಯಿಂದ ಇದೆ. ಸಮಾಧಾನಕಾರಕವಾಗಿದೆ. ಅಲ್ಲಲ್ಲಿ ಒಂದೆರಡು ಅಂದರೆ ಗುಲ್ಬರ್ಗಾದಲ್ಲಿ ಅದೂ ನನ್ನ ಜಿಲ್ಲೆಯಲ್ಲಿಯೇ ಫೈರಿಂಗ್ ಆಯಿತು. ಆಗ ಮೂರು ಜನರು ಸತ್ತರು. ಇದಕ್ಕೆ ಕಾರಣವೇನೆಂದರೆ ಇಬ್ಬರು ಜಗಳ ಆಡಿದ್ದರು ಅದಕ್ಕಾಗಿ ಯಾರನ್ನೋ ಲಾಕಪ್‌ಗೆ ಹಾಕಿದ್ದರು. ಅಲ್ಲಿ ರಾತ್ರಿ ಒಬ್ಬ ಸತ್ತಿದ್ದರಿಂದ ಆತನನ್ನು ಬಡಿದು ಸಾಯಿಸಿದರು ಎಂದು ಜನ ರೊಚ್ಚಿಗೆದ್ದು ಪೋಲೀಸ ಸ್ಟೇಷನ್ ಮೇಲೆ ಅಟ್ಯಾಕ್ ಮಾಡಲು ಹೋದಾಗ ಪೋಲೀಸ್‌ನವರಿಂದ ಫೈರಿಂಗ್ ಆಯಿತು. ಇದರ ಬಗ್ಗೆ ಜುಡೀಷಿಯಲ್ ಎನ್‌ಕ್ವಯರಿ ಆಗುತ್ತಿದೆ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಲಾ ಅಂಡ್ ಆರ್ಡರ್ ಸಮಾಧಾನಕಾರಕವಾಗಿದೆ ಎಂದು ಹೇಳುತ್ತೇನೆ. ಅದೇ ರೀತಿಯಲ್ಲಿ ಮತೀಯ ಗಲಭೆಗಳು ಬಹಳಮಟ್ಟಿಗೆ ಸಮಾಧಾನಕಾರಕವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. 16-17 ಘಟನೆಗಳು ನಡೆದಿವೆ. ಇಲ್ಲವೆಂದು ನಾನು ಹೇಳುವುದಿಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ಮುಳುಬಾಗಲಿನಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯಿತ್ತು. ಮೈಸೂರಿನಲ್ಲಿ ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಅದೇ ರೀತಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಹೀಗೆ ಎರಡುಮೂರು ಕಡೆ ಬಿಟ್ಟರೆ ಇನ್ನುಳಿದ ಕಡೆಗಳಲ್ಲಿ ಮತೀಯಸೌಹಾರ್ದಕ್ಕೆ ಧಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿಲ್ಲ. ಅನೇಕ ಮಾನ್ಯ ಸದಸ್ಯರು ಮಾತನಾಡುವಾಗ ಹಿಂದೆ ಇಷ್ಟೇ ಆಗಿತ್ತು. ನಿಮ್ಮ ಕಾಲದಲ್ಲಿ ಜಾಸ್ತಿ ಆಯಿತು ಎಂದು ಭಾಷಣ ಮಾಡುವಾಗ ಕೇಳಿದರು. ಆದರೆ ಒಂದನ್ನು ಮರೆಯಬಾರದು. ನಮ್ಮ ದೇಶದ ದುರ್ದೈವ ಮೊದಲನೆಯ ಸಲ ಇಂಥ ಒಂದು ವಾತಾವರಣ ನೋಡುತ್ತಿದ್ದೇವೆ. ಫಂಡ್‌ಮೆಂಟಾಲಿಸಮ್‌ಗೆ ಸಾಕಷ್ಟು ಪ್ರೊಟೆಕ್ಷನ್ ಸಿಕ್ಕುತ್ತಿದೆ. ಜವಾಬ್ದಾರಿ ಇರುವಂಥ ರಾಜಕೀಯ ಪಕ್ಷಗಳು ಈ ಫಂಡ್‌ಮೆಂಟಾಲಿಸಮ್‌ಗೆ ಸಾಕಷ್ಟು ಪ್ರೋತ್ಸಾಹ ಮತ್ತು ಪುರಸ್ಕಾರ ನೀಡುತ್ತಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಇದರಿಂದಾಗಿ ಸ್ವಲ್ಪಮಟ್ಟಿಗೆ ಘರ್ಷಣೆಗಳು ಹೆಚ್ಚಾಗುವ ಸಂಬಂಧವಿದೆ. ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಏನೋ ನಡೆದರೆ ಅದರ ಪರಿಣಾಮ ಇಲ್ಲಿಯೂ ಆಗುತ್ತದೆ. ಅಯೋಧ್ಯೆಯಲ್ಲಿ ಏನೋ ಮಾಡಬೇಕಾಗಿದೆ ಎಂದರೆ ಇಲ್ಲಿಯೂ ಮೆರವಣಿಗೆ ನಡೆಯುತ್ತದೆ. ಈ ರೀತಿಯಿಂದ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ತಾವು ಅಯೋಧ್ಯೆಯ ಹೆಸರನ್ನು ಹೇಳಿದಿರಿ. ಇಡೀ ದೇಶದಲ್ಲಿರುವ ಹಿಂದೂ ಜನರು ಅಯೋಧ್ಯೆಯಲ್ಲಿ ಶ್ರೀರಾಮನ ದೇವಸ್ಥಾನ ಕಟ್ಟುವಂಥ ಸಂದರ್ಭದಲ್ಲಿ ಅದೊಂದು ಪವಿತ್ರ ಕಾರ್ಯವೆಂದು ತಿಳಿದುಕೊಂಡು ದೇಶದ ಎಲ್ಲ ಕಡೆಯೂ ಇಟ್ಟಿಗೆಗಳಲ್ಲಿ ಶ್ರೀರಾಮನ ಹೆಸರು.....

SRI QAMARUL ISLAM:- I am on a point of order.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಹೇಳುವಂಥದ್ದನ್ನು ಕೇಳಬೇಕು. ನಾನು ಇನ್ನೂ ಪೂರ್ತಿಮಾಡಿಲ್ಲ.

SRI QAMARUL ISLAM:- Sir, that is a matter of dispute. That is before the Court. That cannot be discussed here. That is a disputed place. That is before the Court. It cannot be discussed here.

(INTERRUPTION)

MR. SPEAKER: Order Order.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ ಕೋರ್ಟಿನ ವ್ಯವಹಾರದ ಬಗ್ಗೆ ನಾನು ಮಾತನಾಡುವುದಕ್ಕೆ ಹೊರಟಿಲ್ಲ. ಈ ಕೋಟ್ಯಾಂತರ ದೇಶದ ಹಿಂದೂಗಳ ಭಾವನೆಗೆ ಆತಂಕ ತರುವ ಮಾತು ಈ ಮುಖ್ಯ ಮಂತ್ರಿಗಳ ಬಾಯಲ್ಲಿ ಬರಬಾರದೆಂದು ಹೇಳುತ್ತಿದ್ದೇನೆ. ಇವೊತ್ತು ದೇಶದ ಎಲ್ಲ ಕಡೆಗಳಿಂದ ಇಟ್ಟಿಗೆಗಳನ್ನು ತೆಗೆದುಕೊಂಡು ಹೋದರು ಎಂಬುದು ಆಭಾಸ ಆಗುವುದಿಲ್ಲ. ಆ ಅರ್ಥ ಬಂದರೆ ತಪ್ಪಾಗುತ್ತದೆ. ಈ ರೀತಿಯ ಮಾತನ್ನು ಜನತೆ ರಾಜ್ಯದ ಮುಖ್ಯ ಮಂತ್ರಿಗಳಿಂದ ನಿರೀಕ್ಷಿಸುವುದಿಲ್ಲ......

(INTERRUPTION)

MR. SPEAKER:- Order, Order..

ಶ್ರೀ ಬಿ.ಎಸ್.ಯಡಿಯೂರಪ್ಪ:- ನನಗಿರುವ ಸ್ವಾತಂತ್ರ್ಯವನ್ನು ಯಾರೂ ತಡೆಯುವುದಕ್ಕೆ ಸಾಧ್ಯವಿಲ್ಲ. ಕೋರ್ಟಿನ ವಿಷಯವನ್ನು ನಾನು ಪ್ರಸ್ತಾಪ ಮಾಡಲಿಲ್ಲ. ಇವತ್ತು....

(INTERRUPTION)

MR. SPEAKER:- Order, Order

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ಕರ್ನಾಟಕದಿಂದ ಯಾವುದಾದರೂ ಕಾರಣಕ್ಕಾಗಿ ಮಠಾಧಿಪತಿಗಳು ಕೆಲಸ ಮಾಡುವಂತಹ ಸಮಯದಲ್ಲಿ.....

ಅಧ್ಯಕ್ಷರು:- ಮುಖ್ಯ ಮಂತ್ರಿಗಳು ಅಯೋಧ್ಯೆ ಎಂಬ ಒಂದು ಮಾತು ಹೇಳಿದರು ಅಷ್ಟೆ. ಅವರು ಮುಂದಕ್ಕೆ ಹೋಗುವುದಕ್ಕೆ ನೀವು ಅವಕಾಶವನ್ನೇ ಕೊಡಲಿಲ್ಲ. ಅವರು ಏನು ಹೇಳುತ್ತಾರೆಂದು ಕೇಳೋಣ.

(INTERRUPTION)

ಅಧ್ಯಕ್ಷರು: ನಾನು ಮಾನ್ಯ ಸದಸ್ಯರ ವರ್ತನೆಯನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. I call the Member from Nagamangala to order. You will have to resume your seat. There should be a limit to such interruptions. Would you kindly resume your seat? I am not going to call you. Would you kindly resume your seat?

You are a new Member to this House. You should have some respect for the Rules of Procedure and Conduct and behaviour. I know how to control this House.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ ಮುಖ್ಯ ಮಂತ್ರಿಗಳು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಅಯೋಧ್ಯೆ ಹೆಸರು ಹೇಳಿದ ಸಂದರ್ಭದಲ್ಲಿ ಸಹಜವಾಗಿ ಅಯೋಧ್ಯೆಯಲ್ಲಿ ಏನೋ ಆಗುತ್ತದೆಂದರೆ ಕರ್ನಾಟಕದಲ್ಲಿ ಈ ರೀತಿ ಆಗುವ ಅಗತ್ಯ ಇಲ್ಲವೆಂದರೆ ಅರ್ಥವೇನು? ಎಲ್ಲರಿಗೂ ಗೊತ್ತಿರುವಂತೆ ಅಯೋಧ್ಯೆಯಲ್ಲಿ ದೇವಸ್ಥಾನವನ್ನು ಕಟ್ಟುವುದಕ್ಕೆ ಬೇಕಾದ ಇಟ್ಟಿಗೆಯನ್ನು ದೇಶದ ಮೂಲೆ ಮೂಲೆಗಳಿಂದ ತೆಗೆದುಕೊಂಡು ಮೆರವಣಿಗೆಯಲ್ಲಿ ಹೋದರು. ಆ ಒಂದು ಹಿನ್ನೆಲೆಯಲ್ಲಿ ಹೇಳಿದರು......

MR.SPEAKER:- It is a far-fatched argument.

(ಗೊಂದಲ)

SRI.QUMARUL ISLAM:- I am very happy that our State is famous for communal harmony. Very rightly, our Hon'ble Chief Minister pointed out that any decision which takes place at Ayodhya has got its effect here. So, some steps should be taken in this regard i.e., on rising fundamentalism and communalism in our State. Therefore, let us see what steps our Chief Minister is going to take. We must hear our Hon'ble Chief Minister. Everybody knows that a decision was taken to dismantle Babri Masid and construct a Ram Mandir on a disputed piece of land. When the case is before the Court, it should not be discussed here.

MR. SPEAKER:- He did not touch upon any of those subjects.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಹೇಳುವುದು ಇಷ್ಟೆ ಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಯಾವುದನ್ನು ಹೇಳಬೇಕೆಂದು ಹೊರಟಿದ್ದರು ಆದರಿಂದ ಈ ದೇಶದ ಕೋಟ್ಯಾಂತರ ಜನ ಹಿಂದೂಗಳ ಪರವಾಗಿ ಬೇರೆಯವರು ಮಾತನಾಡಲು ಹಿಂದುಮುಂದು ನೋಡಿದರೆ ನಾನು ಮಾತನಾಡುವುದಕ್ಕೆ ಸಿದ್ಧವಾಗಿದ್ದೇನೆ. ಮೆರವಣಿಗೆ ಮಾಡುವವರ ಮೇಲೆ ಅಡ್ಡಿ ಮಾಡುವುದಕ್ಕೆ ಬಂದವರ ಮೇಲೆ ಕ್ರಮ ತೆಗೆದುಕೊಳ್ಳಬೇಕೇ ಹೊರತು ಈ ಬಗ್ಗೆ ಬೇರೆ ಅರ್ಥಕೊಡುವ ರೀತಿಯಲ್ಲಿ ಹೇಳುವುದು ಮುಖ್ಯ ಮಂತ್ರಿಗಳಿಗೆ ಸಲ್ಲದು ಮೆರವಣಿಗೆ ಮಾಡುವುದಕ್ಕೆ ಅಡ್ಡಿ ಪಡಿಸುವವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕಾಗಿಯೇ ಮುಖ್ಯಮಂತ್ರಿಗಳಿರುವುದು. ಅದನ್ನು ಹೇಳಲು ನಾನು ಹೊರಟಿದ್ದೇ ಹೊರತು ಬೇರೆ ವಿಚಾರ ಹೇಳಲು ಅಲ್ಲ.

ಶ್ರೀ ಕೆ. ಹರ್ಷಕುಮಾರ್ ಗೌಡ:- ನಾವು ಸೆಕೆಂಡ್ ಗ್ರೇಡ್ ಹಿಂದುಗಳಲ್ಲ ಈ ದೇಶದಲ್ಲಿ. ಹಿಂದೂಗಳ ಹೆಸರಿನಲ್ಲಿ ಏನು ಬೇಕಾದರೂ ಮಾಡುವುದು ಬೇಡ. ಮುಖ್ಯಮಂತ್ರಿಗಳು ಏನು ಹೇಳಿದರು ಅಯೋಧ್ಯೆ ಎಂದು ಹೇಳಿದ ತಕ್ಷಣ ಹಿಂದೂಗಳಿಗೆ ಆತಂಕ ಬರುತ್ತದೆ ಎಂದು ಕೆಲವು ಮಾತುಗಳನ್ನು ಯಡಿಯೂರಪ್ಪನವರು ಹೇಳಿದರು. ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕೆಂದು ನನ್ನ ಪ್ರಾರ್ಥನೆ. ನಾವು ಹಿಂದೂಗಳೆ. ನಾವು ಯಡಿಯೂರಪ್ಪನವರಿಗಿಂತ ಯಾವ ರೀತಿಯಿಂದಲೂ ಕಡಿಮೆ ಇಲ್ಲ.

ಶ್ರೀ ಬಿ.ಎಸ್ ಯಡಿಯೂರಪ್ಪ:- ನೀವು ಹಿಂದುಗಳಲ್ಲವೆಂದು ನಾನು ಎಂದೂ ಹೇಳಿಲ್ಲ. ನಾನು ಹೇಳುವುದಕ್ಕೆ ಹೊರಟಿದ್ದು ಏನೆಂದರೆ ಕೋಟ್ಯಾಂತರ ಜನ ಹಿಂದೂಗಳಿಗೆ ಅವರ ಭಾವನೆಗಳಿಗೆ ಧಕ್ಕೆ ತರುವಂಥ ಅಶಾಂತಿ ತರುವಂಥ ಕೆಲಸವನ್ನು ರಾಜ್ಯದ ಮುಖ್ಯಮಂತ್ರಿಗಳು ಮಾಡಬಾರದು ಎಂದು ಹೇಳಿದೆನೆ ಹೊರತು ಬೇರೆ ಯಾವ ಮಾತನ್ನು ಹೇಳಲಿಲ್ಲ;

ಶ್ರೀ ಕೆ. ಹರ್ಷಕುಮಾರ್‌ಗೌಡ:- ಕೇಂದ್ರಸರ್ಕಾರ ಇಂದು ಇಡೀ ದೇಶದಲ್ಲೇ ಗಂಡಾಂತರ ತಂದಿಟ್ಟಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಮುಖ್ಯಮಂತ್ರಿಗಳು ಅಯೋಧ್ಯೆ ಎಂದು ಹೇಳಿದತಕ್ಷಣ ಹಿಂದೂಗಳ ವಿರುದ್ಧವಾದ ಮಾತುಗಳು ಮುಖ್ಯಮಂತ್ರಿಗಳ ಬಾಯಿಯಿಂದ ಬರಬಾರದು ಎಂಬ ಮಾತನ್ನು ಮಾನ್ಯ ಯಡಿಯೂರಪ್ಪನವರು ಹೇಳಿದ್ದಲ್ಲದೆ ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ಅದಕ್ಕೆ ನಾವು ಆಕ್ಷೇಪಣೆ ವ್ಯಕ್ತ ಮಾಡಿದ್ದೇವೆ. ಆಗ ತಾವು ನಮ್ಮನ್ನು ಹೆದರಿಸಿ ಕೂರಿಸಿದಿರಿ ನಾವು ಕುಳಿತುಕೊಂಡೆವು. ಆದರೆ ಅವರು ಹೇಳಿರುವುದು ರೆಕಾರ್ಡ್‌ಗೆ ಹೋಗಿದೆ. ಇದು ಗಂಭೀರವಾದ ಪ್ರಶ್ನೆ? ಇದು ಪತ್ರಿಕೆಯವರೂ ಇಲ್ಲಿದ್ದಾರೆ. ಹಿಂದೂಗಳ ಹೆಸರನ್ನು ಮುಖ್ಯಮಂತ್ರಿಗಳು ಬಳಕೆ ಮಾಡುತ್ತಿದ್ದಾರೆಂದು ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದಾರೆ. ದಯವಿಟ್ಟು ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕು.

ಶ್ರೀ ಕೆ. ಹರ್ಷಕುಮಾರ್ ಗೌಡ:- ನಮ್ಮ ನಾಯಕರು ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್:- ನಿಜವಾಗಿ ಇದು ದುರಾದೃಷ್ಟಕರ. ತಾವೇ ಅಪ್ಪಣೆ ಕೊಡಿಸಿದ ಹಾಗೆ ಅಯೋಧ್ಯೆ ಎಂದು ಒಂದು ಪದ ಉಪಯೋಗ ಮಾಡಿದೆ ಅಷ್ಟೆ. ಮುಂದಕ್ಕೆ ನಾನು ಹೋಗಲಿಲ್ಲ. ನಾನು ಏನು ಹೇಳುತ್ತೇನೆ ಎಂಬುದನ್ನು ಕೇಳತಕ್ಕ ಒಂದು ಸಹಿಷ್ಣುತೆಯನ್ನು ಸಹ ಮಾನ್ಯ ಯಡಿಯೂರಪ್ಪನವರು ತೋರಿಸಲಾರದೆ ಓಹೋ ನೀವು ಇದನ್ನೇ ಹೇಳಲು ಹೊರಟಿದ್ದೀರಿ ಎಂದು ಅವರೇ ಊಹೆ ಮಾಡಿಕೊಂಡು ಎಲ್ಲಾ ಹೇಳಿಬಿಟ್ಟರು. ಅವರ ಅಭಿಪ್ರಾಯವನ್ನು ಅವರು ಹೇಳಿದರೇ ಹೊರತು ಅದು ನನ್ನ ಅಭಿಪ್ರಾಯ ಅಲ್ಲ. ಬಹುಶಃ ಅದನ್ನು ನನ್ನ ಬಾಯಿಯಲ್ಲಿ ಇಟ್ಟು ಹೇಳಿಸಬೇಕು ಎಂದು ಭಾವನೆ ಮಾಡಿದ್ದಾರೋ ಏನೋ ಗೊತ್ತಿಲ್ಲ; ಆದರೆ ಅದನ್ನು ನಾನು ಹೇಳಲಿಕ್ಕೆ ತಯಾರಿಲ್ಲ. ಈಗ ನಮ್ಮ ಮುಂದೆ ಇದ್ದಂಥ ವಿಚಾರಗಳನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಇದನ್ನು ತಾವು ವಿಚಾರ ಮಾಡಬೇಕು. ಈಗ ಜನರ ಪ್ರವೃತ್ತಿ ಏನಿದೆ? ಯಾರಾದರೂ ತಂದೆತಾಯಿಗಳನ್ನು ಕೇಳಿರಿ. They always prefer private schools to the Government Schools. ಏಕೆ? ಇವತ್ತು ಆರು ತಿಂಗಳಿಂದ ನನ್ನ ಸರ್ಕಾರ ಇದೆ. ನಮ್ಮ ಪ್ರೈಮರಿ ಸ್ಕೂಲ್‌ನಲ್ಲಾಗಲಿ ನಮ್ಮ ಹೈಸ್ಕೂಲ್‌ನಲ್ಲಾಗಲೀ ನಮ್ಮ ಸೆಕೆಂಡರಿ ಸ್ಕೂಲ್‌ನಲ್ಲಾಗಲೀ ನಮ್ಮ ಕಾಲೇಜ್‌ನಲ್ಲಿ ಆಗಲಿ We have been sucessfull in giving ideal education ಎನ್ನುವ ಪರಿಸ್ಥಿತಿಯಲ್ಲಿ ನಾನಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಪರಿಸ್ಥಿತಿ ಏನಾಗಿದೆ? ಬಹುಶಃ ಇದು ಹೇಳಿದರೆ ಕೆಲವರಿಗೆ ಕಷ್ಟ ಆಗಬಹುದು. ಅನೇಕ ಕಡೆ ಸ್ಕೂಲುಗಳು ಇವೆ. ಇತ್ತೀಚೆಗೆ ಏನೋ ಮಂಡಲಪಂಚಾಯತಿ ಮತ್ತು ಜಿಲ್ಲಾ ಪರಿಷತ್ತುಗಳು ಬಂದಮೇಲೆ ಸ್ವಲ್ಪಮಟ್ಟಿಗೆ ಕಂಟ್ರೋಲ್ ಇದೆ. ಇಲ್ಲದೇ ಹೋದರೆ ಆ ಸ್ಕೂಲ್ ಟೀಚರ್ ಸ್ಕೂಲಿಗೆ ಹೋಗುವುದು ತಿಂಗಳಲ್ಲಿ ಮೂರು-ನಾಲ್ಕು ದಿವಸ ಮಾತ್ರ. ಮತ್ತೆ ಕೆಲವರು ಸಂಬಳ ತೆಗೆದುಕೊಳ್ಳುವುದಕ್ಕೆ ಶಾಲೆಗೆ ಹೋದರೆ ಪುನಃ ಶಾಲೆಗೆ ಹೋಗುವುದು ಸಂಬಳ ತೆಗೆದುಕೊಳ್ಳುವುದಕ್ಕೇನೆ. ಇಂಥವರು ಕೆಲವರು ಇದ್ದಾರೆ. ಅಂದರೆ ಈಮಕ್ಕಳು ಏನು ಓದಬೇಕು? ಅವರು ಎಜ್ಯುಕೇಶನ್ ಸ್ಟ್ಯಾಂಡರ್ಡ್ ಏನಾಗಬೇಕು? ಅಥವಾ 50-100-200ಮಕ್ಕಳು ಇದ್ದಾಗ ಒಬ್ಬನೇ ಒಬ್ಬ ಸಿಂಗಲ್ ಟೀಚರ್ ಇದ್ದಾಗ ಏನು ಮಾಡಬೇಕು? ಕೆಲವು ಸಲ ನಾವು ಮಾತನಾಡುತ್ತೇವೆ ಇಬ್ಬರು ಟೀಚರ್ಸ್‌ನ್ನು ಹಾಕೋಣ ಅಂತ. ಕೆಲವು ಕಡೆ ಏನಾಗುತ್ತದೆ ಎಂದರೆ ಇಬ್ಬರು ಟೀಚರ್ಸ್‌ನ್ನು ಹಾಕಿದರೆ ಅವರು ಅಲ್ಲಿ ಅಂಡರ್ ಸ್ಟ್ಯಾಂಡಿಂಗ್ ಮಾಡಿಕೊಳ್ಳುತ್ತಾರೆ. ಹದಿನೈದು ದಿವಸ ನೀನು ಓದಿಸು ಹದಿನೈದು ದಿವಸ ನಾನು ಓದಿಸುತ್ತೇನೆ ಅಂತ. ಹದಿನೈದು ದಿವಸ ನೀನು ಹೋಗಿಬಾ ಹದಿನೈದು ದಿವಸ ನಾನು ಹೋಗಿಬರುತ್ತೇನೆಂದು ಮಾತನಾಡಿಕೊಳ್ಳುತ್ತಾರೆ. ನಾನು ಇದ್ದುದನ್ನು ಹೇಳುತ್ತಾ ಇದ್ದೇನೆ ಅನುಭವದ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಬೋರ್ಡುಗುಮಾಸ್ತೆ ಅಂತ ಇರುತ್ತಾರೆ. ಅವರು ಏನು ಮಾಡುತ್ತಾರೆ ಎಂದರೆ ಇನ್ನೊಬ್ಬ ಗುಮಾಸ್ತನನ್ನು ತಮ್ಮ ಕೆಲಸ ಮಾಡುವುದಕ್ಕೆ ಇಟ್ಟುಕೊಂಡು ತಿಂಗಳಿಗೆ ಇನ್ನೂರು ರೂಪಾಯಿ ಕೊಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್:- ಅವರು ಹೇಳಿದ್ದರಲ್ಲಿ ಸುಳ್ಳು ಇದೆ ಎಂದು ನಾನು ಹೇಳುವುದಿಲ್ಲ. ಇವತ್ತು ಅದೇ ಜಿಲ್ಲಾಪರಿಷತ್ತುಗಳಲ್ಲಿ ಕೆಲವು ಟೀಚರ್ಸ್‌ನ್ನು ಅಪಾಯಿಂಟ್ ಮಾಡಿದರು. ಏನಪ್ಪ ಅಂದರೆ ಅವರಿಗೆ ಹಾನರರಿಯಾಗಿ ಇನ್ನೂರು ರೂಪಾಯಿ ಕೊಡುವುದಂತೆ. ನಾನು ಅದನ್ನು ಹೊಡೆದುಹಾಕಿದೆ. ಇದು ಬಹಳ ಅನ್ಯಾಯವಾಗುತ್ತದೆ. ನಾವು ಸರ್ಕಾರದಲ್ಲಿದ್ದುಕೊಂಡು ಮಿನಿಮಮ್ ವೇಜಸ್ ಆದರೂ ಕೊಡಬೇಕು. ಒಬ್ಬ ಕೂಲಿಗಾರನಿಗೆ ಕೊಡುವಷ್ಟು ಒಬ್ಬ ಗ್ರಾಜುಯೇಟ್ ಟೀಚರ್‌ಗೆ ಕೊಡುವುದಿಲ್ಲವೆಂದರೆ ಇದನ್ನು ನಾನು ಒಪ್ಪುವುದಿಲ್ಲ ಎಂದು ಜಿಲ್ಲಾ ಪರಿಷತ್ತಿನಲ್ಲಿದ್ದ ಟೀಚರುಗಳನ್ನು ನಾನು ರೆಗ್ಯುಲರೈಸ್ ಮಾಡಲಿಲ್ಲ. ಇದು ನಿಮಗೆ ನೆನಪು ಇರಬಹುದು. ಏನು ಶ್ರೀ ಗುರುಪಾದಪ್ಪನವರು ಹೇಳಿದಂತೆ ಅವನಿಗೆ ತಿಂಗಳಿಗೆ ಎಂಟುನೂರು ರೂಪಾಯಿ ಇಲ್ಲವೆ ಸಾವಿರ ರೂಪಾಯಿ ಸಂಬಳ ಬರುವುದಿದ್ದರೆ ಯಾವನಿಗೋ 200-300ಕ್ಕೋ ಸಬ್‌ಲೆಂಡಿಂಗ್ ಮಾಡುತ್ತಾನೆ. ನೀನೇ ಹೋಗಿ ಓದಿಸಿಬಿಡು ಸಂಬಳ ತಂದು ನಿನಗೆ ಕೊಡುತ್ತೇನೆ ಎಂದು ಹೇಳಿ ಆತ ಉಳಿದಿದ್ದನ್ನು ತನ್ನ ಜೇಬಿಗೆ ಹಾಕಿಕೊಂಡು ಹೋಗುತ್ತಾನೆ. ಏಕೆ ಇದನ್ನು ನಾನು ಹೇಳುತ್ತಿದ್ದೇನೆ ಎಂದರೆ ಇದನ್ನು ನಾವು ಕಡೆಗಣಿಸುವ ಹಾಗಿಲ್ಲ. We cannot brush it aside, because we are dealing with the future generation of our country. ಪರಿಸ್ಥಿತಿ ಹೀಗಿರುವುದರಿಂದ ಇದು ಎಲ್ಲಿಯತನಕ ಬರುತ್ತಿದೆ ಎಂದರೆ ನಾನು ತಮಗೆ ಹೇಳುತ್ತೇನೆ. An Attender would prefer to send his child to the Convent, whatever may be the cost of education. ಇದನ್ನು ಅಲ್ಲಗಳೆಯುವುದರಲ್ಲಿ ಅರ್ಥ ಇಲ್ಲ. ನಮ್ಮನ್ನು ನಾವು ಮುಚ್ಚಿಕೊಳ್ಳುವುದರಲ್ಲಿ ಅರ್ಥ ಇಲ್ಲ. ಇವತ್ತು ಗವರ್ನಮೆಂಟ್ ಸ್ಕೂಲ್ ಸ್ಟ್ಯಾಂಡರ್ಡ್ ಯಾವ ಮಟ್ಟದಲ್ಲಿ ಇರಬೇಕೋ ಆ ಮಟ್ಟದಲ್ಲಿ ಇಲ್ಲ. ಇದನ್ನು ನಾನು ಒಬ್ಬನೇ ವಿಚಾರ ಮಾಡುವುದಲ್ಲ. ಎಲ್ಲರೂ ವಿಚಾರ ಮಾಡಬೇಕು. ಪೂರ್ತಿ ಹೌಸ್ ವಿಚಾರ ಮಾಡಬೇಕು. ಇದರಿಂದ ಏನಾಗುತ್ತದೆ ಎಂದರೆ ನರ್ಸರಿಯಿಂದ ಕಾಲೇಜಿನವರೆಗೆ ಎಲ್ಲಾ ಸ್ಕೂಲುಗಳಲ್ಲಿ ರೊಕ್ಕದ ವ್ಯವಹಾರ ಇರುತ್ತದೆ. ಏಕೆಂದರೆ ಎಕನಾಮಿಕ್ಸ್‌ನಲ್ಲಿ ಹೇಳುವ ಹಾಗೆ ಡಿಮಾಂಡ್ ಸಪ್ಲೈಮೇಲೆ ಹೋಗುತ್ತದೆ. ಮಕ್ಕಳು ಹೆಚ್ಚು ಇದ್ದಾರೆ ಸ್ಕೂಲುಗಳು ಕಡಿಮೆಯಾಗಿವೆ. ನಾವು ಹೆಚ್ಚು ಸ್ಕೂಲುಗಳನ್ನು ತೆಗೆಯಬೇಕಾದರೆ ನಮ್ಮ ಹತ್ತಿರ ದುಡ್ಡು ಇಲ್ಲ. ಯಾರು ದುಡ್ಡಿದ್ದವರು ತೆಗೆಯುತ್ತಾರೆ ಅವರು ಅದೇ ದುಡ್ಡನ್ನು ಹಾಕಿ ವ್ಯಾಪಾರ ಮಾಡತಕ್ಕಂಥ ಪ್ರವೃತ್ತಿ ನಮ್ಮ ದೇಶದಲ್ಲಿ ಬೆಳೆಯುತ್ತಿದೆ. ಅಂದಮೇಲೆ ನಮ್ಮ ಮುಂದಿನ ಜನಾಂಗದ ಗತಿ ಏನು? ಮುಂದಿನ ಜನರೇಶನ್ ಗತಿ ಏನು? ಇದನ್ನು ನಾವು ವಿಚಾರ ಮಾಡಬೇಕಾಗಿದೆ. ನಾವು ಹೇಳಬಹುದು ಹೆಚ್ಚು ಪ್ರೈಮರಿ ಸ್ಕೂಲುಗಳನ್ನು ಮಾಡೋಣ ಎಂದು. ಇನ್ನೂ ಎರಡು-ಮೂರು ಸಾವಿರ ಪ್ರೈಮರಿ ಸ್ಕೂಲುಗಳನ್ನು ಮಾಡೋಣ; ಅಷ್ಟೇ ಮಿಡಲ್‌ಸ್ಕೂಲ್ ಕಾಲೇಜುಗಳನ್ನು ಮಾಡಬಹುದು. ಆದರೆ ಸ್ಟ್ಯಾಂಡರ್ಡ್‌ನ್ನು ಯಾವ ರೀತಿ ಕಾಪಾಡುವುದು? ಕಾನೂನು ಮಾಡಿ ಸ್ಟ್ಯಾಂಡರ್ಡ್ ಅನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ಪ್ರೈವೇಟ್ ಎಜುಕೇಷನಲ್ ಇನ್‌ಸ್ಟಿಟ್ಯೂಶನ್‌ಗಳ ಕಡೆಗೆ ಜನರ ಒಲವು ಹೆಚ್ಚಾಗುತ್ತಾ ಇದೆ. ಇದನ್ನು ವಿಚಾರ ಮಾಡಿ ನೋಡಿದರೆ ತಮ್ಮ ಮಕ್ಕಳನ್ನು ಹೆಚ್ಚಾಗಿ ಖಾಸಗಿ ಶಾಲೆಗಳಿಗೆ ಕಳಿಸಬೇಕೆಂದು ಅವರು ವಿಚಾರ ಮಾಡುತ್ತಿರುವುದನ್ನು ನೋಡಿದರೆ ನಾವು ಇದರ ಬಗ್ಗೆ ಏನು ವಿಚಾರ ಮಾಡಬೇಕು ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನು ಇಂಗ್ಲೀಷ್ ಸ್ಕೂಲುಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ನಾವು ಹೇಳುತ್ತೇವೆ ಕರ್ನಾಟಕದಲ್ಲಿ ಎಲ್ಲಾ ವ್ಯವಹಾರಗಳು ಕನ್ನಡದಲ್ಲೇ ಆಗಬೇಕು ಎಲ್ಲಾ ಕನ್ನಡದಲ್ಲೇ ಓದಿಸಬೇಕು ಎಂದು ಹೌದು; ಸರಿ; ಇಲ್ಲಿ ಕುಳಿತು ಹೇಳುತ್ತೇವೆ ಹೊರಗಡೆ ಕುಳಿತು ಹೇಳುತ್ತೇವೆ. ನಾನೂ ಹೇಳುತ್ತೇನೆ ಮಾನ್ಯ ವಾಟಾಳ್ ನಾಗರಾಜರು ಹೇಳುತ್ತಾರೆ ಪ್ರೊ.ನಂಜುಂಡಸ್ವಾಮಿಯವರೂ ಹೇಳುತ್ತಾರೆ. ಆದರೆ ಮಕ್ಕಳನ್ನು ಹಡೆದಂಥ ತಂದೆ ತಾಯಿಗಳು ಏನು ಹೇಳುತ್ತಾರೆ ಅದಕ್ಕೆ ಏನಾದರೂ ಕಿಮ್ಮತ್ತು ಇದೆಯೇ ಎಂಬುದನ್ನೂ ನಾವು ವಿಚಾರ ಮಾಡಬೇಕು. ಅವನಿಗೆ ಹೋಗಿ ನಾನು ಏನು ಬೋಧನೆ ಮಾಡಬಹುದೋ ಕನ್ನಡದ ಅಭಿಮಾನ ಅವನಿಗೆ ಇಲ್ಲವೋ. ಅವನು ಪಡೆದಿದ್ದಾನೆ ತನ್ನ ಮಕ್ಕಳ ಭವಿಷ್ಯದ ಚಿಂತನೆ ಅವನಿಗೆ ಇದೆ. ಆದರೆ ಇವತ್ತು ನಾವು ಯಾವ ಪ್ರವೃತ್ತಿ ಇದೆ ಎಂಬುದನ್ನು

ನೋಡಬೇಕು. ತಂದೆ ತಾಯಿಗಳು they want only English Medium schools ಎಂದು ಹೇಳುತ್ತಾರೆ. ನಮ್ಮ ಮಕ್ಕಳನ್ನು ಇಂಗ್ಲೀಷ್ ಶಾಲೆಗೆ ಕಳುಹಿಸಬೇಕು ಇಲ್ಲದೇಹೋದರೆ ನಮ್ಮ ಮಕ್ಕಳ ಭವಿಷ್ಯ ಇಲ್ಲ. ನನ್ನ ಹಾಗೆ ಅಟೆಂಡರ್ ಆಗಿ ಇರಬೇಕಾಗುತ್ತದೆ. ಅವನನ್ನು ಮುಂದೆ ತೆಗೆದುಕೊಂಡು ಹೋಗಬೇಕೆಂದು ಹೇಳುತ್ತಾನೆ. ನನಗೆ ಎಷ್ಟೇ ಕಷ್ಟ ಇರಲಿ ಅವನಿಗೆ ಮುಂದೆ ಕಾಲೇಜಿಗೆ ಕಳಿಸುತ್ತೇನೆ. ದೊಡ್ಡ ದೊಡ್ಡ ಹುದ್ದೆಗೆ ಹೋಗಲು ಅನುಕೂಲ ಮಾಡಬೇಕು ಎಂದು ಹೇಳುತ್ತಾನೆ. ಇದಕ್ಕೆ ನಾವು ಏನು ಹೇಳಬೇಕು ನೀವು ಹೇಳಿ. ಇಂಗ್ಲೀಷ್ ಸ್ಕೂಲುಗಳ ಬೇಡಿಕೆ ಬಗ್ಗೆ ಬಹುಶಃ ಮೊನ್ನೆ ನಮ್ಮ ಸಹೋದ್ಯೋಗಿಗಳಾದ ಎಜುಕೇಷನ್ ಮಿನಿಸ್ಟರು ಇನ್ನು ಒಂದು ವಾರದಲ್ಲಿ ತೀರ್ಮಾನ ಮಾಡುತ್ತೇವೆಂದು ಹೇಳಿದರು. ಅದರಂತೆ ಇಂಗ್ಲೀಷ್ ಸ್ಕೂಲ್ ಮಾಡೋಣವೇ ಇಂಗ್ಲೀಷ್ ಶಾಲೆಗಳಿಗೆ ಪರ್ಮಿಷನ್ ಕೊಡೋಣವೇ ಅಥವಾ ಇಂಗ್ಲೀಷ್ ಬೇಡ ಎಂದು ಹೇಳೋಣವೇ ಎಲ್ಲರೂ ಕನ್ನಡದಲ್ಲಿ ಓದಿರಿ ಎಂದು ಹೇಳುವುದೇ ಇದು ಪ್ರಶ್ನೆ ಇದೆ

ಶ್ರೀ ವಾಟಾಳ್ ನಾಗರಾಜ್:- ಇಂಗ್ಲೀಷ್ ಮಾಧ್ಯಮಕ್ಕೆ ನೀವು ಅನುಕೂಲ ಮಾಡಿದರೆ ಈ ರಾಜ್ಯದಲ್ಲಿ ಕ್ರಾಂತಿಯಾಗುತ್ತದೆ ಎಂದು ಹೇಳುತ್ತೇನೆ. ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಅನುಮತಿ ಕೊಟ್ಟರೆ ಈ ರಾಜ್ಯದಲ್ಲಿ ದೊಡ್ಡ ರಕ್ತಪಾತವಾಗುತ್ತದೆಂದು ಹೇಳುತ್ತೇನೆ. ರಾಜಾರಾಮಣ್ಣ ಓದಿದ್ದು ಇಂಗ್ಲೀಷ್ ಮಾಧ್ಯಮವಲ್ಲ ಕರುಣಾನಿಧಿ ಓದಿದ್ದು ಇಂಗ್ಲೀಷ್ ಮಾಧ್ಯಮವಲ್ಲ. ಈ ಇಂಗ್ಲೀಷ್ ಗುಲಾಮಗಿರಿ ಮಾತು ಹೋಗಬೇಕು... ನಾಯಿನರಿಗಳಿಗೂ ಸಹ ಇಂಗ್ಲೀಷ್ ಮಾತನಾಡಬೇಕೆಂಬ ಕೆಟ್ಟ ಪ್ರವೃತ್ತಿ ಈ ರಾಜ್ಯದಲ್ಲಿ ಬೆಳೆದಿದೆ...

(ಭಾರಿ ಗೊಂದಲ)

ಒಬ್ಬ ಸದಸ್ಯರು:- ತಮ್ಮ ಮಕ್ಕಳನ್ನು ಇಂಗ್ಲೀಷ್ ಮೀಡಿಯಂ ಶಾಲೆಗೆ ಕಳುಹಿಸುತ್ತಿದ್ದೀರಿ...

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾತೆತ್ತಿದರೆ ವಾಟಾಳ್ ನಾಗರಾಜ್ ವಾಟಾಳ್ ನಾಗರಾಜ್ ಎಂದು ಹೇಳುತ್ತಾರೆ. ಇದು ಹೊಣೆಗೇಡಿತನ ನಾಚಿಕೆಗೇಡು. ಕನ್ನಡ ಎನ್ನಿ ಎಂದರೆ ಗಲಾಟೆ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಕನ್ನಡ ಇಲ್ಲ ಎಂದರೆ ರಕ್ತಪಾತವಾಗುತ್ತದೆ. ಕನ್ನಡ ಬಿಟ್ಟು ದಾರಿ ತಪ್ಪಿದರೆ ನಿಮ್ಮ ಸರ್ಕಾರ ರಾಜೀನಾಮೆ ಕೊಡುವಂತಹ ಪರಿಸ್ಥಿತಿ ಈ ರಾಜ್ಯದಲ್ಲಿ ಉದ್ಭವವಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮುಖ್ಯಮಂತ್ರಿಗಳು ಈ ಸ್ಥಾನದಲ್ಲಿ ಕುಳಿತುಕೊಂಡು ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಪುರಸ್ಕಾರ ಕೊಡುವಂತಹ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. ದಯವಿಟ್ಟು ಆ ಭಾವನೆ ಬರುವ ರೀತಿಯಲ್ಲಿ ಹೇಳಿಕೆ ಕೊಡಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗಾರಾಜ್:- ಈ ನೀತಿ ಸರಿಯಲ್ಲ. ಈ ಮಾತನ್ನು ಕೇಳಿ ನನಗೆ ನೋವಾಗಿದೆ, ಕೆಲವರಿಗೆ ಇರಬಹುದು, ಆದರೆ ನಮಗಿಲ್ಲ;

(ಗೊಂದಲ)

ಅಧ್ಯಕ್ಷರು:- ಆರ್ಡರ್, ಆರ್ಡರ್ 'ಆರ್ಡರ್' ಎಂದು ಹೇಳುವುದಕ್ಕೆ ನನಗೆ ಕನ್ನಡ ಭಾಷಾಂತರ ಸಿಗಲಿಲ್ಲ...

ಶ್ರೀ ವಾಟಾಳ್ ನಾಗರಾಜ್:- ತಾವು ಅಧ್ಯಕ್ಷರು ಬೇರೆಯವರನ್ನು ಇಂಗ್ಲೀಷ್‌ನಲ್ಲಿ ಮಾತನಾಡಬೇಡಿ ಎಂದು ಹೇಳುವಂತೆ ತಮ್ಮನ್ನು ಸಹ ಕನ್ನಡದಲ್ಲೇ ಮಾತನಾಡಿ ಎಂದು ಹೇಳುವುದಕ್ಕೆ ನನಗೆ ನೋವಾಗುತ್ತದೆ ನಾನು ಆ ರೀತಿ ತಮಗೆ ಹೇಳುವುದಕ್ಕೆ ಹೋಗುವುದಿಲ್ಲ. ತಾವು ಅಧ್ಯಕ್ಷರು, ತಾವು ಕನ್ನಡದಲ್ಲಿ ಪಂಡಿತರು ಕನ್ನಡದ ಬಗ್ಗೆ ಅಪಾರವಾದ ಗೌರವವನ್ನು ಕೊಡತಕ್ಕವರು ತಾವು ಕನ್ನಡಕ್ಕಾಗಿ...

ಅಧ್ಯಕ್ಷರು:- ಕೊಡೋಣ ಕನ್ನಡಕ್ಕೆ ಗೌರವವನ್ನು ಕೊಡೋಣ...

ಶ್ರೀ ಡಿ.ಬಿ. ಚಂದ್ರೇಗೌಡ:- ಬಹುತೇಕ ಈ ಕಡೆ ಕುಳಿತಿರುವವರೆಲ್ಲರೂ ಕನ್ನಡದಲ್ಲಿ ಓದಿದವರೇ ಆ ಕಡೆಯುವರದ್ದು ಉರ್ದು ಮಿಡಿಯಂ ಏನೋ ನನಗೆ ಗೊತ್ತಿಲ್ಲ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಆಡಳಿತ ಭಾಷೆ ಕನ್ನಡ ಎಂದು ಹೇಳುವುದು ಇಲ್ಲಿ ತಿರುಮಂತ್ರ ಹೇಳುತ್ತಾ ಇರುವುದು ಕನ್ನಡಕ್ಕೆ ಅಗೌರವ ಮಾಡುತ್ತಾ ಇರುವುದು. ಈ ರೀತಿಯಾದರೆ ರಾಜ್ಯದಲ್ಲಿ ಕನ್ನಡ ಜನಗಳ ಪರಿಸ್ಥಿತಿ ಏನು ನಾನು ನಿಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ ಕನ್ನಡದ ನೆಲ ಕನ್ನಡದ ಜಲ ಕನ್ನಡದ ಗಡಿ ಇವುಗಳ ಬಗ್ಗೆ ನಿಮಗೆ ನಂಬಿಕೆ ಇದೆ ಎಂಬುದು ನನಗೆ ಗೊತ್ತು ಆದರೆ ನೀವು ಯಾರ ಒತ್ತಡಕ್ಕೆ ಮಣಿದಿದ್ದೀರಿ; ಇಂಗ್ಲೀಷ್ ಶಾಲೆಗಳಿಗೆ ಪರ್ಮಿಷನ್ ಕೊಡುವುದು ಏನಿದೆ ಇದು ಗುಲಾಮಗಿರಿಯ ಸಂಕೇತ. ತಾವು ಕೊಡಿ ಇದೇ ಸದಸ್ಯರು ಬೀದಿಗೆ ಬರುತ್ತಾರೆ...

(ಗೊಂದಲ)

SRI.QAMARUL ISLAM:- For the information of the House, in the I.A.S.Cadre, how many are there from Karnataka and through out the Country, how many of them belonged to Karnataka? If you go to Delhi, I.A.S. officers from Tamil Nadu and Kerala are maximum in Number. Why? What is the reason? Therefore, completely not allowing the English Medium schools is not justified. What we want is, there should be some English medium schools also. We should not have enemity against English or any other language. So I fully support the feelings and expressions made by the Hon'ble Chief Minister in this House.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ ಇವೊತ್ತು ನಮ್ಮ ರಾಜ್ಯಕ್ಕೆ ಐ.ಎ.ಎಸ್. ಐ.ಪಿ.ಎಸ್. ಪಾಸ್ ಮಾಡುವಂತಹ ಅಧಿಕಾರಿಗಳ ಅಗತ್ಯ ಇಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದು ಇಷ್ಟೇ ಕನ್ನಡಕ್ಕೆ ಹೆಚ್ಚು ಆದ್ಯತೆ ಕೊಟ್ಟು ಕನ್ನಡ ಓದಿದಂಥ ಮಕ್ಕಳಿಗೆ ಬೇರೆ ಸ್ಥಾನಮಾನಗಳು ಸಿಗುವಂತಹ ವಿಶೇಷವಾದ ಅವಕಾಶಗಳನ್ನು ನಿಮ್ಮ ಕಾಲದಲ್ಲಿ ಆದರೂ ಮಾಡಿಕೊಟ್ಟರೆ ಏತಕ್ಕೆ ಅವರು ಇಂಗ್ಲೀಷ್ ಶಾಲೆಗೆ ಹೋಗುತ್ತಾರೆ. ಈಗ ಹೊಟ್ಟೆಪಾಡಿಗೆ ಅನುಕೂಲ ಆಗುತ್ತದೆಂದು ಇಂಗ್ಲೀಷ್ ಶಾಲೆಗೆ ಸೇರುವ ಪ್ರವೃತ್ತಿ ಎಲ್ಲರಿಗೂ ಬಂದಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಏನು ನೀವು ಕೂಗುವುದು...........

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾಚಿಕೆಗೇಡು ಏನು ಕೂಗುತ್ತೀರಿ. ಏನು ಯೋಗ್ಯತೆ ಇದೆ ನಿಮಗೆ. ಯೋಗ್ಯತೆ ಇಲ್ಲ ನಿಮಗೆ. ತಿಳುವಳಿಕೆ ಇಲ್ಲದೆ ಮಾತನಾಡುತ್ತೀರಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಮಾತನಾಡುವುದಕ್ಕೆ ಎದ್ದು ನಿಂತ ತಕ್ಷಣ 'ಹೊ' ಎಂದು ಕೂಗುವುದು.

(ಗೊಂದಲ)

ಅಧ್ಯಕ್ಷರು:- ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಎಲ್ಲಾ ಸಮಾಧಾನವಾಗಿ ಇರಿ. ಎಲ್ಲ ಸಮಾಧಾನವಾಗಿ ಕುಳಿತುಕೊಳ್ಳಬೇಕು. ಎಲ್ಲರೂ ಸಮಾಧಾನವಾಗಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಎಸ್ ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ.......

(ಗೊಂದಲ)

ಅಧ್ಯಕ್ಷರು:- ಯಡಿಯೂರಪ್ಪನವರೇ ಒಂದು ನಿಮಿಷ..........

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಮುಖ್ಯಮಂತ್ರಿಗಳು ಹೇಳುವಂತಹ ಸಂದರ್ಭದಲ್ಲಿ ಪ್ರೈಮರಿ ಶಾಲೆಗಳ ಸ್ಥಿತಿಗತಿ ಏನಿದೆ.......

(ಗೊಂದಲ)

ಅಧ್ಯಕ್ಷರು:- ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಯಡಿಯೂರಪ್ಪನವರೇ ಕುಳಿತುಕೊಳ್ಳಿ ವಾಟಾಳ್ ನಾಗರಾಜ್‌ರವರೇ ಕುಳಿತುಕೊಳ್ಳಿ ಎಲ್ಲರೂ ಕುಳಿತುಕೊಳ್ಳಬೇಕು. ನಾನು ಸಭೆಗೆ ಒಂದು ಅರಿಕೆ ಮಾಡಿಕೊಳ್ಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ ಇವರ ಹೇಳಿಕೆ ನೋಡಿ ನನಗೆ ಬಹಳ ನೋವಾಗಿದೆ.

ಅಧ್ಯಕ್ಷರು:- ನನಗೂ ಬಹಳ ನೋವಾಗಿದೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಕೂಗಿ ನೋವಾಗಿಲ್ಲ. ಕನ್ನಡಕ್ಕೆ ಎಷ್ಟು ಬೇಕಾದರೂ ಕೂಗುತ್ತೇನೆ. ನನಗೆ ಕೂಗಿ ನೋವಾಗಿಲ್ಲ. ದಯವಿಟ್ಟು ಇವರು ಸರಕಾರದ ನೀತಿಯನ್ನು ಹೇಳಬೇಕು. ಸರಕಾರದ ನೀತಿಯನ್ನು ಸ್ಪಷ್ಟಪಡಿಸಬೇಕು.

ಶ್ರೀ ಬಿ.ಎಸ್ ಯಡಿಯೂರಪ್ಪ:- ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ಸದನದಲ್ಲಿ ನನ್ನ ಅಭಿಪ್ರಾಯಗಳನ್ನು ಹೇಳುವಂತಹ ಅಧಿಕಾರ ನನಗೆ ಇಲ್ಲವೇ ಜನ ನಮ್ಮನ್ನು ಆರಿಸಿ ಕಳುಹಿಸಿಲ್ಲವೇ ನಾನು ಮಾತನಾಡುವುದಕ್ಕೆ ಎದ್ದ ತಕ್ಷಣ ಅಡ್ಡಿ ಮಾಡುವ ಪ್ರವೃತ್ತಿ ಸರಿಯಲ್ಲ; ಈ ಬಗ್ಗೆ ನನ್ನ ಅಭಿಪ್ರಾಯ ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು:- ನೀವು ಮಾಡುತ್ತಿರುವುದು ಏನು ಕೃಷ್ಣಪ್ಪನವರೇ ನಾಯಕ್ ಸಾಹೇಬರೆ ದಯವಿಟ್ಟು ಕುಳಿತುಕೊಳ್ಳಬೇಕು. ಎಲ್ಲರೂ ಕುಳಿತುಕೊಳ್ಳಬೇಕು. ಎಲ್ಲರೂ ನಿಂತುಕೊಂಡರೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅವಕಾಶ ಕೊಟ್ಟರೆ ಹೇಳಿ.

ಶ್ರೀ ವೀರೇಂದ್ರ ಪಾಟೀಲ್:- ನಾನು ನಿಂತಿದ್ದೇನೆ..

ಅಧ್ಯಕ್ಷರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಯಾರಿಗೆ ಹಿಂದಕ್ಕೆ ಕೈತೋರಿಸುತ್ತಿದ್ದೀರಿ ಪೂಜಾರಿಯವರಿಗಾ?

(ಗೊಂದಲ)

(ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರು ಎದ್ದುನಿಂತು ಎಲ್ಲರೂ ಒಟ್ಟಿಗೆ ಜೋರಾಗಿ ಒಂದೇ ಬಾರಿಗೆ ಮಾತನಾಡತೊಡಗಿದರು.)

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಮತ್ತು ಬಿಜೆಪಿಯ ಇತರ ಸದಸ್ಯರು ಸದನದ ಮಧ್ಯದಲ್ಲಿರುವ ವೆಲ್‌ಗೆ ಬಂದರು.)

(ಗೊಂದಲ)

ಅಧ್ಯಕ್ಷರು:- ಆರ್ಡರ್ ಆರ್ಡರ್ ತಾವೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಈಗ ಸಭೆಯನ್ನು 15 ನಿಮಿಷಗಳ ಕಾಲ ಮುಂದೂಡಿದ್ದೇನೆ. ಸಭೆ ಪುನಃ 6-15ಕ್ಕೆ ಸೇರುತ್ತದೆ.

ಸಭೆಯು ಪುನಃ 6-30 ಘಂಟೆಗೆ ಸಮಾವೇಶಗೊಂಡಿತು

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:- ಮಾನ್ಯ ಸದಸ್ಯರುಗಳೇ ಮುಕ್ತ ಉನ್ನತ ಸಂಸದೀಯ ಚೌಕಟ್ಟಿನಲ್ಲಿ ಈ ಸದನದ ಕಾರ್ಯನಿರ್ವಹಿಸಬೇಕು ಎನ್ನುವುದು ನಮ್ಮೆಲ್ಲರ ಅನಿಸಿಕೆ. ಅದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಆ ನಿಯಮದ ಚೌಕಟ್ಟಿನಲ್ಲಿ ನಾವು ಕೆಲಸ ಮಾಡತಕ್ಕಂಥ ಕಾಲದಲ್ಲಿ ಸಾಕಾದಷ್ಟು ಸಂಯಮವನ್ನು ಪ್ರತಿಯೊಬ್ಬ ಮಾನ್ಯ ಸದಸ್ಯರು ಇಟ್ಟುಕೊಂಡು ಕೆಲಸ ಮಾಡಿದರೆ ಏನು ಅಹಿತಕರವಾದ ಘಟನೆಗಳು ನಡೆಯಿತೋ ಆ ಅಹಿತಕರವಾದ ಘಟನೆಗಳು ಪುನಃ ಮರುಕಳಿಸುವುದಕ್ಕೆ ನಾವು ಅವಕಾಶ ಕೊಡಬಾರದು ಎನ್ನತಕ್ಕಂಥ ದೀಕ್ಷೆಯನ್ನು ನಾವು ತೆಗೆದುಕೊಳ್ಳಬೇಕು. ಈ ಸದನದ ಆಡಳಿತ ಪಕ್ಷದಲ್ಲಿರತಕ್ಕಂಥ ಹೊಸ ಸದಸ್ಯರಿಗೆ ವಿಶೇಷವಾಗಿ ನನ್ನ ಪ್ರಾರ್ಥನೆ ಎಂದರೆ ತಾವು ಪಾರ್ಲಿಮೆಂಟರಿ ನಡಾವಳಿಗಳ ಬಗ್ಗೆ ಮತ್ತು ಕನ್ವೆನ್‌ಷನ್ ಬಗ್ಗೆ ಬಹಳವಾಗಿ ಅಧ್ಯಯನ ಮಾಡಬೇಕು. ಹಿರಿಯ ಸದಸ್ಯರಿಂದ ನೀವು ಬಹಳಷ್ಟು ಕಲಿಯಬೇಕಾಗಿದೆ. ಆದ್ದರಿಂದ ನೀವು ನಿಮ್ಮ ಅಂಕ್ಸೈಟಿಯಲ್ಲಿ ನಿಮ್ಮ ಭಾವೋದ್ರೇಕಕ್ಕೆ ಒಳಗಾಗಿ ತಾವು ಏನು ನಡೆಸಿದಿರಿ ಅದು ಸರಿಯಲ್ಲವೆಂದು ನಾನು ಹೇಳದೇ ವಿಧಿಯಿಲ್ಲ. ಮಾನ್ಯ ವಿರೋಧಪಕ್ಷದ ಸದಸ್ಯರು ತಮ್ಮ ಹಕ್ಕನ್ನು ಚಲಾಯಿಸುತ್ತಾರೆ. ಅಂದರೆ ಸಭಾತ್ಯಾಗ ಮಾಡುವುದು ಮತ್ತು ಧರಣಿ ಕೂರುವುದು ನಮ್ಮ ಪಾರ್ಲಿಮೆಂಟರಿ ಚೌಕಟ್ಟಿಗೆ ಸೇರಿರತಕ್ಕ ಎರಡು ಅಸ್ತ್ರಗಳು ಎಂಬುದನ್ನು ಪ್ರತಿಯೊಂದು ಶಾಸನ ಸಭೆಯಲ್ಲೂ ಒಪ್ಪಿಕೊಂಡಿದ್ದು ಆಗಿದೆ. ಮತ್ತೆ ಹಿಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಅದರಲ್ಲೂ ಸಂಖ್ಯಾಬಲ ಕಡಿಮೆ ಇರತಕ್ಕ ಸಂದರ್ಭದಲ್ಲಿ ನಾವು ಅವರಿಗೆ ಹೆಚ್ಚಿನ ಅವಕಾಶಗಳನ್ನು ಕೊಟ್ಟು ಅವರ ಅನಿಸಿಕೆಗಳನ್ನು ರೂಪಿಸಿಕೊಳ್ಳುವುದಕ್ಕೆ ತಾವು ತಮ್ಮ ಸಂಯಮವನ್ನು ತೋರಿಸಬೇಕೆಂದು ನಾನು ಹೇಳಬಯಸುತ್ತೇನೆ. ಜೊತೆಗೆ ಇವತ್ತು ಏನು ಅಹಿತಕರ ಘಟನೆ ನಡೆಯಿತು ಅದನ್ನು ತಾವೆಲ್ಲರೂ ಮರೆಯಬೇಕು. ಈ ಸದನದ ಕಾರ್ಯಕಲಾಪಗಳು ಮತ್ತೆ ಸುಗಮವಾಗಿ ಮುಂದುವರಿಯಲು ಸಹಕಾರ ನೀಡಬೇಕೆಂದು ಸೂಚನೆ ಮಾಡಿ ಈಗ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರವನ್ನು ಮುಂದುವರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ ಇಂಗ್ಲೀಷ್ ಮಾಧ್ಯಮ...

ಪ್ರೊ:ಎಂ.ಡಿ. ನಂಜುಂಡಸ್ವಾಮಿ :- ಸನ್ಮಾನ್ಯ ಸಭಾಧ್ಯಕ್ಷರೆ ತಾವು ಮಾನ್ಯ ಸದಸ್ಯರಲ್ಲಿ ಒಂದು ವಿನಂತಿಯನ್ನು ಮಾಡಿಕೊಂಡಿದ್ದೀರಿ. ಆದರೆ ನಾನು ತಮ್ಮಲ್ಲಿ ಮತ್ತು ಮಾನ್ಯ ಸಭಾನಾಯಕರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಸನ್ಮಾನ್ಯ ಮುಖ್ಯ ಮಂತ್ರಿಗಳು ಕೆಲವು ಮುಖ್ಯ ವಿಷಯಗಳನ್ನು ಎತ್ತಿದರು. ಒಂದು ಫಂಡ್‌ಮೆಂಟಲಿಸಂ. ಈ ಮಾತು ಬಂದ ಕೂಡಲೇ ಸ್ವಲ್ಪ ಬಿಸಿ ವಾತಾವರಣ ಸೃಷ್ಟಿಯಾಯಿತು. ಅನಂತರ ಮತ್ತೊಂದು ಮುಖ್ಯ ವಿಷಯ ಎತ್ತಿದ್ದು ಎಂದರೆ ಮೀಸಲಾತಿಯ ಬಗ್ಗೆ. ಮೂರನೆಯದು ಎಂದರೆ ಭಾಷೆಯ ಬಗ್ಗೆ. ಈ ಗೊಂದಲ ಸೃಷ್ಟಿಯಾಗುವುದಕ್ಕೆ ಕಾರಣ ನನಗೆ ಅನ್ನಿಸುವುದೇದರೆ ಇಂಥ ಮುಖ್ಯ ವಿಷಯಗಳ ಬಗ್ಗೆ ನಮ್ಮ ರಾಜ್ಯದ ನೀತಿ ಸ್ಪಷ್ಟವಾಗಿಲ್ಲ. ಫಂಡಮೇಂಟಲಿಸಂ ಬಗ್ಗೆ ರಾಜ್ಯದ ಅಧಿಕೃತ ಧೋರಣೆ ಏನಿರಬೇಕು ಮೀಸಲಾತಿಯ ಬಗ್ಗೆ ಅಧಿಕೃತ ಧೋರಣೆ ಏನು ಇರಬೇಕು ಮತ್ತು ಭಾಷಾ ನೀತಿಯ ಬಗ್ಗೆ ನಮ್ಮ ರಾಜ್ಯದ ಅಧಿಕೃತ ಧೋರಣೆ ಏನು ನಮ್ಮ ಧೋರಣೆ ವೈಜ್ಞಾನಿಕವಾಗಿದೆಯೇ ಇದನ್ನು ನಾವು ಸ್ವಲ್ಪ ವಿವರವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರತಕ್ಕ ಅವಶ್ಯಕತೆ ಇಡೀ ರಾಜ್ಯದ ಹಿತದೃಷ್ಟಿಯಿಂದ ಇದೆಯೆಂದು ನನಗನಿಸುತ್ತದೆ. ಆದುದರಿಂದ ನಾನು ತಮ್ಮಲ್ಲಿ ಮತ್ತು ಮಾನ್ಯ ಸಭಾನಾಯಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಇದರ ಬಗ್ಗೆ ವಿವರವಾದ ಚರ್ಚೆಗೆ ತಾವು ಒಂದು ಅವಕಾಶವನ್ನು ಮಾಡಿಕೊಡಬೇಕು. ಏಕೆಂದರೆ ಈ ಸದನ ಇನ್ನೂ 5 ವರ್ಷಗಳವರೆಗೆ ಇರುತ್ತದೆಂದು ನಾನು ತಿಳಿದಿದ್ದೇನೆ. ಇವತ್ತು ನಡೆದಿರತಕ್ಕಂಥ ಘಟನೆಗಳು ಮತ್ತೆ ನಡೆಯಬಾರದೆಂಬ ಆಸೆ ನಮಗಿದ್ದರೆ ನಮ್ಮ ಸದನದ ಮಾನ್ಯ ಸದಸ್ಯರು ಕೇವಲ ಸಂಸದೀಯ ನಡವಳಿಕೆಗಳು ಮತ್ತು ನಿಯಮಾವಳಿಗಳನ್ನು ಮಾತ್ರ ಅಧ್ಯಯನ ಮಾಡಿದರೆ ಸಾಲದು ಎಂದು ನನಗನಿಸುತ್ತದೆ. ಈ ವಿಚಾರದಲ್ಲಿ ಒಂದು ಸ್ಪಷ್ಟವಾದ ತಿಳುವಳಿಕೆಯನ್ನು ರೂಪಿಸಿಕೊಳ್ಳುವುದು ನಮ್ಮ ರಾಜ್ಯದ ಎಲ್ಲ ಜನರ ಹಿತದೃಷ್ಟಿಯಿಂದ ಅತ್ಯಂತ

ಅವಶ್ಯಕ. ನಮ್ಮ ಪ್ರತಿನಿಧಿಗಳು ಸ್ಪಷ್ಟವಾದ ಅಭಿಪ್ರಾಯಗಳನ್ನು ಈ ವಿಷಯಗಳಲ್ಲಿ ರೂಪಿಸಿಕೊಳ್ಳುವುದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಸನ್ಮಾನ್ಯ ಸಭಾಧ್ಯಕ್ಷರೆ ಇವತ್ತು ನನ್ನ ಚರ್ಚೆಗೆ ಉತ್ತರದಲ್ಲಿ ಮುಖ್ಯ ಮಂತ್ರಿಯಾಗಿ ಈ ರಾಜ್ಯದ ಮುಂದಿರತಕ್ಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ ಮತ್ತು ಸಮಸ್ಯೆಗಳ ಪ್ರಾಸ್ ಅಂಡ್ ಕಾನ್ಸ್ ಇದನ್ನು ಮಾನ್ಯ ಸದನದ ಮುಂದಿಡುತ್ತಿದ್ದೇನೆ. ಈಗ ತಾನೆ ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಹೇಳಿದಂತೆ ಅನೇಕ ವಿಚಾರಗಳಲ್ಲಿ ಸರ್ಕಾರ ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಈ ಬಗ್ಗೆ ಸರ್ಕಾರ ಯಾವುದೇ ರೀತಿಯಲ್ಲೂ ಹಿಂದುಮುಂದು ನೋಡುವುದಿಲ್ಲ. ಫಂಡಮೆಂಟಾಲಿಸಮ್ ಇದಕ್ಕೆ ಏನು ಹೊಸ ನಿರ್ಣಯ ಬೇಕಾಗಿಲ್ಲ. ಕಾಂಗ್ರೆಸ್ ಪಾಲಿಸಿ ಕಾಂಗ್ರೆಸ್ ಸಿದ್ಧಾಂತ ಕಾಂಗ್ರೆಸ್ ಐಡಿಯಾಲಜಿ. It is against fundamentalism. It is for secularism. ಅದೇನು ಹೊಸದೇನು ಹೇಳಬೇಕಾಗಿಲ್ಲ. ಇದಕ್ಕೆ ಚರ್ಚೆ ಏತಕ್ಕೆ ಬೇಕೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮೀಸಲಾತಿ ಬಗ್ಗೆ ನಾನು ಒಪ್ಪುತ್ತೇನೆ. ನನ್ನ ವಿಚಾರಗಳನ್ನು ಹೇಳಿದ್ದೇನೆ. ಕಮಿಷನ್ ಅನ್ನು ಸರ್ಕಾರ ನೇಮಕ ಮಾಡಿದ ಮೇಲೆ ಆ ಕಮಿಷನ್ ವರದಿ ಬಗ್ಗೆ ಸರ್ಕಾರದ ಧೋರಣೆ ಏನಿರಬೇಕು ಅದು ಒಬ್ಬ ಮುಖ್ಯಮಂತ್ರಿಯಾಗಿ ನನ್ನ ವಿಚಾರಗಳನ್ನು ಹೇಳಬೇಕಾದ್ದು ಅವಶ್ಯವಿದೆ. ಸದನವನ್ನು ನಾನು ವಿಶ್ವಾಸಕ್ಕೆ ತೆಗೆದುಕೊಂಡು ನನ್ನ ವಿಚಾರಗಳನ್ನು ಹೇಳಿದರೆ ಇದು ವಿವಾದಕ್ಕೆ ಆಸ್ಪದ ನೀಡುತ್ತದೆಂದರೆ ಇದು ಬಹುಶಃ ನಿಜವಾಗಿಯೂ ದುರದೃಷ್ಟಕರವೆಂದೆನಿಸುತ್ತದೆ. ಪ್ರೊ: ನಂಜುಂಡಸ್ವಾಮಿಯವರು ನನ್ನ ಸ್ಟಾಂಡ್ ಅನ್ನು ಅಪ್ರಿಷಿಯೇಟ್ ಮಾಡುತ್ತಿದ್ದಾರೆಂದು ನಾನು ವಿಚಾರ ಮಾಡುತ್ತಿದ್ದೆ. ಅದೇನೇ ಇರಲಿ ನಾನು ಒಂದು ಹೇಳುತ್ತೇನೆ. ಏತಕ್ಕೆಂದರೆ ಅವರು ವಿದ್ಯಾಸಂಸ್ಥೆಗಳಲ್ಲಿ ಬೇಕಾದಷ್ಟು ಕೆಲಸಮಾಡಿ ತಮ್ಮ ಜೀವನವನ್ನೇ ಸವೆಸಿದ್ದಾರೆ. ಇವೊತ್ತು ನಾನು ಆರ್ಡನರಿ ಲೇಮ್ಯಾನ್ ಆಗಿ ನನಗನಿಸುತ್ತದೆ Govt.run Institutions are not up to the mark. ಈ ಬಗ್ಗೆ ನನ್ನ ವೈಯಕ್ತಿಕವಾದ ವಿಚಾರವನ್ನು ಹೇಳುತ್ತಿದ್ದೇನೆ. ಪರಿಸ್ಥಿತಿ ಏನಿದೆ ಎನ್ನುವುದನ್ನು ನೋಡಿಕೊಂಡು ಹೇಳುತ್ತಿದ್ದೇನೆ. ಇಲ್ಲ ಪರವಾಗಿಲ್ಲ ಬಹಳ ಚೆನ್ನಾಗಿದೆ ಬಹುಶಃ ಖಾಸಗಿ ಇನ್‌ಸ್ಟಿಟ್ಯೂಷನ್ಸ್‌ಗಿಂತಲೂ they are better standard of education giving Institutions ಎನ್ನುವುದನ್ನು ತಾವು ಹೇಳಬಹುದು.

ಆದರೆ ನನಗನಿಸುತ್ತದೆ ನನಗೆ ಮನಸ್ಸಿನಲ್ಲಿ ಕುದಿಯುತ್ತಿದೆ ಏಕೆಂದರೆ ನಮ್ಮ ಮಕ್ಕಳು ಸಾಮಾನ್ಯವಾಗಿ ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಗೆ ಹೋಗುವುದೇ ಜಾಸ್ತಿ ಆಗಿದೆ. ಬಡವರ ಮಕ್ಕಳು ಹೆಚ್ಚು ದುಡ್ಡು ಕೊಟ್ಟು ಓದಿಸುವುದಕ್ಕೆ ಸಾಧ್ಯವಿಲ್ಲದೆ ಹೋದವರು ಅಡ್ಮಿಷನ್ ಎಲ್ಲೂ ಸಿಗಲಾರದೆ ಹೋದಾಗ ಸರ್ಕಾರದ ಕಾಲೇಜಿಗೆ ಬರುವುದನ್ನು ನಾನು ನೋಡುತ್ತಿದ್ದೇನೆ. ಬಹುಶಃ ಪ್ರೊ. ನಂಜುಂಡಸ್ವಾಮಿಯವರು ಹೇಳಬಹುದು ಪಾಟೀಲರೇ 18 ವರ್ಷದಮೇಲೆ ನೀವು ಡೆಲ್ಲಿ ಬಿಟ್ಟು ಇಲ್ಲಿಗೆ ಬಂದಿದ್ದೀರಿ ನಿಮಗೆ ತಿಳುವಳಿಕೆ ತಪ್ಪಿದೆ ಎಂದು ಹೇಳಿ. ನಾನು ತಿದ್ದುಕೊಳ್ಳುವುದಕ್ಕೆ ತಯಾರಿದ್ದೇನೆ. ಈಗ ಅದನ್ನೇ ನಾನು ಒಂದು ಕೋಟ್ ಮಾಡಿದೆ. ನಮ್ಮ ಸ್ಟಾಂಡರ್ಡ್ ಹೀಗೆ ಇದ್ದಾಗ ಇವತ್ತು ತಂದೆತಾಯಿಗಳು ಇಲ್ಲಪ್ಪ ಸ್ವಲ್ಪ ದುಡ್ಡು ಹೆಚ್ಚು ಖರ್ಚಾದರೂ ಪರವಾಗಿಲ್ಲ ನಮ್ಮ ಮಕ್ಕಳನ್ನು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಗೆ ಸೇರಿಸಿ ಓದಿಸೋಣವೆಂದರೆ ಸರ್ಕಾರದ ಕಾಲೇಜ್‌ಗಳಲ್ಲಿ ನಮ್ಮ ಮಕ್ಕಳಿಗೆ ಸರಿಯಾದ ತರಬೇತಿ ಸಿಗುವುದಿಲ್ಲವೆನ್ನುವ ವಾತಾವರಣ ಮೂಡುತ್ತಿದ್ದಾಗ ಸರ್ಕಾರದಲ್ಲಿರುವ ನಾವು ಏನು ಮಾಡಬೇಕು. ಈ ಸದನ ನಮಗೆ ಒಂದು ಮಾರ್ಗದರ್ಶನ ಮಾಡಲಿ ಎನ್ನುವಂಥ ವಿಚಾರವನ್ನು ತಮ್ಮ ಮುಂದಿಟ್ಟಿದ್ದೇನೆ ಹೊರತಾಗಿ ಯಾವುದಾದರು ಒಂದು ವಿವಾದಕ್ಕೆ ಗುರಿ ಮಾಡಬೇಕೆನ್ನುವಂಥ ದೃಷ್ಟಿಯಿಂದ ಅಲ್ಲ. ಅದೇ ರೀತಿಯಿಂದ ಈ ಪ್ರೈಮರಿ ಇಂಗ್ಲೀಷ್ ಮೀಡಿಯಮ್ ಶಾಲೆಗಳ ಬಗ್ಗೆ ಹೇಳಲು ಹೊರಟಾಗ ನನ್ನ ಸ್ನೇಹಿತರಾದ ವಾಟಾಳ್ ನಾಗರಾಜ್‌ರವರು ತಪ್ಪುತಿಳಿದುಕೊಂಡರು. ನಾನೇನೋ ಘೋಷಣೆ ಮಾಡಿದೆ ಎಂದು ಆದರೆ ನಾನೇನು ಘೋಷಣೆ ಮಾಡಿಲ್ಲ. ನಾನು ಏನು ಹೇಳುತ್ತಿದ್ದೆ ಎಂದರೆ ನೋಡಿ ನಾವೆಲ್ಲರು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಒಂದು ಕಡೆ ರಾಜ್ಯ ಪಕ್ಷಗಳು ಒಂದು ಧೋರಣೆ ತಾಳಿದ್ದರೆ

ಜನಸಾಮಾನ್ಯರು ಒಂದು ಧೋರಣೆ ತಾಳಿದ್ದಾರೆ. ಸರ್ಕಾರವು ಒಂದು ಧೋರಣೆ ತಾಳಿದೆ. ಆದರೆ ಈ ಮಕ್ಕಳ ತಂದೆತಾಯಿಗಳು ಒಂದು ಧೋರಣೆ ತಾಳಿದ್ದಾರೆ. ಅದು ಇಲ್ಲವೆಂದು ಹೇಳಲಿಕ್ಕೆ ಆಗುವುದಿಲ್ಲ ನಾನು ಸ್ಪಷ್ಟವಾಗಿ ತಮ್ಮ ಮುಂದೆ ಹೇಳುತ್ತಿದ್ದೇನೆ. ತಂದೆತಾಯಿಗಳು ಒಂದು ಧೋರಣೆ ತಾಳುತ್ತಿದ್ದಾರೆ; ಅವರು ಏನು ಹೇಳುತ್ತಿದ್ದಾರೆಂದರೆ ಎಷ್ಟೇ ಕಷ್ಟವಾದರೂ ನಮ್ಮ ಮಕ್ಕಳಿಗೆ ಇಂಗ್ಲೀಷ್‌ನಲ್ಲಿ ಓದಿಸಬೇಕು ಇಲ್ಲದಿದ್ದರೆ ಮುಂದೆ ಒಳ್ಳೆಯ ಭವಿಷ್ಯವಿಲ್ಲ ಎನ್ನುವ ಒಂದು ವಾತಾವರಣ ಬಂದಿದೆ. ನಾವು ಇದನ್ನು ಅಲ್ಲಗಳೆಯುವುದರಲ್ಲಿ ಅರ್ಥವಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಬಹುಶಃ ನೀವು ಪಾರ್ಲಿಮೆಂಟ್‌ನಲ್ಲಿ ನೋಡಿರಲಿಕ್ಕಿಲ್ಲ. ಇಷ್ಟೆಲ್ಲ ಹಿಂದಿ ಬಗ್ಗೆ ಮಾತನಾಡುತ್ತಾರಲ್ಲ ಕುಣಿತಾರಲ್ಲ ಪಾರ್ಲಿಮೆಂಟ್‌ನಲ್ಲಿ ಹಿಂದಿ ಅಚ್ಚ ಹಿಂದಿ ಬರುವಂಥವರು ಕೂಡ ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಅದೊಂದು ಪ್ರೆಸ್ಟೀಜ್ ಆಗಿಹೋಗಿದೆ. ಇಂಗ್ಲೀಷ್‌ನಲ್ಲಿ ಮಾತನಾಡುವಂಥದ್ದು ನನಗೆ ಗೊತ್ತಿದೆ. ಈ ವಾತಾವರಣದಲ್ಲಿ ಏನು ಮಾಡಬೇಕೆನ್ನುವಂಥದ್ದನ್ನು ಕೋರ್ಟ್‌ಮಾಡಿದೆ. ಇಂಗ್ಲೀಷ್ ಮೀಡಿಯಂ ಬಗ್ಗೆ ಏನು ಧೋರಣೆ ತಾಳಬೇಕೆನ್ನುವ ನಿರ್ಣಯ ನಾನು ಮಾಡಿಲ್ಲ. ನಿರ್ಣಯವನ್ನು ನಾನು ಘೋಷಣೆ ಮಾಡಿಲ್ಲ. ಆದರೆ ದುರ್ದೈವಕ್ಕೆ ಏನಾಯಿತೆಂದರೆ ಕೆಲವು ಜನ ಇವರು ಘೋಷಣೆ ಮಾಡೇ ಬಿಟ್ಟರು, ಇಂಗ್ಲೀಷ್ ಪರವಾಗಿ ನಿರ್ಣಯ ಮಾಡಿದ್ದಾರೆ, ಇದು ಅವಿವೇಕದ ಘೋಷಣೆ ಎಂದು ವಾಟಾಳ್ ನಾಗರಾಜ್‌ರವರು ಹೇಳಿದರು. ನಾನು ಅವಿವೇಕದ ಘೋಷಣೆ ಹೇಳಿದರೂ ತಪ್ಪಿಲ್ಲ. ಅದು ಕೆಟ್ಟದೆಂದು ತಾವು ...ಚಾರ ಮಾಡಬೇಡಿ. ಅದಕ್ಕಾಗಿ ನಾನು ಹೇಳಿದ್ದು, ಇಂಥ ವಾತಾವರಣದಲ್ಲಿ ಏನು ಮಾಡಬೇಕು, ಪರಿಸ್ಥಿತಿ ಹೀಗಿದೆ ಎನ್ನುವಂಥದ್ದನ್ನು ಪ್ರಶ್ನೆಹಾಕಿ ನಿಮ್ಮ ಮುಂದೆ ಇಟ್ಟೆ. ವಿಚಾರಮಾಡಿ ನಾವೆಲ್ಲರೂ ಕೂಡಿ ಇದಕ್ಕೆ ಒಂದು ಹಾದಿಯನ್ನು ಹುಡುಕಬೇಕೆನ್ನುವಂಥ ವಿಚಾರ ಇಟ್ಟನೇ ಹೊರತಾಗಿ ಇವತ್ತು ಸರ್ಕಾರದ ಧೋರಣೆ ಇಂಗ್ಲೀಷ್ ಮಾಧ್ಯಮ ಸ್ಕೂಲ್‌ಗಳ ಬಗ್ಗೆ ಏನು ಇರಬೇಕು ಎನ್ನುವಂಥ ಘೋಷಣೆ ನಾನು ಮಾಡಲಿಲ್ಲ. ನನ್ನ ಸಹೋದ್ಯೋಗಿಗಳಾದ ವಿದ್ಯಾಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಈ ಪ್ರಶ್ನೆಯನ್ನು ಕ್ಯಾಬಿನೆಟ್ ಮುಂದೆ ತಂದು ವಿಚಾರ ಮಾಡಿ ಘೋಷಣೆ ಮಾಡುತ್ತೇವೆಂದು ಹೇಳಿದ್ದಾರೆ ಸಮಯ ಬಂದಾಗ ಆ ಘೋಷಣೆ ಮಾಡುತ್ತೇವೆ. ಆ ಬಗ್ಗೆ ಯಾರೂ ನಮಗೆ ಹೇಳಬೇಕಾಗಿಲ್ಲ. ಆ ಧೈರ್ಯ ನಮಗೆ ಇದೆ. ಕರ್ನಾಟಕದ ಹಿತದೃಷ್ಟಿಯಿಂದ ಮತ್ತು ನಮ್ಮ ಮಕ್ಕಳ ಹಿತದೃಷ್ಟಿಯಿಂದ ಕರ್ನಾಟಕದ ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಏನು ಒಂದು ನಿರ್ಣಯ ತೆಗೆದುಕೊಳ್ಳಬೇಕೋ ಅದನ್ನು ಧೈರ್ಯದಿಂದ ತೆಗೆದುಕೊಳ್ಳುವುದಕ್ಕೆ ನಾನು ಹೆದರುವುದಿಲ್ಲ. ಆ ಮಾತು ಬೇರೆ.

ಇಷ್ಟು ಹೇಳಿದ ಮೇಲೆ ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ಸರ್ಕಾರದ ನೀತಿ ಏನು ಸರ್ಕಾರ ಏನು ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದೆ ಎಂದು ಹೇಳಬೇಕಾಗಿದೆ. ಒಂದು ವಿಚಾರವನ್ನು ಸ್ಪಷ್ಟವಾಗಿ ನಾನು ಹೇಳುತ್ತೇನೆ. ಕನ್ನಡಕ್ಕೆ ಮೊದಲ ಸ್ಥಾನ ಕನ್ನಡಕ್ಕೆ ಆದ್ಯತೆ ಕನ್ನಡಕ್ಕೆ ಮಹತ್ವ ಕೊಡುವುದು ನಮ್ಮ ಸರ್ಕಾರದ ಉದ್ದೇಶ. ಇವತ್ತು ಸಂಪೂರ್ಣವಾಗಿ ಎಲ್ಲ ಹಂತಗಳಲ್ಲೂ ಕನ್ನಡ ಇರಬೇಕೆಂಬುದು ಸರ್ಕಾರದ ನೀತಿಯಾಗಿದೆ. ಅದರ ಬಗ್ಗೆ ಯಾರೂ ಸಂಶಯ ಪಡಬೇಕಾಗಿಲ್ಲ. ಇಲ್ಲಿಯವರೆಗೂ ಜಿಲ್ಲಾ ಮಟ್ಟದಲ್ಲಿ ಮತ್ತು ವಿಭಾಗ ಮಟ್ಟದಲ್ಲಿ ಕನ್ನಡಕ್ಕೆ ಸ್ವಲ್ಪ ಹೆಚ್ಚು ಪ್ರಾಶಸ್ತ್ಯ ಇದ್ದು ಕನ್ನಡದಲ್ಲಿ ವ್ಯವಹಾರಗಳು ನಡೆಯುತ್ತಿದ್ದವು. ನೂರಕ್ಕೆ ನೂರು ಕನ್ನಡದಲ್ಲಿ ವ್ಯವಹಾರಗಳು ನಡೆಯುತ್ತಿವೆ ಎಂದು ಹೇಳುವ ಹಾಗೆ ಇಲ್ಲ. ಆದರೆ ಬಹುಮಟ್ಟಿಗೆ ನಡೆಯುತ್ತಿವೆ. ಏನಾದರೂ ಕೊರತೆ ಇದ್ದರೆ ಅದನ್ನು ಸರಿಪಡಿಸಿ ಆದಷ್ಟೂ ನೂರಕ್ಕೆ ನೂರು ಕನ್ನಡದಲ್ಲಿ ಜಿಲ್ಲಾ ಮಟ್ಟದ ಮತ್ತು ವಿಭಾಗ ಮಟ್ಟದ ನಮ್ಮ ಆಡಳಿತ ವ್ಯವಹಾರಗಳು ನಡೆಯುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಆ ಕ್ರಮ ಕೈಗೊಳ್ಳುವುದಕ್ಕೆ ತಯಾರಿದ್ದೇವೆ. ಅಲ್ಲಿಂದ ಸೆಕ್ರೆಟರಿಯೇಟ್‌ನಲ್ಲಿ ಅಂದರೆ ವಿಧಾನಸೌಧದಲ್ಲಿ ಮತ್ತು ನಮ್ಮ ಬೋರ್ಡುಗಳು ಹಾಗೂ ಕಾರ್ಪೊರೇಷನ್‌ಗಳಲ್ಲಿ ಕನ್ನಡಕ್ಕೆ ಯಾವ ಪ್ರಾಧಾನ್ಯತೆ ಸಿಗಬೇಕೋ ಅದು ಸಿಕ್ಕಿಲ್ಲ. ಹೆಚ್ಚಿನ ಮಟ್ಟಿಗೆ ಎಲ್ಲಾ ಕಾರ್ಯದರ್ಶಿಗಳು ಮತ್ತು ಐ.ಎ.ಎಸ್. ಅಧಿಕಾರಿಗಳು ಏನಿದ್ದಾರೆ ಅವರಲ್ಲಿ ಕೆಲವರು ಕನ್ನಡದಲ್ಲಿ ಬರೆಯುತ್ತಾರೆ. ಆದರೆ ಈ ಬಗ್ಗೆ ತಮಗೆ ವಿಚಾರ ಗೊತ್ತಾಗಬೇಕು; ಆಲ್ ಇಂಡಿಯಾ ಸರ್ವೀಸ್ ಎಂಬುದು ಹಿಂದಿನಿಂದ ನಡೆದುಕೊಂಡು

ಬಂದಿದೆ. ದೇಶ ಸ್ವಾತಂತ್ರ್ಯವಾಗಿ ಸಂವಿಧಾನ ಜಾರಿಗೆ ಬಂದಮೇಲೆ ಐ.ಎ.ಎಸ್. ಐ.ಪಿ.ಎಸ್. ಐ.ಎಫ್.ಎಸ್. ಅಧಿಕಾರಿಗಳು ಬಂದಿದ್ದಾರೆ. ಅವರಲ್ಲಿ ನಮ್ಮ ರಾಜ್ಯದವರು ಎಷ್ಟು ಜನ ಆಯ್ಕೆಯಾಗಿದ್ದರೂ ಆಲ್-ಇಂಡಿಯಾ ಇಂಟಿಗ್ರೇಷನ್ ಆಗಬೇಕೆಂಬ ದೃಷ್ಟಿಯಿಂದ ಪ್ರೊಪೋರ್ಷನ್ ಪ್ರಕಾರ ಅಲಾಟ್ ಮಾಡುತ್ತಾರೆ. ಐ.ಎ.ಎಸ್ ಅಧಿಕಾರಿಗಳು 10 ಜನ ಕರ್ನಾಟಕದವರು ಆಯ್ಕೆಯಾಗಿದ್ದರೂ ಹತ್ತೂ ಜನರನ್ನು ಕರ್ನಾಟಕಕ್ಕೆ ಅಲಾಟ್ ಮಾಡುವುದಿಲ್ಲ. ಅದರಲ್ಲಿ ಒಂದು ಪ್ರೊಪೋರ್ಷನ್ ಇದೆ. ಹೊರಗಿನವರು ಇಷ್ಟು ಜನ ಎಂದು ಇಲ್ಲಿಗೆ ಬರುತ್ತಾರೆ. ಇಲ್ಲಿಯವರು ಹೊರಗಡೆ ಹೋಗುತ್ತಾರೆ. ಕರ್ನಾಟಕದವರೇ ಐ.ಎ.ಎಸ್ ಅಥವಾ ಐ.ಪಿ.ಎಸ್. ಅಧಿಕಾರಿಗಳಾಗಿ ಆಯ್ಕೆಯಾಗಿ ಬಂದವರಿಗೆ ಕನ್ನಡದಲ್ಲಿ ಬರೆಯುವುದಕ್ಕೆ ವ್ಯವಹಾರ ಮಾಡುವುದಕ್ಕೆ ಯಾವ ತರಹದ ಕಷ್ಟ ಇಲ್ಲ. ಈಗ ಕಷ್ಟ ಬಂದಿರುವುದು ಹೊರಗಡೆಯಿಂದ ಬಂದವರಿಗೆ. ಉತ್ತರಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಪಂಜಾಬ್ ಮುಂತಾದ ರಾಜ್ಯದವರು ಇಲ್ಲಿಗೆ ಬಂದಿರಬಹುದು. ಹೀಗೆ ಐ.ಎ.ಎಸ್‌ನಲ್ಲಿ ಸೆಲೆಕ್ಟ್ ಆದವರು ಹೊರಗಡೆಯಿಂದ ಇಲ್ಲಿಗೆ ಬರುತ್ತಾರೆ. ಇಲ್ಲಿಯವರು ಹೊರಗಡೆ ಹೋಗುತ್ತಾರೆ. ಕರ್ನಾಟಕದವರು ತಮಿಳ್ನಾಡಿನಲ್ಲಿ ಸಿಗುತ್ತಾರೆ ಆಂಧ್ರದಲ್ಲಿ ಸಿಗುತ್ತಾರೆ. ಅಲ್ಲಿಯೂ ಕೂಡ ಪಂಜಾಬ್ ಮಧ್ಯಪ್ರದೇಶದವರು ಇರುತ್ತಾರೆ. ಏಕೆಂದರೆ ಸೆಲೆಕ್ಷನ್ ಪ್ಯಾಟರ್ನ್ ಹಾಗೆ ಇದೆ. ಆ ಪ್ರಕಾರ ಅಲಾಟ್ ಮಾಡುತ್ತಾರೆ. ಆ ಜನರಿಗೆ ಸರಿಯಾಗಿ ಕನ್ನಡ ಬರುವುದಿಲ್ಲ. ನಾವು ಅವರಿಗೆ ಏನು ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಸೆಕ್ರೆಟರಿಯೇಟ್‌ನಲ್ಲಿ ಬೋರ್ಡ್‌ಗಳಲ್ಲಿ ಮತ್ತು ಕಾರ್ಪೊರೇಷನ್‌ಗಳಲ್ಲಿ ಕನ್ನಡಕ್ಕೆ ಆದ್ಯತೆ ಕೊಡುವುದಕ್ಕಾಗಿ ನಾವು ಸರ್ವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಮತ್ತು ಯಾರ್‍ಯಾರು ಐ.ಎಫ್.ಎಸ್. ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳು ಇದ್ದಾರೆ ಅವರು ಕನ್ನಡವನ್ನು ಕಡ್ಡಾಯವಾಗಿ ಕಲಿಯಲು ಮತ್ತು ಕಲಿತು ಕನ್ನಡದ ಹೈಸ್ಟಾಂಡರ್ಡ್ ಪರೀಕ್ಷೆಯನ್ನು ಪಾಸ್ ಮಾಡಬೇಕೆಂದೂ ಹಾಗೂ ಒಂದು ವೇಳೆ ಪಾಸ್ ಮಾಡದಿದ್ದರೆ ಅವರ ಕನ್‌ಫರ್ಮೇಷನ್ ಅನ್ನು ತಡಿಹಿಡಿಯಬೇಕೆಂಬ ನಿರ್ಣಯವನ್ನು ನಾನು ಮಾಡಿದ್ದೇನೆ. ಹೈ ಸ್ಟಾಂಡರ್ಡ್ ಎಂದರೆ ಬರೀ ಅಆಇಈ ಕಲಿತು ಹೆಸರು ಬರೆಯುವುದಕ್ಕೆ ಕಲಿಯುವುದಲ್ಲ. ಓದುವುದಕ್ಕೆ ಬರೆಯುವುದಕ್ಕೆ ಮತ್ತು ನೋಟ್ ಬರೆಯುವವರೆಗೆ ಚೆನ್ನಾಗಿ ಕಲಿಯಬೇಕಾಗುತ್ತದೆ. ಅದರಲ್ಲಿ ನೈಪುಣ್ಯತೆ ಬರುವುದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಅವರಿಗೆ ಎಕ್ಸಾಮಿನೇಷನ್ ಮಾಡುತ್ತೇವೆ. ಅದರಲ್ಲಿ ಪಾಸ್ ಆಗದೆ ಹೋದರೆ ಕನ್‌ಫರ್ಮೇಷನ್ ತಡೆಹಿಡಿಯಬೇಕೆಂದು ವಿಚಾರ ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದೇ ರೀತಿಯಿಂದ ಮಿಡ್ಲ್ ಲೆವೆಲ್ ಆಫೀಸರ್ಸ್ ಅಂದರೆ ಅವರ ಕೆಳಗಿನ ಮಟ್ಟದಲ್ಲಿ ಡೆಪ್ಯುಟಿ ಸೆಕ್ರೆಟರಿ ಅಂಡರ್ ಸೆಕ್ರೆಟರಿ ಮುಂತಾದ ಆಫೀಸರ್ಸ್ ಇರುತ್ತಾರಲ್ಲ ಅವರಿಗೆ ಕೂಡ ಒಂದು ವೇಳೆ ಕನ್ನಡ ಬರದೇ ಹೋದರೆ ಅವರಿಗೆ ಟ್ರೈನಿಂಗ್ ಕೊಡುತ್ತೇವೆ. ಮೈಸೂರಿನಲ್ಲಿ ಟ್ರೈನಿಂಗ್ ಸೆಂಟರ್ ಇದೆ.

ಇನ್ನೂ ಅಗತ್ಯ ಇದ್ದರೆ ಇನ್ನೂ ಕೆಲವು ಸೆಂಟರ್‌ಗಳನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪ್ರತಿವರ್ಷ 15 ದಿವಸ ಇಂಟೆನ್‌ಸೀವ್ ಟ್ರೈನಿಂಗ್ ಕನ್ನಡದಲ್ಲಿ ತೆಗೆದುಕೊಂಡು ಕನ್ನಡ ಮಾತೃಭಾಷೆಯಾಗಿರುವವರಿಗೆ ಯಾವ ರೀತಿ ನೈಪುಣ್ಯತೆ ಬರುತ್ತದೋ ಅದೇ ರೀತಿ ನೈಪುಣ್ಯತೆ ಪಡೆಯುವ ವ್ಯವಸ್ಥೆ ಮಾಡುತ್ತೇವೆ. ಆ ರೀತಿ ಒಂದು ವೇಳೆ ಪಡೆಯಲಾರದೇ ಹೋದರೆ ಮುಂದೆ ಎಗ್ಸಾಮಿನೇಷನ್ ಮುಂತಾದ್ದು ಇಡಬೇಕಾದ ಅವಶ್ಯಕತೆ ಇದ್ದರೆ ಇಟ್ಟು ಅವರು ಅದರಲ್ಲಿ ಪಾಸ್ ಆಗದೇಹೋದರೆ ಅವರ ಪ್ರೊಮೋಷನ್ ಕೂಡ ವಿತ್‌ಹೋಲ್ಡ್ ಮಾಡಬೇಕು ಎಂಬ ದೃಷ್ಟಿಯಿಂದ ವಿಚಾರ ಮಾಡುತ್ತಿದ್ದೇವೆ. ಈ ರೀತಿಯಿಂದ ಕನ್ನಡಕ್ಕೆ ಎಷ್ಟು ಪ್ರಾಧಾನ್ಯತೆ ನಾವು ಆಡಳಿತದಲ್ಲಿ ಕೊಡಬೇಕೋ ಅಷ್ಟು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಬಹುಶಃ ವಾಟಾಳ್ ನಾಗರಾಜ್ ಅವರಾಗಲೀ ಪ್ರೊ. ನಂಜುಂಡಸ್ವಾಮಿ ಅವರಾಗಲಿ ಅಥವಾ ಮತ್ತೆ ಯಾರಿಗಾದರೂ ಇನ್ನೂ ಹೆಚ್ಚು ಸರ್ಕಾರ ಮಾಡಬಹುದು ಎಂಬ ಭಾವನೆ ಇದ್ದರೆ ನನಗೆ ಸಲಹೆ ನೀಡಿದರೆ ಸಹಾನು ಭೂತಿಯಿಂದ ನಾನು ಅದನ್ನು ಪರಿಶೀಲನೆ ಮಾಡುವುದಕ್ಕೆ ತಯಾರಿದ್ದೇನೆ. ಒಂದು ವಿಚಾರ ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಬಾರದು. ಯಾವುದೇ ಭಾಷೆ ಒತ್ತಾಯದಿಂದ ಹೇರಿದರೆ ಆ ಭಾಷೆ ಬಗ್ಗೆ ಅಭಿಮಾನ

ಬರುವುದಿಲ್ಲ. ಹಿಂದಿಯವರು ಮಾಡಿದ ತಪ್ಪು ಇದೇನೆ. ಆಫೀಸರ್ಸ್ ಇದ್ದಾರೆ ಇವರಿಗೆ ಸಂಬಳ ಕೊಡುತ್ತೇವೆ ನಾವು ಏನು ಹೇಳಿದರೆ ಅದು ಮಾಡಬೇಕು. ಅದಲ್ಲ. ಜನಸಾಮಾನ್ಯರಲ್ಲಿ ಕನ್ನಡದ ಬಗ್ಗೆ ಅನುಕಂಪ ಅಭಿಮಾನ ಬರಬೇಕಾದರೆ ಕನ್ನಡದ ಬಗ್ಗೆ ಅವರಿಗೆ ಇನ್‌ಸೆಂಟೀವ್ ಏನು ಕೊಡಬೇಕು ಎಂಬುದನ್ನು ವಿಚಾರ ಮಾಡಬೇಕೇ ಹೊರತು ಕೇವಲ ಕಾನೂನು ಮಾಡಿ ಕನ್ನಡವನ್ನು ಹೇರುತ್ತೇವೆ ನೀವು ಕಲಿಯಲೇಬೇಕು ಎಂದು ಜನಸಾಮಾನ್ಯರ ಮೇಲೆ ಹೇರಿದರೆ ಕನ್ನಡದ ಬಗ್ಗೆ ಅಭಿಮಾನ ಬರುವುದಕ್ಕೆ ಸಾಧ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಈ ರೀತಿ ಹೆಚ್ಚಿನ ಅನುಕೂಲ ಮಾಡಿಕೊಡುತ್ತಿದ್ದೇವೆ. ಕನ್ನಡದ ಸಾಹಿತ್ಯ ಇದ್ದರೆ ಆದಷ್ಟೂ ಕಡಿಮೆ ಬೆಲೆಗೆ ಪ್ರಿಂಟ್ ಮಾಡಿ ಜನರಿಗೆ ಹಂಚುವುದು ಹೀಗೆ ಏನೇನು ಮಾಡಬೇಕಾಗಿದೆಯೋ ಅದನ್ನೆಲ್ಲಾ ಮಾಡಲು ಸರ್ಕಾರ ಸಿದ್ಧವಿದೆ. ಕನ್ನಡತನ ನಮ್ಮಲ್ಲಿ ಬೆಳೆಸಿಕೊಳ್ಳದೇಹೋದರೆ ಕನ್ನಡತನವನ್ನು ತಮಿಳುನಾಡಿನಲ್ಲಿ ಆಂಧ್ರದಲ್ಲಿ ಬೆಳೆಸುವುದಕ್ಕಾಗುವುದಿಲ್ಲ. ಕನ್ನಡ ಬೆಳೆಯಬೇಕಾದರೆ ಕನ್ನಡ ಉಳಿಯಬೇಕಾದರೆ ಕನ್ನಡದ ಬಗ್ಗೆ ಅಭಿಮಾನ ಬರಬೇಕಾದರೆ ಕರ್ನಾಟಕದಲ್ಲಿ ಆ ವಾತಾವರಣ ಬರಬೇಕಾದ ಅವಶ್ಯಕತೆ ಇದೆ. ಅದನ್ನು ಬೆಳೆಸುವುದಕ್ಕೆ ನಾನು ಬದ್ಧನಾಗಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೋ ಅದನ್ನು ವಿಚಾರ ಮಾಡುವುದಕ್ಕೆ ಕೂಡ ನಾನು ತಯಾರಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಜನತಾದಳ ಮತ್ತು ಜನತಾ ಪಕ್ಷದ ಸರ್ಕಾರ ಇದ್ದ ಕಾಲಕ್ಕೆ ಕನ್ನಡ ಕಾವಲು ಸಮಿತಿ ಎಂದು ಮಾಡಿತ್ತು. ಯಾತಕ್ಕೋ ಆ ಹೆಸರಿನ ಮೇಲೆ ನನಗೆ ಅಷ್ಟು ಮನಸ್ಸು ಹೋಗುವುದಿಲ್ಲ. ಕಾವಲು ಸಮಿತಿ ವಾಚ್ ಡಾಗ್ ಎಂಬುದು ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ಬೌಬೌ ಎನ್ನುವುದಕ್ಕೆ ಒಂದು ವಾಚ್ ಡಾಗ್ ಬೇಕಾ ನಾನು ವಿಚಾರ ಮಾಡುತ್ತಿದ್ದೇನೆ ಕನ್ನಡಕ್ಕೆ ಪ್ರಾಧಾನ್ಯತೆ ಕೊಡುವುದಕ್ಕೆ ಕನ್ನಡದ ಅಭಿವೃದ್ಧಿಗಾಗಿ ಒಂದು ಸಮಿತಿ ಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಕನ್ನಡದ ಬಗ್ಗೆ ಹಗಲುರಾತ್ರಿ ಚಿಂತನೆ ಮಾಡುವಂತಹ ಜನರನ್ನು ಈ ಸಮಿತಿಲ್ಲಿಟ್ಟು ಯಾವ ರೀತಿ ಕನ್ನಡದ ಅಭಿವೃದ್ಧಿಯಾಗಬೇಕು ಪ್ರಚಾರ ಆಗಬೇಕು ಎಂಬುದನ್ನು ವಿಚಾರ ಮಾಡುತ್ತಾ ಇದ್ದೇನೆ.

ಕೆಲವು ಜನರ ಜೊತೆ ಸಾಹಿತಿಗಳ ಜೊತೆ ಸಂಪರ್ಕ ಬೆಳೆಸಿ ಮಾತನಾಡಿದ್ದೇನೆ. ಆದರೆ ಎಲ್ಲರ ಜೊತೆಯೂ ಮಾತನಾಡಿಲ್ಲ. ಕೆಲವರು ಬಂದು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಕನ್ನಡ ಕಾವಲು ಸಮಿತಿ ಎಂಬ ಹೆಸರನ್ನು ಬದಲಾಯಿಸಿ ಕನ್ನಡ ಅಭಿವೃದ್ಧಿ ಸಮಿತಿ ಎಂದು ಮಾಡಿ ಯೋಗ್ಯರನ್ನು ಅದರಲ್ಲಿ ನೇಮಿಸಿ ಕನ್ನಡಕ್ಕೆ ಹೆಚ್ಚು ಮಹತ್ವ ಬರುವಂತೆ ಕನ್ನಡದ ಬಗ್ಗೆ ಹೆಚ್ಚು ಅನುಕಂಪ ಕನ್ನಡದ ಬಗ್ಗೆ ಜನರಿಗೆ ಹೆಚ್ಚು ಅಭಿಮಾನ ಬರುವಂತೆ ವಾತಾವರಣ ನಿರ್ಮಾಣ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವಿಚಾರ ಮತ್ತೆ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೇಳುತ್ತಿದ್ದೇನೆ. ದುಡ್ಡು ವಸೂಲು ಮಾಡುವಂಥ ಕ್ಯಾಪಿಟೇಷನ್ ಬೇಸ್ಡ್ ಮೆಡಿಕಲ್ ಕಾಲೇಜ್ ಇಂಜಿನಿಯರಿಂಗ್ ಕಾಲೇಜ್ ಪಾಲಿಟೆಕ್ನಿಕ್ ಇದರ ಬಗ್ಗೆ ನಾವು ಹೇಳಿದ್ದೇವೆ. ಇದನ್ನು ತಡೆಗಟ್ಟುತ್ತೇವೆಂದು ಹೇಳಿದ್ದೇವೆ. ಆದರೆ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೇಳುತ್ತಿದ್ದೇನೆ. ತಪ್ಪಿಸಿಕೊಳ್ಳುವ ದೃಷ್ಟಿಯಿಂದ ಅಲ್ಲ. ಇದರಲ್ಲಿ ಏನಾಗಿದೆಯೆಂದರೆ ಹಿಂದಕ್ಕೆ ಜನತಾದಳ ಜನತಾ ಪಾರ್ಟಿ ಕಾಲಕ್ಕೆ ಒಂದು ಕಾನೂನು ಪಾಸ್ ಆಯಿತು. ಅವರು ಕೆಲವು ಕಾಲೇಜುಗಳನ್ನು ಅವರ ಕಾಲಕ್ಕೆ ಅವಕಾಶ ಮಾಡಿಕೊಟ್ಟರು. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ನಂತರ ಒಂದು ನಿರ್ಣಯ ಮಾಡಿದರು. ಇಷ್ಟು ದಿವಸದ ನಂತರ ಕ್ಯಾಪಿಟೇಷನ್ ಫೀ ಅನ್ನು ಯಾರೂ ವಸೂಲು ಮಾಡುವ ಹಾಗೆ ಇಲ್ಲ. ಕ್ಯಾಪಿಟೇಷನ್‌ನ್ನು ನಾವು ಅಬಾಲಿಷ್ ಮಾಡಿದ್ದೇವೆ ಎನ್ನುವ ಒಂದು ಕಾನೂನು ಮಾಡಿದರು. ಅದು ಯಾವುದೆಂದರೆ ಕರ್ನಾಟಕ ಎಜುಕೇಷನಲ್ ಇನ್ಸಿಟಿಟ್ಯೂಷನ್ ಪ್ರೊಹಿಬಿಷನ್ of capitation fees ಆಕ್ಟ್ ಆಫ್ 1984 ಅಂತ, ಅದು ಜಾರಿಗೆ ಬಂತು, ಅಲ್ಲಿಂದ ಏನಾಯಿತು ಎಂದರೆ ಕೆಲವು ಖಾಸಗಿ ಮೆಡಿಕಲ್ ಕಾಲೇಜಿನವರೋ ಇಂಜಿನೀಯರಿಂಗ್ ಕಾಲೇಜಿನವರೋ ಅಥವಾ ಇವರಿಬ್ಬರೂ ಸೇರಿಯೋ ಎಂಬುದು ನನಗೆ ಗೊತ್ತಿಲ್ಲ. ಹೈಕೋರ್ಟಿಗೆ ಹೋದರು. ಆದರಲ್ಲಿ ಆ ಒಂದು ಕಾನೂನಿನಲ್ಲಿ ಮುಖ್ಯವಾದ

ಕ್ಲಾಸ್‌ನ ಒಂದು ಅಂಶವೇನೆಂದರೆ ಇನ್ನು ಮುಂದೆ ಈ ಕಾನೂನು ಜಾರಿಗೆ ಬಂದ ಮೇಲೆ ಪ್ರತಿಯೊಂದು ತಾಂತ್ರಿಕ ಕಾಲೇಜುಗಳಲ್ಲಿ ಮಕ್ಕಳ ಪ್ರವೇಶದ ಮೇಲೆ ಸರ್ಕಾರದ ಹತೋಟಿ ಇರಬೇಕು. Control over the admissions. ಅದು ಸರ್ಕಾರದ ಹತೋಟಿಗೆ ಬಂದಾಗ ಸರ್ಕಾರವೇ ಒಂದು ಸಮಿತಿಯನ್ನು ಮಾಡಬಹುದು. ಮತ್ತು ಪ್ರೊಸೀಜರನ್ನು ಮಾಡಬಹುದು. ಪರೀಕ್ಷೆ ತೆಗೆದುಕೊಳ್ಳಬಹುದು. ಮೆರಿಟ್ ಮೇಲೆ ಮಕ್ಕಳಿಗೆ ಅಡ್ಮಿಷನ್ ಕೊಡಬಹುದು.

ಇನ್ನು ಅಂಡರ್ ಹ್ಯಾಂಡ್ ಅಥವಾ ಅಂಡರ್ ಟೇಬಲ್ ಎಬೋ ಟೇಬಲ್ಲೋ ದುಡ್ಡು ತೆಗೆದುಕೊಳ್ಳುವುದು ವಸೂಲು ಮಾಡುವುದು ಇದೇನು ದೊಡ್ಡಸ್ಕ್ಯಾಂಡಲ್ ಹಗರಣ ಏನು ಇದೆ ಅದು ತಪ್ಪುತ್ತದೆ ಎನ್ನುವ ಒಂದು ಸದಿಚ್ಛೆಯಿಂದ ಹಿಂದಿನ ಸರ್ಕಾರದವರು ಆ ಒಂದು ಕಾನೂನು ಮಾಡಿದರು. ದುರ್ದೈವಕ್ಕೆ ಏನಾಗಿದೆ ಎಂದ್ರರೆ ಯಾವ ಕ್ಲಾಸಿನಿಂದ ಅಧಿಕಾರವನ್ನು ಸರ್ಕಾರ ತೆಗೆದುಕೊಳ್ಳಬೇಕೆನ್ನುವಂತಹ ತೀರ್ಮಾನ ಮಾಡಿತೋ ಅದೇ ಹೈಕೋರ್ಟಿನಲ್ಲಿ ಸ್ಟ್ರಕ್‌ಡೌನ್ ಆಯಿತು; ಅದನ್ನು ಹೈಕೋರ್ಟಿನವರು ಹೊಡೆದು ಹಾಕಿದರು; ಅದು ಸಿಂಗಲ್ ಬೆಂಚ್‌ನಲ್ಲಿ.ಇಂಜಿನಿಯರಿಂಗ್ ಕಾಲೇಜೋ ಏನೋ ಗೊತ್ತಿಲ್ಲ. ಇನ್ನೂ ಸ್ವಲ್ಪ ಅಧ್ಯಯನ ಮಾಡಬೇಕಾಗಿದೆ. ಅದು ಹೊಡೆದು ಹಾಕಿದ ಮೇಲೆ ಅವರು ಏನು ಹೇಳಿದ್ದಾರೆಂದರೆ the single bench of the High Court admitted the plea of the management and ruled that Government cannot takeover any seat from the private unaided colleges ಅಂತ ಒಂದು ಹೇಳಿದ್ದಾರೆ. ಅಲ್ಲಿಂದ ಅವರು ಅಡ್ಮಿಷನ್ ಮೇಲೆ ಸರ್ಕಾರದ ಕಂಟ್ರೋಲ್ ಇರುವ ಹಾಗೆ ಇಲ್ಲ ಎನ್ನುವ ನಿರ್ಣಯ ಕೊಟ್ಟುಬಿಟ್ಟಿದ್ದಾರೆ. ನಾವು ಇದರ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿದ್ದೇವೆ. ಮತ್ತು ಹೈಕೋರ್ಟಿನ ಡಿವಿಜನಲ್ ಬೆಂಚ್ ಮುಂದೆಯೂ ಒಂದು ಅಪೀಲು ಇದೆ. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ಖಾಸಗಿ ಕಾಲೇಜಿನವರು ಬಹಳಷ್ಟು ದುಡ್ಡು ತೆಗೆದುಕೊಂಡು ಇವತ್ತು ಪ್ರವೇಶ ಕೊಡುತ್ತಿದ್ದಾರೆ ಮಕ್ಕಳಿಗೆ ಇವರ ಮೇಲೆ ಸರ್ಕಾರದ ಹತೋಟಿ ಇಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾವು ಮಾಡಬೇಕು ಅಂಥ ಅಲ್ಲ. ಇದಕ್ಕೆ ಸ್ಟೇ ಇದೆ. ಮತ್ತು ಹೈಕೋರ್ಟಿನವರು ಈ ನಿರ್ಣಯ ಮಾಡಿದ್ದಾರೆ. ನಾವು ಸುಪ್ರೀಂ ಕೋರ್ಟಿನ ಮುಂದಿಟ್ಟಿದ್ದೇವೆ. ಸುಪ್ರೀಂ ಕೋರ್ಟಿನವರು ಯಾವಾಗ ನಿರ್ಣಯ ಕೊಡುತ್ತಾರೋ ಎಂಬುದು ನಮಗೆ ಗೊತ್ತಿಲ್ಲ. ಅಲ್ಲಿಯವರೆವಿಗೂ ನಾವು ಈ ರೀತಿಯಾಗಿ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವುದು ಬೇಡ ಅಂತ ಹೇಳಬಹುದು. ಆದರೆ ಪ್ರವೇಶ ಯಾವ ರೀತಿಯಿಂದ ಮಾಡುತ್ತಿದ್ದಾರೆ ಈಗ ಏನಾಗಿದೆ ಎಂದರೆ ಕೆಲವು ಕಾಲೇಜಿನವರು ಮೆಡಿಕಲ್ ಕಾಲೇಜಿನವರು ಅವರ ಹೆಸರು ಹೇಳುವ ಹಾಗೆ ಇಲ್ಲ. ಅವರ ಹತ್ತಿರ ತಮ್ಮದೇ ಆದ ಕ್ಲಿನಿಕಲ್ ಫೆಸಿಲಿಟೀಸ್ ಇದೆ. ನಮ್ಮಲ್ಲಿ ಕ್ಲಿನಿಕಲ್ ಫೆಸಿಲಿಟೀಸ್ ನಮ್ಮದೇ ಇದೆ. ನಮ್ಮದು ಖಾಸಗಿ ಕಾಲೇಜು. ನಿಮ್ಮಿಂದ ಒಂದು ನಯಾ ಪೈಸೆಯನ್ನು ಪಡೆಯುತ್ತಿಲ್ಲ. ಅದಕ್ಕಾಗಿ ಒಂದು ಸೀಟ್ ಸರ್ಕಾರಕ್ಕೆ ಕೊಡುವುದಕ್ಕೆ ತಯಾರಿಲ್ಲ ಅಂತ ಹೇಳಿದ್ದಾರೆ. ಮತ್ತು ಕೊಡುತ್ತಿಲ್ಲ. ಅವರು ಹೇಳಿದ್ದಾರೆ. ನಮ್ಮಲ್ಲಿ ಯಾವ ರೀತಿಯಾದ ಇಂಟರ್‌ಫಿಯರ್ ಮಾಡುವುದಕ್ಕೆ ಸಾಧ್ಯವಿಲ್ಲ. ಎಜುಕೇಷನ್ ಇನ್ಸ್ಟಿಟ್ಯೂಷನ್ ಇದೆ. ಹೈಕೋರ್ಟಿನವರು ಈ ರೀತಿ ನಿರ್ಣಯ ಮಾಡಿದ್ದಾರೆ. ಸುಪ್ರೀಂ ಕೋರ್ಟಿನವರು ನಿರ್ಣಯ ಮಾಡಿದಾಗ ನೋಡೋಣ ಅಂತ ಹೇಳಿದ್ದಾರೆ.

ಇವತ್ತು ಯಾವ ಅಡ್ಮಿಷನ್ ಮೇಲೂ ನಮ್ಮ ಹತೋಟಿ ಇಲ್ಲ. ಈಗ ನಾವು ಏನು ಮಾಡಬಹುದು ಅಂದರೆ ಹೊಸ ಮೆಡಿಕಲ್ ಕಾಲೇಜುಗಳನ್ನು ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು ಹೊಸ ಪಾಲಿಟೆಕ್ನಿಕ್‌ಗಳನ್ನು ಕೊಡಲಾರದ ಹಾಗೆ ಯೂನಿವರ್ಸಿಟಿಯವರಿಗೂ ಹೇಳಬಹುದು. ಅಫಿಲಿಯೇಷನ್ ಕೊಡುವ ಹಾಗೆ ಇಲ್ಲ. ಪರ್ಮಿಷನ್ ಕೊಡುವ ಹಾಗೆ ಇಲ್ಲ. ಅದನ್ನೇ ನಾನು ಕಳೆದ 6 ತಿಂಗಳಿನಿಂದ ಮಾಡುತ್ತಿದ್ದೇನೆ. ಕಳೆದ 6 ತಿಂಗಳಿನಿಂದ ಎಷ್ಟೇ ಒತ್ತಡ ನನ್ನ ಮೇಲೆ ಬಂದರೂ ಒಂದು ಮೆಡಿಕಲ್ ಕಾಲೇಜನ್ನೂ ಖಾಸಗಿಯವರಿಗೆ ನಾನು ಕೊಟ್ಟಿಲ್ಲ. ಒಂದು ಇಂಜಿನಿಯರಿಂಗ್ ಕಾಲೇಜನ್ನೂ ಖಾಸಗಿಯವರಿಗೆ ನಾನು ಕೊಟ್ಟಿಲ್ಲ. ಒಂದೇ ಒಂದು ಪಾಲಿಟೆಕ್ನಿಕ್‌ನ್ನೂ ಖಾಸಗಿಯವರಿಗೆ ನಾನು ಕೊಟ್ಟಿಲ್ಲ. ತಡೆ ಹಿಡಿದಿದ್ದೇವೆ. ಈಗ ಏನು ಬಂದಿದೆ

ಆದಕ್ಕೆ ಫ್ರೀಜ್ ಮಾಡಿದ್ದೇವೆ. ಆದರೆ ಪ್ರಶ್ನೆ ಏನೆಂದರೆ ಏನ್ರೀ ಮೆಡಿಕಲ್ ಕಾಲೇಜುಗಳಲ್ಲಿ ಮತ್ತೆ ಕ್ಯಾಪಿಟೇಷನ್ ತೆಗೆದುಕೊಳ್ಳುತ್ತಿದ್ದಾರೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮತ್ತೆ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತಾರೆ. ಈ ರೀತಿ ವಸೂಲಿ ಮಾಡುತ್ತಿದ್ದಾರೆ.ಈ ಮಧ್ಯೆದಲ್ಲಿ ಏನಾಗಿದೆ ಎಂದರೆ ತಮಗೆ ನಾನು ಹೇಳಬೇಕಾಗಿದ್ದರೆ ಹಿಂದಕ್ಕೆ ನಿಮ್ಮ ಕಾಲಕ್ಕೇ ಆಗಿದ್ದು ಜನತಾದಳದ ಕಾಲಕ್ಕೆ ಒಂದು ಸಮಿತಿಯಾಯಿತು. ಕ್ಯಾಪಿಟೇಷನ್ ಅನ್ನು ನಾವು ರದ್ದು ಮಾಡಿದ್ದೇವೆ. ಮತ್ತು ಈ ಖಾಸಗಿ ಕಾಲೇಜುಗಳನ್ನು ನಡೆಸುವುದಕ್ಕಾದರೂ ದುಡ್ಡು ಬೇಕಲ್ಲ. ಆದಕ್ಕಾಗಿ ಕ್ಯಾಪಿಟೇಷನ್ ಬದಲು ಅವರಿಗೆ ಯಾವ ರೀತಿ ಸಾಧನಗಳನ್ನು ಮತ್ತು ಸಂಪನ್ಮೂಲ ಗಳನ್ನು ಹೆಚ್ಚು ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ವಿಚಾರ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ಸರ್ಕಾರ ಮಾಡಿತು ಇಸ್ಸಾರ್ ಕಮಿಟಿ ಅಂತ. ಅವರು ಶಿಫಾರಸ್ಸು ಮಾಡಿದರು.

ಆ ಶಿಫಾರಸ್ಸುಗಳನ್ನು ಜಾರಿಗೆ ತರುವುದರಲ್ಲಿ ಜನತಾದಳದ ಸರ್ಕಾರ ಹೋಯಿತು. ಆದರೆ ರಾಜ್ಯಪಾಲರ ಅಧಿಕಾರಾವಧಿಯಲ್ಲಿ ಜಾರಿಗೆ ಬಂದಿದೆ. ಆ ಬಗ್ಗೆ ಸರ್ಕಾರಿ ಆಜ್ಞೆ ಆಗಿದೆ. ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಇವತ್ತು ಪ್ರೈವೇಟ್ ಕಾಲೇಜಿನವರು ಎರಡೂ ಕಡೆಯಿಂದ ಹೊಡೆಯುತ್ತಿದ್ದಾರೆ. ಈ ಕಡೆ ಹೆಚ್ಚುವರಿ ಫೀಸೂ ತೆಗೆದುಕೊಳ್ಳುತ್ತಿದ್ದಾರೆ. ಆ ಕಡೆ ಕ್ಯಾಪಿಟೇಷನ್ ಫೀಸನ್ನೂ ತೆಗೆದುಕೊಳ್ಳುತ್ತಿದ್ದಾರೆ. ಒಂದೊಂದು ಮೆಡಿಕಲ್ ಕಾಲೇಜಿನಲ್ಲಿ ಸೀಟಿಗೆ 3 ಅಥವಾ 4 ಲಕ್ಷ ತೆಗೆದುಕೊಳ್ಳುತ್ತಿದ್ದಾರೆ. ಹಾಗೂ 25, 50 ಸಾವಿರ ರೂಪಾಯಿಗಳ ಹೆಚ್ಚುವರಿ ಫೀ ತೆಗೆದು ಕೊಳ್ಳುತ್ತಿದ್ದಾರೆ. ಇದರ ಬಗ್ಗೆ ನಾವೆಲ್ಲರೂ ಕಲೆತು ವಿಚಾರ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ಸುಪ್ರೀಂ ಕೋರ್ಟಿನಿಂದ ಅಡ್ಮಿಷನ್ ಮೇಲೆ ನಮಗೆ ಕಂಟ್ರೋಲ್ ಬರುವುದಿಲ್ಲವೋ ಮತ್ತೆ ಈ ಹೆಚ್ಚುವರಿ ಫೀಸ್ ತೆಗೆದುಕೊಳ್ಳಿ ಎಂದು ಏಕೆ ಹೇಳಬೇಕು ಎರಡೂ ಕಡೆಯಿಂದ ಹೊಡೆಯುತ್ತಿದ್ದಾರೆ. ಕೊನೆಯ ಪಕ್ಷ ಈ ಗೌರ್ನಮೆಂಟ್ ಆರ್ಡರನ್ನು ವಿತ್‌ಹೋಲ್ಡ್ ಮಾಡಬೇಕೇನೋ ಎಂದು ವಿಚಾರ ಮಾಡುತ್ತಿದ್ದೇನೆ. ಏಕೆಂದರೆ ನಾವು ಅವರಿಗೆ ಲೈಸನ್ಸ್ ಕೊಡಬೇಕಾಗಿದೆ. ತಮಗೆ ಹೇಳಬೇಕೆಂದರೆ ಈ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವುದು ಇವತ್ತು ಆಕ್ಟ್ ಪ್ರಕಾರ ಒಂದು ಅಫೆನ್ಸ್. ಆದರೆ ತೆಗೆದುಕೊಂಡಿದ್ದಾರೆಂದು ಹೇಳುವವರು ಬೇಕಲ್ಲವೇ ಇವತ್ತು ಕೊಟ್ಟಿದ್ದೇವೆಂದು ಹೇಳುವುದು ಬೇಕಲ್ಲವೇ ಇವತ್ತು ಪರಿಸ್ಥಿತಿ ಏನಿದೆ ಎಂದರೆ ಯಾರಿಗೆ ಅವರು ಅಡ್ಮಿಷನ್ ಕೊಡುವುದಿಲ್ಲ ಅವರಿಗೆ ದುಡ್ಡನ್ನು ವಾಪಸ್ಸು ಕೊಡುತ್ತಾರೆ. ಯಾರಿಗೆ ಅಡ್ಮಿಷನ್ ಕೊಡುತ್ತಾರೋ ಅವರಿಂದ ದುಡ್ಡು ತೆಗೆದುಕೊಳ್ಳುತ್ತಾರೆ. ಕೊಡುವವರು ಮತ್ತು ತೆಗೆದುಕೊಳ್ಳುವವರು ಒಂದಾದರೆ ಸರ್ಕಾರ ಏನು ಮಾಡಬೇಕು ಸರ್ಕಾರದ ಮುಂದೆ ಯಾರು ಕಂಪ್ಲೇಂಟ್ ಮಾಡುವುದು ಯಾರಾದರೂ ಕಂಪ್ಲೇಂಟ್ ಮಾಡಬೇಕಲ್ಲವೇ ಇವತ್ತು ಏನಾಗಿದೆ ಎಂದರೆ ಕಾನೂನು ಆದಮೇಲೆ ನಮ್ಮ ಹತ್ತಿರ ಕಂಪ್ಲೇಂಟ್ ಬಂದಿರುವುದು ಕೇವಲ ಮೂರು. ಅದೂ ಕೂಡಾ ಇಂಜನಿಯರಿಂಗ್ ಕಾಲೇಜಿನ ಅಡ್ಮಿಷನ್ ಬಗ್ಗೆ ಬಂದಿದೆ. ಮೆಡಿಕಲ್ ಬಗ್ಗೆ ಒಂದೂ ಕಂಪ್ಲೇಂಟ್ ಬಂದಿಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ಇದು ಪ್ರಾಕ್ಟಿಕಲ್ ಡಿಫಿಕಲ್ಟಿ. ಈ ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕು ಏಕೆಂದರೆ ನೀವು ಹೇಳಬಹುದು. ಈ ರೀತಿಯಿಂದ ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಕ್ಯಾಪಿಟೇಷನ್ ಫೀಸನ್ನು ಬೇಕಾದಷ್ಟು ಮನಸ್ಸು ಬಂದಹಾಗೆ ತೆಗೆದುಕೊಳ್ಳುತ್ತಿದ್ದಾರೆ ಮೂರ್‍ನಾಲ್ಕು ಲಕ್ಷ ಕೊಟ್ಟು ತೆಗೆದುಕೊಳ್ಳುತ್ತಿದ್ದಾರೆ ಕ್ಯೂನಲ್ಲಿ ನಿಂತು ತಂದೆ ತಾಯಿಗಳು ತಮ್ಮ ಮಕ್ಕಳ ಪ್ರವೇಶಕ್ಕೆ ಕೊಡುತ್ತಿದ್ದಾರೆ ಆದ್ದರಿಂದ ನಾವು ವಚನಭ್ರಷ್ಟರಾದೆವು ಎನ್ನುವ ದೋಷಕ್ಕೆ ಗುರಿಯಾಗಬಹುದು. ಆದರೆ ಪರಿಸ್ಥಿತಿ ಈ ರೀತಿ ಇರುವುದರಿಂದ ಇದಕ್ಕೆ ಏನು ಮಾಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಕ್ಯಾಬಿನೆಟ್ ಸಬ್ ಕಮಿಟಿ ಕೂಡಾ ಇದರ ಬಗ್ಗೆ ವಿಚಾರ ಮಾಡಿದ್ದಾರೆ. ಮತ್ತೆ ಇರುವ ಕಾನೂನಿನಲ್ಲಿ ಯಾವ ರೀತಿಯಿಂದಲಾದರೂ ಬದಲಾವಣೆಯಾಗಲೀ ತಿದ್ದುಪಡಿಯನ್ನಾಗಲಿ ತರುವ ಬಗ್ಗೆ ಲಾ ಡಿಪಾರ್ಟ್‌ಮೆಂಟ್ ಜೊತೆ ಸಂಪರ್ಕ ಬೆಳೆಸಿದ್ದೇವೆ. ಈ ಬಗ್ಗೆ ಲಾ ಡಿಪಾರ್ಟ್‌ಮೆಂಟ್‌ನವರು ಎಗ್ಸಾಮಿನ್ ಮಾಡುತ್ತಿದ್ದಾರೆ. ಅವರ ಸಲಹೆ ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಲಕ್ಕಪ್ಪ:- ಕ್ಯಾಪಿಟೇಷನ್ ಫೀ ಬಗ್ಗೆ ತಾವು ಹೇಳಿದ್ದೀರಿ. ತಾವು ಹೇಳಿದ ಹಾಗೆ ಸರ್ಕಾರದ್ದು ತಪ್ಪು ಇಲ್ಲಿ ಅಲ್ಲ. ಆದರೆ ಇವತ್ತು ಸರ್ಕಾರ ಮಾಡದೇ ಇರುವುದರ ತಪ್ಪಿನ ಬಗ್ಗೆ ದೊಡ್ಡ ಆಪಾದನೆ ಸಾರ್ವಜನಿಕರಿಂದ ಬಂದಿದೆ. ಇವತ್ತು ಯಾರು ಪ್ರೈವೇಟ್ ಕಾಲೇಜು ನಡೆಸುತ್ತಾರೋ ಅದನ್ನು ನಡೆಸಲಿ. ಆದರೆ ಅವುಗಳಲ್ಲಿನ ಅಡ್ಮಿಷನ್ ವಗೈರೆ ಕಂಟ್ರೋಲ್ ಮಾಡುವ ವ್ಯವಸ್ಥೆ ಸರ್ಕಾರಕ್ಕೆ ಇರಬೇಕಾಗುತ್ತದೆ. ಇಂತಹ ಒಂದು ವ್ಯವಸ್ಥೆ ಇವತ್ತು ಆಂಧ್ರದಲ್ಲಿ ಇದೆ. ಆ ರೀತಿ ಮಾಡುವುದಕ್ಕೆ ಅವಕಾಶ ಇದ್ದರೆ ಏನಾದರೂ ತಾವು ಯೋಚನೆ ಮಾಡಿ ಮಾಡಬೇಕಾದುದು ಅಗತ್ಯ ಇದೆ. ಏಕೆಂದರೆ ಅನ್ಯಥಾ ಅವರು ಸರ್ಕಾರದ ಮೇಲೆ ದೂರುತ್ತಿದ್ದಾರೆ. ಈ ಸರ್ಕಾರ ಬಂದ ಮೇಲೆ ಕ್ಯಾಪಿಟೇಷನ್ ಫೀ ಜಾಸ್ತಿಯಾಯಿತು ಮತ್ತೆ ಫೀಸನ್ನೂ ಕೂಡಾ ವಸೂಲು ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದುದರಿಂದ ಇದನ್ನು ತಪ್ಪಿಸುವುದಕ್ಕೆ ಏನಾದರೂ ವ್ಯವಸ್ಥಿತವಾದ ಒಂದು ಕಂಟ್ರೋಲ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಇವತ್ತು ಅವರೇ ಎಲ್ಲ ವ್ಯವಹಾರ ಮಾಡಿದರೂ ಸರ್ಕಾರ ಅವುಗಳ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಯೋಚನೆ ಮಾಡುವುದು ಬಹಳ ಒಳ್ಳೆಯದು. ಏಕೆಂದರೆ ಸಾರ್ವಜನಿಕರು ಸರ್ಕಾರದ ಮೇಲೆ ಸುಮ್ಮನೆ ಇವತ್ತು ಗೂಬೆ ಕೂರಿಸುತ್ತಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್:- ಇದು ಪ್ರಶ್ನೆ ಹೈಕೋರ್ಟಿನಲ್ಲಿ ಇರುವುದರಿಂದ ಸುಪ್ರೀಂ ಕೋರ್ಟಿನಲ್ಲಿ ಇರೋ ಮುಂದೆ ನಾವು ಏನೂ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಅದಕ್ಕಾಗಿ ನಾವು ಲಾ ಡಿಪಾರ್ಟ್‌ಮೆಂಟಿಗೆ ಹೇಳಿದ್ದೇವೆ. ಏನಾದರೂ ಇದ್ದರೆ ಕಾನೂನಿನಲ್ಲಿ ಬದಲಾವಣೆ ಮಾಡಿ ಅಮೆಂಡ್‌ಮೆಂಟ್ ಮಾಡುವುದಕ್ಕೆ ಸಾಧ್ಯ ಇದ್ದರೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡೋಣ ಎಂದು ನಾನು ಹೇಳಿದ್ದೇನೆ. ಇಷ್ಟು ಹೇಳಿದ ಮೇಲೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಅಂಬೇಡ್ಕರ್ ಜಯಂತಿ ನಡೆಯುವ ವೇಳೆಗೆ ನಾನು ಕೆಲವು ಘೋಷಣೆಗಳನ್ನು ಮಾಡಿದ್ದೆ. ಮೊದಲನೆಯ ಘೋಷಣೆ ಅಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಪೈಕಿ ರ್‍ಯಾಂಕ್ ಪಡೆದವರಿಗೆ ಡೈರೆಕ್ಟ್ ಎಂಪ್ಲಾಯ್‌ಮೆಂಟ್ ಕೊಡಬೇಕು. ಅವರು ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಹೋಗುವ ಅವಶ್ಯಕತೆ ಇಲ್ಲವೆಂದು ಸರ್ಕಾರ ಆದೇಶವನ್ನು ಕೂಡ ಜಾರಿ ಮಾಡಿದ್ದೇವೆ. ಅದೇ ರೀತಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಇವೊತ್ತು ರಿಕ್ರೂಟ್‌ಮೆಂಟ್‌ನಲ್ಲಿ ಬ್ಯಾನ್ ಇದ್ದರೂ ಇದ್ದ ಬ್ಯಾಕ್‌ಲಾಗ್ ತುಂಬಲು ಮತ್ತು ಅವರಿಗೆ ಬರಬೇಕಾಗಿದ್ದ ಖೋಟಾ ಏನು ಇದೆ ಅದನ್ನು ತುಂಬಬೇಕೆಂದು ಹೇಳಿದ್ದೇವೆ ಮತ್ತು ಜಾರಿಗೆ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಸ್ಕಾಲರ್‌ಷಿಪ್ ಈಗ ಏನು ಕೊಡುತ್ತಿದ್ದೇವೆ ಅದಕ್ಕಿಂತ ಶೇಕಡಾ 50 ರಷ್ಟು ಹೆಚ್ಚು ಕೊಡಬೇಕೆಂದು ಘೋಷಣೆ ಮಾಡಿದ್ದೇವೆ. ಅದನ್ನೂ ಕೂಡ ಜಾರಿಗೆ ಕೊಟ್ಟಿದ್ದೇವೆ. ಅಂಬೇಡ್ಕರ್ ಭವನವನ್ನು ಮೊದಲು ದೊಡ್ಡ ಪ್ರಮಾಣದಲ್ಲಿ 12-13 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಬೇಕೆಂದು ಇತ್ತು. ಅನಂತರ ಏನೂ ಬದಲಾಯಿಸಿ ಬರೇ ಒಂದು ಆಡಿಟೋರಿಯಂ ಮಾಡಿದರೆ ಸಾಕು ಎಂದು ವಿಚಾರ ಮಾಡಿದರು. ಆದರೆ ಅವತ್ತಿನ ದಿವಸ ನಾನು ಘೋಷಣೆ ಮಾಡಿದ್ದೆ. ಮೊದಲನೆಯ ಸ್ಕೀಮ್ ಏನಿದೆ ಅದರ ಪ್ರಕಾರವೇ ಒಂದು ಅಂಬೇಡ್ಕರ್ ಭವನವನ್ನು ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ನ್ನು ಕಟ್ಟಬೇಕೆಂದು ನಾನು ಪಿ.ಡಬ್ಲ್ಯೂ.ಡಿ. ಇಲಾಖೆಯವರಿಗೆ ಹೇಳಿದ್ದೇನೆ. ಬಹುಶಃ ಕೆಲವೇ ದಿವಸದಲ್ಲೇ ಟೆಂಡರ್ ಕರೆದು ಆ ಕೆಲಸ ಶುರುವಾಗುತ್ತದೆ. ಮತ್ತು ಅತಿ ಮುಖ್ಯವಾದುದು ಎಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರು ಅನ್‌ಆಥರೈಸ್ಡ್ ಆಗಿ ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಫಾರೆಸ್ಟ್ ಲ್ಯಾಂಡ್ ಬಿಟ್ಟು, ಸರ್ಕಾರಿ ಭೂಮಿ ಎಲ್ಲೆಲ್ಲಿ ಇದೆಯೋ ಅದನ್ನು ಅವರಿಗೇ ಪಟ್ಟಾ ಮಾಡಬೇಕು ಎನ್ನುವಂತದ್ದನ್ನು ನಾವು ನಿರ್ಣಯ ಮಾಡಿದ್ದೇವೆ. ಅದರ ಪ್ರಕಾರ ಒಂದು ಬಿಲ್ ಕೂಡ ನಾವು ತಯಾರು ಮಾಡಿದ್ದೇವೆ. ಮುಂದಿನ ಕ್ಯಾಬಿನೆಟ್‌ನಲ್ಲಿ ಆ ಬಿಲ್ಲನ್ನು ನಾವು ಪಾಸ್ ಮಾಡುತ್ತೇವೆ. ಕೆಲವು ಕಾನೂನು ಮತ್ತು ರೂಲ್ಸ್‌ನ್ನು ಬದಲಾವಣೆ ಮಾಡಬೇಕೆನ್ನುವ ವಿಚಾರವನ್ನು ಹೇಳಿದ್ದಾರೆ. ಅದನ್ನು

ಕೂಡ ಯಾವ ರೀತಿ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮ್ಮಲ್ಲಿ ಒಂದೇ ಒಂದು ವಿನಂತಿ ಮಾಡಿ ಕೊಳ್ಳುವುದೇನೆಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಸವಲತ್ತು ಕೊಡುವುದನ್ನು ಅನೌನ್ಸ ಮಾಡಿದ್ದೀರಿ ಅದಕ್ಕೆ ನಾನು ತುಂಬಾ ಸ್ವಾಗತ ಮಾಡುತ್ತೇನೆ. ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡುವಂತಹ ಸಂದರ್ಭದಲ್ಲಿ ಮೊದಲು ಅವರಿಗೆ ಆದ್ಯತೆ ಕೊಡಿ ಆದರೆ ಇತರೆ ಜನಾಂಗದವರು ಕಡುಬಡವರು ಇದ್ದರಲ್ಲಾ ಅವರಿಗೂ ಮಾಡದೇ ಇದ್ದರೆ ಇತರೆಯವರಿಗೆ ನಾವು ದ್ರೋಹ ಮಾಡಿದಂತಾಗುತ್ತದೆ. ಎಲ್ಲಾ ಜನಾಂಗದವರಿಗೂ ಮಾಡಿ ಮೊದಲನೆಯ ಆದ್ಯತೆಯನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಕೊಡಿ ಅದಾದ ಮೇಲೆ ಇತರೆ ಕಡುಬಡವರಿಗೂ ಅನ್‌ಆಥರೈಸ್ಡ್ ಕಲ್ಟಿವೇಷನ್ ಖಾಯಂ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅನ್ಯಾಯ ಮಾಡಿದಂತಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಯಡಿಯೂರಪ್ಪನವರು ಅದನ್ನು ಹೇಳಬೇಕಾದ ಅವಶ್ಯಕತೆ ಇಲ್ಲ. ನಮ್ಮ ಲ್ಯಾಂಡ್ ಗ್ರಾಂಟ್ ರೂಲ್ಸನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಕೊಡಬೇಕು ಉಳಿಕೆಯದ್ದನ್ನು ಉಳಿಕೆ ಏನು ಲ್ಯಾಂಡ್‌ಲೆಸ್ ಇದ್ದಾರೆ ಅವರಿಗೆ ಕೊಡಬೇಕೆನ್ನುವುದು ಇದೆ. ನಾವು ಇವತ್ತು ಮಾಡುವುದಕ್ಕೆ ಮುಂಚೆ ಮೊದಲನೆಯ ಕೆಲಸ ಇದು ಮುಗಿಸಿ ಅನಂತರ ಎರಡನೆಯದು ಮಾಡಬೇಕೆಂದು ವಿಚಾರ ಇದೆ. ಅವರಿಗೂ ಕೂಡ ಭೂಮಿ ಕೊಡುತ್ತೇವೆ ಯಾರು ಬಡವರು ಇದ್ದಾರೆ ಯಾರು ಕಡು ಬಡವರು ಇದ್ದಾರೆ ಯಾರಿಗೆ ಭೂಮಿ ಇಲ್ಲ ಅವರಿಗೂ ಭೂಮಿ ಕೊಡಬೇಕೆಂದು ಕಮಿಟ್ ಮಾಡಿಕೊಂಡಿದ್ದೇವೆ. ಇದೆಲ್ಲ ಹೊಸದಲ್ಲ ಈಗಾಗಲೇ ನಾವು ಈ ರೀತಿಯಿಂದ ಕೊಡುತ್ತೇವೆಂದು ಹೇಳಿದ್ದೇವೆ. ಅದರ ಸರ್ವೆ ಮಾಡುವುದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಅದಕ್ಕೆ ಮೊದಲು ಅವರಿಗೆ ಪಟ್ಟಾ ಮಾಡಿಕೊಡಬೇಕು ಆದ್ಯತೆ ಕೊಡಬೇಕೆಂಬ ವಿಚಾರವನ್ನು ಹೇಳಿದ್ದೇನೆ ಹೊರತಾಗಿ ಉಳಿಕೆಯವರಿಗೆ ಕೊಡಬಾರದೆಂಬ ವಿಚಾರ ನಮ್ಮ ಮುಂದೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮೊದಲು ಅದಕ್ಕೆ ಆದ್ಯತೆ ಕೊಟ್ಟು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅದನ್ನು ಮಾಡಿಸಿ ಜೊತೆಗೆ ಅಮೆಂಡ್‌ಮೆಂಟ್ ತರುವಂತಹ ಸಂದರ್ಭದಲ್ಲಿ ಇತರೆ ಜನಾಂಗದವರಿಗೆ ಕನ್‌ಫರ್‌ಮೇಷನ್ ಮಾಡುವಂತಹ ವ್ಯವಸ್ಥೆ ಮಾಡಿ.

ಶ್ರೀ ವೀರೇಂದ್ರ ಪಾಟೀಲ್:- ಅದರ ಬಗ್ಗೆ ಸಾಧ್ಯತೆ ಇದ್ದರೆ ನಾವು ನೋಡುತ್ತೇವೆ. ಎರಡು ತರಲು ಸಾಧ್ಯತೆ ಇದೆಯೋ ಇಲ್ಲವೋ ಎಂದು ನೋಡುತ್ತೇವೆ. ಏಕೆಂದರೆ ಪಟ್ಟಾ ಕೊಡುವಾಗ ನಾವು ಸರ್ವೆ ನಂಬರ್ ಮುಂತಾದ್ದನ್ನೆಲ್ಲಾ ಬರೆಯಬೇಕಾಗುತ್ತದೆ. ಸರ್ವೆ ಮಾಡದೇ ಪಟ್ಟಾ ಹಂಚುತ್ತೇವೆ ಅಂದರೆ ಯಾರ ಭೂಮಿ ಎಲ್ಲಿದೆ ಎಂದು ನೋಡಬೇಕಾಗುತ್ತದೆ. ಆ ಬಡವರಿಗೆ ಭೂಮಿ ಗೊತ್ತಿಲ್ಲದೆ ಇದ್ದರೆ ಅವರು ಹೋಗಿ ಉಳುವುದು ಹೇಗೆ? ಅದಕ್ಕಾಗಿ ಈ ಎಲ್ಲಾ ಮಾಡುವುದರಿಂದ ಸ್ವಲ್ಪ ಟೈಂ ಹಿಡಿಯುತ್ತವೆಂಬ ವಿಚಾರವನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ.

SRI QUMARUL ISLAM:- This is an year of Social Justice as declared by the Government of India. This year also happens to be the Birth Centenary year of Dr.Babasaheb Ambedkar. Therefore, I request the Government to release the prisoners who are undergoing life imprisonment and who have completed the imprisonment of 10 years on 14/4/1991. The decision to release such prisoners before 4 years of their period of imprisonment can be taken by the Government. When Birth Centenary of Father of the Nation Mahatma Gandhi was observed, such a decision was taken by some of the States. I request the Governement to take this decision during the Birth Centenary Year of Dr.B.R. Ambedkar.

ಶ್ರೀ. ವೀರೇಂದ್ರ ಪಾಟೀಲ್:- ಅದಕ್ಕೆ ಬಹುಶಃ 14 ವರ್ಷದಲ್ಲಿ ಮರ್ಡರ್ ಕೇಸ್ ಆದವರನ್ನು ಬಿಡಬೇಕು ಅನ್ನುವುದು ಇದೆ. ಅದರಲ್ಲಿ ಪ್ರತಿಯೊಂದು ಇಂತಹ ಕೇಸುಗಳು ಹೋಗುವುದಕ್ಕೆ ಒಂದು ಕಮಿಟಿ ಇದೆ. One Judicial Officer is there. He is the Chairman of that Committee. ಅವರು ಶಿಫಾರಸ್ಸು ಮಾಡಿದರೆ ಅದರೊಳಗೂ ನಾವು ಬಿಡುತ್ತೇವೆ. ಆದರೆ ಮಾನ್ಯ ಖಮರಲ್ ಇಸ್ಲಾಂ ಅವರು ಜನರಲ್ ಆಗಿ ಬಿಟ್ಟು ಬಿಡಿ. ಅದಕ್ಕೆ ಶಿಫಾರಸ್ಸು ಬರಬೇಕಾದ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ನಾನು ಇದನ್ನು ಪರೀಕ್ಷಿಸಿ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲಿಂದ ಮಹಿಷಿಯವರ ರಿಪೋರ್ಟ್ ಬಗ್ಗೆ ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಮಹಿಷಿ ರಿಪೋರ್ಟ್ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿಕ್ಕೆ ನನ್ನ ಸಹೋದ್ಯೋಗಿಯಾದ ವೀರಪ್ಪಮೊಯಿಲಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ. ಈಗಾಗಲೇ ಅವರು ಎರಡು ಸಲ ಕೂತು ಅನೇಕ ವಿಚಾರಗಳನ್ನು ಚರ್ಚೆಮಾಡಿದ್ದಾರೆ. ಮೊನ್ನೆ ಹೇಳಿದರು ಕೆಲವು ದಿವಸಗಳ ನಂತರ ಇಂಟೀರಿಯಮ್ ರಿಪೋರ್ಟ್ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ರಿಪೋರ್ಟ್ ಬಂದಮೇಲೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಈ ಮಧ್ಯದಲ್ಲಿ ಸಂತೋಷದ ಸಂಗತಿ ಹೇಳಬೇಕೆಂದರೆ ಕೇಂದ್ರಸರ್ಕಾರದವರು ನಮ್ಮ ಒತ್ತಾಯಕ್ಕೆ ಮಣಿದು ಕೇಂದ್ರಸರ್ಕಾರದಲ್ಲಿ ನೌಕರಿಯನ್ನು ಹುಡುಕಬೇಕಾದರೆ ನೌಕರಿಗೆ ಅಪ್ಲೈ ಮಾಡಬೇಕಾದರೆ ಇಂಟರ್‌ವ್ಯೂಗೆ ಮದ್ರಾಸ್‌ಗೆ ಹೋಗಬೇಕಾಗಿತ್ತು. ಆ ಪರಿಸ್ಥಿತಿ ಇವತ್ತು ಹೋಗಿ ನಮ್ಮಲ್ಲಿಯೇ ಸ್ಟ್ಯಾಫ್ ಸೆಲೆಕ್ಷನ್ ಕಮಿಟಿ ಆಫೀಸ್ ಅನ್ನು ಇಲ್ಲಿಯೇ ಪ್ರಾರಂಭ ಮಾಡಿದ್ದಾರೆ. ನಾನೇ ಹೋಗಿ ಅದನ್ನು ಉದ್ಘಾಟನೆ ಮಾಡಿದ್ದೇನೆ. ಇನ್ನು ಮೇಲೆ ನಮ್ಮ ಮಕ್ಕಳು ಮದ್ರಾಸ್‌ಗೆ ಹೋಗಬೇಕಾದಂತಹ ಅವಶ್ಯಕತೆಯಿಲ್ಲ. ಇಂಟರ್‌ವ್ಯೂ ಅನ್ನು ಇಲ್ಲೇ ಕಂಡೆಕ್ಟ್ ಮಾಡುತ್ತಾರೆ. ಫಾರಂಗಳು ಇಲ್ಲಿಯೇ ಸಿಗುತ್ತವೆ. ಫಾರಂ ಹಂಚುವುದು ಸಹ ಇಲ್ಲೇ ಆಗುತ್ತದೆ. ಈ ತರಹದ ಅನುಕೂಲ ಮಾಡಿಕೊಟ್ಟಿದ್ದಾರೆ. ಇದರಿಂದ ನಮ್ಮ ಎಲ್ಲ ಸಮಸ್ಯೆ ಬಗೆಹರಿಯಿತು ಎಂದು ನಾನು ಹೇಳುತ್ತಿಲ್ಲ. ಆದರೆ ಈ ರೀತಿಯ ಅನೇಕ ಶಿಫಾರಸ್ಸುಗಳು ನಮ್ಮ ಮಹಿಷಿಯವರ ವರದಿಯಲ್ಲಿವೆ ಅವುಗಳನ್ನು ನಾವು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನೊಂದು ವಿಚಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ನಾನು ಹೆಚ್ಚು ಹೇಳುವಹಾಗೆ ಇಲ್ಲ. ಇದರ ಬಗ್ಗೆ ಎಷ್ಟು ಹೇಳಿದರೂ ತಿಪ್ಪೆ ಕೆದಕಿದಹಾಗೆ ಆಗುತ್ತದೆ. ಯಾರ ಮೇಲೂ ಹೇಳಬೇಕಾಗಿಲ್ಲ. ಇದ್ದದ್ದು ವಾಸ್ತವಾಂಶ ಹೇಳುವುದು ಬಹಳ ಇದೆ. ನಾನು ಹೇಳುವಹಾಗೆ ಇಲ್ಲ. ಅದನ್ನು ಯಾವಾಗಲಾದರೂ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಮಗೆ ಅನೇಕ ವಿಚಾರಗಳು ಗೊತ್ತಿಲ್ಲದೆ ಇರಬಹುದು. ಆದ್ದರಿಂದ ತಾವು ಕೃಪೆ ಮಾಡಿ ಹೇಳಿದರೆ ನಮಗೂ ಗೊತ್ತಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಬಹುಶಃ ಏನು ಅನ್ನಬೇಕೋ ನನಗೆ ಗೊತ್ತಾಗುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ರೊಕ್ಕ ಕೊಟ್ಟಿದ್ದಾರೆ. ಸಾವಿರಾರು ಎಕರೆ ಭೂಮಿಯನ್ನು ಪೇಪರ್‌ನಲ್ಲಿ ತೆಗೆದುಕೊಂಡಿದ್ದಾರೆ. ಸೈಟ್‌ಗಳೂ ಇಲ್ಲ ಭೂಮಿಯೂ ಇಲ್ಲ. ಅದು ಎಲ್ಲಿ ಹೋಗಿದೆ ಎನ್ನುವುದು ಗೊತ್ತಿಲ್ಲ. ಪರಿಸ್ಥಿತಿ ಏನಾಗಿದೆ ಅಂದರೆ ಇದು ಒಂದೆರಡು ಅಲ್ಲ ಸಾವಿರಾರು ಎಕರೆ ಭೂಮಿ. ಹಣ ಹೋಗಿದೆ ಅಕ್ವಿಜಿಶನ್ ಆಗಿದೆ. ಅಕ್ವೈರ್ ಆಗಿ ಹೋಗಿದೆ. ಆದರೆ ಆ ಭೂಮಿ ಎಲ್ಲಿದೆ ಸೈಟುಗಳು ಎಲ್ಲಿದೆ ಯಾವ ಭೂಮಿಯಲ್ಲಿ ಯಾರಿದ್ದಾರೆ ಎನ್ನುವುದನ್ನು ಪತ್ತೆಹಚ್ಚುವುದು ದೊಡ್ಡ ಪ್ರಾಬ್ಲಮ್ ಆಗಿದೆ. ಅದಕ್ಕಾಗಿ ನಾನು ಹೇಳಿದ್ದು ಇದು ಒಂದೇ ಅಲ್ಲ ಇನ್ನು ಅನೇಕ ವಿಷಯಗಳು ಇವೆ. ಅಧಿಕಾರಿಗಳು ಹೇಗೆ ಇರುತ್ತಾರೆ ಎನ್ನುವುದನ್ನು ವಿಚಾರ ಮಾಡಬೇಕು. ಒಂದು ಉದಾಹರಣೆಗೆ ಹೇಳುತ್ತೇನೆ. ಒಂದು ಯಾವುದೋ ಲ್ಯಾಂಡ್ ಗೆದ್ದಲಹಳ್ಳಿ ಹತ್ತಿರ ಬಹುಶಃ ಮೂರು ಎಕರೆ 10 ಗುಂಟೆ ಭೂಮಿಯನ್ನು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಅಕ್ವೈರ್ ಮಾಡಲು ಹೊರಟರು. ಅಕ್ವೈರ್ ಮಾಡಿ ನೋಟಿಫಿಕೇಶನ್ ಇಷ್ಯು ಆಯಿತು. ನೋಟಿಫಿಕೇಶನ್ ಇಷ್ಯು ಆದಮೇಲೆ ಭೂಮಿ ಮಾಲೀಕರು

ಹೈಕೋರ್ಟ್‌ನಲ್ಲಿ ಛಾಲೆಂಜ್ ಮಾಡಿದರು. ಅಲ್ಲಿ ಅವರ ವಿರುದ್ಧವಾಯಿತು. ಸುಪ್ರೀಂಕೋರ್ಟ್‌ಗೆ ಹೋದರು. ಅಲ್ಲಿಯೂ ವಿರುದ್ಧವಾಯಿತು. ಆಮೇಲೆ ಬಿಡಿಎನವರ ಹತ್ತಿರ ಭೂಮಿ ತೆಗೆದುಕೊಂಡವರು ಬಂದು ಏನು ಹೇಳುತ್ತಾರೆಂದರೆ ನಾವು ಗ್ರೂಪ್ ಹೌಸಿಂಗ್ ಕಟ್ಟುತ್ತೇವೆ ಆದಕ್ಕೆ ನಮಗೆ ಎಕ್ಸ್‌ಮ್ಪ್‌ಷನ್ ಕೊಡಿರಿ ಎಂದು ಕೇಳುತ್ತಾರೆ. ಹೈಕೋರ್ಟ್‌ನಲ್ಲಿ ಇವರ ವಿರುದ್ಧವಾಗಿದೆ. ಸುಪ್ರೀಂಕೋರ್ಟ್‌ನಲ್ಲಿ ಇವರ ವಿರುದ್ಧವಾಗಿದೆ. ಇದು ಆದಮೇಲೆ ಮತ್ತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಂದು ನಾವು ಗ್ರೂಪ್ ಹೌಸಿಂಗ್ ಮನೆಗಳನ್ನು ಕಟ್ಟುತ್ತೇವೆ ನಮಗೆ ಭೂಮಿಯನ್ನು ಕೊಡಿರಿಯೆಂದು ಕೇಳುತ್ತಾರೆ. ಪರಿಸ್ಥಿತಿ ಹೇಗಾಗಿದೆ ಅಂದರೆ ಇದು ತಮಾಷೆ ಅನಿಸುತ್ತದೆ. ಕೆಲವು ಅಧಿಕಾರಿಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹೋಗಲು ನಮಗೆ ಪೋಸ್ಟಿಂಗ್ ಕೊಡಿರಿ. ನಮಗೆ ಸಂಬಳ ಕೊಡದಿದ್ದರೂ ನಡೆಯುತ್ತದೆ. ಸಂಬಳ ನಾವೇ ಕೊಡುತ್ತೇವೆಂದು ಹೇಳುತ್ತಾರೆ. ನಮಗೆ ಪೋಸ್ಟಿಂಗ್ ಕೊಡಿರಿಯೆಂದು ಕೇಳುತ್ತಾರೆ. ಎಲ್ಲರೂ ಬಿ.ಡಿ.ಎ.ಗೆ ಹಾಕಿಯೆಂದು ಹೇಳುತ್ತಾರೆ. ಪರಿಸ್ಥಿತಿ ಎಲ್ಲಿಯವರೆಗೆ ಹದಗೆಟ್ಟುಹೋಗಿದೆ ಅಂದರೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಎರಡರಲ್ಲೂ ಇವರ ವಿರುದ್ಧವಾಗಿ ಬಿಡಿಎಗೆ ಬಂದರೆ ಅಲ್ಲಿ ನಿರ್ಣಯ ಮಾಡುತ್ತಾರೆ. ಅಂದರೆ ಹೇಗೆ ನಡೆಯುತ್ತಿದೆ ಎಂಬುದನ್ನು ನೀವೇ ಲೆಕ್ಕ ಹಾಕಿಕೊಳ್ಳಿ. "To register the above request to allot the land bearing Survey No. so and so, three acres and seven guntas at Geddalahalli village in favour of so and so Associates Private Limited." ಅಷ್ಟರೊಳಗೆ ಅಸೋಸಿಯೇಷನ್ ಮಾಡಿಕೊಳ್ಳುತ್ತಾರೆ. ಅಸೋಸಿಯೇಷನ್ ಮುಖಾಂತರ ಗ್ರೂಪ್ ಹೌಸಿಂಗ್ ಮನೆಗಳನ್ನು ಮಾಡುತ್ತೇವೆಂದು "for specific group housing scheme with a condition that 20% of the total built up land shall be kept at the disposal of the B.D.A. for its allotment at the HFHS rates as per the rules and regulations and guidelines proposed to be issued by the Government on Group Housing scheme, to make arrangements for alloting alternative sites to the allottees who have been earlier allotted sites proposed on these lands." ಆ ಲ್ಯಾಂಡ್ ಅಕ್ವೈರ್ ಮಾಡಿ ಸೈಟ್ ಮಾಡಿದ ಮೇಲೆ ಎರಡನೇ ಸೈಟು ಕೊಟ್ಟು ಇದಕ್ಕೆ ರಿಯಾಯಿತಿ ಕೊಡಬೇಕೆಂದು ಬಿ.ಡಿ.ಎ.ನಲ್ಲಿ ನಿರ್ಣಯ ಆಗುತ್ತದೆ ಎಂದರೆ ಎಲ್ಲಿಯವರೆಗೆ ಬಿ.ಡಿ.ಎ. ಆಡಳಿತ ಹದಗೆಟ್ಟಿದೆ ಎಲ್ಲಿಯವರೆಗೆ ಅಲ್ಲಿ ಕರಪ್‌ಶನ್ ಲಂಚಗುಳಿತನ ತಾಂಡವಾಡುತ್ತಿದೆ ಎಂದು ಇದನ್ನೇ ನೀವು ಲೆಕ್ಕಕ್ಕೆ ತೆಗೆದುಕೊಳ್ಳಬಹುದು. ಇನ್ನೂ ಅನೇಕ ವಿಚಾರಗಳನ್ನು ಹೇಳಬಹುದು. ನಿಮಗೆ ಹೇಳಬೇಕಾದರೆ ಹೆಚ್.ಎ.ಎಲ್.ಗೆ ಹೋಗುವ ಹಾದಿಯಲ್ಲಿ ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು 33 ಎಕರೆ ಜಮೀನನ್ನು ತೆಗೆದುಕೊಂಡರು. ಅದು 33 ಅಥವಾ 35 ಎಕರೆ ಜಮೀನು: ಸೆಕ್ಷನ್ 4(1) ನೋಟಿಫೀಕೇಶನ್ ಆಯಿತು ಸೆಕ್ಷನ್ 6(1) ನೋಟಿಫಿಕೇಶನ್ ಆಯಿತು. ಇದೆಲ್ಲ ಆದಮೇಲೆ ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದರು. ಸ್ಟೇ ಆರ್ಡರ್ ಹೋದಮೇಲೆ ಒಬ್ಬ ಏಜೆಂಟ್ ಬರುತ್ತಾನೆ. ಸ್ವಾಮಿ ಅವರು ಸ್ಟೇ ತಂದಿದ್ದಾರೆ. ಅದೆಲ್ಲ ನಾನು ನೋಡಿಕೊಳ್ಳುತ್ತೇನೆ. ಮತ್ತು ಅವರಿಗೆ ನೀವು 80ಲಕ್ಷ ರೂಪಾಯಿ ಕಾಂಪನ್‌ಸೇಶನ್ ಏನು ಕೊಡಬೇಕಾಗಿದೆ. ಅದನ್ನು ನಾನು ಕೊಡುತ್ತೇನೆ. ನನಗೆ ಹನ್ನೆರಡು ಎಕರೆ ಬಿಟ್ಟುಕೊಡಿರಿ ಎಂದು ಆತ ಹೇಳುತ್ತಾನೆ. ಅವನು ಯಾವನೋ ಯಾವ ಹಾದಿಯಲ್ಲಿ ಹೋಗುವನೋ ಅವನ ಪೂರ್ವ ಇತಿಹಾಸವೇನೋ ಗೊತ್ತಿಲ್ಲ. ಅವನು ಎಲ್ಲಿ ಹುಟ್ಟಿದ್ದಾನೆ ಎಲ್ಲಿ ಬೆಳೆದಿದ್ದಾನೆ ಏನು ಮಾಡಿದ್ದಾನೆ ಉದ್ಯೋಗ ಏನು ಎಂಬುದು ಏನೂ ಗೊತ್ತಿಲ್ಲ. ನಿಮಗೆ ಆಶ್ಚರ್ಯ ಆಗಬಹುದು. ಈ ಬಗ್ಗೆ ನಿರ್ಣಯ ಪಾಸ್ ಮಾಡಿ ಇವನು 12 ಎಕರೆ ಕೇಳಿದರೆ ಬಿ.ಡಿ.ಎ.ನವರು 14 ಎಕರೆ ಕೊಟ್ಟೇ ಬಿಟ್ಟರು. ಅಲ್ಲಿಂದ ಸರ್ಕಾರ ಬದಲಾವಣೆ ಆಯಿತು. ಗವರ್ನರ್ ರೂಲ್ ಬಂತು. ಆಗ ಅದೇ ಆಫೀಸರ್‌ಗಳು ಎಚ್ಚೆತ್ತುಕೊಂಡು ತಮ್ಮ ಬೋರ್ಡಿನಲ್ಲಿ ಕೊಟ್ಟಿದ್ದು ತಪ್ಪು ಎಂದು ನೋಟೀಸ್ ಕೊಟ್ಟರು. ಇಲ್ಲಪ್ಪ ಆ ಭೂಮಿಯನ್ನು ವಾಪಾಸ್ಸು ಕೊಡಿ ಎಂದು ಹೇಳಿದರು. ಅವನು ಈಗ ಸೀದಾ ಕೋರ್ಟಿಗೆ ಹೋಗಿದ್ದಾನೆ. ಅದು ಯಾವುದೋ ಒಂದು ಡಿಸ್ಟ್ರಿಕ್ಟ್ ಕೋರ್ಟ್ ಇಲ್ಲವೇ ಮ್ಯಾಜಿಸ್ಟ್ರೇಟ್

ಕೋರ್ಟಿಗೆ ಹೋಗಿದ್ದಾನೆ. ಅದು ಸುಪ್ರೀಂ ಕೋರ್ಟ್ ಮುಟ್ಟಲಿಕ್ಕೆ ಬಹುಶಃ ನಾವು ಉಳಿಯುತ್ತೇವೋ ಇಲ್ಲವೋ ಗೊತ್ತಿಲ್ಲ. ಇದು ಹಾಗೆಯೇ ನಡೆದುಕೊಂಡು ಹೋಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇದನ್ನೆಲ್ಲ ತೊಳೆಯುವುದು ಹೇಗೆ? ಇಂಥದ್ದನ್ನೆಲ್ಲಾ ಹುಡುಕುವುದು ಹೇಗೆ

ಶ್ರೀ ಎ. ಕೃಷ್ಣಪ್ಪ:- ಆ ಸ್ಥಳ ನಮ್ಮ ವರ್ತೂರು ವಿಧಾನಸಭಾ ಕ್ಷೇತ್ರಕ್ಕೆ ಸೇರಿದ್ದು. ಮಾಜಿ ಮುಖ್ಯಮಂತ್ರಿ ದಿವಂಗತ ಶ್ರೀ ದೇವರಾಜ್ ಅರಸು ಅವರು ಇಲ್ಲಿ ಸರ್ಕಾರ ನಡೆಸಿದ್ದಂಥ ಕಾಲದಲ್ಲಿ ಒಂದು ನಿರ್ಣಯ ಮಾಡಿ ಒಂದು ಘೋಷಣೆ ಮಾಡಿ ಸರ್ಕ್ಯುಲರ್ ಮುಖಾಂತರ ಎಲ್ಲ ಅಧಿಕಾರಿಗಳಿಗೂ ಹೇಳಿದ್ದರು. ತಿಗಳ ಜನಾಂಗದವರು ಬೆಂಗಳೂರು ಸುತ್ತಮುತ್ತಲಿನ ಪ್ರದೇಶದಲ್ಲಿ ತೋಟ ಮಾಡಿ ಹೂ ತರಕಾರಿ ಎಲ್ಲೆಲ್ಲಿ ಬೆಳೆಯುತ್ತಿದ್ದಾರೆ ಯಾವುದೇ ಕಾರಣಕ್ಕೆ ಅದನ್ನು ಅಕ್ವೈರ್ ಮಾಡಿ ಅವರ ಜೀವನಕ್ಕೆ ತೊಂದರೆ ಮಾಡಬಾರದು ಎಂದು ಒಂದು ನಿರ್ಣಯವನ್ನು ಆ ಕಾಲಕ್ಕೆ ಮಾಡಿದ್ದರು. ಅಷ್ಟು ಜನ ರೈತರು ಸೇರಿ ನಾನೂ ಕೂಡ ಅವರ ಜೊತೆಗೆ ಹೋಗಿ ಕಂದಾಯ ಮಂತ್ರಿಗಳಿಗೆ ಮುಖ್ಯಮಂತ್ರಿಗಳಿಗೆ ಮನವಿಯನ್ನು ಮಾಡಿಕೊಂಡಿದ್ದೆವು. ಆದರೂ ಕೂಡ ಯಾರಿಗೋ ಕೊಟ್ಟುಬಿಟ್ಟಿದ್ದಾರೆ. ಬಡಜನರು 15-20 ಗುಂಟೆ ಜಾಗದಲ್ಲಿ ಬಹಳ ಕಷ್ಟಪಟ್ಟು ಜೀವನ ಸಾಗಿಸುತ್ತಿದ್ದರು. ಅವರಿಗೆ ತೊಂದರೆ ಮಾಡಬೇಡಿ ಎಂದು ಕಾಗದದ ಮೇಲೆ ಕಾಗದ ಬರೆದಿದ್ದೇನೆ. ಅದರ ನಕಲುಗಳು ನನ್ನ ಹತ್ತಿರ ಇವೆ. ಆದರೆ ಸರ್ಕಾರ ಇದನ್ನು ಉಳಿಸಲಿಲ್ಲ ಕಡೆಗೆ ಖಾಸಗಿ ಜನರಿಗೆ ಕೊಟ್ಟಿತು. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್:- ನಾನು ಹೇಳಿದ್ದೂ ಅದೇ ಅವರೂ ಹೇಳಿದ್ದು ಅದೇ. ಯಾವರೀತಿ ಮಿಡ್ಲ್‌ಮ್ಯಾನ್ ಬಂದು ಹೊಡೆದುಕೊಂಡು ಹೋಗುತ್ತಾನೆ ಅಂತ.

ಒಬ್ಬರು ಮಾನ್ಯ ಸದಸ್ಯರು:- ಅದೇ ಜಾಗದಲ್ಲಿ ಶ್ರೀರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಅವರು ಸ್ವತಃ ಹೋಗಿ ಪರಿಶೀಲನೆ ಮಾಡಿದ್ದಾರೆ. ಇನ್‌ಸ್ಪೆಕ್ಷನ್ ಮಾಡಿಯೂ ಆ ಭೂಮಿಯನ್ನು ಅವರಿಗೆ ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಆದಕ್ಕಾಗಿ ಹೇಳಿದೆ ಆದಷ್ಟು ಕಡಿಮೆ ಮಾತನಾಡೋಣ ಎಂದು. ಈಗ ಪರಿಸ್ಥಿತಿ ಏನಾಗಿದೆ ಎಂದರೆ....

ಶ್ರೀ ಎಚ್. ಏಕಾಂತಯ್ಯ:- ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಮತ್ತು ಅಧಿಕಾರೇತರರ ಮೇಲೆ ನೀವು ಕ್ರಮತೆಗೆದುಕೊಳ್ಳಬೇಕು. ಕ್ರಮ ತೆಗೆದುಕೊಳ್ಳದೆ ನೀವು ಹಾಗೇ ಬಿಟ್ಟರೆ ನಮಗೆ ನಿಮ್ಮ ಮೇಲೆ ಅನುಮಾನ ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್:- ನಮ್ಮ ಮೇಲೆ ಅನುಮಾನ ಏಕೆ ಬರುತ್ತದೆ

(ಗೊಂದಲ)

ಶ್ರೀ ಎಚ್ ಏಕಾಂತಯ್ಯ:- ನಾನು ಹೇಳಿದ್ದಲ್ಲಿ ಅರ್ಥ ಏನೆಂದರೆ ನಿಮ್ಮ ಆರೋಪವನ್ನು ನಾನು ಒಪ್ಪುತ್ತೇನೆ. ಇವತ್ತಿನ ದಿವಸ ಬಿ.ಡಿ.ಎ. ಏನು ಮಾಡಿದೆ ಎಂದು ನೀವು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂಥ ಎಲ್ಲ ಮಾತನ್ನು ನಾನು ಒಪ್ಪುತ್ತೇನೆ. ಇವತ್ತು ಬಿ.ಡಿ.ಎ ಏನಾದರೂ ಅವ್ಯವಹಾರ ಮಾಡಿದ್ದರೆ ಅದರ ಬಗ್ಗೆ ವಿಚಾರಣೆ ಆಗಬೇಕು. ಈ ಅವ್ಯವಹಾರಕ್ಕೆ ಯಾರು ಕಾರಣಕರ್ತರಿದ್ದಾರೆ ಅವರು ಯಾವುದೇ ಅಧಿಕಾರಿಯಾಗಿದ್ದರೂ ಸಹ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರೇತರರು ಶಾಮೀಲಾಗಿದ್ದರೂ ಸಹ ಅವರ ಮೇಲೆಯೂ ಕ್ರಮ ತೆಗೆದುಕೊಳ್ಳಬೇಕು. ನೀವು ಯಾವುದೇ ಕ್ರಮ ತೆಗೆದುಕೊಳ್ಳದೆ ಪದೆಪದೇ ಇದೇ ವಿಚಾರ ಮಾತನಾಡುವುದಾದರೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ನಾನು ಇನ್ನೂ ಮುಗಿಸಿಲ್ಲ ಇವೆಲ್ಲಾ ಬಹಳಷ್ಟು ಹಗರಣಗಳು ಇವೆ ಈಗಾಗಲೇ ಸರ್ಕಾರ ಒಂದು ಕಮಿಟಿ ಮಾಡಿದೆ. ಈ ಕಮಿಟಿಗೆ ಅಡಿಷನಲ್ ಚೀಫ್ ಸೆಕ್ರೆಟರಿ, ವೆಂಕಟೇಶ್ ಎನ್ನುವವರು ಅದರ ಚೇರ್ಮನ್ ಆಗಿದ್ದಾರೆ ಒಬ್ಬರು ನಿವೃತ್ತ ಮುಖ್ಯ ಇಂಜಿನಿಯರು

ವಿ.ಸಿ.ಅಂಗಡಿ ಮತ್ತು ವರ್ಗೀಸ್ ಎನ್ನುವವರು ಸದಸ್ಯರಾಗಿದ್ದಾರೆ. ವರ್ಗೀಸ್ ಎನ್ನುವವರು ಡಿಜಿಪಿ ಅಥವಾ ಐಜಿಪಿ ಆಗಿದ್ದಾರೇನೋ ನನಗೆ ಗೊತ್ತಿಲ್ಲ. ಈ ಮೂರು ಜನರ ಕಮಿಟಿ ಮಾಡಿ ವಿಚಾರಣೆ ಪ್ರಾರಂಭ ಮಾಡಿದ್ದಾರೆ. ಎಲ್ಲೆಲ್ಲಿ ಏನೇನು ಹಗರಣಗಳಾಗಿವೆ ಯಾವ ಕಾಲಕ್ಕೆ ಆಗಿವೆ ಎಷ್ಟು ಆಗಿವೆ ಎನ್ನುವ ವಿಚಾರಣೆ ನಡೆಯುತ್ತಿದೆ. ನಾನು ಏಕೆ ಹೇಳಿದೆ ಎಂದರೆ ಇವು ಬಹಳಷ್ಟು ಇವೆ ಅದರ ಸಲುವಾಗಿ ಉದಾಹರಣೆಗೆ ಹೇಳುತ್ತೇನೆ. ಇಲ್ಲಿ ಲೆಕ್ಕ ಹಾಕಿ ಅಕ್ವಿಸಿಷನ್‌ಗೆ ನಾವು ನೋಟಿಫಿಕೇಶನ್ ಇಷ್ಯೂ ಮಾಡಿದಮೇಲೆ ಕೋರ್ಟಿಗೆ ಹೋಗುತ್ತಾರೆ. ಕೋರ್ಟಿನಲ್ಲಿ ಯಾವ ಕಾಲಕ್ಕೆ ನಿಕಾಲೆ ಯಾಗುತ್ತದೋ ದೇವರಿಗೇ ಗೊತ್ತು. 5 ವರ್ಷದಿಂದ ನಮ್ಮ ಅಕ್ವಿಸಿಷನ್ ಛಾಲೆಂಜ್ ಮಾಡಿದ ಕೇಸ್ duration of pendency 1 to 5 years 2,946 ಕೇಸಸ್ ಪೆಂಡಿಂಗ್ ಇವೆ. ನಮ್ಮವರು ಅವರು ಇಬ್ಬರೂ ಕಲೆತರೆ ಸರಿಹೋಗುತ್ತದೆ. ಅವರು ಕೋರ್ಟಿಗೆ ಹೋಗುವ ಹಾಗಿಲ್ಲ. ಸ್ಟೇ ಆರ್ಡರ್ ವಕೇಟ್ ಮಾಡಿಸುವ ಹಾಗಿಲ್ಲ. ಹಾಗೆಯೇ ಉಳಿದು ಹೋಗುತ್ತವೆ. 4-5ವರ್ಷದಲ್ಲಿ 597 ಪೆಂಡಿಂಗ್ ಇದೆ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಎಲ್ಲಿ ಕೈ ಇಟ್ಟರೂ ಹೊಲಸು ಇದೆ ಒಳ್ಳೆಯದು ಯಾವುದೂ ಕಾಣಿಸುತ್ತಾ ಇಲ್ಲ ಅಂತಹ ಒಂದು ಸಂಸ್ಥೆ ಇದೆ ಎಂಬ ವಿಚಾರವನ್ನು ನಾನು ನಿದರ್ಶನವಾಗಿ ತಮಗೆ ಹೇಳಿದೆ. ಇನ್ನು ಬೆಂಗಳೂರು ಬಗ್ಗೆ ಒಂದು ಮಾತು ಹೇಳಬೇಕಾದರೆ ಬೆಂಗಳೂರಿನ ಜನಸಂಖ್ಯೆ ಲೆಕ್ಕ ತಪ್ಪಿ ಬೆಳೆಯುತ್ತಿದೆ. ಬಹುಶ: ಈಗ 40 ಲಕ್ಷಕ್ಕೆ ಬಂದಿದೆಯೆಂದು ಕಾಣುತ್ತದೆ. ಜನಸಂಖ್ಯೆ ಬೆಳೆದುದು ಅಷ್ಟೇ ಅಲ್ಲ ಇವತ್ತು ವೆಹಿಕಲ್ಸ್ ಎಷ್ಟು ಪ್ರಮಾಣದಲ್ಲಿ ಆಗಿವೆ ಎಂದರೆ ನಮ್ಮ ರಸ್ತೆಗಳೇ ಸಾಲವು. ಪರಿಸ್ಥಿತಿ ಬಹಳ ಹದಗೆಡುವಂತಹ chaotic condition ಇಲ್ಲಿ ಬಂದಿದೆ. ಅದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ನಾವು ನಮ್ಮ ಅಧಿಕಾರಿಗಳಿಗೆ ಜವಾಬ್ದಾರಿ ಹೊರಿಸಿದ್ದೇವೆ ಒಬ್ಬ ಅಧಿಕಾರಿ ಪ್ಯಾರಿಸ್‌ಗೂ ಇದರ ಬಗ್ಗೆ ಹೋಗಿ ಸಂಬಂಧಪಟ್ಟವರ ಜೊತೆ ಮಾತನಾಡಿಕೊಂಡು ಬಂದಿದ್ದಾರೆ. ಅವರು ಹೇಳುವುದು sub-ways, fly-overs ಸ್ವಲ್ಪಮಟ್ಟಿಗೆ ಮಾಡಬಹುದು ಆದರೆ ಮುಂದೆ ಜನಸಂಖ್ಯೆ ಎಷ್ಟು ಬೆಳೆದರೂ ನಮಗೆ ಈ ಟ್ರಾಫಿಕ್ ಸಮಸ್ಯೆ ಬರಲಾರದಂತೆ ಮಾಡಬೇಕಾದರೆ ಮೆಟ್ರೋ ಮಾಡಬೇಕಾದ ಅವಶ್ಯಕತೆ ಇದೆ ಎಂಬ ಮಾತನ್ನು ಹೇಳಿದ್ದಾರೆ. ಈಗಾಗಲೆ ಎರಡು ಸಲ ಎಸ್ಟಿಮೇಟ್ ಮಾಡಿಸಿದ್ದೇವೆ. ರೈಟ್ಸ್‌ನವರು ಎಸ್ಟಿಮೇಟ್ ಮಾಡಿದ್ದಾರೆ. ಒಂದು ಸಾವಿರದ ಐದುನೂರು ಕೋಟಿ ರೂಪಾಯಿ ಖರ್ಚು ಬರುತ್ತದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಅವರು ಹೇಳುವಂತಾದ್ದು ನಿಮಗೆ ಎಷ್ಟು ಪೆಟ್ರೋಲ್ ಉಳಿಯುತ್ತದೆ ಟ್ರಾಫಿಕ್‌ಗೆ ಎಷ್ಟು ಅನುಕೂಲವಾಗುತ್ತದೆ ಇದನ್ನು ನೋಡಿದರೆ ಬಹುಶ: ಹೊರಗಡೆಯವರೂ ಸಹ ಇದಕ್ಕೆ ಸಹಾಯ ಮಾಡುತ್ತಾರೆಂಬ ಮಾತನ್ನು ಹೇಳಿದ್ದಾರೆ. sub-ways, fly-oversಗೆ ಸ್ವಲ್ಪಮಟ್ಟಿಗೆ ವರ್ಲ್ಡ್ ಬ್ಯಾಂಕ್‌ನವರೂ ಸಹಾಯ ಮಾಡುವುದಕ್ಕೆ ತಯಾರಿದ್ದಾರೆ. ಆದರೆ ಮೆಟ್ರೋ ಬಗ್ಗೆ ಇವತ್ತಿನಿಂದ ಹೆಚ್ಚು ಅಟೆನ್‌ಷನ್ ಕೊಟ್ಟು ಈ ಯೋಜನೆಯನ್ನು ತಾವು ವಿಚಾರ ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ದೀರ್ಘವಾಗಿ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇನೆ. ಮೆಟ್ರೋ ಮಾಡಬೇಕೆಂದರೆ ಅಂಡರ್‌ಗ್ರೌಂಡ್ ಇರುವಂಥ ಅವಶ್ಯಕತೆ ಇಲ್ಲ. ಈ ಭಾಗದಲ್ಲಿ ಅವರು ಸರ್ವೆ ಮಾಡಿದ ಪ್ರಕಾರ ಒಂದು 3-4 ಕಿಲೋಮೀಟರ್ ಅಂಡರ್ ಗ್ರೌಂಡ್ ಬರುತ್ತದೆ ಉಳಿದ್ದು overground ಮೆಟ್ರೋ ಆಗುತ್ತದೆ. ಬಹುಶ: 1,500 ಕೋಟಿ ರೂಪಾಯಿ ಅದು ಮುಗಿಯುವವರೆಗೆ ಆಗುತ್ತದೆ ಮತ್ತು ಅದರ ಒಳಗಡೆಯೂ ಆಗುವ ಸಾಧ್ಯತೆ ಇದೆ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಇದರ ಬಗ್ಗೆ ಸಹ ವಿಚಾರ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ.ಇನ್ನೊಂದು ವಿಚಾರ. ಮೈನಾರಿಟೀಸ್ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. 15 ಪಾಯಿಂಟಿನ ಕಾರ್ಯಕ್ರಮ ನಮ್ಮ ಸರ್ಕಾರ ಕೇಂದ್ರದಲ್ಲಿ ಇದ್ದಾಗ ಇತ್ತು ಅದನ್ನು ನಾವು ಜಾರಿಗೆ ತರುವುದಕ್ಕೆ ಆದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಮೈನಾರಿಟೀಸ್ ಕಮಿಷನ್ ಇಲ್ಲ ನಾನು ಈಗಾಗಲೇ ವಿಚಾರ ಮಾಡಿದ್ದೇವೆ ಇನ್ನು ಕೆಲವೇ ದಿವಸಗಳಲ್ಲಿ ಹೊಸ ಮೈನಾರಿಟೀಸ್ ಕಮಿಷನ್ ಅಸ್ತಿತ್ವದಲ್ಲಿ ಬರುವುದಕ್ಕೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಈಗ ಪೋಲೀಸ್ ಇಲಾಖೆಯಲ್ಲಿ ರೆಕ್ರೂಟ್‌ಮೆಂಟ್ ಸಲುವಾಗಿ ಒಬ್ಬ ಮೈನಾರಿಟಿ ಕಮ್ಯುನಿಟಿ ಪ್ರತಿನಿಧಿ ಈಗಾಗಲೇ ಇದ್ದಾನೆ. ಮೊನ್ನೆ ನಾವು ಘೋಷಣೆ

ಮಾಡಿದ್ದೇವೆ ನಮ್ಮ ಹಣಕಾಸಿನ ಮಂತ್ರಿಗಳು ವಿದ್ಯಾಮಂತ್ರಿಗಳೂ ಹೇಳಿದ್ದಾರೆ. ಇದರಲ್ಲಿ ಹೆಲ್ತ್‌ಡಿಪಾರ್ಟ್‌ಮೆಂಟ್‌ಗೆ 23,400 ಹೊಸ ಹುದ್ದೆಗಳನ್ನು ತುಂಬಬೇಕೆಂದು ವಿಚಾರ ಇದೆ. ಆದಕ್ಕಾಗಿ ಡಿಸ್ಟ್ರಿಕ್ಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಕೂಡ ಒಬ್ಬ ಮೈನಾರಿಟಿ ಕಮ್ಯುನಿಟಿ ಪ್ರತಿನಿಧಿ ಇರುವಂತೆ ಮಾಡಬೇಕೆಂಬ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆಂಬ ಮಾತನ್ನು ಹೇಳುತ್ತಿದ್ದೇನೆ. ಹಿಂದಿನ ಮೈನಾರಿಟಿ ಕಮಿಷನ್ ಅವರು ಎರಡು ವರದಿಗಳನ್ನು ಕೊಟ್ಟಿದ್ದಾರೆ. ಅದನ್ನು ಎಷ್ಟರಮಟ್ಟಿಗೆ ಜಾರಿಗೆ ತರುವುದಕ್ಕೆ ಸಾಧ್ಯ ಇದೆ ಎಂಬುದನ್ನು ಪರಿಶೀಲಿಸಲು ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದ್ದೇವೆ. ಅವರು ಶಿಫಾರಸ್ಸುಗಳನ್ನು ಏನು ಮಾಡುತ್ತಾರೆ ನೋಡಿಕೊಂಡು ಮುಂದೆ ಹೆಜ್ಜೆ ಇಡುತ್ತೇವೆ. ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್ ಇದ್ದರೂ ಮಾನ್ಯ ಶಫಿ ಅಹಮದ್‌ರವರು ಹೇಳಿದ ಹಾಗೆ ಅದಕ್ಕೆ ದುಡ್ಡು ಒದಗಿಸಿಲ್ಲ. ದುಡ್ಡು ಒದಗಿಸುತ್ತೇವೆ. ಫೈನಾನ್ಸ್‌ಮಿನಿಸ್ಟರ್ ಜೊತೆಗೆ ಮಾತನಾಡಿ ಅವರಿಗೆ ಹೇಳುತ್ತೇನೆ. ಈ ಮೈನಾರಿಟಿ ಜನರಿಗೆ ಹಣಕಾಸಿನ ವ್ಯವಸ್ಥೆ ಮಾಡುವುದಕ್ಕೆ ಮೈನಾರಿಟಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಅಸ್ತಿತ್ವದಲ್ಲಿದೆ. ಅಲ್ಲಿ ಇನ್ನೂ ಹುದ್ದೆಗಳನ್ನೂ ತುಂಬಿಲ್ಲ. ಜಾಗಗಳು ಹಾಗೆ ಖಾಲಿ ಇದೆ. ಅಲ್ಲಿ ದುಡ್ಡು ಒದಗಿಸಿ ಮೈನಾರಿಟಿಗೆ ಹೆಚ್ಚು ಅನುಕೂಲತೆ ಮಾಡಿಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತೇನೆ. ಈಗ ಸಾಕಷ್ಟು ಸಮಯ ಆಗಿದೆ. ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವಿಚಾರ ಅಂತ್ಯದಲ್ಲಿ ಹೇಳುತ್ತೇನೆ. ಈ ಆರು ತಿಂಗಳಲ್ಲಿ ನಮ್ಮಿಂದ ಏನು ಸಾಧ್ಯ ಆಗಿದೆಯೋ ಅದನ್ನು ಮಾಡಿದ್ದೇವೆ. ತೃಪ್ತಿ ನಮಗೆ ಆಗಿದೆ ಎಂದು ಇಲ್ಲ. ಇದರ ಬಗ್ಗೆ ಹೇಳಬೇಕಾಗಿದ್ದಾರೆ,30ನೇ ಜೂನ್‌ಗೆ ನಾನು ಅಧಿಕಾರ ವಹಿಸಿಕೊಂಡು 165 ದಿವಸಗಳು ಆಯಿತು. ಇದರಲ್ಲಿ 81 ದಿವಸಗಳನ್ನು ಹೊರಗಡೆ ಟೂರ್‌ನಲ್ಲಿ ಕಳೆದಿದ್ದೇನೆ. 46 ದಿವಸ ರಾಜ್ಯದ ಹೊರಗಡೆ 35 ದಿವಸ ಕರ್ನಾಟಕದ ಒಳಗಡೆ ಉಳಿದದ್ದು ಕೇವಲ 80 ದಿವಸ. ವರ್ಗಾವಣೆಯಲ್ಲಿ ಒಂದು ತಿಂಗಳು ಆ ಕಡೆ ಈ ಕಡೆ ಅಲ್ಲಿ ಇಲ್ಲಿ ನನಗೆ ಹೋಗುವಂತಹ ಪರಿಸ್ಥಿತಿ ಬಂತು. ಒಟ್ಟಿನಲ್ಲಿ ಸುಮಾರು ಎರಡು ಎರಡೂವರೆ ತಿಂಗಳು ವಿಧಾನಸೌಧದಲ್ಲಿ ಕುಳಿತು ವಿಚಾರ ಮಾಡುವಂತಹ ಅವಕಾಶ ಸಿಕ್ಕಿದ್ದರಲ್ಲಿ ನಾವು ಏನು ಮಾಡಿದ್ದೇವೆ ಎಂಬುದರ ಪರಿಚಯ ನಾನೂ ಕೊಟ್ಟಿದ್ದೇನೆ. ನನ್ನ ಸಹೋದ್ಯೋಗಿಗಳೂ ತಮ್ಮ ಮುಂದೆ ಕೊಟ್ಟಿದ್ದಾರೆ.ತಮಗೆ ಸಮಾಧಾನ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅಥವಾ ಜನತೆಗೆ ಸಮಾಧಾನ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಒಂದು ಮಾತ್ರ ಧೈರ್ಯದಿಂದ ಹೇಳುತ್ತೇನೆ. ನಾವು ಯಾವ ಹಾದಿಯ ಮೇಲೆ ಹೋಗುತ್ತಿದ್ದೇವೆ ಬಹುಶಃ ನೀವು ಹೇಳುತ್ತೀರಿ ಪ್ರತಿ ಘಂಟೆಗೆ 80 ಕಿಲೋಮೀಟರ್ ವೇಗದಲ್ಲಿ ಹೋಗಿ ಎಂದು ಹೇಳಿರಬಹುದು. ನಾವು 20 ಕಿಲೋಮೀಟರ್ ವೇಗದಲ್ಲಿ ಹೋಗಿರಬಹುದು. ಆ ಮಾತು ಬೇರೆ ಆದರೆ ನಾವು ಹಾದಿ ತಪ್ಪಿಲ್ಲ ನಮ್ಮ ಗುರಿ ತಪ್ಪಿಲ್ಲ ಹೋಗುವುದರಲ್ಲಿ ನಿಧಾನವಾಗಿರಬಹುದೇ ಹೊರತು ನಾವು ತಪ್ಪುಹಾದಿಯಲ್ಲಿ ನಡೆಯುತ್ತಿಲ್ಲ. ಮತ್ತು ತಪ್ಪು ಹಾದಿ ನಾವು ಹಿಡಿದಿಲ್ಲ ಎಂಬ ಮಾತನ್ನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ಆದಕ್ಕಾಗಿ ತಮ್ಮೆಲ್ಲರ ಸಹಕಾರದಿಂದ ಮತ್ತು ಜನಸಾಮಾನ್ಯರ ಆಶೀರ್ವಾದದಿಂದ ನಮ್ಮ ನಾಡಿನಲ್ಲಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸಬೇಕು. ನಮ್ಮ ನಾಡು ನಿಜವಾಗಿಯೂ ಸಮೃದ್ಧಶಾಲಿಯಾದ ನಾಡನ್ನಾಗಿ ಮಾಡಬೇಕೆಂಬ ವಿಚಾರದಲ್ಲಿ ನಾವೆಲ್ಲರೂ ಟೊಂಕ ಕಟ್ಟಿ ನಿಂತಿದ್ದೇವೆ. ನಾವು ಈ ಕಡೆ ಕುಳಿತಿರಬಹುದು ನೀವು ಆ ಕಡೆ ಕುಳಿತಿರಬಹುದು ಆದರೆ ನಮ್ಮೆಲ್ಲರ ಗುರಿ ಒಂದೇ ಅದರಲ್ಲಿ ಯಾವ ರೀತಿಯ ಮತಭೇದ ಇಲ್ಲ. ನಾವೆಲ್ಲರೂ ಒಂದಾಗಿ ಕರ್ನಾಟಕವನ್ನು ಅಭಿವೃದ್ಧಿ ಮಾಡುವುದಕ್ಕೆ ಶ್ರಮಿಸೋಣ ಆ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ಹೇಳಿ ನನ್ನ ವಿಚಾರಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ವಿರೋಧ ಪಕ್ಷದ ಉಪನಾಯಕರು) :- ಸನ್ಮಾನ್ಯ ಸಭಾಧ್ಯಕ್ಷರೇ ಸನ್ಮಾನ್ಯ ಮುಖ್ಯಮಂತ್ರಿಗಳು ಸುಮಾರು ಎರಡು ಘಂಟೆಗಳಿಗೂ ಹೆಚ್ಚುಕಾಲ ಉತ್ತರ ಕೊಟ್ಟು ಸವಿಸ್ತಾರವಾಗಿ ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ನಾನಾದರೂ ಹೇಳತಕ್ಕದ್ದು ಅವರು ಹಾದಿತಪ್ಪಿದ್ದಾರೋ ಅಥವಾ ಸರಿಯಾದ ದಾರಿಯಲ್ಲಿ ಹೋಗುತ್ತಿದ್ದಾರೋ ಎಂದು ಆರು ತಿಂಗಳಲ್ಲಿ ಹೇಳತಕ್ಕದ್ದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಹೋಗುತ್ತಿರತಕ್ಕಂಥ ದಾರಿ ಸರಿಯಾಗಿದೆಯೋ

ಇಲ್ಲವೇ ಎಂದು ಹೇಳಬೇಕಾದರೆ ಒಂದೆರಡು ವರ್ಷಗಳ ನಂತರ ಹೇಳಬಹುದು. ಆದರೆ ಅವರು ಹೇಳಿದ ಹಾಗೆ ಅವರು ಹೋಗುತ್ತಿರತಕ್ಕಂಥ ವೇಗ 20ಕಿಲೋಮಿಟರ್ ಸಹ ಇಲ್ಲ ಎಂದು ನನ್ನ ಅಭಿಪ್ರಾಯ. ನಾನು ಅವರ ಇಲಾಖೆಗಳ ಬಗ್ಗೆ ಮಾಡನಾಡಿದ ವರದಿ ಅವರಿಗೆ ತಲುಪಿಲ್ಲ ಎಂದು ನಾನು ತಿಳಿದಿದ್ದೇನೆ. ನಾನು ಹೇಳಿರತಕ್ಕ ಒಂದೂ ವಿಷಯದ ಬಗ್ಗೆ ಅವರು ಪ್ರಸ್ತಾಪ ಮಾಡಲಿಲ್ಲ. ಯಾವ ಕಾರಣದಿಂದಲೋ ಗೊತ್ತಿಲ್ಲ ಸನ್ಮಾನ್ಯ ಮುಖ್ಯಮಂತ್ರಿಗಳು ಇರುವರೆಗೆ ಒಂದು ಜಿಲ್ಲೆಯ ಆಡಳಿತವನ್ನೂ ಸಹ ಪ್ರವಾಸ ಹೋಗಿದ್ದರೂ ರಿವ್ಯೂ ಮಾಡಿಲ್ಲ. ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಬೋರ್ಡ್ಸ್ ಕಾರ್ಪೊರೇಷನ್ಸ್ ಕೆ.ಇ.ಬಿ. ಕೆ.ಎಸ್.ಆರ್.ಟಿ.ಸಿ. ಯಾವುದನ್ನೂ ಅವರು ರಿವ್ಯೂ ಮಾಡುವುದಕ್ಕೆ ಆಗಿಲ್ಲ. ಎಸ್.ಸಿ. ಎಸ್.ಟಿ. ಡೆವಲಪ್‌ಮೆಂಟ್ ಬಗ್ಗೆ ಹೈಪವರ್ ಕಮಿಟಿ ಇದೆ. 20 ಪಾಯಿಂಟ್ ಪ್ರೋಗ್ರಾಂ ಬಗ್ಗೆ ಕಮಿಟಿ ಇದೆ ಅದಕ್ಕೆ ತಾವೇ ಅಧ್ಯಕ್ಷರು ಆದರೆ ಯಾವುದೇ ಸಮಿತಿಯ ಅಡ್ಮಿನಿಸ್ಟ್ರೇಷನ್ ಸಹಿತ ತಾವು ಇದುವರೆಗೆ ರಿವ್ಯೂ ಮಾಡುವುದಕ್ಕೆ ಆಗಿಲ್ಲ. ಸಮಯದ ಅಭಾವ ಎಂದು ನಾನು ಅಂದುಕೊಂಡಿದ್ದೇನೆ. ಯಾವ ಕಾರಣ ಎಂದು ನನಗೆ ಗೊತ್ತಿಲ್ಲ. ತಮ್ಮ ಇಡೀ ಭಾಷಣದ ಸಾರಾಂಶ ಎರಡು. ಒಂದು ಶಿಥಿಲವಾಗಿರತಕ್ಕಂಥ ಆಡಳಿತವನ್ನು ಸರಿ ಮಾಡತಕ್ಕದ್ದು. ಇನ್ನೊಂದು ಬರಿದಾಗಿರುವ ಬೊಕ್ಕಸ ತುಂಬಿಸುವುದು. ಬೊಕ್ಕಸ ತುಂಬಿಸತಕ್ಕಂಥ ಕೆಲಸದಲ್ಲಿ ತಾವು ಪ್ರಯತ್ನ ಮಾಡಿದ್ದೀರಿ ಅದಕ್ಕಾಗಿ ನಾವು ನಿಮ್ಮನ್ನು ಅಭಿನಂದಿಸಿದ್ದೇವೆ. ನಾವು ಒಪ್ಪಿದ್ದೇವೆ. ಆದರೆ ಆಡಳಿತದ ಶಿಥಿಲತೆ ತಾವೇನು ಸರಿ ಮಾಡುತ್ತೇನೆಂದು ಹೊರಟಿದ್ದೀರಿ ಅದರ ವೇಗ 20 ಕಿಲೋಮಿಟರ್‌ಗೂ ಕಡಿಮೆ ಇದೆ. ಇದೇ ಸ್ಪೀಡ್‌ನಲ್ಲಿ ಹೋದರೆ ಇನ್ನೂ ಬಹಳ ಕಡಿಮೆಯಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಏತಕ್ಕೆ ತಾವು ರಿವ್ಯೂ ಮಾಡಲಿಲ್ಲ ಎಂದು ತಿಳಿಸಬೇಕು. ಇನ್ನು ಎರಡನೆಯದಾಗಿ ವೀರಪ್ಪನ್ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಆ ವೀರಪ್ಪನ್‌ನನ್ನು ಹಿಡಿಯಲಿಕ್ಕೆ ಹೋದಂತಹ ನಾಲ್ಕು ಜನ ಪೋಲೀಸ್ ಅಧಿಕಾರಿಗಳು ಏನು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ ಅವರ ಪತ್ನಿಯರು ನಮಗೆ ಕೆಲಸಬೇಕೆಂದು ಸರ್ಕಾರಕ್ಕೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ದಯಮಾಡಿ ಅವರಿಗೆ ಕೆಲಸವನ್ನು ಕೊಡಿಸಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದು ಶ್ರೀಮತಿ ಚಂದ್ರಪ್ರಭಾ ಅರಸ್ ಅವರಿಗೂ ಗೊತ್ತಿದೆ ಅದನ್ನು ತಾವು ಮಾಡಲೇಬೇಕು. ಇನ್ನು ಮೂರನೆಯದಾಗಿ ಚಿನ್ನಪ್ಪರೆಡ್ಡಿ ಆಯೋಗದ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಡಲಿಕ್ಕೆ ತಾವು ಈಗಾಗಲೇ ನಮ್ಮನ್ನು ಕೇಳಿದ್ದೀರಿ. ಆ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ತಾವು ನಮ್ಮ ಪಕ್ಷದ ಅಭಿಪ್ರಾಯವನ್ನು ಕೇಳಿದ್ದೀರಿ ಅದರ ಬಗ್ಗೆ ನಾವು ಚರ್ಚೆ ಮಾಡಿ ಅಧಿವೇಶನ ಮುಗಿಯುವುದರೊಳಗೆ ನಾವು ನಮ್ಮ ಅಭಿಪ್ರಾಯವನ್ನು ತಮಗೆ ತಿಳಿಸುತ್ತೇವೆ. ಇನ್ನು ಕನ್ನಡದ ಬಗ್ಗೆ ತಾವು ಹೇಳಿದ್ದೀರಿ. ನಮ್ಮ ಕಾಲದಲ್ಲಿ ಕನ್ನಡ ಕಾವಲು ಸಮಿತಿಯ ಹೆಸರಿನಲ್ಲಿ ಸಾಕಷ್ಟು ಕೆಲಸವನ್ನು ನಾವು ಮಾಡಿದ್ದೇವೆ. ಅದರ ಬಗ್ಗೆ ತಾವ್ಯಾರೂ ಭಿನ್ನಾಭಿಪ್ರಾಯವನ್ನು ತಾವು ಇಟ್ಟುಕೊಳ್ಳುವುದು ಬೇಕಾಗಿಲ್ಲ. ಮಾನ್ಯ ಅಧ್ಯಕ್ಷರೇ ನಾವು ಕುಳಿತುಕೊಳ್ಳತಕ್ಕಂಥ ಜಾಗದಲ್ಲಿ ಕೂಡ ಇಂಗ್ಲೀಷ್‌ನಲ್ಲಿ ಬೋರ್ಡ್‌ಗಳನ್ನು ಹಾಕಿದ್ದಾರೆ. ಇದು ಕನ್ನಡದಲ್ಲಿ ಆಗಬೇಕೆಂದು ನಾವು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಇದು ಮೊದಲು ಇಲ್ಲಿಂದ ಪ್ರಾರಂಭ ಆಗಲಿ ಎನ್ನುವುದು ನಮ್ಮ ಅಭಿಪ್ರಾಯ. ಇಲ್ಲಿ ತಾವೇ ನೋಡಿ ಇಂಗ್ಲೀಷ್‌ನಲ್ಲಿಯೇ ಇದೆ. ತಮಗೆ ಕನ್ನಡ ಬರುವುದಿಲ್ಲವೆಂದು ಇಲ್ಲ. ನಾನು ತಮಗೆ ಸಲಹೆ ಕೊಡುತ್ತಿದ್ದೇನೆ. ನಾನು ಕೇಳಿದ ಮೂರು ವಿಷಯಗಳಿಗೂ ಮಾನ್ಯ ಮುಖ್ಯಮಂತ್ರಿಗಳು ವಿವರಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಈಗ ಮಾನ್ಯ ಸದಸ್ಯರು ಪ್ರತಿ ಇಲಾಖೆಯ ಮತ್ತು ಜಿಲ್ಲಾ ಆಡಳಿತವನ್ನು ರಿವ್ಯೂ ಮಾಡಿಲ್ಲ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಬಹುಶಃ ಅವರು ಮಂತ್ರಿಗಳಾಗಿದ್ದವರು ಅವರಿಗೂ ಗೊತ್ತಿರಬಹುದು ಇದು ನಮ್ಮ ಮೊದಲನೇ ಆರು ತಿಂಗಳು. ನಮಗೆ ಬೇಕಾದಷ್ಟು ಗ್ರೌಂಡ್ ವರ್ಕ್ ಮತ್ತು ಪ್ರಿಲಿಮಿನರಿ ವರ್ಕ್ ಮಾಡತಕ್ಕಂಥ ಅವಶ್ಯಕತೆ ಇರುತ್ತದೆ. ಮತ್ತು ಮುಖ್ಯಮಂತ್ರಿಗಳಾದವರಿಗೆ ಸಮಯದ ಅಭಾವ ಹೇಗೆ ಇರುತ್ತದೆ ಎನ್ನುವುದು ತಮಗೆ ಗೊತ್ತಿದೆ. ನಾನು ಎಲ್ಲಾ ಜಿಲ್ಲೆಗಳಿಗೂ ಹೋಗಿಲ್ಲ ಅದನ್ನು ಒಪ್ಪಿಕೊಳ್ಳುತ್ತೇನೆ.

ಹೋಗಬೇಕಾಗಿದೆ. ಆದರೆ ಜಿಲ್ಲಾ ಆಡಳಿತವನ್ನು ನಾನೇ ರಿವ್ಯೂ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಬಹುಶಃ ನಿಮ್ಮ ಕಾಲದಲ್ಲಿ ಡಿಸ್ಟ್ರಿಕ್ಟ್ ಮಿನಿಸ್ಟರ್ಸ್ ಎಂದು ಮಾಡಿದ್ದಿರಿ. ನಾನು ಕೂಡ ಡಿಸ್ಟ್ರಿಕ್ಟ್ ಮಿನಿಸ್ಟರ್ಸ್ ಎಂದು ಮಾಡಿದ್ದೇನೆ. ಅವರು ಹೋಗುತ್ತಾರೆ ನೋಡುತ್ತಾರೆ. ಅವರು ಸಹ ಸ್ವಲ್ಪ ಮಟ್ಟಿಗೆ ಇತ್ತೀಚೆಗೆ ರಿವ್ಯೂ ಮಾಡಿದ್ದಾರೆ. ನಾನು ಮೊದಲು ಎಲ್ಲಾ ಜಿಲ್ಲೆಗಳಿಗೂ ಡಿಸ್ಟ್ರಿಕ್ಟ್ ಮಿನಿಸ್ಟರ್ಸ್ ಅನ್ನು ನೇಮಕ ಮಾಡಿರಲ್ಲಿಲ್ಲ. ಈಗ ಆರ್ಡರ್ ಮಾಡಿದ್ದೇನೆ. ಬಹುಶಃ ಯಾರೋ ಒಬ್ಬಿಬ್ಬರಿಗೆ ಎರಡೆರಡು ಡಿಸ್ಟ್ರಿಕ್ಟ್‌ಗಳು ಕೊಟ್ಟಿರಬಹುದು. ಉಳಿದವರಿಗೆ ಒಂದೊಂದು ಡಿಸ್ಟ್ರಿಕ್ಟ್ ಕೊಟ್ಟಿದ್ದೇನೆ. ಮತ್ತು ಯಾವುದು ಬಹಳ ಮಹತ್ವವಾದ ಡಿಪಾರ್ಟ್‌ಮೆಂಟ್ ಇರುತ್ತದೆಯೋ ಆ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನು ಕರೆಸಿ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಆದ್ದರೆ ನಾನು ಈ ಬಗ್ಗೆ ಟಾಮ್ ಟಾಮ್ ಮಾಡಿಲ್ಲ ಅದಕ್ಕೆ ಹೆಚ್ಚು ಪಬ್ಲಿಸಿಟಿ ಕೊಟ್ಟಿಲ್ಲ. ಒಂದು ವೇಳೆ ನಾನು ಅದನ್ನು ಮಾಡದಿದ್ದರೆ ಇಂದು ಸುಮಾರು 2-30 ಗಂಟೆಗಳ ಕಾಲ ಅನೇಕ ವಿಚಾರಗಳನ್ನು ಹೇಳುತ್ತಿರಲ್ಲಿಲ್ಲ. ಅದಕ್ಕಾಗಿ ನಾವು ಏನೂ ಮಾಡಿಲ್ಲವೆಂದು ಹೇಳುವುದರಲ್ಲಿ ಅರ್ಥ ಇಲ್ಲ. ಇನ್ನು ಒಂದೇ ಒಂದು ಪ್ರಶ್ನೆ ಎಂದರೆ ವೀರಪ್ಪನ್ ಬಗ್ಗೆ ಪ್ರಶ್ನೆ ಕೇಳಿದ್ದೀರಿ. 3-4 ಜನರು ಯಾರು ಎಸ್.ಐ.ಗಳು ಏನು ತೀರಿಕೊಂಡಿದ್ದಾರೆ ಅವರ ಪತ್ನಿಯರು ಕೆಲಸಬೇಕೆಂದು ಅರ್ಜಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ ಎನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ನಾನು ಮುಖ್ಯ ಕಾರ್ಯದರ್ಶಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ಅರ್ಜಿ ಬಂದಿದೆ ಎನ್ನುವುದು ನನಗೆ ಗೊತ್ತಿದೆ. ಆದರೆ ನನಗೆ ಇನ್ನೂ ಆ ಅರ್ಜಿ ಬಂದಿಲ್ಲ. ಬರಲು ಸ್ವಲ್ಪ ತಡವಾಗಬಹುದು. ನಾವು ಈಗಾಗಲೇ ಅವರಿಗೆ ಬಹುಶಃ ಇಂಟ್ರೆಸ್ಟ್ ಮೇಲೆ ಆದಾಯ ಬರುವಂತಹ ರೀತಿಯಲ್ಲಿ ಒಂದೊಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ಹಣವನ್ನು ಒಂದು ವೇಳೆ ಅವರು ಫಿಕ್ಸೆಡ್ ಡಿಪಾಜಿಟ್ ಇಟ್ಟರೂ ಸಹ ಒಂದು ವರ್ಷಕ್ಕೆ 10-12 ಸಾವಿರ ರೂಪಾಯಿಗಳು ಪ್ರತಿವರ್ಷ ಇಂಟ್ರೆಸ್ಟ್ ಅವರಿಗೆ ಬರುತ್ತದೆ. ಅದೂ ಅಲ್ಲದೆ ಅವರಲ್ಲಿ ಯಾರಿಗಾದರೂ ಯೋಗ್ಯತೆ ಇದ್ದರೆ ಕೆಲಸ ಕೊಡಬಹುದು ಮೊನ್ನೆ ತಾನೆ ನನ್ನ ಹತ್ತಿರ ಯಾರೋ ಕೆಲವರು ಬಂದಿದ್ದರು ಆಗ ನಾನು ಅವರಿಗೆ ಹೇಳಿದೆ. ಅವರ ಹೆಂಡತಿಯರಿಗೆ ಏನಾದರೂ ಕೆಲಸ ಮಾಡುವ ಯೋಗ್ಯತೆ ಇದ್ದರೆ ಹೇಳಿ ನಾವು ಕೆಲಸ ಕೊಡುತ್ತೇವೆಂದು ಹೇಳಿದ್ದಕ್ಕೆ ಅವರು ಹೇಳಿದರು ಅವರ ಹೆಂಡತಿಯರಿಗೆ ಏನೂ ಯೋಗ್ಯತೆ ಇಲ್ಲ ಸತ್ತ ಸಬ್ ಇನ್‌ಸ್ಪೆಕ್ಟರ್ ತಮ್ಮ ಒಬ್ಬ ಇದ್ದಾನೆ. ಅವನಿಗೆ ನೌಕರಿ ಕೊಡಿ ಎಂದು ಹೇಳಿದರು ಅದಕ್ಕೆ ನಾನು ಹೇಳಿದೆ ಅದು ಸ್ವಲ್ಪ ಕಷ್ಟವಾಗುತ್ತದೆ ಎಂದು. ಅದಕ್ಕೆ ಅವರ ಪತ್ನಿಯರಿಗೆ ಕೆಲಸ ಮಾಡತಕ್ಕಂಥ ಯೋಗ್ಯತೆ ಇದ್ದರೆ ಮುಖ್ಯಕಾರ್ಯದರ್ಶಿ ಯವರಿಗೆ ಹೇಳಿ ಪರಿಶೀಲನೆ ಮಾಡಿಸುತ್ತೇನೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅವರೂ ಸಹ ಮಂತ್ರಿಮಂಡಲದಲ್ಲಿದ್ದು ಅನುಭವ ಪಡೆದಿದ್ದಾರೆ. ಆದರ ಪ್ರಕಾರ ಕೆಲಸಗಳು ಸ್ವಲ್ಪ ಮಟ್ಟಿಗೆ ತಡವಾಗಬಹುದು ಆದರೆ ಕೆಲಸ ಆಗಲಾರದಂತೆ ಉಳಿಯುವಂತೆ ಇಲ್ಲ ಆ ತಡವನ್ನೂ ಕೂಡ ಎಲಿಮಿನೇಟ್ ಮಾಡತಕ್ಕಂಥಾದ್ದಕ್ಕೆ ಸರ್ವಪ್ರಯತ್ನವನ್ನೂ ನಾವು ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಆಡಳಿತ ಯಂತ್ರ ಸುಧಾರಣೆ ಮಾಡುವ ದೃಷ್ಟಿಯಿಂದ ಹೊರಗಡೆಯಿಂದ ಯಾರನ್ನೋ ಕರೆದುಕೊಂಡು ಬಂದು ಅದಕ್ಕೆ ಒಂದು ಸಮಿತಿ ಮಾಡಿ ಬದಲಾವಣೆ ಮಾಡುವಂತಹ ಪ್ರಯತ್ನವನ್ನು ತಾವು ಏನು ಮಾಡುತ್ತಿದ್ದೀರಿ ಆ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಜಸ್ಟೀಸ್ ಬೊಪ್ಪಣ್ಣ ಅವರನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಏನು ಹೇಳುತ್ತಿದ್ದೀರಿ ಅದಕ್ಕೆ ನನ್ನ ಒಂದು ಸಲಹೆ ಇಷ್ಟೇ ನಮ್ಮಲ್ಲಿ ಯಾರು ಪ್ರಾಮಾಣಿಕವಾದ ಉನ್ನತ ಅಧಿಕಾರಿಗಳಿದ್ದಾರೆ. ಅವರಲ್ಲಿ ಕೆಲವರನ್ನು ನಿಮಗೆ ನಂಬಿಕೆ ಇರುವವರನ್ನು ಇದಕ್ಕೆ ನೇಮಕ ಮಾಡಿದರೆ ಒಳ್ಳೆಯದು. ಏಕೆಂದರೆ ಈ ಹಿಂದೆ ಹೊರಗಡೆಯಿಂದ ಕರೆದುಕೊಂಡು ಬಂದು ನೇಮಕ ಮಾಡಿದಂತಹ ಪ್ರಕರಣಗಳಲ್ಲಿ ಯಾವುದು ಅಷ್ಟು ಯಶಸ್ವಿಯಾಗಲಿಲ್ಲ. ಇದು ತೋಳ ಮತ್ತು ಕುರಿ ಮರಿ ಕಥೆ ಆಗಬಾರದು. ಆದ್ದರಿಂದ ಈ ಬಗ್ಗೆ ಎಚ್ಚರಿಕೆ ವಹಿಸಿ ತಮಗೆ ಸರಿಕಂಡಿದ್ದನ್ನು ಮಾಡಿ. ಇನ್ನು ಎರಡನೆಯದು ನಮಗೆ ತಿಳಿದಿರುವ ಪ್ರಕಾರ ಈಗಾಗಲೇ ಖಾಸಗಿಯವರಿಗೆ ಮೆಡಿಕಲ್ ಕಾಲೇಜುಗಳನ್ನು ಕೊಡುವುದಕ್ಕೆ ತೀರ್ಮಾನದ ಹಂತದಲ್ಲಿದೆ ಎಂದು ನಮಗೆ ಸುದ್ದಿ ಬಂದಿದೆ. ತಾವು ಈ ವರ್ಷ ಯಾರಿಗಾದರೂ ಮೆಡಿಕಲ್

ಕಾಲೇಜುಗಳನ್ನು ಖಾಸಗಿಯವರಿಗೆ ಕೊಡುತ್ತೀರೋ ಇಲ್ಲವೋ ಎಂಬ ಬಗ್ಗೆ ತಮ್ಮ ನಿಲುವು ಏನೆಂದು ಸ್ಪಷ್ಟಪಡಿಸಬೇಕು.

ಶ್ರೀ ವೀರೇಂದ್ರ ಪಾಟೀಲ್:- ಈಗ ಮಾನ್ಯ ಸದಸ್ಯರು ಹೊರಗಡೆಯವರು ಅಂದಾಗ ನನಗೆ ಆಶ್ಚರ್ಯವಾಯಿತು. ಯಾರೂ ಹೊರಗಡೆಯವರಿಲ್ಲ. ಜಸ್ಟೀಸ್ ಬೋಪಣ್ಣನವರು ಹೈಕೋರ್ಟ್ ಜಡ್ಜ್ ಆಗಿ ಈಗ ರಿಟೈರ್ಡ್ ಆಗಿದ್ದಾರೆ ಅವರು ನಮ್ಮವರೇ ಕನ್ನಡಿಗರೇ. ಹೊರಗಿನವರು ಯಾರೂ ಅಲ್ಲ. ಇದರ ಮೇಲೆ ಜಡ್ಜ್‌ನ್ನು ನೇಮಕ ಮಾಡಬೇಕೆನ್ನುವಂಥಾ ಅವಶ್ಯಕತೆ ಏಕೆ ಬಿತ್ತು ಎಂದರೆ ಒಂದು ವೇಳೆ ಜಡ್ಜ್ ಇಲ್ಲದೆ ಹೋದರೆ ಏಕೆಂದರೆ ಇದರ ಬಗ್ಗೆ ಸರಿಯಾಗಿ ತೂಕದಿಂದ ಒಂದು ನಿರ್ಣಯ ಮಾಡಬೇಕಾಗುತ್ತದೆ. ಜಡ್ಜ್ ಇಲ್ಲದೆ ಹೋದರೆ ಏನಾಗುತ್ತದೆ ಎಂದರೆ ನಾನು ನೋಡಿದ್ದೇನೆ ನನ್ನ ಅನುಭವಕ್ಕೆಬಂದಂಥ ವಿಚಾರ. ಅನೇಕ ಜನ ಅಧಿಕಾರಿಗಳು ಯಾರು ಭ್ರಷ್ಟರಿದ್ದಾರೆ ಅವರು ಜಾತಿ ಮತ ಪಂಥಗಳ ಆಶ್ರಯ ಹುಡುಕುತ್ತಾರೆ. ಹುಡುಕಿ ಈ ಪುಢಾರಿ ಕ್ಷಮಿಸಬೇಕು.

ಅಧ್ಯಕ್ಷರು:- ನಾನು ಕನ್ನಡ ನಿಗಂಟು ತರಿಸಿದ್ದೇನೆ. "ಸಂಕ್ಷಿಪ್ತ ಕನ್ನಡ ನಿಗಂಟು ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ ಬೇಗಳೂರು - 18, 1977." ಇದರಲ್ಲಿ ಪುಢಾರಿ' ಎಂದರೆ ನಾಯಕ ಮುಂದಾಳು ಎಂದು ಇದೆ.

ಪ್ರೊ: ಎಂ.ಡಿ.ನಂಜುಡಸ್ವಾಮಿ:- ಸಾಹಿತ್ಯ ಪರಿಷತ್ತಿನವರೆಗೆ ಹೋಗುವಷ್ಟು ಪ್ರಯಾಸ ಏಕೆ ಪಟ್ಟಿರಿ ನಾನು ಆಗಲೇ ಅದರ ಅರ್ಥ ಹೇಳಿದ್ದೆನಲ್ಲಾ.

ಅಧ್ಯಕ್ಷರು:- ಶಂಕದಿಂದಲೇ ತೀರ್ಥ ಬರಬೇಕು.

ಶ್ರೀ ವೀರೇಂದ್ರ ಪಾಟೀಲ್:- ಇದರ ಬಗ್ಗೆ ಅನೇಕ ಜನ ಭ್ರಷ್ಟ ಅಧಿಕಾರಿಗಳು ಜಾತಿ ಕುಲ ಮತ ಇದನ್ನು ಆಶ್ರಯಿಸುತ್ತಾರೆ. ಮತ್ತು ಅಂಥವರನ್ನು ಹಿಡಿದುಕೊಂಡು ಬಂದು ಏನ್ರಿ ನಮ್ಮ ಜಾತಿಯಲ್ಲಿ ಇರುವವರೇ ಒಂದಿಬ್ಬರು ಎಂದೆಲ್ಲಾ ಹೇಳುತ್ತಾರೆ. ಹೀಗೆಲ್ಲಾ ಬರುತ್ತದೆ. ಆದಕ್ಕಾಗಿ ನ್ಯಾಯವಾಗಿ ವಿಚಾರ ಮಾಡುತ್ತಿದ್ದಾರೆ ಅನ್ನುವಂಥಾ ವಾತಾವರಣ ಬರಬೇಕಾಗಿದ್ದರೆ ಒಬ್ಬ ಜಡ್ಜ್‌ರನ್ನೇ ಇದಕ್ಕೆ ಚೇರ್ಮನ್‌ರನ್ನಾಗಿ ಆಗಬೇಕೆಂಬ ದೃಷ್ಟಿಯಿಂದ ಮಾಡಿದ್ದೇವೆ. ಇವರು ನಮ್ಮವರೇ ಇದ್ದಾರೆ. ಹೈಕೋರ್ಟ್‌ನಲ್ಲಿ ಸೇವೆ ಸಲ್ಲಿಸಿದ್ದಾರೆ. ಮತ್ತು ಒಳ್ಳೆಯ ಹೆಸರು ಪಡೆದಂಥಾ ಒಬ್ಬ ನ್ಯಾಯಧೀಶರಾಗಿದ್ದರು ಎನ್ನುವ ಮಾತನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಇನ್ನು ಎರಡನೆಯದಾಗಿ ನಾವು ಮೂರು ಮೆಡಿಕಲ್ ಕಾಲೇಜುಗಳನ್ನು ಕೊಡುತ್ತೇವೆ ಅನ್ನತಕ್ಕ ವಿಚಾರವನ್ನು ಅವರು ಹೇಳಿದ್ದಾರೆ. ಅದು ಅವರಿಗೆ ಹೇಗೆ ಗೊತ್ತಾಯಿತೋ ನನಗೆ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ನನಗೆ ಗೊತ್ತಿದೆ. ಹೈಕೋರ್ಟಿನಿಂದ ಆದೇಶ ಬಂದಿದೆ. ಏನೆಂದರೆ ಎರಡು ಕಡೆ ಮತದವರು ಹೈಕೋರ್ಟ್‌ಗೆ ಹೋಗಿ ಈ ರೀತಿಯಿಂದ ನಾವು ಅರ್ಜಿ ಕೊಟ್ಟಿದ್ದರೂ ಕೂಡ ನಮ್ಮ ಅರ್ಜಿಯನ್ನು ಪರಿಶೀಲನೆ ಮಾಡಲಾರದೆ ಹಿಂದಿನ ಸರ್ಕಾರದವರು ಯಾವುದೋ ದೃಷ್ಟಿ ಇಟ್ಟುಕೊಂಡು ಎರಡನೆಯವರಿಗೆಲ್ಲಾ ಕೊಟ್ಟಿದ್ದಾರೆ ನಮಗೆ ಕೊಡದೆ ಅನ್ಯಾಯ ಮಾಡಿದ್ದಾರೆಂದು ಹೇಳಿದ್ದಾರೆ. ಆದಕ್ಕೆ ಹೈಕೋರ್ಟ್‌ನವರು ಇವರ ಅರ್ಜಿಯನ್ನೂ ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆಯೇ ಹೊರತಾಗಿ ಇವರಿಗೂ ಕೊಡಬೇಕೆಂದು ಕಟ್ಟಪ್ಪಣೆ ಮಾಡಿಲ್ಲ. ಆದಕ್ಕಾಗಿ ನಾನು ಹೇಳಿದೆ ನಾವು ಏನು ಜನಸಾಮಾನ್ಯರಿಗೆ ಭರವಸೆ ಕೊಟ್ಟಿದ್ದೇವೆಯೋ ಅದನ್ನು ನಾವು ಈಡೇರಿಸುತ್ತೇವೆ. ಒಂದು ವೇಳೆ ಹೈಕೋರ್ಟಿನವರು ಮತ್ತು ಸುಪ್ರೀಮ್ ಕೋರ್ಟ್‌ನವರು ಅವರುಗಳಿಗೆ ಕೊಡಲೇಬೇಕೆಂದು ಕಟ್ಟಪ್ಪಣೆ ಮಾಡಿದಾಗ ಆ ವೇಳೆಗೆ ನಾವು ಕೈ ಕಟ್ಟಿಕೊಳ್ಳಬೇಕಾಗುತ್ತದೆಯೇ ಹೊರತಾಗಿ ಇಲ್ಲದೆ ಹೋದರೆ ಇವತ್ತು ಹೊಸ ಮೆಡಿಕಲ್ ಕಾಲೇಜುಗಳನ್ನಾಗಲೀ ಇಂಜಿನೀಯರಿಂಗ್ ಕಾಲೇಜುಗಳನ್ನಾಗಲೀ ಪಾಲಿಟೆಕ್ನಿಕ್ ಆಗಲೀ ಕೊಡಬೇಕೆನ್ನುವ ಮನಸ್ಸು ಅಥವಾ ಧೋರಣೆ ನಮ್ಮ ಸರ್ಕಾರಕ್ಕೆ ಇಲ್ಲ.

ಶ್ರೀ ಸಿ. ಭೈರೇಗೌಡ:- ಸ್ವಾಮಿ ತಾವು ಬಿ.ಡಿ.ಎ.ನಲ್ಲಿ ನಡೆದಿರತಕ್ಕಂಥ ಕೆಲವು ನಿದರ್ಶನಗಳನ್ನು ಕೊಟ್ಟು ತಾವು ಹೇಳಿದ್ದೀರಿ. ಆದಕ್ಕೆ ವಿಚಾರಣೆ ಕೂಡ ಮಾಡತಕ್ಕದ್ದು ನಡೆದಿದೆ ಎಂದು ತಾವು ಹೇಳಿದ್ದೀರಿ. ಸಂತೋಷ. ಅದೇ ರೀತಿಯಲ್ಲಿ ನಾನು ಅನೇಕ ಸಲ ಅಲ್ಲಿ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಈ ಎಕ್ಸೈಸ್ ಡಿಪಾರ್ಟ್‌ಮೆಂಟಿನಲ್ಲಿ ನಿಮ್ಮ ಲೆಕ್ಕದ ಪ್ರಕಾರವೇ 314ಕೋಟಿ

ರೂಪಾಯಿಗಳಷ್ಟು ಹೆಚ್ಚಿಗೆ ಹಣ ಒಂದು ವರ್ಷಕ್ಕೆ ಆದಾಯ ಬರುತ್ತಿದೆ. ಓವರ್ ಅಂಡ್ ಎಬೌ ರೆಗ್ಯುಲರ್ ಇನ್‌ಕಂ ಬಂದಿದೆ. ಒಂದು ವರ್ಷದದಲ್ಲಿ 314 ಕೋಟಿ ರೂಪಾಯಿ ಅಲ್ಲದಿದ್ದರೂ 300 ಕೋಟಿ ಆದರೂ ನೆಟ್ ಆಗಿ ಪ್ರತಿ ವರ್ಷ ಬರಬೇಕಾಗಿತ್ತು. ಅದು ಹೋಗಿದೆ. ಇದರ ಬಗ್ಗೆ ವಿಚಾರಣೆಯಾಗಬೇಕೆಂದು ನಾನು ಹೇಳಿದ್ದೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಈ ಹಣ ಹಿಂದಿನ ವರ್ಷಗಳಲ್ಲಿ ಏಕೆ ಬರುತ್ತಿರಲಿಲ್ಲ ಬರದೇ ಇದ್ದರೆ ಈ ಹಣ ಎಲ್ಲೆಲ್ಲಿಗೆ ಹೋಯಿತು ಯಾರ್ಯಾರ ಜೋಬಿಗೆ ಸೇರಿದೆ ಎನ್ನುವುದರ ಬಗ್ಗೆ ವಿಚಾರಣೆ ಮಾಡಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ ಹಿಂದಕ್ಕೆ ಎಕ್ಸೈಸ್ ಆಕ್ಷನ್ ಅಂದರೆ ಅರ್ರಾಕ್ ಆಕ್ಷನ್ ಏನು ಮಾಡಿದ್ದಾರೆ ಆ ಪದ್ಧತಿಯಲ್ಲಿ ನಾವು ಯಾವುದೇ ಬದಲಾವಣೆ ಮಾಡಿಲ್ಲ ಅದೇ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಒಂದು ಬದಲಾವಣೆ ಅಥವಾ ವ್ಯತ್ಯಾಸ ಏನಿದೆ ಎಂದರೆ ಹಿಂದಕ್ಕೆ ಯಾವಾಗಲೂ ಈ ತರಹದ ಅರ್ರಾಕ್ ಆಗಲೀ ಟಾಡಿ ಆಗಲಿ ಆಕ್ಷನ್ ಆಗುವ ಮುನ್ನ ಈ ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳು ಒಂದು ಕಾರ್ಟೈಲ್ ಮಾಡಿಕೊಳ್ಳುತ್ತಾ ಇದ್ದರು. ಅವರೆಲ್ಲರೂ ಸೇರಿಕೊಂಡು ನಮ್ಮನಮ್ಮೊಳಿಗೆ ಜಗಳ ಮಾಡಿಕೊಳ್ಳುವುದು ಬೇಡ ನೀನು ಆ ಜಿಲ್ಲೆಯನ್ನು ಒಪ್ಪಿಕೋ ನಾನು ಈ ಜಿಲ್ಲೆಯನ್ನ ಒಪ್ಪಿಕೊಳ್ಳುತ್ತೇನೆ. ಎಂದು ತಮ್ಮಲ್ಲಿಯೇ ಅವರಲ್ಲಿಯೇ ಹೊಂದಾಣಿಕೆ ಮಾಡಿಕೊಂಡು ಬಿಡ್ ಮಾಡುತ್ತಾ ಇರಲಿಲ್ಲ. ಈ ಸಲ ನಾವು ಅದನ್ನು ಹೊಡೆದು ಹಾಕಿದ್ದೇವೆ. ಇದರಿಂದಾಗಿ ಇಷ್ಟು ದೊಡ್ಡ ಲಾಭ ನಮಗೆ ಸಿಕ್ಕಿದ್ದು ಕಾಣಿಸುತ್ತಾ ಇದೆ. ಆಗ ಅವರುಗಳು ಸೇರಿಕೊಂಡು ಬಿಡ್‌ನ್ನು ಬಹಳ ಕಡಿಮೆ ಮಾಡಿಕೊಂಡಿದ್ದಾರೆ. ಆವೊತ್ತು ಆ ವೇಳೆಯಲ್ಲಿ ಪರಿಸ್ಥಿತಿ ಏನಿತ್ತು ಯಾರ ಆಶೀರ್ವಾದಗಳಿಂದ ಇವರು ಹಾಗೆ ಮಾಡಿಕೊಳ್ಳುತ್ತಿದ್ದರು ಇದಕ್ಕೆ ಯಾರು ಪ್ರೋತ್ಸಾಹ ಮತ್ತು ಆಶೀರ್ವಾದ ನೀಡಿ ಮಾಡಿಸುತ್ತಿದ್ದರ ಎಂಬುದನ್ನೆಲ್ಲಾ ನಾವು ಈಗ ನೋಡಿಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ. ಕಂಟ್ರಾಕ್ಟರುಗಳು ತಮ್ಮಲ್ಲಿನ ಒಂದು ಹೊಂದಾಣಿಕೆಯಿಂದಾಗಿ ನಾನು ತೆಗೆದುಕೊಂಡ ಜಿಲ್ಲೆಗೆ ನೀನು ಕೈಹಾಕಬೇಡ ನೀನು ತೆಗೆದುಕೊಳ್ಳುವ ಜಿಲ್ಲೆಗೆ ನಾನು ಬರುವುದಿಲ್ಲ ಎಂದು ನಿಗದಿ ಮಾಡಿಕೊಂಡು ಅವರು ಕಡಿಮೆ ಬಿಡ್ ಮಾಡುತ್ತಾ ಇದ್ದರು. ಹಾಗಾಗಿ ಸರಕಾರಕ್ಕೆ ಬರುತ್ತಾ ಇದ್ದಂಥ ಆದಾಯವು ಕಡಿಮೆ ಆಗುತ್ತಿತ್ತು. ಅಂತೆಯೇ ಬಿಡ್‌ನಲ್ಲಿ ಅನುಸರಿಸುವ ನೀತಿಯಿಂದ ಹೆಚ್ಚಿಗೆ ಬಿಡ್ ಮಾಡಲಾರದ ಒಂದು ಪರಿಸ್ಥಿತಿ ಬಂದಾಗ ಸರಕಾರ ಅದನ್ನು ಒಪ್ಪಿಕೊಳ್ಳಬೇಕಾಗುತ್ತಿತ್ತು. ಇಂಥ ಕಾರ್ಟೈಲ್ ಮಾಡುವುದಕ್ಕೆ ಯಾರು ಪ್ರೋತ್ಸಾಹ ನೀಡಿದ್ದರು ಯಾವ ಉದ್ದೇಶದಿಂದ ನೀಡಿದ್ದರು ಎಂಬುದನ್ನು ಈ ಪರಿಸ್ಥಿತಿಯಲ್ಲಿ ಆಧಾರವಿಲ್ಲದೆ ಅಧಿಕಾರ ವಾಣಿಯಿಂದ ನಾನು ಹೇಳುವ ಪರಿಸ್ಥಿತಿಯಲ್ಲಿ ಇಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಅಧ್ಯಕ್ಷರೇ ಮೂರು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಂದ ವಿವರಣೆ ಬೇಕಾಗಿದೆ. 1) ಭಾಷೆಯ ಬಗ್ಗೆ, 2) ಮೆಟ್ರೋ ವಿಚಾರದಲ್ಲಿ 3) ರೈತ ಸತ್ಯಾಗ್ರಹಿಗಳ ಮೇಲೆ ಇನ್ನೂ ಮುಂದುವರಿಯುತ್ತಿರುವ ಮೊಕದ್ದಮೆಗಳ ಬಗ್ಗೆ. ತಾವು ಹೇಳಿದಿರಿ ತಂದೆತಾಯಿಗಳ ಒತ್ತಡ ಇಂಗ್ಲೀಷ್ ಮಾಧ್ಯಮ ಶಾಲೆಗಳ ಬಗ್ಗೆ ಇದೆ ಎಂದು ಕೆಟ್ಟ ಕೆಟ್ಟ ಒತ್ತಡಗಳು ಬರುತ್ತಿರುತ್ತವೆ. ಇದಕ್ಕೆ ನಾನು ಒಂದು ಉದಾಹರಣೆ ಕೊಡುತ್ತೇನೆ. ನಾನು ಬಹಳ ಗಂಭೀರವಾಗಿ ಯೋಚನೆ ಮಾಡುತ್ತಾ ಇದ್ದೇನೆ. ತಾವುಗಳು ಯಾರೂ ನಗಬಾರದು. ನಮ್ಮಲ್ಲಿ ಬಹಳ ಜನ ರೈತರು ರಾಗಿ ಬೆಳೆಯುವುದು ಲಾಭದಾಯಕ ಅಲ್ಲ ಅದರ ಬದಲಾಗಿ ಭಂಗಿ ಬೆಳೆಯಬೇಕೆಂದು ಇದ್ದಾರೆ. ಏಕೆಂದರೆ ನಮ್ಮ ಮಕ್ಕಳಿಗೆ ಯಾವ ಮಾಧ್ಯಮದ ಮೂಲಕ ಶಿಕ್ಷಣವನ್ನು ಕೊಡಬೇಕೆಂಬುದನ್ನು ನಾವುಗಳು ಬಹಳ ಜವಾಬ್ದಾರಿಯಿಂದ ಆಲೋಚನೆ ಮಾಡಬೇಕಾಗುತ್ತದೆ. ತಂದೆತಾಯಿಗಳು ಹೇಳಬಹುದು ಇಂಗ್ಲೀಷ್ ಮಾಧ್ಯಮದ ಮೂಲಕ ನನ್ನ ಮಕ್ಕಳಿಗೆ ಶಿಕ್ಷಣ ಕೊಟ್ಟರೆ ಅದು ಲಾಭದಾಯಕವಾಗಬಹುದು ಎಂದು ಹೇಳಬಹುದು. ಅವಿವೇಕಿಗಳೇ ನಮ್ಮಲ್ಲಿ ಜಾಸ್ತಿ ಜನರು ಇದ್ದಾರೆ. ಲಕ್ಷಾಂತರ ಜನ ರೈತರು ನಿಮ್ಮಲ್ಲಿಗೆ ಬಂದು ನಾವು ಭಂಗಿ ಬೆಳೆಯುತ್ತೇವೆ ಎಂದು ಹೇಳಿದ್ದೇ ಆದರೆ ನೀವು ಅದನ್ನು ಒಪ್ಪಿಕೊಳ್ಳುತ್ತೀರಾ ಈ ವಿಚಾರದಲ್ಲಿ ರಾಜ್ಯಸರಕಾರದ ಜವಾಬ್ದಾರಿ ಏನು ಎಂದು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ:- ನಾವು ರಾಗಿಯನ್ನೂ ಬೆಳೆಯಬೇಕು ಭಂಗಿಯನ್ನೂ ಬೆಳೆಯಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ತಾವು ದಯವಿಟ್ಟು ಮಧ್ಯೆ ಪ್ರವೇಶ ಮಾಡಬೇಡಿ. ಬೆಂಗಳೂರಿನಲ್ಲಿ 40ಲಕ್ಷ ಜನರಿದ್ದಾರೆ. ಈಗ 260 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಾವೇರಿ ಮೂರನೇ ಯೋಜನೆಯ ಮೂಲಕ ನೀರನ್ನು ತಂದುಕೊಡುವ ಭಗೀರಥ ಪ್ರಯತ್ನ ನಡೆಯುತ್ತಾ ಇದೆ. 2000 ಎ.ಡಿ. ಹೊತ್ತಿಗೆ ನಮ್ಮ ಜನಸಂಖ್ಯೆ ಇಲ್ಲಿ 70 ಲಕ್ಷ ಆಗಬಹುದೆಂದು ನಮಗೆಲ್ಲರಿಗೂ ಗೊತ್ತಿದೆ. ಮಂಡ್ಯ ಜಿಲ್ಲೆಯ ಎಲ್ಲಾ ನೀರನ್ನು ಬೆಂಗಳೂರಿಗೆ ತರಬೇಕಾಗುತ್ತದೆ. ಅದಕ್ಕಾಗಿ ಎಷ್ಟೆಷ್ಟೋ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆಂಬ ಬಗ್ಗೆ ತಾವು ಆಲೋಚನೆ ಮಾಡಬೇಕು. 2000 ಎ.ಡಿ.ಗೆ ಸರಕಾರಿ ನೌಕರರಿಗೆ ಕೊಡಬೇಕಾದ ಡಿ.ಎ. ಮೊತ್ತ 2 ಸಾವಿರ ಕೋಟಿ ರೂಪಾಯಿಗಳಷ್ಟು ಆಗುತ್ತದೆ ಎಂದು ಮಾನ್ಯ ಹಣಕಾಸಿನ ಸಚಿವರು ಮೊನ್ನೆ ಹೇಳಿದರು. ಇಂಥ ಯೋಜನೆಗಳ ಬಗ್ಗೆ ನಾವು ಸ್ವಲ್ಪವಾದರೂ ಯೋಚನೆ ಮಾಡಿ ತೀರ್ಮಾನ ಮಾಡಬೇಕು. ಹಿಂದೆ ನಡೆದ ಸದನದ ಕಲಾಪಗಳಲ್ಲಿ ಮಾನ್ಯ ಸದಸ್ಯರೊಬ್ಬರು ಹೇಳಿದರು ಏನೆಂದರೆ growth of Bangalore must be fronzen. I honestly feel Bangalore has enough ruined and enough developed and therefore I suggest you should abolish Bangalore Development Authority. ಇಲ್ಲ ಅಂದರೆ ನಾವುಗಳು ಬಹಳ ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳತ್ತೇವೆ.

ಮೂರನೆಯದಾಗಿ ನಿನ್ನೆ ನಾನೇ ವಿನಂತಿ ಮಾಡಿದೆ ಮಾನ್ಯ ಸದಸ್ಯರಾದ ಬಾಬಾಗೌಡರು ಊರಿನಲ್ಲಿ ಇರಲಿಲ್ಲ ಇವೊತ್ತು ಬೆಳಿಗ್ಗೆ ಬಂದರು. ಇವರು ಸತ್ಯಾಗ್ರಹಿಗಳ ಮೇಲೆ ಕೇಸ್‌ಗಳನ್ನು ಹಾಕಿ ಕೋರ್ಟ್‌ಗೆ ಓಡಾಡಿಸುವಮೂಲಕ ಅವರನ್ನು ಸುಸ್ತು ಮಾಡುವಂಥ ಬ್ರಿಟಿಷರ ಪದ್ಧತಿಯನ್ನೇ ಮುಂದುವರಿಸುವುದಾದರೆ ನನ್ನ ಮೇಲಿನ ಕೇಸ್‌ನ್ನು ಬೇಕಾದರೆ ಮುಂದುವರಿಸಲಿ ಪರವಾಗಿಲ್ಲವೆಂದು ಬಾಬಾಗೌಡ ಪಾಟೀಲರು ಹೇಳುತ್ತಾರೆ. ಆದರೆ 17 ಸಾವಿರ ಜನರು ನಿಮಗೆ ವಿಧಾನಸೌಧ ಖಾಲಿ ಮಾಡಿಸಿಕೊಟ್ಟರಲ್ಲ? ಅವರನ್ನು ಏನು ಮಾಡುತ್ತೀರಿ ಅವರ ಮೇಲಿನ ಕೇಸ್‌ಗಳನ್ನು ಮುಂದುವರಿಸುತ್ತೇವೆಂದು ಹೇಳಿ ಇಲ್ಲವೇ ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು ನಿರ್ದಿಷ್ಟವಾಗಿ ಹೇಳಬೇಕು ನಾವು ಎರಡಕ್ಕೂ ತಯಾರಾಗಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಸದಸ್ಯರಾದ ಪ್ರೊ:ನಂಜುಂಡಸ್ವಾಮಿಯವರು 3 ವಿಚಾರಗಳ ಬಗ್ಗೆ ಕೇಳಿದ್ದಾರೆ. ನಾನು ಇಂಗ್ಲೀಷ್ ಮಾಧ್ಯಮದ ಶಾಲೆಗಳ ಬಗ್ಗೆ ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಪರಿಸ್ಥಿತಿ ಹೀಗೆ ಇದೆ ಎನ್ನುವಂಥಾದ್ದನ್ನು ನಾನು ವಿವರಿಸಿದ್ದೇನೆಯೇ ಹೊರತಾಗಿ ಈ ಕುರಿತು ಸರಕಾರದ ಧೋರಣೆಯನ್ನು ನಾನು ಘೋಷಣೆ ಮಾಡಿಲ್ಲ. ಇದನ್ನೆಲ್ಲಾ ವಿಚಾರ ಮಾಡಿ ಏನು ಮಾಡಬೇಕೆಂಬುದನ್ನು ಸರಕಾರ ನಿರ್ಣಯ ಮಾಡುತ್ತದೆ. ಮತ್ತು ಯಾವಾಗ ಈ ನಿರ್ಣಯವನ್ನು ಘೋಷಣೆ ಮಾಡಬೇಕೆಂಬುದನ್ನು ಕೂಡ ನಿರ್ಧರಿಸುತ್ತೇವೆ. ತಮ್ಮ ಮುಂದೆ ಈ ಕುರಿತು ಇರುವ ಸಮಸ್ಯೆಗಳನ್ನು ಮಾತ್ರ ವಿವರಿಸಿದ್ದೇನೆ. ತಮ್ಮ ಮುಂದೆ ಸರ್ಕಾರದ ನಿರ್ಣಯವನ್ನು ನಾನು ಹೇಳಲಿಲ್ಲ.

ಅದೇ ರೀತಿಯಲ್ಲಿ ಬೆಂಗಳೂರಿನ ಬಗ್ಗೆ ಮೆಟ್ರೋ ಬಹಳ ಅವಶ್ಯಕತೆ ಇದೆ ಎಂದು ನಮ್ಮ ಎಕ್ಸ್‌ಪರ್ಟ್ಸ್ ಹೇಳುತ್ತಿದ್ದಾರೆ. ಅದು ಬಿಟ್ಟರೆ ನಮಗೆ ಬೇರೆ ಗತಿ ಇಲ್ಲ ಎಂದು ಹೇಳಿದ್ದಾರೆ. ಎಷ್ಟೇ ಖರ್ಚಾದರೂ ಕೂಡ...

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಈ ಎಕ್ಸ್‌ಪರ್ಟ್ಸ್ ದೆಶೆಯಿಂದಲೇ ಈ ದೇಶ ಹಾಳಾಗಿ ಹೋಗಿದೆ. ಈ ತಜ್ಞರು ಎಂದು ನಾವೇನು ಕರೆಯುತ್ತೇವೆ ಅವರೇ ಈ ದೇಶವನ್ನು ಹಾಳೂ ಮಾಡಿರುವುದು. ನಾವುಗಳು ಯಾರೂ ತಜ್ಞರು ಅಲ್ಲ ಎಂದು ಸ್ವಲ್ಪ ಕಾಲ ಯೋಚನೆ ಮಾಡೋಣ.

ಶ್ರೀ ವೀರೇಂದ್ರ ಪಾಟೀಲ್:- ತಜ್ಞರು ಎಂದು ನಾನು ಏಕೆ ಹೇಳುತ್ತಿದ್ದೇನೆ ಅಂದರೆ ನಮಗೆ ಸರ್ಕ್ಯುಲರ್ ರೈಲ್ವೆ ಮಾಡಬೇಕೆಂದರೆ ಇಂಜಿನೀಯರ್‌ಗಳಿಗೆ ಸರ್ವೆ ಮಾಡಿ ಎಂದು ಹೇಳಬೇಕು ಎಸ್ಟಿಮೇಟ್ ಮಾಡಿ ಎಂದು ಹೇಳಬೇಕು ಪ್ಲಾನ್ ಮಾಡಿ ಎಂದು ಹೇಳಬೇಕು ಇದನ್ನೆಲ್ಲಾ ಬಿಟ್ಟು

ಯಾರಿಗಾದರೋ ಹಾದಿಯಲ್ಲಿ ಹೋಗುವವರಿಗೆ ಹೇಳಿದರೆ ಅವರೇನು ಮಾಡುತ್ತಾರೆ ಆದ್ದರಿಂದಲೇ ನಾವು ಒಂದಲ್ಲ ಒಂದು ಹಂತದಲ್ಲಿ ತಜ್ಞರನ್ನು ಅವಲಂಬಿಸಬೇಕಾಗುತ್ತದೆ. ಮತ್ತೆ ಕಾವೇರಿ ಮೂರನೇ ಹಂತದ ಕೆಲಸ ನಡೆಯುತ್ತಾ ಇದೆ. 4 ನೇ ಸ್ಟೇಜ್ ಸಲುವಾಗಿ ಈಗಾಗಲೇ ಒತ್ತಾಯ ಬರುತ್ತಾ ಇದೆ. ಆದಕ್ಕಾಗಿ ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಹೇಳಿದಂತೆ ಬೆಂಗಳೂರು ನಗರವನ್ನು ಇನ್ನೂ ಹೆಚ್ಚಿಗೆ ಬೆಳೆಯಲು ಬಿಡಬಾರದು. ಬೆಳೆಯ ಕೂಡದು ಎಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಬೆಂಗಳೂರು ಸುತ್ತಮುತ್ತ ಯಾವ ರೀತಿಯಿಂದ ಖಾಸಗಿಯವರು ಬಿಡಿಎಯವರು ಸೇರಿ ಲ್ಯಾಂಡ್ ತೆಗೆದುಕೊಂಡು, ಲೇ ಔಟ್‌ಗಳನ್ನು ಮಾಡಿ ಸೈಟ್‌ಗಳನ್ನು ಮಾಡಿ ಹಂಚುವುದಕ್ಕೆ ಹೊರಟಿದ್ದಾರೆ. ಇದರ ಮೇಲೆ ಸ್ವಲ್ಪ ಹತೋಟಿ ಬಂದರೆ ಬೆಂಗಳೂರು ಬೆಳೆಯುವುದನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಬಹುದು. ಅನೇಕ ಜನ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಬೆಂಗಳೂರು ಇನ್ನು ಬೆಳೆಯದಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಬೆಂಗಳೂರಿನಿಂದ 40-50 ಕಿ.ಮಿ. ರೇಡಿಯಸ್‌ನಲ್ಲಿ ಸೆಟಲೈಟ್ ಟೌನ್‌ಗಳನ್ನು ಬೇಕಾದರೆ ಮಾಡಿ ಅಲ್ಲಿ ಜನರಿಗೆ ಅನುಕೂಲಗಳನ್ನು ಮಾಡಿಕೊಡಿ ಎಂದು ಹೇಳಿದ್ದೇನೆ. ಆದರೆ ನನ್ನ ಮಾತು ಅಧಿಕಾರಿಗಳಿಗೆ ಅಷ್ಟಾಗಿ ಹಿಡಿಸುತ್ತಾ ಇಲ್ಲ. ನಾನು ಪದೇ ಪದೇ ಹೇಳುತ್ತಿದ್ದರೂ ಅವರು ಅದು ಆಗಲಾರದ ಕೆಲಸ ಎಂದು ಹೇಳುತ್ತಿದ್ದಾರೆ. ನಮ್ಮ ಬಿಡಿಎದಲ್ಲಿ 85 ಸಾವಿರ ಅರ್ಜಿಗಳು ಸೈಟ್‌ಗಾಗಿ ಬಾಕಿ ಇವೆ. ಬಿಡಿಎದಲ್ಲಿ ಸೈಟ್‌ಗಳಿಲ್ಲ. ಭೂಮಿ ಇಲ್ಲ. ನಂಬರ್ ಇಲ್ಲದೇನೇ ಹಂಚಿಬಿಟ್ಟಿದ್ದಾರೆ. ಒಂದೊಂದು ಫಾರಂ ಮಾಡಿ "You have been allotted a site", ಎಂದು ತಿಳಿಸುತ್ತಾರೆ.

What site? We don't know.

ಈ ರೀತಿಯಲ್ಲಿ ನಂಬರ್ ಇಲ್ಲದೇನೆ ಸೈಟ್‌ಗಳನ್ನು ಹಂಚಿಬಿಟ್ಟಿದ್ದಾರೆ. ಈ ರೀತಿಯಾಗಿ ಪರಿಸ್ಥಿತಿಯು ಇರುವುದರಿಂದ ಬೆಂಗಳೂರು ಸುತ್ತುಮತ್ತ ಲೇ ಔಟ್ ಮಾಡಿ ಸೈಟ್ ಮಾಡುವುದನ್ನು ನಿಲ್ಲಿಸಿದರೆ ಬಹಳ ಮಟ್ಟಿಗೆ ಇದು ಕಡಿಮೆ ಆಗುತ್ತದೆ. ಆದ್ದರಿಂದ ಒಂದು ಪ್ರಯತ್ನ ಮಾಡಿನೋಡಬಹುದು.

ಅದೇ ರೀತಿಯಲ್ಲಿ ಬಾಬಾಗೌಡ ಪಾಟೀಲ್‌ರ ಬಗ್ಗೆ ಹೇಳಿದ್ದಾರೆ. ಅವರೂ ಸಹ ಈ ಬಗ್ಗೆ ನನ್ನ ಹತ್ತಿರ ಎರಡು ಸಲ ಪ್ರಸ್ತಾಪ ಮಾಡಿದ್ದಾರೆ. ರೈತರನ್ನು ಕಾಡಬೇಕು ಅವರನ್ನು ಜೈಲಿಗೆ ಕಳುಹಿಸಬೇಕು ವಾರಕ್ಕೊಮ್ಮೆ ಅವರನ್ನು ಕೋರ್ಟ್‌ಗೆ ಕಳುಹಿಸಬೇಕೆಂಬ ದುರುದ್ದೇಶ ನಮಗೆ ಇಲ್ಲ. ಆದರೆ ಪ್ರಶ್ನೆ ಏನಾಗಿದೆ ಅಂದರೆ ತಾವೇ ಹೇಳಿದಂತೆ 17-18 ಸಾವಿರ ಕೇಸಗಳು ಏನಿವೆ ಈ ಬಗ್ಗೆ ಎಲ್ಲಾ ಜಿಲ್ಲೆಗಳಿಗೂ ಬರೆದು ಎಲ್ಲೆಲ್ಲಿ ರೈತರ ಮೇಲೆ ಇಂತ ಕೇಸ್‌ಗಳು ಇವೆ ಅದನ್ನು ಲಿಸ್ಟ್ ಮಾಡಿ ಕಳುಹಿಸಿಕೊಡಿ ಎಂದು ಡಿಸಿಯವರಿಗೆ ಬರೆದಿದ್ದೇವೆ. ಪೂರ್ತಿ ವರದಿ ಬಂದಮೇಲೆ ಏನು ಕ್ರಮವನ್ನು ಆ ಬಗ್ಗೆ ತೆಗೆದುಕೊಳ್ಳಬೇಕು ಎಂದು ಅದನ್ನು ತೆಗೆದುಕೊಳ್ಳುತ್ತೇವೆ. ತಾವು ರೈತರಿದ್ದಂತೆ ನಾನು ಕೂಡ ರೈತನೇ ಆಗಿರವುದರಿಂದ ರೈತರನ್ನು ಕಾಡಬೇಕೆಂಬ ಪ್ರವೃತ್ತಿ ನನ್ನಲ್ಲಿ ಇಲ್ಲ. ಆದರೆ ಈ ಫಾರ್ಮಾಲಿಟೀಸ್ ಮತ್ತು ಈ ಪ್ರೊಸೀಜರ್ಸ್ ಏನಿವೆ ಅದನ್ನು ಅನುಸರಿಸಬೇಕಾಗಿರುವುದರಿಂದ ತಡ ಆಗಿದೆ. ಸಂಪೂರ್ಣ ವರದಿ ಬಂದ ಕೂಡಲೇ ಸರಕಾರಕ್ಕೆ ಆ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ ಆಡಳಿತಗಾರರು. ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡುತ್ತಾರೆ ಎಂಬ ನಂಬಿಕೆಯನ್ನು ನಾನು ಕೂಡ ಹೊಂದಿದ್ದೇನೆ. ಆದರೆ ನನ್ನ ಮಿತ್ರರಾದಂಥ ಸಿಂಧ್ಯರವರು ಹೇಳಿದ ಹಾಗೆ 20 ಕಿ.ಮಿ.ವೇಗದಲ್ಲಿ ಹೋಗುತ್ತಾ ಇದ್ದೀರಿ ಇದು ಬಹಳ ಕಡಿಮೆಯಾಗಿದೆ. ತಮ್ಮ ಆಡಳಿತದ ಬಗ್ಗೆ ಜನರಿಂದ ಬರತಕ್ಕಂತ ಮಾತುಗಳನ್ನು ತಾವು ಕೇಳಲಿಲ್ಲ ಎಂದುಕಾಣುತ್ತದೆ.

ಏತಕ್ಕೆ ವೀರೇಂದ್ರ ಪಾಟೀಲ್ ಸರ್ಕಾರ ಇಷ್ಟೊಂದು ನಿಧಾನವಾಗುತ್ತಿದೆ ಎನ್ನತಕ್ಕಂಥ ಮಾತು ಕೇಳಿ ಬಂದಿದೆ. ಇನ್ನು ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಈ ಶಾಸಕರುಗಳು ಯಾರಾದರೂ ಸಾರ್ವಜನಿಕ ವ್ಯಕ್ತಿಗಳು ಹೋದಾಗ ಗೌರವದಿಂದ ಮಾತನಾಡುವುದಿಲ್ಲ. ಅವರ ಈ ವರ್ತನೆಯ ಬಗ್ಗೆ ಹೇಳಬೇಕೆಂದರೆ ತಾವು ಹಿಂದ 20 ವರ್ಷಗಳ ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ನನಗೆ ಜ್ಞಾಪಕ ಇದೆ ಒಂದು ಸುತ್ತೋಲೆಯನ್ನು ತಾವು ಕಳುಹಿಸಿದ್ದಿರಿ ಯಾರೇ ಶಾಸಕರುಗಳು ತಮ್ಮ ಕಾರ್ಯಾಲಯಕ್ಕೆ ಬಂದಾಗ ಅವರನ್ನು ಬಹಳ ಗಂಭೀರವಾಗಿ ಬಹಳ ಗೌರವದಿಂದ ಕರೆದು ಮಾತನಾಡಿ ಅವರ ಜೊತೆಯಲ್ಲಿ ಗೌರವದಿಂದ ಮಾತನಾಡಬೇಕು ಎಂದು ತಾವುತಿಳಿಸಿದ್ದೀರಿ. ಆ ಸುತ್ತೋಲೆ 20 ವರ್ಷಗಳ ನಂತರ ಏನಾಯಿತೊ ಗೊತ್ತಿಲ್ಲ. ಕೆಲವು ಒಳ್ಳೆಯ ಅಧಿಕಾರಿಗಳಿದ್ದಾರೆ. ಈಗ ನಿಮ್ಮ ಪ್ರಭು ಇದ್ದಾರಲ್ಲಾ ಅಂಥ 20 ಜನ ಅಧಿಕಾರಿಗಳಿದ್ದರೂ ಕೂಡಾ ಎಲ್ಲಿಗೆ ಬೇಕಾದರೂ ಹೋಗುತ್ತೇವೆ. ಮಾಡನಾಡುತ್ತೇವೆ. ಅದರ ಬಗ್ಗೆ ನಮಗೇನೂ ಚಿಂತೆ ಇಲ್ಲ. ಕೆಲವರು ಹೇಗಿದ್ದಾರೆ ಎಂದರೆ ಅವರನ್ನು ನೋಡಿದ ತಕ್ಷಣ ನಮಗೆ ಇವರ ಹತ್ತಿರಮಾತನಾಡಬೇಕೇ ಬೇಡವೇ ಎನ್ನುವಂತಾಗುತ್ತದೆ. ನಮ್ಮ ಸಮಸ್ಯೆ ಆಮೇಲೆ ನೋಡೋಣ. ಆದರೆ ಇಲ್ಲಿ ಅವರ ಮುಖ ನೋಡಿದ ತಕ್ಷಣ ನಮ್ಮ ಸಮಸ್ಯೆ ಇಲ್ಲಿ ಬಗೆಹರಿದು ಹೋಗುತ್ತದೆ. ಆದುದರಿಂದ ಎಲ್ಲಾ ಪಕ್ಷದ ಶಾಸಕರುಗಳ ಪರವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ತಾವು ಒಂದು ಸುತ್ತೋಲೆಯನ್ನು ಕಳುಹಿಸಿ. ಶಾಸಕರುಗಳು ಬಂದಾಗ ಹೇಗಿರಬೇಕು ನೀವು ಯಾವ ರೀತಿ ಅವರನ್ನು ಸ್ವಾಗತ ಮಾಡಬೇಕು ಯಾವ ರೀತಿ ಹೇಳಬೇಕು ಎನ್ನುವುದರ ಬಗ್ಗೆ ತಾವು ಒಂದು ನೀತಿ ನಿರೂಪಣೆಯನ್ನು ಮಾಡಬೇಕು ಎರಡನೆಯದು ಎಂದರೆ ಯಾವುದೇ ತಾಲ್ಲೂಕಿನಲ್ಲಿ ಮಂತ್ರಿಗಳು ಇದ್ದಕ್ಕಿದ್ದ ಹಾಗೆ ಬಂದುಬಿಡುತ್ತಾರೆ. ಸರ್ಕಾರದ ಕೆಲಸಕ್ಕೋಸ್ಕರ ಬಂದುಬಿಡುತ್ತಾರೆ. ಯಾರೇ ಬಂದರೂ ಏನೇ ಸರ್ಕಾರದ ಕಾರ್ಯಕ್ರಮ ಅಲ್ಲಿ ನಡೆದರೂ ಆ ಕ್ಷೇತ್ರದ ಶಾಸಕರೇ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಬೇಕು ಎನ್ನತಕ್ಕಂಥದ್ದರ ಬಗ್ಗೆ ದಯಮಾಡಿ ಒಂದು ಸಂಪ್ರದಾಯವನ್ನು ಜಾರಿಗೆ ತರಬೇಕು. ಅವರು ಯಾರೇ ಇರಲಿ ಯಾವುದೇ ಪಕ್ಷದವರು ಆಗಿರಲಿ ಮಂತ್ರಿವರ್ಯರು ಮತ್ತು ಮುಖ್ಯಮಂತ್ರಿಗಳು ಪ್ರಾರಂಭೋತ್ಸವಕ್ಕೆ ಬರಲಿ ಅಧ್ಯಕ್ಷತೆ ಮಾತ್ರ ಆ ಕ್ಷೇತ್ರದ ಶಾಸಕರೇ ವಹಿಸಬೇಕು ಎನ್ನತಕ್ಕಂಥದ್ದನ್ನು ಮಾಡುವ ಬಗ್ಗೆ ದಯಮಾಡಿ ಒಂದು ಸುತ್ತೋಲೆಯನ್ನು ದಯಮಾಡಿ ಕಳುಹಿಸಬೇಕು. ಅಧ್ಯಕ್ಷತೆಯನ್ನುಶಾಸಕರೇ ವಹಿಸಬೇಕು. ಅದು ಒಂದು ಸಂಪ್ರದಾಯ. ಆ ಶಾಸಕರಿಗೆ ಗೌರವವನ್ನು ಕೊಟ್ಟ ಹಾಗೆ ಆಗುತ್ತದೆ. ಶಾಸಕರು ಎಂದರೆ ಕೊನೆಯಲ್ಲಿ ಮುಖ್ಯ ಅತಿಥಿ ಎಂದು ಹಾಕಿ ಬಂದರೆ ಬರಲಿ ಬಿಟ್ಟರೆ ಬಿಡಲಿ ಕರೆದರೆ ಕರೆಯಿರಿ ಬಿಟ್ಟರೆ ಬಿಡಿ ಈ ತರಹ ನಡೆಯುತ್ತಿದೆ. ಇದನ್ನು ಕೂಡಾ ತಮ್ಮ ಗಮನಕ್ಕೆ ತರಬೇಕಾಯಿತು. ಏಕೆಂದರೆ ನಿಮ್ಮ ಹತ್ತಿರ ತರದೆ ಇನ್ನು ಯಾರ ಹತ್ತಿರ ತರಬೇಕು. ಇನ್ನು ಮೂರನೆಯದಾಗಿ ಕನ್ನಡ ಆಡಳಿತ ಭಾಷೆಯ ಬಗ್ಗೆ ಎಲ್ಲಾ ಸಾರ್ವಜನಿಕ ತಂದೆ ತಾಯಿಗಳು ಒತ್ತಾಯ ಮಾಡುತ್ತಿದ್ದಾರೆ ಎಂದು ಹಾಗೆಲ್ಲಾ ಹೇಳಿದ್ದೀರಿ ನಿಜ. ನಾನು ಎಲ್ಲೂ ಕೇಳಿ ಎಂದು ಹೇಳುವುದಿಲ್ಲ. ಬೆಂಗಳೂರಿನಲ್ಲಿ ನೀವು ಇದ್ದೀರಿ ನಿಮ್ಮ ಸುತ್ತ ಇಂಗ್ಲೀಷ್‌ನವರೇ ಕಾಣುತ್ತಿದ್ದಾರೆ. ಮತ್ತೆ ನಮ್ಮ ಕಾರ್ಯಾಲಯದ ಸುತ್ತ ಇಂಗ್ಲೀಷ್‌ನವರೇ ಇದ್ದಾರೆ ಮತ್ತು ದೊಡ್ಡ ದೊಡ್ಡ ಮಂತ್ರಿಗಳ ಅಧಿಕಾರಿಗಳ ಮಕ್ಕಳು ಇಂಗ್ಲೀಷ್ ಶಾಲೆಗೆ ಹೋಗಬೇಕಾದ್ದು ಕರ್ತವ್ಯ. ಏಕೆಂದರೆ ಅವರಿಗೆ ಇಂಗ್ಲೀಷ್ ಬಿಟ್ಟರೆ ಬೇರೆ ಗತಿ ಇಲ್ಲ. ಅದು ಅವರದೇ ಅದಂಥ ಒಂದು ಸಿದ್ಧಾಂತ. ನಾನು ತಮ್ಮನ್ನು ಕೇಳುವುದು ಇಷ್ಟೆ. ನೀವು ಎಲ್ಲಿಯೂ ಕೇಳಬೇಡಿ ನಿಮ್ಮ ಚಿಂಚೋಳಿ ಜನರನ್ನು ಕೇಳಿಬಿಡಿ ಅವರು ಏನು ಹೇಳುತ್ತಾರೆ ಆ ರೀತಿ ತೀರ್ಮಾನವನ್ನು ತೆಗೆದುಕೊಳ್ಳಿ.

ಶ್ರೀ ಎಂ. ಮಹದೇವ್:- ವಿರೋಧ ಪಕ್ಷದ ನಾಯಕರು ಇಂಗ್ಲೀಷ್‌ನಲ್ಲಿ ಊಟಕ್ಕಾಗಿ ಸುತ್ತೋಲೆಯನ್ನು ಕಳುಹಿಸಿದ್ದಾರಲ್ಲಾ ಅವರು ಏನಾದರೂ ಊಟಕ್ಕೆ ಹೋಗುತ್ತಾರಾ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಗಳವರದ್ದು ಇಂಗ್ಲೀಷ್‌ನಲ್ಲಿಯೇ ಬಂದಿತ್ತು. ಊಟಕ್ಕೆ ಹೋಗಿದ್ದೆವು. ಇನ್ನು ಏನು ಗತಿ?

ಅಧ್ಯಕ್ಷರು:- ಊಟಕ್ಕೆ ಅದೇ ಗತಿ.

ಶ್ರೀ ವಾಟಾಳ್ ನಾಗರಾಜ್:- ಕನ್ನಡದಲ್ಲಿಯೇ ಊಟ ಮಾಡಿ ಬಂದಿದ್ದೇನೆ. ಅದರಲ್ಲೇನೂ ಬೇರೆ ಮಾತಿಲ್ಲ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ ಮಾನ್ಯ ಸ್ನೇಹಿತರಾದ್ದಂಥ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಎರಡು ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಒಂದು ಎ' ತರಗತಿಯ ಐ.ಎ.ಎಸ್ ಅಧಿಕಾರಿಗಳು ಶಾಸಕರುಗಳು ಜನತಾ ಪ್ರತಿನಿಧಿಗಳು ಹೋದಾಗ ಅವರ ವರ್ತನೆ ಬಗ್ಗೆ ಹೇಳಿದ್ದಾರೆ. ನನಗೂ ಕೂಡಾ ಇದು ಕೆಲವು ದಿವಸಗಳ ಮೊದಲು ಬಂದಿತ್ತು. ಯಾವತ್ತು ದೂರು ಬಂತು ಅವತ್ತೇ ನಾನು ಚೀಫ್ ಸೆಕ್ರೆಟರಿಯವರಿಗೆ ಒಂದು ಮಿನಿಟ್ಟನ್ನು ಕಳುಹಿಸಿ ಈ ರೀತಿ ಶಾಸಕರು ಬಂದಾಗ ಎರಡನೇ ಕೆಲಸ ಇದ್ದರೂ ಕೂಡಾ ಅವರು ಬಂದಿದ್ದಾರೆ ಎಂದಾಗ ಅವರು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ತೆಗೆದುಕೊಂಡು ಬಂದಿರುತ್ತಾರೆ ಜನತಾ ಪ್ರತಿನಿಧಿಗಳಾಗಿ ಬಂದಂಥ ಶಾಸಕರಿಗೆ ಏನು ಗೌರವ ನೀಡಬೇಕು ಅದನ್ನು ನೀಡುವುದಕ್ಕೆ ಕಟ್ಟಪ್ಪಣೆ ಮಾಡಬೇಕು ಈ ತರಹ ಕಂಪ್ಲೇಟ್ ನನ್ನ ಹತ್ತಿರ ಬರಬಾರದು ಎನ್ನತಕ್ಕಂಥದ್ದನ್ನು ನಾನು ಸ್ಪಷ್ಟವಾಗಿ ಬರೆದು ಕಳುಹಿಸಿದ್ದೇನೆ. ನಮ್ಮ ಚೀಫ್ ಸೆಕ್ರೆಟರಿಯವರು ಈಗಾಗಲೇ ಎಲ್ಲಾ ಸೆಕ್ರೆಟರಿಯವರಿಗೂ ಪತ್ರ ಬರೆದಿದ್ದಾರೆ ಮತ್ತು ಎಲ್ಲಾ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್‌ಗೆ ಕೂಡಾ ಇದರ ಬಗ್ಗೆ ಬರೆದಿದ್ದಾರೆ. ಈ ರೀತಿಯ ದೂರು ಬರಲಾರದಂತೆ ನೋಡಿಕೊಳ್ಳಬೇಕು ಎಂದು ಸ್ಪಷ್ಟವಾಗಿ ಬರೆದಿದ್ದಾರೆ. ಇನ್ನೊಂದು ವಿಚಾರ ಎಂದರೆ ಎಂ.ಎಲ್.ಎ.ಗಳು ತಮ್ಮ ಕ್ಷೇತ್ರದಲ್ಲಿ ಮಂತ್ರಿಗಳು ಹೋದಾಗ ಯಾವ ಸಮಾರಂಭ ಇದ್ದರೂ ಕೂಡಾ ಅಲ್ಲಿಯ ಶಾಸಕರುಗಳೇ ಅಧ್ಯಕ್ಷತೆ ವಹಿಸಬೇಕು ಎನ್ನುವ ವಿಚಾರವನ್ನು ತಾವು ಹೇಳಿದ್ದೀರಿ. ಒಂದು ವಿಚಾರವನ್ನು ನಾನು ಒಪ್ಪುತ್ತೇನೆ ಎ.ಎಲ್.ಎ.ಗಳು ತಾವು ಏನು ಅಧಿಕಾರದಲ್ಲಿ ಬಂದು ಕುಳಿತಿದ್ದೀರಿ ನಮ್ಮಂತೆ ತಾವೂ ಕೂಡ ಪ್ರತಿನಿಧಿಗಳಿದ್ದೀರಿ ಒಂದು – ಒಂದೂವರೆ ಲಕ್ಷದ ಜನರಿಂದ ಆರಿಸಿ ಬಂದಿರುತ್ತೀರಿ ನಿಮಗೆ ಏನು ಗೌರವಸಲ್ಲಬೇಕಾಗಿದೆ ಅದು ಸಲ್ಲಲೇಬೇಕು. ನಮ್ಮ ಪಕ್ಷದವರೇ ಇರಲಿ ಅಥವಾ ಯಾವುದೇ ಪಕ್ಷದಲ್ಲಿ ಇರಲಿ ಆದರೆ ಜನತಾ ಪ್ರತಿನಿಧಿಗಳಿಗೆ ಪ್ರಜಾಪ್ರಭುತ್ವದಲ್ಲಿ ಏನೊಂದು ಗೌರವ ಸಲ್ಲಬೇಕಾಗಿದೆಯೋ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಿಮ್ಮದು ಸಲಹೆ ಏನು ಇದೆ ಅವರೇ ಅಲ್ಲಿ ಪ್ರಿಸೈಡ್ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಹೇಳಿದ್ದೀರಿ ಆ ವಿಚಾರದ ಬಗ್ಗೆ ಮಂತ್ರಿಮಂಡಲದಲ್ಲಿ ನಾವು ವಿಚಾರ ಮಾಡಿ ನಾನು ಯೋಗ್ಯ ರೀತಿಯಿಂದ ನನ್ನ ಸಹೋದ್ಯೋಗಿಗಳಿಗೆ ಇದರ ಬಗ್ಗೆ ಹೇಳಬೇಕಾಗಿದೆ ಅದನ್ನು ಹೇಳುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ: ಮಾನ್ಯ ಅಧ್ಯಕ್ಷರೇ ಜಿಲ್ಲಾ ಪರಿಷತ್‌ನಲ್ಲಿ ಕಾರ್ಯಕ್ರಮಗಳು ಆದಾಗ ಎಂ.ಎಲ್.ಎ.ಗಳನ್ನು ಮುಖ್ಯ ಅತಿಥಿಯಾಗಿ ಹಾಕುವುದಿಲ್ಲ ಬರೀ ಅತಿಥಿ ಎಂದು ಪರಿಗಣಿಸುತ್ತಾರೆ. ಜಿಲ್ಲಾ ಪರಿಷತ್ ಸಭೆ ಸಮಾರಂಭಗಳಲ್ಲಿ ಅಧ್ಯಕ್ಷ ಸ್ಥಾನವನ್ನು ಶಾಸಕರಿಗೆ ಕೊಡತಕ್ಕ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್:- ಈ ಎಲ್ಲಾ ವಿಚಾರವನ್ನು ಕೂಡ ಮಂತ್ರಿ ಮಂಡಲದಲ್ಲಿ ಚರ್ಚೆ ಮಾಡಬೇಕಾಗಿದೆ. ಈಗಲೇ ಹೇಳುವುದು ಕಷ್ಟ ಆಗುತ್ತದೆ.

ಶ್ರೀ ಬಸವರಾಜ ಹವಗಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿ. ಅಲ್ಲಿನ ರೋಡ್ಸ್ ನೀರು ಇವೆಲ್ಲದರ ಪ್ರಗತಿ ಸಲುವಾಗಿ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನನ್ನ ಧನ್ಯವಾದಗಳು. ಆದರೆ ಶಿಕ್ಷಣದ ವಿಷಯದಲ್ಲಿ ನಮ್ಮ ಮಕ್ಕಳೇ ನಮ್ಮ ಸಂಪತ್ತು. ಈಗ ಪ್ರತಿ ಒಂದು ಮೆಡಿಕಲ್ ಸೀಟ್ ಇಂಜಿನಿಯರಿಂಗ್ ಸೀಟು ಯಾವುದಾದರೂ ಪಡೆಯಬೇಕಾದರೆ ಈ ಭಾಗದ ವಿದ್ಯಾರ್ಥಿಗಳು ಮೆರಿಟ್‌ನಲ್ಲಿ ಪಡೆಯಬೇಕು. ನಮ್ಮ ವಿದ್ಯಾರ್ಥಿಗಳಿಗೆ ಮೆರಿಟ್‌ನಲ್ಲಿ ಸೀಟ್ ಸಿಗುವುದಿಲ್ಲ. ಇದರಿಂದ ನಮ್ಮ ವಿದ್ಯಾರ್ಥಿಗಳಿಗೆ ಅನ್ಯಾಯ ಆಗುತ್ತಿದೆ. ಒಂದು ಕಡೆ ಹೈದರಾಬಾದ್ ಕರ್ನಾಟಕ ಹಿಂದುಳಿದ ಭಾಗ ಇದೆ ಹಿಂದುಳಿದ ಈ ಭಾಗದಲ್ಲಿ ಸಾಕಷ್ಟು ಶಿಕ್ಷಣದ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಈಗ ಸದ್ಯಕ್ಕೆ ಗುಲ್ಬರ್ಗಾದಲ್ಲಿ ಮೆಡಿಕಲ್ ಕಾಲೇಜು ಇದ್ದರೂ ಅಲ್ಲಿ ಬೆಂಗಳೂರಿನಿಂದ ಬಂದಂತಹ ವಿದ್ಯಾರ್ಥಿಗಳೇ ಇದ್ದಾರೆ. ಕಾಲೇಜು ನಮ್ಮ ಭೂಮಿ ಮೇಲೆ ಇದ್ದರೂ

ಸಹ ನಮ್ಮ ವಿದ್ಯಾರ್ಥಿಗಳು ಅಲ್ಲಿ ಕಲಿಯಲು ಏತಕ್ಕೆ ಸಾಧ್ಯವಿಲ್ಲವೆಂದರೆ ನಮ್ಮ ಭಾಗದ ವಿದ್ಯಾರ್ಥಿಗಳು ಬೇರೆಯವರ ಜೊತೆ ಕಾಂಪಿಟಿಷನ್ ಮಾಡಿ ಮೆರಿಟ್ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಭಾಗಕ್ಕೆ ಪಿಯುಸಿ ಬೋರ್ಡ್ ಹೈಸ್ಕೂಲ್ ಬೋರ್ಡ್ ಎಂದು ಸ್ಪೆಷಲ್ ಆಗಿ ನಮ್ಮ ಭಾಗಕ್ಕೆ ಮಾಡುತ್ತಾರೆಯೋ ಎಂಬುದು ಒಂದು ಮತ್ತೆ ಎರಡನೆಯದು ಈಗಾಗಲೇ ತುಮಕೂರಿನಲ್ಲಿ ಬೆಂಗಳೂರಿನಲ್ಲಿ 10-20 ಕಾಲೇಜುಗಳು ನಡೆಯುತ್ತಿವೆ. ಆದರೆ ನಮ್ಮ ಭಾಗದಲ್ಲಿ ಇಲ್ಲ. ನಾವು ಯಾವುದಾದರೂ ಅಧಿಕಾರಿಗಳ ಹತ್ತಿರ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಹೊಸ ಕಾಲೇಜು ಕೊಡಿ ಎಂದು ಕೇಳಿದರೆ ಇಲ್ಲ ಈಗಾಗಲೇ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೇವೆ. ನಿಮ್ಮ ಕಡೆಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಈಗ ನಮ್ಮ ಭಾಗವನ್ನು ಬ್ಯಾಕ್‌ವರ್ಡ್ ಏರಿಯಾ ಎಂದು ಯಾವ ರೀತಿ ಪರಿಗಣಿಸಿ ಅದೇ ಅಭಿವೃದ್ಧಿ ಸಲುವಾಗಿ ಯಾವ ರೀತಿ ಸ್ಪೆಷಲ್ ಆಗಿ 50ಕೋಟಿ ರೂಪಾಯಿ ಕೊಟ್ಟಿದ್ದೀರೋ ಅದೇ ರೀತಿ ವಿದ್ಯೆಗೆ ಏನಾದರೂ ಸ್ಪೆಷಲ್ ಕನ್ಸಿಡರೇಷನ್ ಅನ್ನು ನಮ್ಮ ಭಾಗಕ್ಕೆ ಕೊಡುತ್ತೀರಾ ಎಂದು ನಾನು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಬಸವರಾಜ ಪಾಟೀಲ್ ಎರಡು ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಮೊದಲನೆಯದಾಗಿ ಆ ಭಾಗದ ಮಕ್ಕಳು ಕಾಂಪಿಟಿಷನ್‌ನಲ್ಲಿ ಬರುವುದಕ್ಕೆ ಸಾಧ್ಯ ಇಲ್ಲ ಮೆರಿಟ್ ಪೂಲ್‌ನಲ್ಲಿ ಬರುವಂತಹ ಹುಡುಗರು ಹೊರಗಡೆಯಿಂದ ಬರುತ್ತಾರೆ ಹೈದರಾಬಾದ್ ಕರ್ನಾಟಕದ ಏರಿಯಾ ಹುಡುಗರಿಗೆ ಅವಕಾಶ ಇಲ್ಲ ಎಂದು ಹೇಳಿದ್ದಾರೆ. ಇದು ನಿಜ. ಆದರೆ ಇದು ಮೊದಲಿನಿಂದ ಬಂದಿರುವ ಪದ್ಧತಿ. ಇದನ್ನು ಯಾವ ರೀತಿ ಮಾಡಬೇಕು ಎಂದು ವಿಚಾರ ಮಾಡಿ ಮಾಡಬೇಕಾಗುತ್ತದೆ. ಒಮ್ಮಿಂದೊಮ್ಮೆಗೆ ಏನಾದರೂ ಎಕ್ಸಿಕ್ಯುಟಿವ್ ಆರ್ಡರ್ ಮೂಲಕ ಮಾಡಲಿಕ್ಕೆ ಹೋದರೆ ಕೋರ್ಟಿನಲ್ಲಿಛಾಲೇಂಜ್ ಮಾಡುತ್ತಾರೆ. ಈಗ ಎಲ್ಲಾ ಮೆಡಿಕಲ್ ಕಾಲೇಜುಗಳ ಅಡ್ಮಿಷನ್ ಸಲುವಾಗ ಒಂದೇ ಕಡೆ ಟೆಸ್ಟ್ ಆಗುತ್ತದೆ. ಅದರಲ್ಲಿ ಯಾರು ಯಾರಿಗೆ ಮಾರ್ಕ್ಸ್ ಬರುತ್ತದೆ ಅದರ ಪ್ರಕಾರ ಅಡ್ಮಿಷನ್ ಹೋಗುತ್ತಿದೆ. ಆದರೆ ಅಲ್ಲಿಗೇ ಪ್ರತ್ಯೇಕವಾಗಿ ಅಂದರೆ ಹೈದರಾಬಾದ್-ಕರ್ನಾಟಕಕ್ಕೇ ಪ್ರತ್ಯೇಕವಾಗಿ ಇಲ್ಲವೇ ಯೂನಿವರ್ಸಿಟಿವೈಸ್ ಮಾಡುವುದಕ್ಕೆ ಸಾಧ್ಯವಾದರೆ ಬಹುಶಃ ಇದು ಸಾಧ್ಯವಾಗುತ್ತದೆ ಎಂದು ನನಗನ್ನಿಸುತ್ತದೆ. ಇದರ ಬಗ್ಗೆ ಕಾನೂನು ತಜ್ಞರಿಂದ ಪರಿಶೀಲನೆ ಮಾಡಿಸದೆ ಇವೊತ್ತು ಹೇಳುವುದು ಕಷ್ಟ. ಆದರೆ ಇದನ್ನು ಪರಿಶೀಲನೆ ಮಾಡಿ, ಇದಕ್ಕೇ ಒಂದು ಹಾದಿಯನ್ನು ಹುಡುಕಬೇಕಾದುದು ಆ ಭಾಗದ ಮಕ್ಕಳ ಹಿತ ಚಿಂತನೆಗಾಗಿ ಅವಶ್ಯಕವಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅದೇ ರೀತಿ ಅವರು ಕಾಲೇಜುಗಳ ಬಗ್ಗೆ ಹೇಳಿದ್ದಾರೆ. ಬಹುಶಃ ಅವರ ಮನಸ್ಸಿನಲ್ಲಿ ಬಿ ಎಡ್ ಕಾಲೇಜು ಬೀದರ್‌ನಲ್ಲಿ ಇಲ್ಲ ಎಂದು ಆ ರೀತಿ ಹೇಳಿರಬಹುದು. ಈಗಾಗಲೇ ಎರಡು ಬಿ ಎಡ್ ಕಾಲೇಜುಗಳು ಇವೆ. ಅಲ್ಲಿ ಇನ್ನೊಂದರ ಅವಶ್ಯಕತೆ ಇಲ್ಲ ಎಂದು ಆ ಎಜುಕೇಶನ್ ಡಿಪಾರ್ಟ್‌ಮೆಂಟ್‌ನವರು ಅಭಿಪ್ರಾಯ ಕೊಟ್ಟಿದ್ದಾರೆ. ಆದರೆ ಬ್ಯಾಕ್‌ವರ್ಡ್ ಏರಿಯಾ ಇರುವುದರಿಂದ ಸಾಧ್ಯ ಆದರೆ. ಬಿ ಎಡ್ ಕಾಲೇಜು ಇನ್ನೂ ಒಂದು ಕೊಡಬಹುದೇ ಎಂಬ ಬಗ್ಗೆ ನನ್ನ ಸಹೋದ್ಯೋಗಿಗಳಾದ ಮಾನ್ಯ ವಿದ್ಯಾ ಮಂತ್ರಿಯೊಂದಿಗೆ ಹಾಗೂ ವಿದ್ಯಾ ಖಾತೆಯ ಸೆಕ್ರೆಟರಿಗಳ ಜೊತೆ ಮಾತನಾಡಿ ಇದಕ್ಕೆ ಏನಾದರೂ ಹಾದಿ ಸಿಗುವುದಿದ್ದರೆ ಆ ಬಗ್ಗೆ ಪ್ರಯತ್ನ ಮಾಡಿ ಹಾದಿಯನ್ನು ಹುಡುಕಿ ಕೊಡುತ್ತೇನೆಂದು ಇಷ್ಟು ಮಾತ್ರ ಹೇಳಬಲ್ಲೆ.

SRI QUMURUL ISLAM:- Mr. Speaker Sir, I am very happy that the Hon'ble Chief Minister has announced here that he will implement the 15 point programme for minorities. Also, while making recruitments to the Police Department, hehas assured that minorities will be given weightage and he will see that more minority persons are recruited. There is Minorities Development Corporation, Minorities Commission and Urdu Academy. The term of the members in the Urdu Academy is going to end

by 30th of this month. Nominations to other bodies like the Minorities Development Corporation and Minorities Commission have not been made. There may be 10 to 20% minorities. Among them, while nominating members and chairmen, I requrest that able and good calibre persons belonging to minority communities may be nominated. I request you not to go on the party lines. Whether they belong to this party or that party, it should be above party considerations to see that they can do best service. I am expecting the Hon'ble Chief Minister that due consideration is being given while nominating persons to these bodies irrespective of their political affiliations. Let them give representation to the Cpposition and Muslim Leaguemembers also. There should be justice to all persons belonging to minorities. Whether they belong to ruling party or any other party. Don't go with the party while making nominations. This is my request.

MR SPEAKER:- You said above the party. How much above the party?

SRI QUMURUL ISLAM:- Because, all the minorities do not belong to them. They might have different opinions. Therefore, I wanted a clarification. I request the Government that they should take immediate action to nominate persons to these bodies.

SRI VEERENDRA PATIL:- I have already made it clear that after this Session, I will devote my attention on this Minorities Commission, Minorities Development Corporation and Urdu Academy also including their appointments. I can only say that while making appointments the consideration that is before me is to see to what extent a person or persons appointed are in a position to enjoy the confidence of the minorities. That will be the criterion. But it will be very difficult to say that whoever is appointed he will enjoy hundred percent confidence, but maximum confidence he should enjoy. Only that will be borne in mind while making appointments.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯ ಮಂತ್ರಿಗಳು ಸವಿಸ್ತಾರವಾಗಿ ಎಲ್ಲಾ ಇಲಾಖೆಗಳ ಬಗ್ಗೆ ಹೇಳಿ ಎಲ್ಲಾ ವರ್ಗಕ್ಕೂ ಸಂಬಂಧಪಟ್ಟಹಾಗೆ ಹೆಚ್ಚು ಹಣವನ್ನು ಹೆಚ್ಚು ಸಹಕಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸ್‌ಕಮಿಷನ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದುಒತ್ತು ಕೊಡಬೇಕು. ಆ ಕಾರ್ಪೋರೇಷನ್‌ಗೆ ಆದಷ್ಟು ಫಂಡ್ಸ್ ಕೊಟ್ಟು ಅದರ ಮೂಲಕ ಈ ಜನರಿಗೆ ಹೆಚ್ಚು ಸಹಾಯ ಮಾಡಬೇಕು ಎಂದು ನಾನು ತಮ್ಮ ಮುಖಾಂತರ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ ಮತ್ತು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರಿಗೆ ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ:- ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯ ಮಂತ್ರಿಗಳು ಅನೇಕ ವಿಚಾರಗಳ ಬಗ್ಗೆ ಬಹಳ ಸಮಾಧಾನಕರವಾದಂಥ ಉತ್ತರ ಹೇಳಿದ್ದಾರೆ. ಈಗ ಮೂಲಭೂತವಾದಂಥ ಒಂದು ಪ್ರಶ್ನೆ ಇದೆ. ನಮ್ಮ ಲೆಜಿಸ್ಲೇಚರ್ ಸಾರ್ವಭೌಮತ್ವ ಸುಪ್ರಿಮೆಸಿ ಆಫ್ ದಿ ಲೆಜಿಸ್ಲೇಚರ್ ಸ್ಲೋಲಿ ಈಸ್ ಎರೋಡಿಂಗ್. ಅಡ್ಮಿನಿಸ್ಟ್ರೇಷನ್‌ನಲ್ಲಿ ಏನಾಗಿದೆ ಅಂದರೆ ವಿಳಂಬ ಸ್ವಜನಪಕ್ಷಪಾತ ಮತ್ತು ಆಡಳಿತದ

ಒಂದು ಶ್ರೇಷ್ಠತೆ ಕುಗ್ಗಿ ಹೋಗ ತಕ್ಕಂಥ ಅನೇಕ ವಿಚಾರಗಳು ಬೆಳಕಿಗೆ ಬಂದಿದೆ. ಇದರ ಜೊತೆಗೆ ಸುಪ್ರಿಮಸಿ ಆಫ್ ದಿ ಲೆಜಿಸ್ಲೇಚರ್ ಮೂಲಕ ನಾವು ಏನು ಕಾನೂನುಗಳನ್ನು ಮಾಡುತ್ತೇವೆ ಅದನ್ನು ಹೈಕೋರ್ಟ್ ಅಥವಾ ಸುಪ್ರೀಂಕೋರ್ಟಿನಲ್ಲಿ ಈಗ ಪ್ರಶ್ನೆ ಮಾಡುತ್ತಾ ಇದ್ದಾರೆ. ಆದುದರಿಂದ ನಮ್ಮ ಕಾರ್ಯಾಂಗಕ್ಕೆ ಮತ್ತು ನಮ್ಮ ಅಡ್ಮಿನಿಸ್ಟ್ರೇಷನ್‌ಗೆ ಅನೇಕ ಅಡ್ಡಿ ಆತಂಕಗಳು ಬರುತ್ತಿವೆ. ಈಗಂತೂ ನಾವು ಮಾಡತಕ್ಕಂಥ ಕಾನೂನುಗಳನ್ನು ಹೈಕೋರ್ಟಿನಲ್ಲಿ ಸುಪ್ರೀಂಕೋರ್ಟಿನಲ್ಲಿ ಪ್ರಶ್ನೆ ಮಾಡಿ ಕಾನೂನುಗಳನ್ನೇ ಡೈರಕ್ಷನ್ ಮಾಡಿ ಅವರು ನಮಗೆ ಕಳಿಸುತ್ತಾ ಇದ್ದಾರೆ. ಇಂತಹ ಒಂದು ಪರಿಸ್ಥಿತಿ ಇದೆ. ಇದು ನಮ್ಮ ಹೇಸ್ಟಿ ಲೇಜಿಸ್ಲೇಷನ್‌ನಿಂದ ಆಗಿದೆಯೊ ಅಥವಾ ಅಡ್ಮಿನಿಸ್ಟ್ರೇಷನ್ ಡಿಲೇಯಿಂದ ಆಗಿದೆಯೋ ಅಥವಾ ಬ್ಯುರೊಕ್ರಟಿಕ್‌ಅಪ್ರೋಚ್ ಅವರ ಡಿಲೇಯಿಂದ ನಡೆದಿದೆಯೊ ಏನೋ ಗೊತ್ತಿಲ್ಲ. ಅಂತೂ ಈ ರೀತಿ ನಡೆಯುತ್ತಾ ಇರುವುದನ್ನು ನೋಡಿದರೆ ಈಗ ಸದಸ್ಯರುಗಳ ಹಕ್ಕುಗಳು ಸದಸ್ಯರುಗಳ ಗೌರವ ಘನತೆ ಸ್ಥಾನಮಾನಗಳು ಇವೆಲ್ಲವನ್ನೂ ಕೂಡ ಇನ್ನೂ ನಾವು ಸರಿಯಾದ ರೀತಿಯಲ್ಲಿ ಕ್ರೋಢೀಕರಿಸಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಒಂದು ಆಡಳಿತ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ವ್ಯವಸ್ಥಿತವಾದಂಥ ಒಂದು ಸೂಚನೆ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಈ ರಾಜ್ಯದಲ್ಲಿ ನಮ್ಮ ಘನತೆ ಲೆಜಿಸ್ಲೇಚರ್ ಸುಪ್ರಿಮಸಿ ಅನ್ನತಕ್ಕಂಥ ಘನತೆ ಸಾರ್ವಭೌಮತ್ವ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಮತ್ತು ಆಡಳಿತ ವಿಳಂಬವಿಲ್ಲದೆ ನಡೆಯುವುದಕ್ಕೆ ಹಾಗೂ ಎಲ್ಲರಿಗೂ ನ್ಯಾಯ ದೊರತಕ್ಕಂಥ ವ್ಯವಸ್ಥೆ ಆಗುವಂತೆ ಮಾಡಬೇಕು. ಆತುರಾತುರವಾಗಿ ಕಾನೂನುಗಳನ್ನು ಮಾಡಿ ಅದನ್ನು ಜುಡಿಶಿಯಲ್‌ನಲ್ಲಿ ಪ್ರಶ್ನೆಮಾಡಿ ಮತ್ತೆ ಅದನ್ನು ಕಾನೂನು ಮಾಡುವುದಕ್ಕೆ ಅವರು ಕಳಿಸತಕ್ಕಂಥ ವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನ ಮಾಡುವುದಕ್ಕೆ ಈ ವಿಚಾರದಲ್ಲಿ ಗಮನಹರಿಸುತ್ತೀರ ಎಂದು ಕೇಳುತ್ತೇನೆ. ಏಕೆಂದರೆ ತಾವೇ ಹೇಳಿದ್ದೀರಿ. ಈಗ ನೀವು ಕಾನೂನು ಮಾಡುತ್ತೀರಿ. ಅದರ ಮೇಲೆ ಯಾರಾದರೂ ಕೋರ್ಟಿಗೆ ಹೋದರೆ ಅಲ್ಲಿ 12 ವರ್ಷ ಆದರೂ ತೀರ್ಮಾನ ಆಗುವುದಿಲ್ಲ. ಕಾನೂನು ಜಾರಿಗೆ ಬರುವುದು ವಿಳಂಬವಾದರೆ ವಿಳಂಬ ಆಗಿದೆ ಎಂದು ಜನರು ಕೋರ್ಟಿನಲ್ಲಿ ಪ್ರಶ್ನೆ ಮಾಡುತ್ತಾರೆ.

ಅಧ್ಯಕ್ಷರು:- ಕೋರ್ಟಿನಲ್ಲಿ ವಿಳಂಬ ಆದರೆ ಇವರು ಏನು ಮಾಡುತ್ತಾರೆ?

ಶ್ರೀ ಕೆ. ಲಕ್ಕಪ್ಪ:- ನಮಗೆ ಮಾನ ಮರ್ಯಾದೆ ಘನತೆ ಗೌರವ ಸಿಗುತ್ತಾ ಇಲ್ಲ. ಹೀಗೆ ಏನು ವ್ಯವಸ್ಥೆ ಆಗಿದೆ ಹ್ಯಾಂಡ್ ಬುಕ್‌ನಲ್ಲಿ ತಾವು ಒಂದು ಡೈರೆಕ್ಷನ್ ಅನ್ನು ಸದಸ್ಯರುಗಳು ಸರ್ಕಾರದ ಕಛೇರಿಗಳಿಗೆ ಹೋದಾಗ ಯಾವ ರೀತಿ ವರ್ತನೆ ಮಾಡಬೇಕೆಂದು ಕೊಟ್ಟಿದ್ದೀರಿ. ಆದರೆ ಅದನ್ನು ಯಾರೂ ಸಹ ಪರಿಪಾಲನೆ ಮಾಡುತ್ತಿಲ್ಲ. ಆಡಳಿತದ ವಿಳಂಬ ನೀತಿಯಿಂದಾಗಿ ಅನೇಕ ಜನ ಕೋರ್ಟಿಗೆ ಹೋಗುತ್ತಾರೆ. ಅಲ್ಲಿ ನಮಗೆ ನ್ಯಾಯಗಳು ಕೂಡ ಸರಿಯಾದ ರೀತಿಯಲ್ಲಿ ಸಿಗುತ್ತಾ ಇಲ್ಲ. ಆದ್ದರಿಂದ ಏನಾದರೂ ವ್ಯವಸ್ಥಿತವಾದ ಸೂಚನೆ ಕೊಟ್ಟು ಆಡಳಿತವನ್ನು ಬಿಗಿ ಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ ಕಾನೂನು ಪಾಸ್ ಮಾಡುವುದು ಈ ಮನೆ. ಈ ಮನೆಯಲ್ಲಿಯೇ ನಾವು ತಪ್ಪು ಕಾನೂನು ಪಾಸ್ ಮಾಡುತ್ತೇವೆ ಅಂದಾಗ ಎರಡನೆಯವರ ಮೇಲೆ ದೋಷಾರೋಪಣೆ ಮಾಡುವುದರಲ್ಲಿ ಅರ್ಥ ಇಲ್ಲ. ಬಿಲ್ ಬರುತ್ತದೆ ಚರ್ಚೆ ಆಗುತ್ತದೆ. ಅದರಲ್ಲಿ ಏನಾದರೂದೋಷಗಳು ಇದ್ದರೆ ಬಹುಶಃ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಈ ರೀತಿ ದೋಷ ಇದೆ ಇದು ಕಾನೂನಿನಲ್ಲಿ ಕೂಡುವ ಹಾಗೆ ಇಲ್ಲ. ಇದು ಸಂವಿಧಾನಕ್ಕೆ ತದ್ವಿರುದ್ಧ ಆಗಿದೆ ಇದೆಲ್ಲಾ ಹೇಳಬಹುದು. ಆದರೂ ಕೂಡ ಕೋರ್ಟಿಗೆ ಹೋಗುತ್ತಾರೆ. ಕೆಲವು ಕಾನೂನುಗಳಿಗೆ ಕೋರ್ಟಿನವರು ಅಪ್‌ಹೋಲ್ಡ್ ಮಾಡುತ್ತಾರೆ. ಕೆಲವು ಕಾನೂನುಗಳು ಕೋರ್ಟ್‌ನಲ್ಲಿ ನಲ್ಲಿ 'ಅಂಡ್ ವಾಯ್ಡ್' ಎಂದು ಹೇಳುತ್ತಾರೆ. ಇದು ನಡೆಯುತ್ತಲ್ಲೇ ಇರುತ್ತದೆ. ಆದರೆ ಇದರ ಸುಪ್ರಿಮಸಿಯನ್ನು ಯಾರೂ ಕಡಿಮೆ ಮಾಡುವುದಕ್ಕೆ ಸಾಧ್ಯ ಇಲ್ಲ. ಏಕೆಂದರೆ ಇವು ಪ್ರಜಾಪ್ರಭುತ್ವದ ನಾಲ್ಕು ಆಧಾರ ಸ್ಥಂಬಗಳು. ಎಕ್ಸಿಕ್ಯುಟೀವ್ ಲೆಜಿಸ್ಲೇಚರ್ ಜುಡೆಷಿಯರಿ ಮತ್ತು ನಾಲ್ಕನೆಯದು ಪ್ರೆಸ್. ಯಾರ ಸುಪ್ರಿಮಸಿಯನ್ನು ಯಾರೂ ಸಹ ಕಡಿಮೆ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದು ನಾನು ತಿಳಿದಿದ್ದೇನೆ.

ಅಧ್ಯಕ್ಷರು:- ನಾನು ಈಗ ಎಲ್ಲ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪವೇನೆಂದರೆ,

"ದಿನಾಂಕ 31.3.1990ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ - 1,2,3,4,24,27,28,29,39,40,41,42,43,57 ಮತ್ತು 58 ಇವುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚಗಳನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತಕ್ಕೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುತ್ತದೆ."

- ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

Sri. Veerendra Patil
(Chief Minister)

DEMAND No.27. - POLICE AND FIRE SERVICES

Sir, on the recommendation of the Governor, I beg to move:

"That a sum not exceeding Rs.165,18,68,000 on Revenue Account and Rs.5,00,000 on Capital Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of "Police and Fire Services".

DEMAND NO.28 - JAILS ETC.,

"That a sum not exceeding Rs.9,24,69,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Jails".

DEMAND NO. 39 - ELECTIONS

"That a sum not exceeding Rs.2,86,00,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Elections".

DEMAND NO. 40 - GOVERNOR, MINISTERS AND PUBLIC SERVICE COMMISSION

"That a sum not exceeding Rs.160,52,000 on Revenue Account inclusive of the sum granted 'on account' be granted to the Government to defray the charges which will come in course of payment during the financial year

ending 31st day of March 1991 in respect of Governor, Ministers and Public Service Commission".

DEMAND NO. 41 - SECRETARIAT

"That a sum not exceeding Rs.18,29,42,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Secretariat".

DEMAND NO. 42 - DISTRICT ADMINISTRATION

"That a sum not exceeding Rs.28,02,86,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "District Administration".

DEMAND NO. 43 - MISCELLANEOUS DEMANDS OF CHIEF MINISTER

"That a sum not exceeding Rs.14,64,28,000 on Revenue Account and Rs.4,90,00,000 on Capital Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of "Miscellaneous Demands of Chief Minister".

Sri. S. Bangarappa
Minister of Agriculture and Horticulture

DEMAND NO. 1 - SOIL AND WATER CONSERVATION AND AGRICULTURE (EXCLUDING HORTICULTURE AND DRY LAND DEVELOPMENT)

Sir, on the recommendation of the Governor, I beg to move:

"That a sum not exceeding Rs.88,85,43,000 on Revenue Account and Rs.15,39,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Soil and Water Conservation and Agriculture (excluding Horticulture and Dryland Development).

DEMAND NO. 2 - DRYLAND DEVELOPMENT

"That a sum not exceeding Rs.10,79,66,000 on Revenue Account inclusive of the sum granted 'on account' be granted to the Government to

defray the charges which will come in course of payment during the financial year ending 31st day of March 1991 in respect of "Dry Land Development".

DEMAND NO. 3 - HORTICULTURE

Sir on the recommendation of the Governor, I beg to move

"That a sum not exceeding Rs.20,64,24,000 on Revenue Account and Rs.2,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Horticulture".

Sri. B.Basavalingappa

Minister of Forest and Animal Husbandry.

DEMAND NO. 4 - ANIMAL HUSBANDRY AND DAIRY DEVELOPMENT

Sir, on the recommendation of the Governor, I beg to move:

"That a sum not exceeding Rs.51,71,44,000 on Revenue Account and Rs.6,00,00,000 on Capital Account inclusive of the sum granted on account be granted to the Government to defray the charges which will come in course of payment during the financial year ending 31st day of March 1991, in respect of "AnimalHusbandry and Dairy development".

DEMAND NO. 24 - FOREST

Sir, on the recommendation of the Governor, I beg to move:

"That a sum not exceeding Rs.78,61,15,000 on Revenue Account and Rs.1,50,000 on Capital Account inclusive of the sum granted on account be granted to the Government defray the charges which will come in course of payment during the financial year ending 31st day of March 1991 in respect of "Forest".

Sri. M.Y. Ghorpade

Minister of Rural Development, Panchayat Raj, Information and Publicity

DEMAND NO. 29 - INFORMATION AND TOURISM

Sir, on the recommendation of the Governor, I beg to move:

"That a sum not exceeding Rs.7,84,06,000 on Revenue Account and Rs.40,00,000 on Capital Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of "Information and Tourism".

DEMAND NO. 57 - RURAL WATER SUPPLY AND SANITATION

Sir, on the recommendation of the Governor, I beg to move:

"That a sum not exceeding Rs.60,65,24,000 on Revenue Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of "Rural Water Supply and Sanitation".

DEMAND NO. 58 - RURAL DEVELOPMENT AND EMPLOYMENT

Sir, on the recommendation of the Governor, I beg to move:

"That a sum not exceeding Rs.1,70,84,75,000 on Revenue Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of Rural Development and Employment".